ವಿಶ್ವವಾಣಿ
ವಿಶ್ವಾಸವೇ ವಿಶ್ವ

## ಪುಟ ತೆರೆದಂತೆ...



ಬ್ರಿಟಿಷ್ ಸಾಮ್ರಾಜ್ಯಕ್ಕೆ ನಾಗರಿಕತೆಯನ್ನು ಕಲಿಸಿದ ಚಾಡ್ವಿಕ್
ಹಿಂದಿರುಗಿ ನೋಡಿದಾಗ
ಡಾ.ನಾ.ಸೋಮೇಶ್ವರ

ಸಂ.ಪುಟ | 6

ನೀವು ಮಾತ್ರ ನನ್ನ ಜಾತಿ ಕೇಳಬಾರದು...
ಪ್ರಕಾಶಪಥ
ಪ್ರಕಾಶ್ ಶೇಷರಾಘವಾಚಾರ್

ಸಂ.ಗಮ | 7

### ದಾರಿದೀಪೋಕ್ತಿ

ಅದು ನಿಮ್ಮದಲ್ಲದಿದ್ದರೆ ತೆಗೆದುಕೊಳ್ಳಬೇಡಿ. ಅದು ಸರಿಯಲ್ಲ ಎಂಬುದು ನಿಮಗೆ ಮನವರಿಕೆಯಾದರೆ, ಯಾವ ಕಾರಣಕ್ಕೂ ಮಾಡಬೇಡಿ. ಅದು ಸತ್ಯವಲ್ಲದಿದ್ದರೆ, ಯಾವ ಕಾರಣಕ್ಕೂ ಹೇಳಬೇಡಿ. ನಿಮಗೆ ಗೊತ್ತಿಲ್ಲದ ವಿಷಯದ ಬಗ್ಗೆ ಮಾತಾಡಬೇಡಿ.

### ವಕ್ರತುಂಡೋಕ್ತಿ

ರಾಜಕಾರಣಕ್ಕಿಂತ ಒಲಂಪಿಕ್ ವಾಸಿ. ಒಲಂಪಿಕ್‌ನಲ್ಲಿ ಎರಡನೇ ಸ್ಥಾನ ಪಡೆದವರಿಗೆ ಬೆಳ್ಳಿ ಸಿಗುತ್ತದೆ, ರಾಜಕಾರಣದಲ್ಲಿ ಪ್ರತಿಪಕ್ಷದ ಸ್ಥಾನ.

## ಎಲ್.ಕೆ.ಆಡ್ವಾಣಿ ಆಸ್ಪತ್ರೆಗೆ ದಾಖಲು

**ದೆಹಲಿ:** ಮಾಜಿ ಉಪ ಪ್ರಧಾನಿ, ಬಿಜೆಪಿ ಧುರೀಣ ಲಾಲ್ ಕೃಷ್ಣ ಆಡ್ವಾಣಿ(96) ಅವರನ್ನು ಅನಾರೋಗ್ಯ ಕಾರಣ ಸೋಮವಾರ ದೆಹಲಿಯ ಇಂದ್ರಪ್ರಸ್ಥ ಅಪೊಲೊ ಆಸ್ಪತ್ರೆಗೆ ದಾಖಲಿಸಲಾಗಿದೆ.

ವಿವಿಧ ಪರೀಕ್ಷೆಗಳ ಬಳಿಕ ಎಲ್.ಕೆ.ಆಡ್ವಾಣಿ ಅವರಿಗೆ ನರರೋಗ ವಿಭಾಗ ಚಿಕಿತ್ಸೆ ನೀಡಲಾಗುತ್ತಿದೆ. ಆಡ್ವಾಣಿ ಅವರ ಆರೋಗ್ಯ ಈಗ ಸ್ಥಿರವಾಗಿದೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ. ಕಳೆದ ತಿಂಗಳು ಕೂಡ ಅಸೌಖ್ಯಗೊಂಡಿದ್ದ ಆಡ್ವಾಣಿ ಅವರನ್ನು ಏಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಒಂದೆರಡು ದಿನಗಳ ಪರಿವೀಕ್ಷಣೆ ನಂತರ ಅವರನ್ನು ಮನೆಗೆ ಕಳುಹಿಸಿಕೊಡಲಾಗಿತ್ತು.

## ಹೊಟೇಲ್, ಬಾರ್ ರಾತ್ರಿ ಒಂದರ ತನಕ ಇಂದಿನಿಂದ ಓಪನ್

**ಬೆಂಗಳೂರು:** ರಾಜಧಾನಿ ಬೆಂಗಳೂರು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಹೋಟೆಲ್, ಬಾರ್ ಮತ್ತು ರೆಸ್ಟೋರೆಂಟ್‌ಗಳ ವ್ಯಾಪಾರ-ವಹಿವಾಟು ಅವಧಿಯನ್ನು ಬೆಳಗ್ಗೆ 9ರಿಂದ ರಾತ್ರಿ 1 ಗಂಟೆವರೆಗೆ ವಿಸ್ತರಿಸಲು ರಾಜ್ಯ ಸರಕಾರ ಗ್ರೀನ್ ಸಿಗ್ನಲ್ ನೀಡಿದೆ. ಹೋಟೆಲ್ ಮಾಲೀಕರ ಸಂಘದ ಮನವಿ ಪುರಸ್ಕರಿಸಿರುವ ಸರಕಾರ ಈ ಸಂಬಂಧ ಅಧಿಕೃತ ಆದೇಶ ಹೊರಡಿಸಿದೆ. ಸಿಎಲ್ 4, ಸಿಎಲ್ 6, ಸಿಎಲ್ 7, ಸಿಎಲ್ 7ಡಿ ಪರವಾನಗಿ ಪಡೆದ ಹೋಟೆಲ್, ಕ್ಲಬ್, ರೆಸ್ಟೋರೆಂಟ್‌ಗಳು ಬೆಳಗ್ಗೆ 9 ರಿಂದ ಮಧ್ಯರಾತ್ರಿ 1 ಗಂಟೆವರೆಗೆ ಹಾಗೂ ಸಿಎಲ್ 9 ಪರವಾನಗಿ ಪಡೆದ ಬಾರ್‌ಗಳಿಗೆ ಬೆಳಗ್ಗೆ 10ರಿಂದ ಮಧ್ಯರಾತ್ರಿ 1 ಗಂಟೆವರೆಗೆ ವ್ಯಾಪಾರ ವಹಿವಾಟಿನ ಸಮಯ ನಿಗದಿಪಡಿಸಲಾಗಿದೆ.

## ಗೃಹಲಕ್ಷ್ಮಿ ಖಾತೆಗೆ ಇಂದು ಹಣ ಜಮೆ

**ಮಂಡ್ಯ:** ತಾಂತ್ರಿಕ ಕಾರಣದಿಂದ ಎರಡು ತಿಂಗಳಿನಿಂದ ಗೃಹಲಕ್ಷ್ಮಿ ಹಣ ಜಮೆ ಆಗಿರಲಿಲ್ಲ. ಇಂದಿನಿಂದ ಗೃಹಲಕ್ಷ್ಮಿ ಹಣ ಮಹಿಳೆಯರ ಖಾತೆಗೆ ಜಮೆ ಆಗಲಿದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ತಿಳಿಸಿದ್ದಾರೆ. ಮಂಡ್ಯದ ಜನಾಂದೋಲನದಲ್ಲಿ ಮಾತನಾಡಿದ ಸಚಿವರು, ಸೋಮವಾರ ಡಿಸಿಎಂ ಭಾಷಣ ಮಾಡುವಾಗ ಗೃಹಲಕ್ಷ್ಮೀ ಹಣ ಬಂದಿಲ್ಲ ಎಂದು ಮಹಿಳೆಯರು ಹೇಳಿದ್ದರು. ತಾಂತ್ರಿಕ ಕಾರಣದಿಂದ ಬಂದಿರಲಿಲ್ಲ ಎಂದರು.

ಢಾಕಾ ಹೋಟೆಲ್‌ಗೆ ಬೆಂಕಿ, ಇಂಡೋನೇಷ್ಯಾ ನಾಗರಿಕ ಸೇರಿ 24 ಜನರ ಸಜೀವ ದಹನ | ಸಂಸತ್ತು ವಿಸರ್ಜನೆ, ಸೇನಾ ಜನರಲ್ ವಜಾ, ಮಾಜಿ ವಿದೇಶಾಂಗ ಸಚಿವನ ಬಂಧನ | ಬಾಂಗ್ಲಾ ಪರಿಸ್ಥಿತಿಗೆ ಭಾರತ ಕಳವಳ, ಸರ್ವಪಕ್ಷ ಸಭೆ, ಸಂಸತ್ತಿಗೆ ಮಾಹಿತಿ | ಶೇಖ್ ಹಸೀನಾಗೆ ಆಶ್ರಯ ನೀಡಲು ಬ್ರಿಟನ್ ನಕಾರ, ಸದ್ಯಕ್ಕೆ ಭಾರತದಲ್ಲೇ ವಾಸ್ತವ್ಯ

# ಬಾಂಗ್ಲಾದಲ್ಲಿ ಹಿಂಸಾ ದಳ್ಳುರಿ

**ಢಾಕಾ:** ಬಾಂಗ್ಲಾದೇಶದಲ್ಲಿ ಅವಾಮಿ ಲೀಗ್ ಸರಕಾರ ಪತನಗೊಂಡು, ಪ್ರಧಾನಿ ಶೇಖ್ ಹಸೀನಾ ಭಾರತಕ್ಕೆ ಪಲಾಯನ ಮಾಡಿದ ಬಳಿಕವೂ ಹಿಂಸಾಚಾರ ಮುಂದುವರಿದಿದೆ. ಹಸೀನಾ ಸರಕಾರದ ಮೀಸಲು ನೀತಿ ಖಂಡಿಸಿ ಬೀದಿಗಿಳಿದಿರುವ ಪ್ರತಿಭಟನಾಕಾರರು, ಸೇನೆ ಅಧಿಕಾರ ವಹಿಸಿಕೊಂಡ ಬಳಿಕವೂ ಅವಾಮಿ ಪಕ್ಷದ ನಾಯಕರು ಮತ್ತು ಅಲ್ಪಸಂಖ್ಯಾತ ಹಿಂದುಗಳನ್ನು ಗುರಿಯಾಗಿರಿಸಿಕೊಂಡು ದಾಳಿ ಮುಂದುವರಿಸಿದ್ದಾರೆ.

ಢಾಕಾದಲ್ಲಿರುವ ಅವಾಮಿ ಲೀಗ್ ನಾಯಕ ಶಹೀನ್ ಚಕ್ಲದರ್‌ಗೆ ಸೇರಿದ ಜೋಶೋರ್‌ನ ಹೋಟೆಲ್ ಮೇಲೆ ದುಷ್ಕರ್ಮಿಗಳ ಗುಂಪು ಸೋಮವಾರ ರಾತ್ರಿ ದಾಳಿ ನಡೆಸಿ ಬೆಂಕಿ ಹಚ್ಚಿದ್ದು, ಇಂಡೋನೇಷ್ಯಾದ ನಾಗರಿಕ ಸೇರಿ 24 ಜನರು ಸಜೀವ ದಹನಗೊಂಡಿದ್ದಾರೆ. 50ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಹಿಂಸಾಚಾರದಲ್ಲಿ ಈವರೆಗೆ ಬಲಿಯಾದವರ ಸಂಖ್ಯೆ 500ರ ಗಡಿ ದಾಟಿದೆ. ಅರಾಜಕ ಪರಿಸ್ಥಿತಿಯಿಂದ ಇಡೀ ದೇಶ ಹೊತ್ತಿ ಉರಿಯುತ್ತಿದ್ದರೂ, ಸೇನೆ ಕರ್ಫ್ಯೂ ಹಿಂತೆಗೆದುಕೊಂಡಿದೆ.

ಈ ಮಧ್ಯೆ, ಬಾಂಗ್ಲಾದೇಶದ ಸಂಸತ್ತನ್ನು ವಿಸರ್ಜಿಸಲಾಗಿದ್ದು, ಬಿಎನ್ ಪಿ ನೇತೃತ್ವದಲ್ಲಿ ಮಧ್ಯಂತರ ಸರಕಾರ ರಚನೆಗೆ ಬಿರುಸಿನ ಪ್ರಯತ್ನ ನಡೆದಿದೆ. ದೇಶಬಿಟ್ಟು ಪರಾರಿಯಾದ ಶೇಖ್ ಹಸೀನಾಗೆ ರಾಜಕೀಯ ಆಶ್ರಯ ನೀಡಲು ಬ್ರಿಟನ್ ನಿರಾಕರಿಸಿದ್ದು, ಭಾರತದಲ್ಲೇ ಇನ್ನೂ ಕೆಲಕಾಲ ಅವರು ಇರಬೇಕಾಗಿದೆ. ಯೂರೋಪ್‌ನ ಯಾವುದಾದರೂ ದೇಶದಲ್ಲಿ ಆಶ್ರಯ ಪಡೆಯಲು ಹಸೀನಾ ಪ್ರಯತ್ನ ಮುಂದುವರಿಸಿದ್ದಾರೆ. ಈ ನಡುವೆ ಅಮೆರಿಕ ಅವರ ವೀಸಾ ರದ್ದು ಮಾಡಿದೆ.

**300 ಹೆಚ್ಚು ಹಿಂದೂ ಮನೆಗಳ ಮೇಲೆ ದಾಳಿ:** ಮಂಗಳವಾರವೂ ಬೀದಿಗಿಳಿದು ಪ್ರತಿಭಟನೆ ಮುಂದುವರಿಸಿದ ಉದ್ರಿಕ್ತರು, ಅಲ್ಪಸಂಖ್ಯಾತ ಹಿಂದುಗಳನ್ನು ಗುರಿಯಾಗಿರಿಸಿಕೊಂಡು ದಾಳಿ ನಡೆಸುತ್ತಿದ್ದಾರೆ. 300ಕ್ಕೂ ಹೆಚ್ಚು ಮನೆಗಳಿಗೆ ನುಗ್ಗಿ ದಾಂಧಲೆ ನಡೆಸಿ ಲೂಟಿ ಮಾಡಿದ್ದು, ಹಿಂದೂಗಳು ಭಯಭೀತರಾಗಿದ್ದಾರೆ. ಶೇರ್‌ಪುರದ ಇಸ್ಕಾನ್ ದೇಗುಲ ಸೇರಿದಂತೆ ಹಿಂದೂ ಮಂದಿರಗಳ ಮೇಲೆ ದಾಳಿ ನಡೆಸಿ ವಿಗ್ರಹಗಳನ್ನು ಧ್ವಂಸಗೊಳಿಸಲಾಗಿದೆ.

- ತ್ರಿಪುರಾಗೆ ಬಂದ ಬಾಂಗ್ಲಾ ಸೇನಾ ವಿಮಾನ ವಾಪಸ್
- ಅವಾಮಿ ಲೀಗ್ ನಾಯಕರ ಮನೆ, ಕಚೇರಿಗಳ ಮೇಲೆ ದಾಳಿ, ಬೆಂಕಿ
- ತಾಯಿ ಮತ್ತೆಂದೂ ಬಾಂಗ್ಲಾಗೆ ಕಾಲಿಡುವುದಿಲ್ಲ: ಹಸೀನಾ ಪುತ್ರನ ಭಾವುಕ ನುಡಿ
- ಹಸೀನಾ ವೀಸಾ ರದ್ದು ಮಾಡಿದ ಅಮೆರಿಕ
- ಕ್ರಿಕೆಟಿಗ ಲಿಟ್ಟನ್ ದಾಸ್ ಮನೆ ಮೇಲೂ ದಾಳಿ ಯತ್ನ

### ಮೊರ್ತಜಾ ಮನೆಗೆ ಬೆಂಕಿ

ಮಾಜಿ ಕ್ರಿಕೆಟಿಗ ಮತ್ತು ಅವಾಮಿ ಲೀಗ್ ಸಂಸದ ಮುಸ್ತಫಾ ಮೊರ್ತಜಾ ಮನೆ ಮೇಲೆ ದಾಳಿ ನಡೆಸಿದ ದುಷ್ಕರ್ಮಿಗಳು ಬೆಂಕಿ ಹಚ್ಚಿದ್ದಾರೆ. ಅಲ್ಲದೆ, ಮತ್ತೊಬ್ಬ ಕ್ರಿಕೆಟಿಗ ಲಿಟ್ಟನ್‌ದಾಸ್‌ರ ಮನೆ ಎಂದು ಭಾವಿಸಿ ಪಕ್ಕದ ಮನೆಯನ್ನು ಧ್ವಂಸಗೊಳಿಸಲಾಗಿದೆ.

### ಸುರಕ್ಷತೆಗೆ ಸರಕಾರ ಬದ್ಧ

ನೆರೆಯ ಬಾಂಗ್ಲಾದಲ್ಲಿ ಉಂಟಾಗಿರುವ ಅರಾಜಕ ಪರಿಸ್ಥಿತಿ ದೆಹಲಿಯಲ್ಲಿ ವಿದೇಶಾಂಗ ಸಚಿವ ಜೈಶಂಕರ್ ನೇತೃತ್ವದಲ್ಲಿ ಸರ್ವಪಕ್ಷ ಸಭೆ ನಡೆಯಿತು. ಈ ವಿಚಾರದಲ್ಲಿ ಭಾರತ ಕಾದು



ನೋಡುವ ತಂತ್ರ ಅನುಸರಿಸಲಿದೆ ಎಂದು ಅವರು ಎಲ್ಲ ಪಕ್ಷಗಳ ನಾಯಕರಿಗೆ ಮಾಹಿತಿ ನೀಡಿದರು. ಸದ್ಯ ಬಾಂಗ್ಲಾದಲ್ಲಿ 12 ಸಾವಿರಕ್ಕೂ ಹೆಚ್ಚು ಭಾರತೀಯರಿದ್ದು, ಅವರ ಮನೆ ಮತ್ತು ಪೂಜಾಸ್ಥಳಗಳ ಮೇಲೆ ದಾಳಿ ನಡೆದಿದೆ. ಹೀಗಾಗಿ ಅಲ್ಪಸಂಖ್ಯಾತರ ಸುರಕ್ಷತೆಗೆ ಮೊದಲ ಆದ್ಯತೆ ನೀಡಿರುವುದಾಗಿ ಹೇಳಿದ ಜೈಶಂಕರ್, ಆದರೆ ತಕ್ಷಣವೇ ಭಾರತೀಯರನ್ನು ತುರ್ತಾಗಿ ತೆರವುಗೊಳಿಸುವ ಪರಿಸ್ಥಿತಿ ಇಲ್ಲ ಎಂದರು. ಭಾರತದ ಸುರಕ್ಷತೆ ವಿಚಾರದಲ್ಲಿ ಕೇಂದ್ರ ಸರಕಾರದ ಜತೆ ನಿಲ್ಲುವುದಾಗಿ ಪ್ರತಿಪಕ್ಷ ನಾಯಕರು ಭರವಸೆ ನೀಡಿದರು.

**ಮಧ್ಯಂತರ ಸರಕಾರ ರಚನೆ ಯತ್ನ:** ಬಾಂಗ್ಲಾ ಸಂಸತ್ ವಿಸರ್ಜನೆ ಬೆನ್ನಲ್ಲೇ ಬಿಎನ್‌ಪಿ ಸೇರಿದಂತೆ 28 ಪಕ್ಷಗಳ ನಾಯಕರೊಂದಿಗೆ ಮಧ್ಯಂತರ ಸರಕಾರ ರಚಿಸುವ ಯತ್ನ ನಡೆದಿದೆ. ಹೊಸ ಸರಕಾರದಲ್ಲಿ ಸಲಹೆಗಾರರಾಗಿ ಕೆಲಸ ನಿರ್ವಹಿಸುವಂತೆ ನೊಬೆಲ್ ಪ್ರಶಸ್ತಿ ಪುರಸ್ಕೃತ ಮೊಹಮದ್ ಯೂನುಸ್‌ರನ್ನು ಸೇನೆ ಕೇಳಿಕೊಂಡಿದೆ. ಇದಕ್ಕವರು ಒಪ್ಪಿಕೊಂಡಿದ್ದಾರೆ ಎನ್ನಲಾಗಿದೆ.

**ಸಂಸತ್ತಿಗೂ ಮಾಹಿತಿ:** ಬಾಂಗ್ಲಾ ಬಿಕ್ಕಟ್ಟು ಬಗ್ಗೆ ವಿದೇಶಾಂಗ ಸಚಿವ ಜೈಶಂಕರ್ ರಾಜ್ಯಸಭೆಗೆ ಮಂಗಳವಾರ ಮಾಹಿತಿ ನೀಡಿ, ಅಲ್ಲಿರುವ ಭಾರತೀಯರ ರಕ್ಷಣೆಗೆ ಸರಕಾರ ಬದ್ಧವಾಗಿದೆ. ಗಡಿಯುದ್ದಕ್ಕೂ ಕಟ್ಟೆಚ್ಚರ ವಹಿಸಲಾಗಿದೆ. ಢಾಕಾ ಅಧಿಕಾರಿಗಳ ಜತೆಗೂ ಭಾರತ ಸಂಪರ್ಕದಲ್ಲಿದೆ. ಬಾಂಗ್ಲಾದಲ್ಲಿ ಕಾನೂನು ವ್ಯವಸ್ಥೆ ಸರಿದಾರಿಗೆ ಬರುವವರೆಗೂ ಆತಂಕವಿರಲಿದೆ ಎಂದು ತಿಳಿಸಿದ್ದಾರೆ.

→ 4

**ಪ್ಯಾರಿಸ್:** ಒಲಿಂಪಿಕ್ಸ್‌ನಲ್ಲಿ ಮಂಗಳವಾರ ಭಾರತದ ಪಾಲಿಗೆ ಮಂಗಳಕರವಾಗಿದೆ. ಸೋಮವಾರ ಹಾಗೂ ಭಾನುವಾರ ಸತತ ಸೋಲಿನಿಂದ ಕಂಗೆಟ್ಟಿದ್ದ ಭಾರತಕ್ಕೆ ಸಿಹಿಸುದ್ದಿ ಸಿಕ್ಕಿದೆ. ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ನೀರಜ್ ಚೋಪ್ರಾ ಅವರು ಈ ಬಾರಿಯ ಒಲಿಂಪಿಕ್ಸ್ ಟೂರ್ನಿಯಲ್ಲೂ ಭರ್ಜರಿ ಪ್ರದರ್ಶನ ಮುಂದುವರಿಸಿದ್ದು, ಜಾವೆಲಿನ್ ಅರ್ಹತಾ ಸುತ್ತಿನ ಪಂದ್ಯದಲ್ಲಿ 89.34 ಮೀ. ದೂರ ಜಾವೆಲಿನ್ ಎಸೆದು ಫೈನಲ್ ಪ್ರವೇಶಿಸಿದ್ದಾರೆ.

ಜಾವೆಲಿನ್‌ನ ಬಿ' ವಿಭಾಗದ ಅರ್ಹತಾ ಸುತ್ತಿನಲ್ಲಿ ಕಣಕ್ಕಿಳಿದ ನೀರಜ್ ತಮ್ಮ ಮೊದಲ ಎಸೆತವನ್ನೇ 89.34 ಮೀ. ದೂರ ಎಸೆದು ನೇರವಾಗಿ ಫೈನಲ್ ಪ್ರವೇಶಿಸಿದರು. ಇವರ ಜತೆ ಪಾಕಿಸ್ತಾನದ ಅರ್ಷದ್ ನದೀಮ್ 86.59 ಮೀ. ಸಾಧನೆಯೊಂದಿಗೆ ಫೈನಲ್ ಟಿಕೆಟ್ ಪಡೆದರು. 89.34 ಮೀ. ದೂರ ಜಾವೆಲಿನ್ ಎಸೆದದ್ದು ನೀರಜ್ ಅವರ 2ನೇ ಶ್ರೇಷ್ಠ ಸಾಧನೆಯಾಗಿದೆ. ಅವರ ಶ್ರೇಷ್ಠ ನಿರ್ವಹಣೆ 89.94 ಮೀ. ದೂರ ಎಸೆದಿರುವುದು. ಈ ಎಸೆತವನ್ನು 2022ರ ಸ್ಟಾಕ್‌ಹೋಮ್ ಡೈಮಂಡ್ ಲೀಗ್‌ನಲ್ಲಿ ಎಸೆದಿದ್ದರು.

ಮತ್ತೊಂದೆಡೆ ಕುಸ್ತಿಪಟು ವಿನೇಶ್ ಪೋಗಟ್ ಅವರು 50 ಕೆಜಿ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಫೈನಲ್ ಪ್ರವೇಶಿಸಿ ದಾಖಲೆ ಬರೆದಿದ್ದಾರೆ.

ಮಂಗಳವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮೂರು ಬಾರಿಯ ಕಾಮನ್ ವೆಲ್ತ್ ಚಿನ್ನದ ಪದಕ ವಿಜೇತೆ ಉಕ್ರೇನ್‌ನ ಒಕ್ಸಾನಾ ಲಿವಾಚ್ ವಿರುದ್ಧ 7-5 ಅಂತರದ ರೋಚಕ ಗೆಲುವು ಸಾಧಿಸಿ ಸೆಮಿಫೈನಲ್ ಪ್ರವೇಶಿಸಿದರು. ಇದಕ್ಕೂ ಮುನ್ನ ನಡೆದಿದ್ದ ಪ್ರಿಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ವಿನೇಶ್ ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಜಪಾನ್‌ನ ಯುಯಿ ಸುಸಾಕಿ ಅವರನ್ನು 3-2 ಅಂತರದಿಂದ ಮಣಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರು.

ನಿರ್ಣಾಯಕ ಸೆಮಿಫೈನಲ್ ಪಂದ್ಯದಲ್ಲಿ ಕ್ಯೂಬಾದ ಯುಸ್ನೆಲಿಸ್ ಗುಜಮನ್ ಲೊಪೆಜ್ ವಿರುದ್ಧ ಜಯ ಗಳಿಸಿ ಫೈನಲ್ ಪ್ರವೇಶಿಸಿದರು. ಈ ಮೂಲಕ ಒಲಿಂಪಿಕ್ ಕುಸ್ತಿ ಪಂದ್ಯದಲ್ಲಿ ಫೈನಲ್‌ಗೇರಿದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಪ್ರಿಕ್ವಾರ್ಟರ್ ಫೈನಲ್ ಪಂದ್ಯ ದಲ್ಲಿ ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತಳ ವಿರುದ್ಧ ಗೆದ್ದು ಆತ್ಮವಿಶ್ವಾಸ ಹೆಚ್ಚಿಸಿ ಕೊಂಡಿದ್ದ ಪೋಗಟ್ ಸೆಮಿ ಫೈನಲ್ ಪಂದ್ಯದಲ್ಲಿ 5-0 ಅಂತರದಿಂದ ಗೆಲುವು ಸಾಧಿಸಿ ದರು. ಇದೇ ವೇಳೆ ಹರ್ಮನ್ ಪ್ರೀತ್ ಸಿಂಗ್ ನೇತೃತ್ವದ ಹಾಕಿ ತಂಡ ಜರ್ಮನಿ ವಿರುದ್ಧ ಸೆಣಸಲಿದೆ.

## ಗೌರವ ಡಾಕ್ಟರೇಟ್ ಪದವಿ ನಿರಾಕರಿಸಿದ ನಟ ಸುದೀಪ್

**ತುಮಕೂರು:** ತುಮಕೂರು ವಿವಿ ತಮಗೆ ಕೊಡಲು ತೀರ್ಮಾನಿಸಿದ್ದ ಗೌರವ ಡಾಕ್ಟರೇಟ್

ಪದವಿಯನು ನಟ ಸುದೀಪ್ ನಿರಾಕರಿಸಿದ್ದಾರೆ. ತುಮಕೂರು ವಿಶ್ವವಿದ್ಯಾನಿಲಯದ 17ನೇ ಘಟಿಕೋತ್ಸವದ ಸಂದರ್ಭದಲ್ಲಿ ನಟ ಸುದೀಪ್‌ಗೆ ಗೌರವ ಡಾಕ್ಟರೇಟ್ ನೀಡಲು ವಿವಿ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಈ ವಿಚಾರವನ್ನು ಸುದೀಪ್ ಅವರ ಗಮನಕ್ಕೂ ತರಲಾಗಿತ್ತು. ವಿಶ್ವವಿದ್ಯಾಲಯದ ನಿರ್ಧಾರಕ್ಕೆ ಧನ್ಯವಾದ ತಿಳಿಸಿರುವ ಸುದೀಪ್, "ಸಮಾಜದಲ್ಲಿ ತಮಗಿಂತ ಸೇವೆ ಮಾಡಿದ ಹಿರಿಯರಿದ್ದಾರೆ. ಅವರಿಗೆ ಗೌರವ ಡಾಕ್ಟರೇಟ್ ನೀಡಿ ಸತ್ಕರಿಸಿ'' ಎಂದು ಹೇಳಿ ವಿನಯದಿಂದಲೇ ಗೌರವ ಡಾಕ್ಟರೇಟ್ ಪದವಿ ನಿರಾಕರಿಸಿದ್ದಾರೆ. ಈ ಬಗ್ಗೆ ಸಾರ್ವಜನಿಕ ವಲಯದಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ.

## ಮುಂದಿನ 6 ದಿನ ಭಾರಿ ಮಳೆ

**ಬೆಂಗಳೂರು:** ರಾಜ್ಯದ ಬಹುತೇಕ ಭಾಗದಲ್ಲಿ ಬುಧವಾರದಿಂದ ಆರು ದಿನಗಳ ಕಾಲ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ರಾಜಧಾನಿ ಬೆಂಗಳೂರಿನಲ್ಲಿ ಸೋಮವಾರ ದಿಂದ ಮಳೆ ಆರಂಭವಾಗಿದ್ದು, ಮಂಗಳೂರು, ಉಡುಪಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಹಾಸನ, ಕೊಡಗು, ಬೆಂ. ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಬೆಳಗಾವಿ, ಬೀದರ್, ಧಾರವಾಡ, ಗದಗ, ಹಾವೇರಿ, ಕಲಬುರಗಿ, ಕೊಪ್ಪಳ, ವಿಜಯಪುರ, ಕೊಪ್ಪಳ, ರಾಯಚೂರು, ಯಾದಗಿರಿ, ಬಳ್ಳಾರಿ, ವಿಜಯನಗರದಲ್ಲಿ ಮಳೆಯಾಗಲಿದೆ. ರಾಜ್ಯದಲ್ಲಿ ಮಳೆ ಕ್ಷೀಣಿಸಿದ್ದ ಬೆನ್ನಲ್ಲೇ ಮಂಗಳವಾರ ಬೆಳಗ್ಗೆ ಬಿಸಿಲ ವಾತಾವರಣವಿತ್ತು. ಆದರೆ ಸಂಜೆ 5 ಗಂಟೆ ನಂತರ ಆರಂಭವಾದ ಜೋರು ಮಳೆ ಮಧ್ಯರಾತ್ರಿವರೆಗೂ ಬಿದ್ದಿದೆ. ಮುಂದಿನ 2 ದಿನಗಳು ಮೋಡ ಕವಿದ ವಾತಾವರಣ ಇರಲಿದೆ ಎಂದು ಇಲಾಖೆ ಮಾಹಿತಿ ನೀಡಿದೆ.

## ಇನ್ಫಿಗೆ 38 ಸಾವಿರ ಕೋಟಿ ರೂ ಜಿಎಸ್‌ಟಿ ನೋಟಿಸ್

**ದೆಹಲಿ:** ಸರಕು ಮತ್ತು ಸೇವಾ ತೆರಿಗೆ (ಜಿಎಸ್ಟಿ) ಪಾವತಿ ಉಳಿಸಿಕೊಂಡ ಆರೋಪಕ್ಕೆ ಗುರಿ ಯಾಗಿರುವ ಮಾಹಿತಿ ತಂತ್ರ ಜ್ಞಾನ ಸಂಸ್ಥೆ ಇನ್ಫೋಸಿಸ್‌ಗೆ 38 ಸಾವಿರ ಕೋಟಿ ರೂ. ಪಾವತಿಸುವಂತೆ ಜಿಎಸ್ಟಿ ಗುಪ್ತಚರ ಮಹಾನಿರ್ದೇಶನಾಲಯ ಆದೇಶ ನೀಡಿದೆ.

**2017ರಿಂದ 2022ರ ಅವಧಿಯ ವಿದೇಶ ವಹಿವಾಟಿಗೆ ಜಿಎಸ್‌ಟಿ ಬಾಕಿ ಉಳಿಸಿಕೊಂಡ ಆರೋಪ**

ಈ ಸುದ್ದಿ ಹಿನ್ನೆಲೆಯಲ್ಲಿ ಷೇರುಮಾರುಕಟ್ಟೆಯಲ್ಲಿ ಇನ್ಫೊಸಿಸ್ ಷೇರು ಬೆಲೆ ಮಂಗಳವಾರ ಶೇ 1.2ರಷ್ಟು ಕುಸಿಯಿತು. ದಿನದ ಆರಂಭದಲ್ಲಿ ಕಂಪನಿಯ ಷೇರುಗಳ ಬೆಲೆ ಶೇ 1.6ರಷ್ಟು ಬೆಳವಣಿಗೆ ಕಂಡಿತ್ತು. ನಂತರ ಈ ಲಾಭಾಂಶ ಶೇ 0.3ಕ್ಕೆ ಇಳಿಯಿತು. ಕೆಲ ದಿನಗಳ ಹಿಂದೆ ಜಿಎಸ್‌ಟಿ ಗುಪ್ತಚರ ಮಹಾನಿರ್ದೇಶನಾಲಯ, 2017ರಿಂದ 2022ರ ಅವಧಿಯಲ್ಲಿ ಐಟಿ ದೈತ್ಯ ಸಂಸ್ಥೆ 32,403 ಕೋಟಿ ರು. ಜಿಎಸ್‌ಟಿ ಬಾಕಿ ಉಳಿಸಿಕೊಂಡಿದೆ ಎಂದು ನೋಟಿಸ್ ಜಾರಿ ಮಾಡಿತ್ತು.

→ 4

### ಫನ್‌ತರಂಗ
- ರಘುಪತಿ ಶೃಂಗೇರಿ -

ಸಂಪುಟದಲ್ಲಿ ಸಾಧನೆ ತೋರದ ಸಚಿವರಿಗೆ ಸಂಕಷ್ಟ
ಸುದ್ದಿ




## ಆಣೆ-ಪ್ರಮಾಣದ ನಡುವೆ 4ನೇ ದಿನಕ್ಕೆ ಯಾತ್ರೆ

ಮೊದಲ ಬಾರಿಗೆ ಸಿಎಂ ವಿರುದ್ಧ ಕಿಡಿಕಾರಿದ ದೋಸ್ತಿ ನಾಯಕರು | ಬಿಜೆಪಿ-ಜೆಡಿಎಸ್ ಪಾದಯಾತ್ರೆಯಲ್ಲಿ ಧಮ್ ಇಲ್ಲ: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಲೇವಡಿ

**ಬೆಂಗಳೂರು:** ಕಳೆದ ಮೂರು ದಿನಗಳಿಂದ ಆರೋಪ-ಪ್ರತ್ಯಾರೋಪದಲ್ಲಿಯೇ ಕಳೆದಿದ್ದ ಬಿಜೆಪಿ-ಜೆಡಿಎಸ್ ನಾಯಕರ ಪಾದಯಾತ್ರೆಯ ನಾಲ್ಕನೇ ದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಕಿಡಿಕಾರಿದ್ದಾರೆ. ಇನ್ನೊಂದೆಡೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೇತೃತ್ವದ ಜನಾಂದೋಲನ ಯಾತ್ರೆಯಲ್ಲಿ ಆಣೆ-ಪ್ರಮಾಣದ ಮಾತುಗಳು ಕೇಳಿಬಂದಿವೆ.

ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಒತ್ತಾಯಿಸಿ ನಾಲ್ಕನೇ ದಿನದ ಮೈಸೂರು ಚಲೋ ಪಾದಯಾತ್ರೆ ಮದ್ದೂರಿನ ನಿಡಘಟ್ಟದಿಂದ ಮಂಡ್ಯ ತಲುಪಿದರೆ, ಇತ್ತ ಡಿಕೆ ಶಿವಕುಮಾರ್ ಮಂಡ್ಯದಲ್ಲಿ ಜನಾಂದೋಲನ ಸಭೆ ನಡೆಸಿ ದೋಸ್ತಿ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದರು. 3 ದಿನಗಳ ಕಾಲ ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ಕೇಂದ್ರ ಸಚಿವ ಕುಮಾರಸ್ವಾಮಿ ಅವರ ಗೈರಿನಲ್ಲಿ 4ನೇ ದಿನ ಪಾದಯಾತ್ರೆ ಆರಂಭವಾಯಿತು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಬಿಜೆಪಿ ಪಕ್ಷವನ್ನು ಮುನ್ನಡೆಸಿದರೆ, ಜೆಡಿಎಸ್ ಅನ್ನು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವ ವಹಿಸಿದ್ದರು.

**ವಿಡಿಯೊ ಪ್ರದರ್ಶಿಸಿದ ಡಿಕೆಶಿ:** ಮಂಡ್ಯದಲ್ಲಿ ನಡೆದ ಜನಾಂದೋಲನ ಸಭೆಯಲ್ಲಿ ಈ ಹಿಂದೆ ಬಿಜೆಪಿ-ಜೆಡಿಎಸ್ ನಾಯಕರು ವಾಕ್ಸಮರ ನಡೆಸಿಕೊಂಡಿರುವ ವಿಡಿಯೊಗಳನ್ನು ಡಿ.ಕೆ.ಶಿವ ಕುಮಾರ್ ಪ್ರದರ್ಶನ ಮಾಡಿದರು.

→ 4

ವಿಜಯೇಂದ್ರ ಲಕ್ಷ್ಮೀವಿಲಾಸ್ ಬ್ಯಾಂಕ್‌ನಲ್ಲಿ ದುಬೈಯಲ್ಲಿ ಖಾತೆ ತೆರೆದು ಕೋಟ್ಯಂತರ ರುಪಾಯಿ ವರ್ಗಾವಣೆಯಾಗಿದ್ದು ಏಕೆ ತನಿಖೆಯಾಗಲಿಲ್ಲ? ತಂಗಿ ಮಕ್ಕಳು, ನೆಂಟರು ಸೇರಿದಂತೆ ಇತರರ ಹೆಸರಿನಲ್ಲಿ ಅಕ್ರಮ ನಡೆಯಿತಲ್ಲ ಅದರ ಬಗ್ಗೆ ಬಿಚ್ಚಿಡಲೇ?
- **ಡಿ.ಕೆ. ಶಿವಕುಮಾರ್** ಉಪಮುಖ್ಯಮಂತ್ರಿ

ರಾಜ್ಯದ ಆರೂವರೆ ಕೋಟಿ ಜನರಿಗೆ ಚುನಾಯಿತ ಸರಕಾರವಿದೆ ಎನಿಸುವುದಿಲ್ಲ. ಕಳೆದ 14 ತಿಂಗಳಿನಲ್ಲಿ ರಾಜ್ಯದಲ್ಲಿ ವಿದ್ಯುತ್ ದರ ಏರಿಸಲಾಗಿದೆ. ಹಾಲಿನ ದರ ಹೆಚ್ಚಿಸಿದರೂ ಅದರ ಪ್ರಯೋಜನ ರೈತರು, ಹೈನುಗಾರರಿಗೆ ಲಭಿಸಿಲ್ಲ. ಗ್ಯಾರಂಟಿ ಹೆಸರಲ್ಲಿ ಸಿದ್ದರಾಮಯ್ಯ ಸರಕಾರ 1 ಲಕ್ಷ 95 ಸಾವಿರ ಕೋಟಿ ಸಾಲ ಮಾಡಿದೆ.
- **ಬಿ.ವೈ. ವಿಜಯೇಂದ್ರ**, ಬಿಜೆಪಿ ರಾಜ್ಯಾಧ್ಯಕ್ಷ

# ಕಾನೂನು ಹೋರಾಟಕ್ಕೆ ವೇದಿಕೆ ಸಜ್ಜು

## ಪರಿಷ್ಕೃತ ನೋಟಿಸ್ ಜಾರಿಗೆ ರಾಜಭವನ ಚಿಂತನೆ, ಕೋರ್ಟ್ ಮೆಟ್ಟಿಲೇರಲು ಸರಕಾರ ಸಿದ್ಧತೆ

- ಹಿರಿಯ ವಕೀಲರ ಜತೆ ಕಾಂಗ್ರೆಸ್ ನಾಯಕರ ಸಮಾಲೋಚನೆ
- ಖಾಸಗಿ ದೂರಿನ ಮೇಲೆ ಪ್ರಾಸಿಕ್ಯೂಷನ್‌ಗೆ ಅವಕಾಶವಿಲ್ಲ: ಕಾನೂನು ತಜ್ಞರ ಅಭಿಮತ

**ಬೆಂಗಳೂರು:** ಮುಡಾ ಪ್ರಕರಣ ದಿನದಿಂದ ದಿನಕ್ಕೆ ರೋಚಕ ತಿರುವು ಪಡೆಯುತ್ತಿದ್ದು, ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅವಕಾಶ ನೀಡಿದ್ದೇ ಆದರೆ ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲೇರು ವುದು ನಿಶ್ಚಿತ ಎನ್ನುವುದು ಸ್ಪಷ್ಟವಾಗಿದೆ.

ಮುಖ್ಯಮಂತ್ರಿ ಸಿದ್ದ ರಾಮಯ್ಯ ಹಾಗೂ ರಾಜ್ಯ ಸರಕಾರಕ್ಕೆ ನೀಡಿದ್ದ ನೋಟಿಸ್ ನೀಡಿದ್ದ ರಾಜ್ಯಪಾಲರಿಗೆ ಈಗಾ ಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಸಂಪುಟ ಸುದೀರ್ಘ ಉತ್ತರ ನೀಡಿದೆ. ಸಿಎಂಗೆ ನೀಡಿರುವ ನೋಟಿಸ್ ಹಿಂಪಡೆಯು ವಂತೆ ರಾಜ್ಯಪಾಲರಿಗೆ ಮನವಿ ಮಾಡಿ ಮಂತ್ರಿ ಪರಿಷತ್ ತಗೆದುಕೊಂಡ ನಿರ್ಣಯವನ್ನು ತಿರಸ್ಕರಿಸಿ, ಸಮರ್ಪಕ ಉತ್ತರ ನೀಡುವಂತೆ ರಾಜ್ಯಪಾಲರು ಪರಿಷ್ಕೃತ ನೋಟಿಸ್ ನೀಡಲು ಸಜ್ಜಾಗಿದ್ದಾರೆ ಎನ್ನಲಾಗಿದೆ.

ರಾಜ್ಯಪಾಲರು ಎರಡನೇ ನೋಟಿಸ್ ಸಿದ್ಧತೆ ನಡೆಸಿರುವ ಸಮಯದಲ್ಲಿಯೇ, ಕಾಂಗ್ರೆಸ್ ನಾಯಕರು ಈ ಪ್ರಕರಣದ ಕಾನೂನು ಸಾಧಕ-ಬಾಧಕ ಗಳ ಬಗ್ಗೆ ಖ್ಯಾತ ವಕೀಲ ರೊಂದಿಗೆ ಚರ್ಚಿಸಿದ್ದಾರೆ. ಅಭಿಷೇಕ್ ಮನು ಸಿಂಘ್ವಿ ಸೇರಿದಂತೆ ಹಲವರು, ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರ ಪ್ರಸ್ತಾಪವನ್ನು ಬಿಜೆಪಿಗರು ಮಾಡುತ್ತಿದ್ದಾರೆ. ಆದರೆ ಕಾನೂನಾತ್ಮಕವಾಗಿ ನಿವೇಶನ ಹಂಚಿಕೆ ಯಲ್ಲಿ ಸಿದ್ದರಾಮಯ್ಯ ಅವರ ಪಾತ್ರವಿಲ್ಲ. ನಿವೇಶನ ಹಂಚಿಕೆ ಅವಧಿಯಲ್ಲಿ ಸಿದ್ದರಾಮಯ್ಯ ಅವರು ಅಧಿಕಾರದಲ್ಲಿರಲಿಲ್ಲ.

→ 4

### ಪ್ರಾಸಿಕ್ಯೂಷನ್‌ಗೆ ಅವಕಾಶ: ತಾಂತ್ರಿಕ ತೊಡಕುಗಳೇನು?

- ರಾಜ್ಯಪಾಲರು ಖಾಸಗಿ ದೂರಿನ ಮೇಲೆ ಅಭಿಯೋಜನೆಗೆ ಅನುಮತಿ ನೀಡಲು ಅವಕಾಶವಿಲ್ಲ
- ಒಂದು ವೇಳೆ ನಿಯಮ ಮೀರಿ ಅವಕಾಶ ನೀಡಿದರೆ, ಕೆಟ್ಟ ಸಂಪ್ರದಾಯಕ್ಕೆ ನಾಂದಿ
- ತನಿಖಾ ವರದಿಯಿಲ್ಲದೇ, ಪ್ರಾಸಿಕ್ಯೂಷನ್ ಅವಕಾಶ ನೀಡಿದರೆ ಭವಿಷ್ಯದಲ್ಲಿ ನಾನಾ ಸಮಸ್ಯೆ
- ಸರಕಾರಗಳನ್ನು ಅಸ್ಥಿರಗೊಳಿಸಲು ಪ್ರಾಸಿಕ್ಯೂಷನ್ ನಿಯಮ ಬಳಸಿಕೊಳ್ಳುವ ಆತಂಕ

### ಸೂಚನೆ ಬೆನ್ನಲ್ಲೇ, ಎಚ್ಚೆತ್ತ ಕೈಪಡೆ

ಕಾನೂನಾತ್ಮಕ ಹೋರಾಟ ಒಂದು ಭಾಗವಾದರೆ, ಇನ್ನೊಂದೆಡೆ ಕಾಂಗ್ರೆಸ್ ಹೈಕಮಾಂಡ್‌ನ ಸ್ಪಷ್ಟ ಸೂಚನೆಯ ಬೆನ್ನಲ್ಲೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬೆನ್ನಿಗೆ



ಬಹುತೇಕ ಕಾಂಗ್ರೆಸಿಗರು ನಿಂತಿದ್ದಾರೆ. ಇಷ್ಟು ದಿನ ಮೌನವಾಗಿದ್ದ ಬಹುತೇಕ ಸಚಿವರು, ಶಾಸಕರು ಇದೀಗ ರಾಜ್ಯಪಾಲರ ನಡೆಯನ್ನು ಖಂಡಿಸುತ್ತಿದ್ದಾರೆ. ಇದರೊಂದಿಗೆ ರಾಜ್ಯದ ಕೆಲ ಭಾಗದಲ್ಲಿ ಈಗಾಗಲೇ ಸಿದ್ದರಾಮಯ್ಯ ಪರವಾಗಿ ಪ್ರತಿಭಟನೆಗಳು ಆರಂಭವಾಗಿದ್ದು, ಮುಂದಿನ ದಿನದಲ್ಲಿ ಇದರ ತೀವ್ರತೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆಯಿದೆ ಎನ್ನಲಾಗಿದೆ.

# ಮುಖ್ಯಮಂತ್ರಿಗಳ ಪ್ರಭಾವ ಕುಗ್ಗಿಸಲು ಸಾಧ್ಯವಿಲ್ಲ

## ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಪ್ರತಿಭಟನೆಯ ಎಚ್ಚರಿಕೆ | ಹೊನ್ನಾಳಿ ಬಂದ್

**ಹೊನ್ನಾಳಿ:** ಮುಡಾ ಹಗರಣ ಸಿದ್ದರಾಮಯ್ಯ ಅವರ ಕಾಲದಲ್ಲಿ ನಡೆದಿಲ್ಲ, ಇದು ಬಿಜೆಪಿ ಅಧಿಕಾರದಲ್ಲಿರುವಾಗ ನಡೆದಿದ್ದು ಎಲ್ಲರಂತೇ ಸಿದ್ದಾರಾಮಯ್ಯ ಅವರ ಪತ್ನಿ ಅವರಿಗೂ ಮುಡಾ ನಿವೇಶನ ಹಂಚಿಕೆಯಾಗಿದ್ದು, ಇದರಲ್ಲಿ ಸಿಎಂ ಅವರ ಪಾತ್ರವೇನೂ ಇಲ್ಲ, ಆದಾಗ್ಯೂ ಕೂಡ ಕಳಂಕ ರಹಿತ ರಾಜಕೀಯ ಜೀವನ ಪಾಲಿಸಿಕೊಂಡು ಬರುತ್ತಿರುವ ಸಿದ್ದರಾಮಯ್ಯ ಅವರ ವಿರುದ್ಧ ವಿರೋಧ ಪಕ್ಷಗಳು ಹಾಗೂ ಕೇಂದ್ರ ಸರಕಾರ ಇಲ್ಲಸಲ್ಲದ ಷಡ್ಯಂತ್ರ ನಡೆಸುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಸಿ.ಎಂ ಸಿದ್ದರಾಮಯ್ಯನವರ ಶಕ್ತಿಯನ್ನಾಗಲಿ ಪ್ರಭಾವವನ್ನಾಗಲಿ ಕುಗ್ಗಿಸಲು ಮೋದಿಗಾಗಲಿ ರಾಜ್ಯ ಬಿಜೆಪಿ ಪಕ್ಷಕ್ಕಾಗಲಿ ಸಾಧ್ಯವಿಲ್ಲ ಎಂಬುದಾಗಿ ಶಾಸಕ ಶಾಂತನಗೌಡ ಹೇಳಿದರು.

ಅವರು ಪಟ್ಟಣದಲ್ಲಿ ಮಂಗಳವಾರ ಸಿದ್ದರಾಮಯ್ಯ ಅಭಿಮಾನಿ ಬಳಗ, ಹಾಗೂ ಅಹಿಂದ ಮತ್ತು ಶೋಷಿತ ವರ್ಗಗಳ ಒಕ್ಕೂಟಗಳು ನೀಡಿದ್ದ ಹೊನ್ನಾಳಿ ಬಂದ್ ಹಾಗೂ ಪ್ರತಿಭಟನೆಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಹೊನ್ನಾಳಿ ಮತ್ತು ನ್ಯಾಮತಿ ಅವಳಿ ತಾಲೂಕಿನ ಸಿದ್ದರಾಮಯ್ಯ ಅಭಿಮಾನಿ ಬಳಗ ಹಾಗೂ ಎಲ್ಲಾ ಶೋಷಿತ ಸಮುದಾಯಗಳ ಆಹಿಂದ್ ಒಕ್ಕೂಟದ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆ ಹಾಗೂ

ಪಟ್ಟಣದಲ್ಲಿ ಸಿದ್ದರಾಮಯ್ಯ ಅಭಿಮಾನಿ ಬಳಗ ಹಾಗೂ ಅಹಿಂದ ಮತ್ತು ಶೋಷಿತ ವರ್ಗಗಳ ಒಕ್ಕೂಟಗಳು ನೀಡಿದ್ದ ಹೊನ್ನಾಳಿ ಬಂದ್ ಹಾಗೂ ಪ್ರತಿಭಟನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಶಾಸಕ ಶಾಂತನಗೌಡ ಅವರು ಮಾತನಾಡಿದರು.

ಹೊನ್ನಾಳಿ ಬಂದ್ ಯಶಸ್ವಿಯಾಗಿದ್ದು, ಇದುಹೊನ್ನಾಳಿ ತಾಲೂಕುಇಂದು ನಡೆಸಿರುವ ಹೋರಾಟವುಶ್ಯಾಂಪಲ್ ಮಾತ್ರ ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಸರಕಾರವು ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಕೇಂದ್ರ ಸರಕಾರ ಸಿಬಿಐ ಮುಂತಾದ ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ಕಾಂಗ್ರೆಸ್‌ನ ಮುಖಂಡರನ್ನು ನಾನಾ ರೀತಿಯಲ್ಲಿ ಹಗರಣಗಳಲ್ಲಿ ಸಿಲುಕಿಸುವ ಹಾಗೂ ತನಿಖೆಗೆ ಒಳಪಡಿಸಿ ಅವರರಾಜಕೀಯ ಇಚ್ಛಾಶಕ್ತಿಗಳನ್ನು ಕುಂದಿಸುವ ಕೆಲಸ ಮಾಡುವ ಮೂಲಕ ದ್ವೇಷದ ರಾಜಕಾರಣ ನಡೆಸುತ್ತಿದ್ದು ದೆಹಲಿ ಮುಖ್ಯಮಂತ್ರಿಕ್ರೇಜಿವಾಲ್ ಬಂಧನ,ಜಾರ್ಖಂಡ್ ಹೇಮಂತ್ ಸುರೇನ್ ಅವರ ವಿರುದ್ಧವೂಕೂಡ ಸುಳ್ಳು ಆರೋಪಗಳ ಮೂಲಕ ಜೈಲಿಗೆ ಕಳಿಸುವ ಹುನ್ನಾರ ಕೇಂದ್ರ ಸರಕಾರ ನಡೆಸುತ್ತಿದೆ ಎಂದು ಟೀಕಿಸಿದರು.

ನಂತರ ತಾಲೂಕು ಕುರುಬ ಸಂಘದ ಅಧ್ಯಕ್ಷ ನೆಲಹೊನ್ನೆ ಮೋಹನ ಮಾತನಾಡಿ, ರಾಜ್ಯದಲ್ಲಿ ಒಬ್ಬ ಹಿಂದುಳಿದ ವರ್ಗದ ವ್ಯಕ್ತಿ ಮುಖ್ಯಮಂತ್ರಿಯಾಗಿ ಅತ್ಯಂತ ಪ್ರಮಾಣಿಕವಾಗಿ ಯಶಸ್ವಿಯಾಗಿ ಆಡಳಿತ ಮಾಡಿಕೊಂಡು ಬರುತ್ತಿರುವ ಸಿದ್ದರಾಮಯ್ಯ ಅವರನ್ನು ಸಹಿಸದೇ ಷಡ್ಯಂತ್ರ ಮಾಡುತ್ತಿರುವದು ಖಂಡನೀಯ ಎಂದರು.

ಪ್ರತಿಭಟನೆಯ ನಂತರ ಪಟ್ಟಣದ ಸಂಗೊಳ್ಳಿ ರಾಯಣ್ಣ ಪ್ರತಿಮೆ ಬಳಿ ಉಪವಿಭಾಗಾಧಿಕಾರಿ ವಿ. ಅಭಿಷೇಕ್ ಅವರ ಮೂಲಕ ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಿದರು. ತಹಸೀಲ್ದಾರ ಪಟ್ಟರಾಜಗೌಡ, ಹೆಚ್ಚುವರಿ ಎಸ್ಪಿ ವಿಜಯಕುಮಾರ್ ಸಂತೋಷ್, ಡಿವೈಎಸ್ಪಿ ರುದ್ರಪ್ಪ ಉಜ್ಜಿನಕೊಪ್ಪ, ಪಿ.ಐ.ಸುನಿಲ್ ಕುಮಾರ್, ಕುರುಬ ಸಮಾಜದ ಉಪಾಧ್ಯಕ್ಷ ಕೆ.ಪುಟ್ಟಪ್ಪ, ಖಜಾಂಚಿ ಎಚ್.ಎ. ನರಸಿಂಹಪ್ಪ, ಹೆಚ್.ಎ ಉಮಾಪತಿ ಅಲ್ಪಸಂಖ್ಯಾತ ಸಮುದಾಯ ಅಧ್ಯಕ್ಷ ಚೀಲೂರು ವಾಜೀದ್, ಸಾಸ್ವೇಹಳ್ಳಿ ಅಬ್ದುಲ್ ಜಬ್ಬರ್ ಖಾನ್, ಬಂಜಾರ ಸಮಾಜದ ಅಧ್ಯಕ್ಷ ಅಂಜುನಾಯ್ಕ, ಹಾಲು ಮತ ಸಮುದಾಯದ ರಾಜು ಕಣಗಣ್ಣಾರ, ಬೇಲಿಮಲ್ಲೂರು ನರಸಪ್ಪ,ದಿಡಗೂರು ಜಿ.ಎಚ್. ತಮ್ಮಣ್ಣ,ಅರಕೇರಿ ಮದುಗೌಡ ಕುಂಬಳೂರು ವಾಗೀಶ್, ಎ.ಡಿ.ಈಶ್ವರಪ್ಪ,ಬೆನಕನಹಳ್ಳಿ ವೀರಣ್ಣ, ಕೆಂಗಲಹಳ್ಳಿ ಪ್ರಭಾಕರ್ ಉಪ್ಪಾರ ಸಮಾಜದ ಅಧ್ಯಕ್ಷ ಷಣ್ಮುಖಪ್ಪ, ಆರ್.ನಾಗಪ್ಪ, ಎಚ್.ಬಿ.ಅಣ್ಣಪ್ಪ ಸೇರಿದಂತೆ ನೂರಾರು ಜನ ಅಹಿಂದ ಒಕ್ಕೂಟದ ಮುಖಂಡರು ಇದ್ದರು. ಮಂಗಳವಾರ ಹೊನ್ನಾಳಿ ಬಂದ್ ಹಿನ್ನೆಲೆಯಲ್ಲಿ ಪಟ್ಟಣದಎಲ್ಲಾಅಂಗಡಿ ಮುಗ್ಗಟ್ಟುಗಳು ಬಂದ್‌ಆಗಿದ್ದವು.

### ಶೋಕಾಸ್ ನೋಟಿಸ್ ವಾಪಸ್ ಪಡೆಯಿರಿ

**ಖಾಸಗಿ ವ್ಯಕ್ತಿಯೊಬ್ಬ ನೀಡಿದ ದೂರನ್ನು ಆದರಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ನೀಡಿರುವ ಶೋಕಾಸ್ ನೋಟೀಸ್ ಅನ್ನು ರಾಜ್ಯಪಾಲರು ಕೂಡಲೇ ಹಿಂಪಡೆಯಬೇಕು ಬಿಜೆಪಿ ಮತ್ತು ಜೆಡಿಎಸ್ ಮುಖಂಡರು ಅನಗತ್ಯ ಆರೋಪ ಹಾಗೂ ಪಾದಯಾತ್ರೆಯನ್ನು ಶಾಸಕ ಶಾಂತನಗೌಡ ಅವರು ಖಂಡಿಸಿದರು.**

## ಸಮಾಚಾರ ಸಣ್ಣದಲ್ಲ

### ವ್ಯಸನ ಮುಕ್ತ ಚಿಕಿತ್ಸಾ ಶಿಬಿರ ಆಗಸ್ಟ್ 8ಕ್ಕೆ

**ದಾವಣಗೆರೆ:** ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಚಿಗಟೇರಿ ಜಿಲ್ಲಾ ಆಸ್ಪತ್ರೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ವಿವಿಧ ಸಂಘ, ಸಂಸ್ಥೆಗಳ ಸಹಯೋಗದಲ್ಲಿ ವ್ಯಸನ ಮುಕ್ತ ದಿನಾಚರಣೆ ಅಂಗವಾಗಿ ಆಗಸ್ಟ್ 8 ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 3 ಗಂಟೆಯವರೆಗೆ ರಾಮನಗರದಲ್ಲಿನ ಗಾಂಧಿ ಭವನದಲ್ಲಿ ವ್ಯಸನ ಮುಕ್ತ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರದಲ್ಲಿ ಮದ್ಯ ಮತ್ತು ಮಾದಕ ವಸ್ತುಗಳ ವ್ಯಸನಿಗಳಿಗೆ ವ್ಯಸನದಿಂದ ಹೊರ ಬರಲು ವೈದ್ಯರು ಮತ್ತು ನುರಿತ ಕೌನ್ಸಿಲರ್‌ಗಳಿಂದ ಚಿಕಿತ್ಸೆ ಮತ್ತು ಸಲಹೆ ಯನ್ನು ನೀಡಲಾಗುತ್ತದೆ. ವ್ಯಸನಿಗಳ ತೀವ್ರತೆ ಯನ್ನು ಆಧರಿಸಿ ಚಿಕಿತ್ಸಾ ಸಲಹೆ ನೀಡಲಾಗುತ್ತದೆ. ಆಸಕ್ತರು ಆಗಸ್ಟ್ 8 ರಂದು ಬೆಳಗ್ಗೆ 9.30 ಕ್ಕೆ ಗಾಂಧಿ ಭವನಕ್ಕೆ ಆಗಮಿಸಿ ನೊಂದಣಿ ಮಾಡಿಸಲು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಿರಿಯ ಸಹಾಯಕ ನಿರ್ದೇಶಕರಾದ ಧನಂಜಯ.ಬಿ ತಿಳಿಸಿದ್ದಾರೆ.

### ಅಕ್ರಮ ಮದ್ಯ ಸಾಗಣೆ: ಆರೋಪಿಯ ಬಂಧನ

**ಹಿರಿಯೂರು:** ಹಾಡು ಹಗಲೇ ಮದ್ಯವನ್ನು ಅಕ್ರಮವಾಗಿ ಸಾಗಿಸುತ್ತಿದ್ದ ವ್ಯಕ್ತಿಯನ್ನು ಮಹಿಳೆಯರು ಮತ್ತು ಗ್ರಾಮಸ್ಥರೇ ಹಿಡಿದು ಪೊಲೀಸರಿಗೆ ಒಪ್ಪಿಸಿದ ಘಟನೆ ತಾಲೂಕಿನ ಕೂನಿಕೆರೆ ಗ್ರಾಮದಲ್ಲಿ ನಡೆದಿದೆ . ಹಿರಿಯೂರಿನ ಮದ್ಯದಂಗಡಿಯಿಂದ ಚೀಲವೊಂದರಲ್ಲಿ ಮದ್ಯದ ಬಾಟಲಿಗಳನ್ನು ತುಂಬಿಕೊಂಡು ಬೈಕಿನಲ್ಲಿ ತರುತ್ತಿದ್ದ ಶಿವಪುರ ಗ್ರಾಮದ ಚಿದಾನಂದನನ್ನು ಮಹಿಳೆಯರು ತಡೆದು ವಿಚಾರಣೆ ಮಾಡಿದ್ದಾರೆ. ಈ ವೇಳೆ ಚಿದಾನಂದ ಮಹಿಳೆಯರಿಗೆ ಉಡಾಫೆಯ ಉತ್ತರ ನೀಡಿದಾಗ ಗುಂಪು ಹೆಚ್ಚಿದೆ. ತಕ್ಷಣ ಪೊಲೀಸರಿಗೆ ಕರೆ ಮಾಡಿ ತಿಳಿಸಿ, ನಂತರದ ಪೊಲೀಸರಿಗೆ ಒಪ್ಪಿಸಿದ್ದಾರೆ. ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ನಡೆಯುತ್ತಿದ್ದು, ತಡೆಗಟ್ಟುವಂತೆ ಅಬಕಾರಿ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದ್ದೆವು. ಆದರೆ, ಪ್ರಯೋಜವಾಗಿಲ್ಲ, ಅಧಿಕಾರಿಗಳನ್ನು ನಂಬಿದರೆ ಪ್ರಯೋಜನವಿಲ್ಲ ಎಂದು ಮಹಿಳೆಯರು ಮದ್ಯ ಸಾಗಿಸುವವರ ಮೇಲೆ ನಿಗಾ ಇಟ್ಟಿದ್ದೆವು. ಈಗ ಒಬ್ಬರು ಸಿಕ್ಕಿ ಬಿದ್ದಿದ್ದಾರೆ ಎಂದು ಮಹಿಳೆಯರು ತಿಳಿಸಿದ್ದಾರೆ.

ಚಿತ್ರದುರ್ಗ ನಗರ ಪೊಲೀಸ್ ಠಾಣೆ ಆವರಣದಲ್ಲಿರುವ ಕಣಿವೆಮಾರಮ್ಮನಿಗೆ ಶ್ರಾವಣ ಮಾಸದ ಮೊದಲನೆ ಮಂಗಳವಾರದಂದು ವಿಶೇಷವಾಗಿ ಅಲಂಕರಿಸಲಾಗಿತ್ತು. ಬಗೆ ಬಗೆಯ ಹೂವುಗಳಿಂದ ಸಿಂಗರಿಸಿ ಪೂಜಿಸಲಾಯಿತು. ಶ್ರಾವಣ ಮಾಸದ ಪ್ರಯುಕ್ತ ನೂರಾರು ಭಕ್ತರು ಧಾವಿಸಿ ದೇವಿಗೆ ಶ್ರದ್ಧಾ ಭಕ್ತಿಯನ್ನು ಸಮರ್ಪಿಸಿದರು.

ನಂಬಿಕೆ ಜಗದಂಬಿಕೆ
ಗುರು
ಪ್ರತಿ ಗುರುವಾರ

# ವಿಶ್ವವಾಣಿ ವರದಿಗೆ ಎಚ್ಚೆತ್ತುಕೊಂಡ ಶಿಕ್ಷಣ ಇಲಾಖೆ

## ಶಾಲೆಗೆ ಭೇಟಿ ನೀಡಿ ಮಕ್ಕಳ ಹಾಜರಾತಿ ಪರಿಶೀಲಿಸಿದ ಬಿಇಒ

**ಹೊಸದುರ್ಗ:** ತಾಲೂಕಿನ ಪ್ರಾಥಮಿಕ ಶಾಲೆಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ಸೈಯದ್ ಮೋಸಿನ್ ಅವರು ಭೇಟಿ ನೀಡಿ ಮಕ್ಕಳ ಹಾಜರಾತಿ ತೆಗೆದುಕೊಳ್ಳುವ ಮೂಲಕ, ಪ್ರತಿದಿನ ಹಾಜರಾತಿ ಕಡ್ಡಾಯ ಎಂಬ ಸೂಚನೆಯನ್ನು ಮುಖ್ಯ ಶಿಕ್ಷಕರಿಗೆ ಹಾಗೂ ಮಕ್ಕಳಿಗೆ ಕೊಟ್ಟು ಬಂದಿದ್ದಾರೆ.

ಕಳೆದ ಜುಲೈ 25ರಂದು ವಿಶ್ವವಾಣಿ ಪತ್ರಿಕೆಯಲ್ಲಿ ಮಕ್ಕಳು ಶಾಲೆಗೆ ಗೈರು, ಕೋಚಿಂಗ್ ಕ್ಲಾಸಿಗೆ ಹಾಜರು, 'ಶಿಕ್ಷಣ ಇಲಾಖೆ ಅಧಿಕಾರಿಗಳ ತಾತ್ಸಾರಕ್ಕೆ, ಬಡಮಕ್ಕಳ ಪೋಷಕರ ಬೇಸರ' ಎಂಬ ವಿಶೇಷ ವರದಿಯನ್ನು ಪ್ರಕಟವಾಗಿತ್ತು. ಈ ವರದಿಯಿಂದ ಎಚ್ಚೆತ್ತುಕೊಂಡ ಸೈಯದ್ ಮೋಸಿನ್ ಅವರು ಅಂದಿನಿಂದಲೇ ಶಾಲಾ ಮಕ್ಕಳ ಹಾಜರಾತಿಯತ್ತ ವಿಶೇಷ ಕಾಳಜಿ ವಹಿಸಿದ್ದಾರೆ.

ಬಿಆರ್ ಸಿ, ಸಿಆರ್ ಪಿ, ಇಸಿಒ, ಬಿಆರ್ ಪಿಗಳ ಸಭೆ ನಡೆಸಿ ವಿಶ್ವವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ವರದಿಯನ್ನು ಉಲ್ಲೇಖಿಸಿದ್ದಾರೆ. ಇಂದಿನಿಂದಲೇ ಜು.26ರಿಂದ ಆ.2 ರವರೆಗೂ ನಿಮ್ಮ ಕ್ಲಸ್ಟರ್ ವ್ಯಾಪ್ತಿಯ ಪ್ರತಿಶಾಲೆಗೆ ನಿರಂತರ 8 ದಿನಗಳ ಕಾಲ ಶಾಲೆಗೆ ಭೇಟಿ ನೀಡಬೇಕು. ಆಗ ಶಾಲೆಗೆ ಗೈರಾಗಿರುವ ಮಕ್ಕಳ ಮಾಹಿತಿ ತೆಗೆದುಕೊಂಡು ಬರಬೇಕೆಂದು ಸಿಆರ್ ಪಿಗಳಿಗೆ ಖಡಕ್ ಎಚ್ಚರಿಕೆ ನೀಡಿದ್ದರು.

> ವಿಶ್ವವಾಣಿ ಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುವ ಹಿನ್ನೆಲೆಯಲ್ಲಿ ನಮ್ಮ ಇಲಾಖೆಯ ಎಲ್ಲಾ ಅಧಿಕಾರಿಗಳು ಶಾಲೆಗಳಿಗೆ ಭೇಟಿಕೊಟ್ಟು, ಮಕ್ಕಳ ಹಾಜರಾತಿ ತೆಗೆದುಕೊಂಡಿದ್ದೇವೆ. ಶಾಲೆಯಲ್ಲಿ ಪ್ರವೇಶ ಪಡೆದಿರುವ ಮಗು ಶಾಲೆಗೆ ಗೈರಾಗಿ, ಕೋಚಿಂಗ್ ಕ್ಲಾಸಿಗೆ ಹೋಗಿರುವುದು ಕಂಡುಬಂದಲ್ಲಿ ಆ ಶಾಲೆಯ ವಿರುದ್ಧ ಶಿಸ್ತು ಕ್ರಮಕೈಗೊಳ್ಳುವ ಎಚ್ಚರಿಕೆ ನೀಡಲಾಗಿದೆ.
> – ಸೈಯದ್ ಮೋಸಿನ್, ಕ್ಷೇತ್ರ ಶಿಕ್ಷಣಾಧಿಕಾರಿ ಹೊಸದುರ್ಗ

ಈ ಹಿನ್ನೆಲೆಯಲ್ಲಿ ಬಿಇಒ ಅವರು ಸಹ ಖುದ್ದಾಗಿ ಬೆಳಗ್ಗಿನ ಪ್ರಾರ್ಥನೆ ಸಮಯಕ್ಕೆ ಕೆಲವು ಶಾಲೆಗಳಿಗೆ ಭೇಟಿಕೊಟ್ಟು, ಮಕ್ಕಳ ಹಾಜರಾತಿ ತೆಗೆದುಕೊಂಡಿದ್ದಾರೆ. ಗೈರಾಗಿರುವ ಮಗುವಿನ ಬಗ್ಗೆ ಕಾರಣವನ್ನು ಮುಖ್ಯಶಿಕ್ಷಕರಿಂದ ಪಡೆದಿದ್ದಾರೆ. ಶಾಲೆಗೆ ಪ್ರವೇಶ ಪಡೆದಿರುವ ಮಗು ಶಾಲೆಯ ಅವಧಿಯಲ್ಲಿ ಯಾವುದೇ ಕಾರಣಕ್ಕೂ ಕೋಚಿಂಗ್ ಕ್ಲಾಸಿಗೆ ಹೋಗಕೂಡದು. ಇಂತಹ ಪ್ರಕರಣ ಏನಾದರೂ ಕಂಡು ಬಂದಲ್ಲಿ ಶಾಲೆಯ ವಿರುದ್ಧ ನಿರ್ದಾಕ್ಷಿಣ್ಯವಾಗಿ ಶಿಸ್ತುಕ್ರಮಕೈಗೊಳ್ಳಲಾಗುವುದು ಎಂಬ ಎಚ್ಚರಿಕೆ ನೀಡಲಾಗಿದೆ. ಈ ಕಾರ್ಯವನ್ನು ಬಿಇಒ ಆದೇಶದ ಮೇರೆಗೆ ಶಿಕ್ಷಣ ಇಲಾಖೆಯ ಇನ್ನಿತರ ಅಧಿಕಾರಿಗಳು ಸಹ ಮಾಡಿರುವುದಕ್ಕೆ ಬಡಪೋಷಕರಿಂದ ಮೆಚ್ಚುಗೆ ವ್ಯಕ್ತವಾಗಿದೆ. ಬಡಮಕ್ಕಳಿಗೆ ಶೈಕ್ಷಣಿಕ ನ್ಯಾಯ ಒದಗಿಸುವ ದೃಷ್ಟಿಯಿಂದ ವಿಶ್ವವಾಣಿಯಲ್ಲಿ ಪ್ರಕಟವಾದ ವರದಿ ಅತ್ಯುತ್ತಮವಾಗಿದ್ದು, ಪತ್ರಿಕೆಯ ಈ ಕಾರ್ಯಕ್ಕೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಹೊಸದುರ್ಗ ತಾಲೂಕಿನ ಪ್ರಾಥಮಿಕ ಶಾಲೆಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ಸೈಯದ್ ಮೋಸಿನ್ ಅವರು ಭೇಟಿ ನೀಡಿ, ಪರಿಶೀಲನೆ ನಡೆಸಿದರು.

### ಆಗಾಗ ದಿಢೀರ್ ಭೇಟಿ ಅಗತ್ಯ

**ಸಿರಿವಂತ ಕೆಲವು ಪೋಷಕರು ತಮ್ಮ ಮಕ್ಕಳನ್ನು ಜವಾಹರ ನವೋದಯ ವಸತಿ ಶಾಲೆಗೆ ಸೇರಿಸುವ ಉದ್ದೇಶದಿಂದ ಗ್ರಾಮೀಣ ಭಾಗದ ಶಾಲೆಗೆ ಪ್ರವೇಶ ಕೊಡಿಸಿ, ಗುಣಮಟ್ಟದ ತರಬೇತಿ ಸಿಗುವ ನಗರದ ಹೈಟೆಕ್ ಶಾಲೆ ಹಾಗೂ ಕೋಚಿಂಗ್ ಕ್ಲಾಸಿಗೆ ಮಗುವನ್ನು ಕಳಿಸುತ್ತಿದ್ದಾರೆ. ಇದನ್ನು ತಪ್ಪಿಸುವ ಹಿನ್ನೆಲೆಯಲ್ಲಿ ಶಾಲೆಯಲ್ಲಿ ಪ್ರವೇಶ ಪಡೆದಿರುವ ಮಗು ಪ್ರತಿದಿನ ಶಾಲೆಯಲ್ಲಿಯೇ ಇರಬೇಕು ಎಂಬ ಉದ್ದೇಶದಿಂದ ಸ್ವತಃ ಬಿಇಒ ಅವರೇ ಶಾಲೆಗೆ ಭೇಟಿ ನೀಡಿ, ಮಕ್ಕಳ ಹಾಜರಾತಿ ತೆಗೆದುಕೊಳ್ಳುತ್ತಿರುವ ಕಾರ್ಯ ಶ್ಲಾಘನೀಯ. ಆದರೆ ಈ ಕಾರ್ಯ ಕೆಲವೇ ದಿನಕ್ಕೆ ಸೀಮಿತವಾಗಬಾರದು. ಏಕೆಂದರೆ ಕೆಲವು ಶಾಲೆಯ ಶಿಕ್ಷಕರು ಪ್ರತಿದಿನ ಬೆಳಿಗ್ಗೆ ಮಕ್ಕಳ ಹಾಜರಾತಿ ಪಡೆಯುವಾಗ ಕೋಚಿಂಗ್ ಕ್ಲಾಸಿಗೆ ಹೋಗಿರುವ ಮಗುವಿಗೆ ಹಾಜರಾತಿ ಪುಸ್ತಕದಲ್ಲಿ ಚುಕ್ಕಿ ಇಡುತ್ತಾರೆ. ಅಂದು ಏನಾದರೂ ಅಧಿಕಾರಿಗಳು ಶಾಲೆಗೆ ಭೇಟಿ ಕೊಡದಿದ್ದರೆ ಸಂಜೆ ಆ ಮಗು ಹಾಜರಾಗಿದೆ ಎಂದು ಹಾಜರಾತಿ ಪುಸ್ತಕದಲ್ಲಿ ನಮೂದಿಸಿಕೊಳ್ಳುತ್ತಾರೆ. ಒಂದು ವೇಳೆ ಏನಾದರೂ ಅಧಿಕಾರಿಗಳು ಭೇಟಿಕೊಟ್ಟರೆ ಹಾಜರಾತಿ ಪುಸ್ತಕದಲ್ಲಿ ಗೈರು ಎಂದು ನಮೂದಿಸುತ್ತಾರೆ. ಏಕೆ ಗೈರಾಗಿದೆ ಎಂದು ಪ್ರಶ್ನಿಸಿದರೆ, ಆರೋಗ್ಯ ಸಮಸ್ಯೆ ನೆಪದ ಕಾರಣ ಕೊಟ್ಟು ನುಣುಚಿಕೊಳ್ಳುತ್ತಿದ್ದಾರೆ. ಹಾಗಾಗಿ ಶಿಕ್ಷಣ ಇಲಾಖೆ ಅಧಿಕಾರಿಗಳು ಶಾಲೆಗಳಿಗೆ ಆಗಾಗ ಸರ್ಪ್ರೈಸ್ ವಿಸಿಟ್ ಕೊಟ್ಟು ತನಿಖೆ ಮಾಡಬೇಕು. ಈ ರೀತಿ ವಿಸಿಟ್ ಮಾಡಿದಾಗಲೆಲ್ಲಾ ಗೈರಾಗುವ ಮಕ್ಕಳು ಕಂಡುಬಂದಲ್ಲಿ ಆ ಶಾಲೆ ವಿರುದ್ಧ ಶಿಸ್ತು ಕ್ರಮಕೈಗೊಳ್ಳಬೇಕು. ಆಗ ಸತ್ಯ ಬಯಲಾಗುತ್ತದೆ. ಆ ಮೂಲಕ ಜವಾಹರ ನವೋದಯ ವಸತಿ ಶಾಲೆ ಪ್ರವೇಶಾತಿಗೆ ಬಡಮಕ್ಕಳಿಗೆ ನ್ಯಾಯ ಒದಗಿಸಬೇಕು ಎಂದು ಬಡಪೋಷಕರು ಶಿಕ್ಷಣ ಇಲಾಖೆಗೆ ಮನವಿ ಮಾಡಿದ್ದಾರೆ.**

# 60ಕ್ಕೆ ನಿವೃತ್ತಿ, ಬೈಲಾದಲ್ಲಿ ಇಲ್ಲ

ಚಿತ್ರದುರ್ಗ ಜಿಲ್ಲೆಯ ತರಳಬಾಳು ಬೃಹನ್ಮಠದಲ್ಲಿ ನಡೆದ ಸದ್ಭಕ್ತರ ಸದ್ಭಾವನ ಸಭೆಯಲ್ಲಿ ಭಕ್ತರ ಮಾತುಗಳನ್ನು ಆಲಿಸಿದ ಬಳಿಕ ಮಾತನಾಡಿದ ಜಗದ್ಗುರು ಶ್ರೀ 1108 ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಅವರು ಮಾತನಾಡಿದರು.

**ದಾವಣಗೆರೆ:** ಸಿರಿಗೆರೆಯ ತರಳಬಾಳು ಬೃಹನ್ಮಠ ಪೀಠಾಧಿಪತಿ 60 ವರ್ಷಕ್ಕೆ ನಿವೃತ್ತಿಯಾಗಬೇಕೆಂದು ಬೈಲಾದಲ್ಲಿ ಇಲ್ಲ ಎಂದು ತರಳಬಾಳು ಜಗದ್ಗುರು ಶ್ರೀ 1108 ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಸ್ಪಷ್ಟನೆ ನೀಡಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ತರಳಬಾಳು ಬೃಹನ್ಮಠದಲ್ಲಿ ನಡೆದ ಸದ್ಭಕ್ತರ ಸದ್ಭಾವನ ಸಭೆಯಲ್ಲಿ ಭಕ್ತರ ಮಾತುಗಳನ್ನು ಆಲಿಸಿದ ಬಳಿಕ ಮಾತನಾಡಿದ ಶ್ರೀಗಳು ಆರೋಪ ಮಾಡಿದವರು ಸರಿಯಾದ ಸಾಕ್ಷಿ ನೀಡಬೇಕು. ವಿನಾಕಾರಣ ಆರೋಪ ಮಾಡುವುದು ಸರಿಯಲ್ಲ ಎಂದು ಹೇಳಿದರು.

ಯಾವುದೇ ಆರೋಪ ಮಾಡಿದರೆ ಸರಿಯಾಗಿ ನಾವು ಉತ್ತರ ಕೊಡುವಂತಿರಬೇಕು. ಯಾರ ಹೆಸರಿಗಿದ್ದರೂ ಮಠದ ಆಸ್ತಿ ಎಂದು ದಾಖಲಿಸಿದ್ದೇವೆ. ಮಠದ ಆಸ್ತಿ, ಹಣ ತಮ್ಮ ಹೆಸರಿನಲ್ಲಿದೆ. ಸೋಲ್ ಟ್ರಸ್ಟ್, ಏಕ ವ್ಯಕ್ತಿ ಟ್ರಸ್ಟ್ ನ ಪರಿಜ್ಞಾನವೇ ಇವರಿಗಿಲ್ಲ. ಪೀಠಾಧಿಪತಿ ಕಾರ್ಯ ನಿರ್ವಹಿಸುತ್ತಾರೆ ಎಂಬುದು ಅದರರ್ಥ. ಬ್ಯಾಂಕಿನಲ್ಲಿ ನೀವಿಟ್ಟ ಹಣ ನಿಮ್ಮದು, ಮ್ಯಾನೇಜರ್ ದು ಅಲ್ಲ. ಇಷ್ಟು ಪರಿಜ್ಞಾನವೂ ಇಲ್ಲದಿದ್ದರೆ ಹೇಗೆ ಎಂದು ಶ್ರೀಗಳು ಪ್ರಶ್ನಿಸಿದರು.

ಮಠದ ಆಸ್ತಿಯ ಉಸ್ತುವಾರಿ ನಾವು, ವೈಯಕ್ತಿಕ ಆಸ್ತಿ ಅಲ್ಲ. ಯಾರಿಗಾದರೂ ಮಠದ ಆಸ್ತಿ ಮನಸೋ ಇಚ್ಛೆ ಬರೆದರೆ ಎಂಬ ಪ್ರಶ್ನೆಯಿದೆ. ಮಠದ ಆಡಳಿತ, ನಡುವಳಿಕೆ ವ್ಯತ್ಯಾಸ ಆದರೆ ಕ್ರಮಕ್ಕೆ ಅವಕಾಶ ಇರುತ್ತದೆ. ಏನಾದರೂ ಅವ್ಯವಹಾರ, ತಪ್ಪುಗಳಾಗಿದ್ದರೆ ಸಾದು ಸದ್ಧರ್ಮ ವೀರಶೈವ ಸಂಘದವರು ಕ್ರಮ ಕೈಗೊಳ್ಳಬಹುದು. ನಿಮ್ಮ ದೂರುಗಳಿದ್ದರೆ ಸಾದು ಸದ್ಧರ್ಮ ವೀರಶೈವ ಸಂಘಕ್ಕೆ ದೂರು ಕೊಡಿ. ನಮ್ಮ ಹೆಸರಿನಲ್ಲಿರಬಹುದು ನಾವು ಆಸ್ತಿಯ ಮಾಲೀಕರಲ್ಲ.

ಮಠಕ್ಕೆ, ಭಕ್ತರಿಗೆ ಸಂಬಂಧಿಸಿದ ಆಸ್ತಿ ಇದು ಎಂದು ದಾವಣಗೆರೆಯಲ್ಲಿ ಸಭೆ ನಡೆಸಿದವರ ವಿರುದ್ಧ ವಾಗ್ದಾಳಿ ನಡೆಸಿದರು.

ಸಭೆ ನಡೆಸಿದವರು ರಿಯಲ್ ಎಸ್ಟೇಟ್ ದಂಧೆ ಮಾಡುವವರು. ತರಳಬಾಳು ಕೇಂದ್ರದಲ್ಲಿ ಮೀಟಿಂಗ್ ಮಾಡುತ್ತಿದ್ದರು. ನಾವು ಬೇಡ ಎಂದು ಹೇಳಿದ್ದಕ್ಕೆ ಇಷ್ಟೆಲ್ಲಾ ನಮ್ಮ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಸಿದ್ದಯ್ಯ ಮೈಸೂರು ಆಸ್ತಿ ತನ್ನದೆಂದು ಕೇಸ್ ಹಾಕಿದ್ದನು. ನಾವು ಕೋರ್ಟ್ ನಲ್ಲಿ ಹೋರಾಟ ಮಾಡಿದ್ದೇವೆ ಎಂದು ಗುಡುಗಿದರು.

# ಹರಿಹರ ನಗರಸಭೆ ಅಧ್ಯಕ್ಷ ಸ್ಥಾನ ಎಸ್‌ಟಿ ಮಹಿಳೆಗೆ ನಿಗದಿ

**ಹರಿಹರ:** ಹರಿಹರ ನಗರಸಭೆಯ ಅಧ್ಯಕ್ಷ ಸ್ಥಾನಕ್ಕೆ ಎಸ್‌ಟಿ ಮಹಿಳೆ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಸಾಮಾನ್ಯ ವರ್ಗಕ್ಕೆ ಮೀಸಲಾತಿ ನಿಗದಿಪಡಿಸಿ ಸರ ಕಾರ ಸೋಮವಾರ ಆದೇಶ ಹೊರಡಿಸಿದೆ. ಕಳೆದ ಐದಾರು ತಿಂಗಳಿಂದ ಜನಪ್ರತಿನಿಧಿಗಳ ಅಧಿಕಾರವಿ ಲ್ಲದೆ ಜಿಲ್ಲಾಧಿಕಾರಿಗಳೇ ನಗರಸಭೆಯ ಆಡಳಿತಾಧಿ ಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಮೀಸ ಲಾತಿ ಅನ್ವಯ ಕೇವಲ ಒಬ್ಬರೇ ಮಹಿಳಾ ಸದಸ್ಯರಿದ್ದು ನಗರಸಭೆಯ ಉಳಿದ ಅವಧಿಗೆ ಅವರೇ ಅಧ್ಯಕ್ಷರಾಗುವುದರಲ್ಲಿ ಅನುಮಾನವಿಲ್ಲ. ಒಂದು ವೇಳೆ ಅಧ್ಯಕ್ಷ ಸ್ಥಾನದ ಆಕಾಂಕ್ಷಿಗಳು ಸರ್ಕಾರದ ಈ ಆದೇಶ ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋದರೆ ಮೀಸಲಾತಿ ವ್ಯತ್ಯಾಸ ನಿರೀಕ್ಷೆ ಮಾಡಬಹುದು ಇಲ್ಲವಾ ದಲ್ಲಿಅವರೇಅಧ್ಯಕ್ಷರಾಗು ವುದರಲ್ಲಿಅನುಮಾನವಿಲ್ಲ.

**ಮಾನ್ಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಸೊರಬ**
**ಸಿ.ಮಿಸ್.ನಂ:115/2024**

ಅರ್ಜಿದಾರರು:–1) ಮಾರುತಿ ಬಿನ್ ನಿಂಗಪ್ಪ ವಯಸ್ಸು ಸುಮಾರು 60 ವರ್ಷ, ವಾಸ, ಹಿರೇಚೌಟಿ ಗ್ರಾಮ ಸೊರಬ ತಾಲ್ಲೂಕು ಶಿವಮೊಗ್ಗ ಜಿಲ್ಲೆ. 2) ಸರೋಜ ಕೋಂ ಗೊವಿಂದಪ್ಪ ವಯಸ್ಸು ಸುಮಾರು 58 ವರ್ಷ, ವಾಸ, ಓಟೂರು ಗ್ರಾಮ ಸೊರಬ ತಾಲ್ಲೂಕು ಶಿವಮೊಗ್ಗ ಜಿಲ್ಲೆ. 3) ಭವಾನಿ ಕೋಂ ಯಲ್ಲಪ್ಪ ವಯಸ್ಸು ಸುಮಾರು 55 ವರ್ಷ, ವಾಸ, ಮಳಗಿ ಗ್ರಾಮ ಮುಂಡಗೊಡು ತಾಲ್ಲೂಕು ಸಿರಸಿ ಜಿಲ್ಲೆ.

–: ವಿರುದ್ಧ :–

ಎದುರುದಾರರು:–1) ತಹಶೀಲ್ದಾರ್‌ರವರು ತಾಲ್ಲೂಕು ಕಛೇರಿ ಸೊರಬ 2) ಗಂಗಮ್ಮ ಕೋಂ ಶೇಖಪ್ಪ ವಯಸ್ಸು ಸುಮಾರು 60 ವರ್ಷ 3) ಮಂಜುಳ ಬಿನ್ ಶೇಖಪ್ಪ ವಯಸ್ಸು ಸುಮಾರು 40 ವರ್ಷ, 4) ಗೀರಿಜಮ್ಮ ಬಿನ್ ಶೇಖಪ್ಪ ವಯಸ್ಸು ಸುಮಾರು 38 ವರ್ಷ, 5) ಶಶಿಕಲಾ ಬಿನ್ ಶೇಖಪ್ಪ ವಯಸ್ಸು ಸುಮಾರು 36 ವರ್ಷ ಎದುರುದಾರರಾದ ನಂ 2 ರಿಂದ 5ನೇ ಯವರ ವಾಸ, ಹಿರೇಚೌಟಿ ಗ್ರಾಮ ಸೊರಬ ತಾಲ್ಲೂಕು ಶಿವಮೊಗ್ಗ ಜಿಲ್ಲೆ.

**ಪತ್ರಿಕಾ ಪ್ರಕಟಣೆ**

ಕೆಳಗೆ ನಮೂದಿಸಿದ ವ್ಯಕ್ತಿಯು ಮರಣ ಹೊಂದಿರುವುದರಿಂದ ಮರಣ ದಾಖಲೆಯನ್ನು ಪಡೆದುಕೊಳ್ಳುವ ಸಲುವಾಗಿ ಈ ಕೇಸನ್ನು ಅರ್ಜಿದಾರರು ಎದುರುದಾರರ ವಿರುದ್ಧ ದಾಖಲಿಸಿದ್ದು ಇದರ ವಿಚಾರಣೆಯು ದಿನಾಂಕ:02.09.2024 ರಂದು ಬೆಳಗ್ಗೆ 11 ಘಂಟೆಗೆ ಇರುವುದರಿಂದ, ಈ ವಿಷಯದಲ್ಲಿ ಹಿತಾಸಕ್ತಿ ಇರುವುವವರು ಅರ್ಜಿದಾರರಾಗಿ ಅಥವಾ ಎದುರುದಾರರಾಗಿ ಅಂದು ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಬಹುದು.

**ಮರಣ ಹೊಂದಿದ ವ್ಯಕ್ತಿಯ ಹೆಸರು, ದಿನಾಂಕ ಮತ್ತು ಸ್ಥಳ**

ಅರ್ಜಿದಾರರ ತಂದೆಯಾದ ಮತ್ತು 2ನೇ ಎದುರುದಾರರ ಮಾವನವರಾದ ಹಾಗೂ 3 ರಿಂದ 5ನೇ ಎದುರುದಾರರ ಅಜ್ಜನಾದ ದಿ|| ನಿಂಗಪ್ಪ ಬಿನ್ ಪೀರಪ್ಪ ರವರು ಸೊರಬ ತಾಲ್ಲೂಕು, ಆನವಟ್ಟಿ ಹೋಬಳಿ, ಹಿರೇಚೌಟಿ ಗ್ರಾಮದಲ್ಲಿರುವ ತಮ್ಮ ಮನೆಯಲ್ಲಿ ದಿನಾಂಕ: 07–08–1994 ರಂದು ಮರಣ ಹೊಂದಿರುತ್ತಾರೆ. ಆ ಸಂಬಂಧ ಸದರಿಯವರ ಮರಣ ದಾಖಲೆ ಪಡೆಯುವ ಸಂಬಂಧ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಶಿರಸ್ತೆದಾರರು
ವ್ಯವಹಾರ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ನ್ಯಾಯಾಲಯ ಸೊರಬ
ಅರ್ಜಿದಾರರ ಪರ ವಕೀಲರು
**ಯುವರಾಜ ಆರ್.ಹೆಚ್** ಬಿ.ಎ.,ಎಲ್.ಎಲ್.ಬಿ. ವಕೀಲರು ಸೊರಬ ರೋಲ್ ನಂ ಕೆ.ಎ.ಆರ್.3534/2008.

**ಮಾನ್ಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಸೊರಬ**
**ಸಿ.ಮಿಸ್.ನಂ:116/2024**

ಅರ್ಜಿದಾರರು:–1) ಮಾರುತಿ ಬಿನ್ ನಿಂಗಪ್ಪ ವಯಸ್ಸು ಸುಮಾರು 60 ವರ್ಷ, ವಾಸ, ಹಿರೇಚೌಟಿ ಗ್ರಾಮ ಸೊರಬ ತಾಲ್ಲೂಕು ಶಿವಮೊಗ್ಗ ಜಿಲ್ಲೆ. 2) ಸರೋಜ ಕೋಂ ಗೊವಿಂದಪ್ಪ ವಯಸ್ಸು ಸುಮಾರು 58 ವರ್ಷ, ವಾಸ, ಓಟೂರು ಗ್ರಾಮ ಸೊರಬ ತಾಲ್ಲೂಕು ಶಿವಮೊಗ್ಗ ಜಿಲ್ಲೆ. 3) ಭವಾನಿ ಕೋಂ ಯಲ್ಲಪ್ಪ ವಯಸ್ಸು ಸುಮಾರು 55 ವರ್ಷ, ವಾಸ, ಮಳಗಿ ಗ್ರಾಮ ಮುಂಡಗೊಡು ತಾಲ್ಲೂಕು ಸಿರಸಿ ಜಿಲ್ಲೆ. 3) ಭವಾನಿ ಕೋಂ ಯಲ್ಲಪ್ಪ ವಯಸ್ಸು ಸುಮಾರು 55 ವರ್ಷ, ವಾಸ, ಮಳಗಿ ಗ್ರಾಮ ಮುಂಡಗೋಡು ತಾಲ್ಲೂಕು ಸಿರಸಿ ಜಿಲ್ಲೆ.

–: ವಿರುದ್ಧ :–

ಎದುರುದಾರರು:–1) ತಹಶೀಲ್ದಾರ್‌ರವರು ತಾಲ್ಲೂಕು ಕಛೇರಿ ಸೊರಬ 2) ಗಂಗಮ್ಮ ಕೋಂ ಶೇಖಪ್ಪ ವಯಸ್ಸು ಸುಮಾರು 60 ವರ್ಷ 3) ಮಂಜುಳ ಬಿನ್ ಶೇಖಪ್ಪ ವಯಸ್ಸು ಸುಮಾರು 40 ವರ್ಷ, 4) ಗೀರಿಜಮ್ಮ ಬಿನ್ ಶೇಖಪ್ಪ ವಯಸ್ಸು ಸುಮಾರು 38 ವರ್ಷ, 5) ಶಶಿಕಲಾ ಬಿನ್ ಶೇಖಪ್ಪ ವಯಸ್ಸು ಸುಮಾರು 36 ವರ್ಷ ಎದುರುದಾರರಾದ ನಂ 2 ರಿಂದ 5ನೇ ಯವರ ವಾಸ, ಹಿರೇಚೌಟಿ ಗ್ರಾಮ ಸೊರಬ ತಾಲ್ಲೂಕು ಶಿವಮೊಗ್ಗ ಜಿಲ್ಲೆ.

**ಪತ್ರಿಕಾ ಪ್ರಕಟಣೆ**

ಕೆಳಗೆ ನಮೂದಿಸಿದ ವ್ಯಕ್ತಿಯು ಮರಣ ಹೊಂದಿರುವುದರಿಂದ ಮರಣ ದಾಖಲೆಯನ್ನು ಪಡೆದುಕೊಳ್ಳುವ ಸಲುವಾಗಿ ಈ ಕೇಸನ್ನು ಅರ್ಜಿದಾರರು ಎದುರುದಾರರ ವಿರುದ್ಧ ದಾಖಲಿಸಿದ್ದು ಇದರ ವಿಚಾರಣೆಯು ದಿನಾಂಕ:02.09.2024 ರಂದು ಬೆಳಗ್ಗೆ 11 ಘಂಟೆಗೆ ಇರುವುದರಿಂದ, ಈ ವಿಷಯದಲ್ಲಿ ಹಿತಾಸಕ್ತಿ ಇರುವುವವರು ಅರ್ಜಿದಾರರಾಗಿ ಅಥವಾ ಎದುರುದಾರರಾಗಿ ಅಂದು ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಬಹುದು.

**ಮರಣ ಹೊಂದಿದ ವ್ಯಕ್ತಿಯ ಹೆಸರು, ದಿನಾಂಕ ಮತ್ತು ಸ್ಥಳ**

ಅರ್ಜಿದಾರರ ತಂದೆಯಾದ ಮತ್ತು 2ನೇ ಎದುರುದಾರರ ಅತ್ತೆಯಾದ ಹಾಗೂ 3 ರಿಂದ 5ನೇ ಎದುರುದಾರರ ಅಜ್ಜಿಯಾದ ದಿ|| ಗಂಗಮ್ಮ ಕೋಂ ನಿಂಗಪ್ಪ ರವರು ಸೊರಬ ತಾಲ್ಲೂಕು, ಆನವಟ್ಟಿ ಹೋಬಳಿ, ಹಿರೇಚೌಟಿ ಗ್ರಾಮದಲ್ಲಿರುವ ತಮ್ಮ ಮನೆಯಲ್ಲಿ ದಿನಾಂಕ: 21–11–2011 ರಂದು ಮರಣ ಹೊಂದಿರುತ್ತಾರೆ. ಆ ಸಂಬಂಧ ಸದರಿಯವರ ಮರಣ ದಾಖಲೆ ಪಡೆಯುವ ಸಂಬಂಧ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಶಿರಸ್ತೆದಾರರು
ವ್ಯವಹಾರ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ನ್ಯಾಯಾಲಯ ಸೊರಬ
ಅರ್ಜಿದಾರರ ಪರ ವಕೀಲರು
**ಯುವರಾಜ ಆರ್.ಹೆಚ್** ಬಿ.ಎ.,ಎಲ್.ಎಲ್.ಬಿ. ವಕೀಲರು ಸೊರಬ ರೋಲ್ ನಂ ಕೆ.ಎ.ಆರ್.3534/2008.

**ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ ಇವರ ನ್ಯಾಯಾಲಯ, ಹರಿಹರ.**
**ಸಿ.ಆರ್.ಮಿಸ್. ನಂ:470/2024**

ಅರ್ಜಿದಾರರು : ಶ್ರೀಮತಿ ಅಕ್ಕಮ್ಮ ಕೋಂ ಲೇಟ್ ರಾಜು ವಯಸ್ಸು ಸುಮಾರು : 38 ವರ್ಷ, ವಾಸ: ತಿಮಲಾಪುರ ಗ್ರಾಮ ಮುಜರೆಹನುಮನಹಳ್ಳಿ ಪೋಸ್ಟ್, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲೆ.

–ವಿರುದ್ಧ: –

ಎದುರುದಾರರು : ಜನನ ಮತ್ತು ಮರಣ ನೊಂದಾಣಾಧಿಕಾರಿಗಳು ಪುರಸಭೆ ರವರ ಕಛೇರಿ, ಮಲೇಬೆನ್ನೂರು ಹರಿಹರ ತಾಲ್ಲೂಕು.

**ಸಾರ್ವಜನಿಕ ಪ್ರಕಟಣೆ**

ಅರ್ಜಿದಾರರ ಗಂಡನ ಅಜ್ಜಿಯಾದ "ಗಂಗಮ್ಮ ಕೋಂ ಹನುಮಂತಪ್ಪ" ಇವರು ದಿನಾಂಕ :01–02–2008 ರಂದು ಹರಿಹರ ತಾಲ್ಲೂಕು ಮಲೇಬೆನ್ನೂರಿನ ಅವರ ಮನೆಯಲ್ಲಿ ಮರಣ ಹೊಂದಿದ್ದ ಅಂಶವನ್ನು ನೋಂದಾಯಿಸಿಕೊಂಡು ಮರಣ ಸಮರ್ಥನಾ ಪತ್ರ ನೀಡುವಂತೆ ಎದುರುದಾರರಿಗೆ ಆದೇಶಿಸಲು ಕೋರಿ ಅರ್ಜಿದಾರರು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಅರ್ಜಿ ಕುರಿತು ಯಾರದ್ದಾದರೂ ತಕರಾರು ಇದ್ದಲ್ಲಿ ದಿನಾಂಕ: 09–09–2024 ರಂದು ಬೆಳಿಗ್ಗೆ 11–00 ಗಂಟೆಗೆ ತಾವಾಗಲಿ, ವಕೀಲರ ಮುಖಾಂತರವಾಗಲಿ ಹಾಜರಿದ್ದು, ಅಹವಾಲು ಸಲ್ಲಿಸಬಹುದು. ತಪ್ಪಿದ್ದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ನಿರ್ಣಯಿಸಲಾಗುವುದು. ನ್ಯಾಯಾಲಯದ ಅಪ್ಪಣೆ ಮೇರೆಗೆ ದಿ:–31–07–2024 ರಂದು ನೀಡಲಾಗಿದೆ.

ನ್ಯಾಯಾಲಯಾದ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ ಇವರ ನ್ಯಾಯಾಲಯ, ಹರಿಹರ.
ಅರ್ಜಿದಾರಾರ ಪರ ವಕೀಲರು
**ಪ್ರಕಾಶ. ಬಿ.ಸಿ**
ಸ್ಥಳ : ಹರಿಹರ ದಿನಾಂಕ: 31–07–2024

# ಶಾಮನೂರು ವಿರುದ್ಧ ಶ್ರೀಗಳು ಗರಂ

**ದಾವಣಗೆರೆ:** ನಮ್ಮ ವಿರುದ್ಧ ಸಭೆ ನಡೆಸಿದವರು ಮಗುವನ್ನು ಮೈ ಚಿವುಟಿ ಜೋಗುಳ ಹಾಡುವ ಜನರು. ರೆಸಾರ್ಟ್‌ನಲ್ಲಿ

ಸೇರಿಕೊಂಡ ಜನರಿಗೆ ನಾಚಿಕೆ ಆಗಬೇಕು. ಮಠದ ಬಗ್ಗೆ ರೆಸಾರ್ಟ್ ನಲ್ಲಿ ಸಭೆ ಕರೆಯುತ್ತೀರಾ? ಎಂದು ಚಿತ್ರದುರ್ಗದ ಸಿರಿಗೆರೆಯ ತರಳಬಾಳು ಬೃಹನ್ಮಠ ಪೀಠಾಧಿಪತಿ ಶ್ರೀ1108 ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಅವರು ಕಾಂಗ್ರೆಸ್ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪರ ವಿರುದ್ಧ ಗರಂ ಆಗಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ತರಳಬಾಳು ಬೃಹನ್ಮಠದಲ್ಲಿ ನಡೆದ ಸದ್ಭಕ್ತರ ಸದ್ಭಾವನ ಸಭೆಯಲ್ಲಿ ಮಾತನಾಡಿದ ಸಿರಿಗೆರೆ ಶ್ರೀಗಳು ಶಾಮನೂರು ಶಿವಶಂಕರಪ್ಪರ ಸಭಾಂಗಣ ಇಲ್ಲವೇ? ರೆಸಾರ್ಟ್ ಗೆ ಹೋಗಿ ಮಾತಾಡ್ತೀರಾ ಎಂದು ಶಾಮನೂರು ಶಿವಶಂಕರಪ್ಪರ ವಿರುದ್ಧ ಕಿಡಿಕಾರಿದರು.

ಬೆಂಗಳೂರಲ್ಲಿ ಭೇಟಿ ಆಗಲು ನಾವು ಅವಕಾಶ ಕೊಡಲ್ಲ ಸಿರಿಗೆರೆಯಲ್ಲಿ ಮಠ ಇದೆ, ಮಠಕ್ಕೆ ಬನ್ನಿ. ಖಾಸಗಿಯಾಗಿ ಭೇಟಿಗೆ ಅವಕಾಶ ಕೊಡಲ್ಲ. ಇದೇ ವೇದಿಕೆಯಲ್ಲಿ ಜನರ ಮಧ್ಯೆಯೇ ಮಾತಾಡಲಿ. ಬೆಂಗಳೂರಲ್ಲಿ ಇರುವುದು ತರಳಬಾಳು ಕೇಂದ್ರ. ಮಠಕ್ಕೆ ಬಂದು ಮಾತನಾಡಿ ಎಂದು ಸಿರಿಗೆರೆಶ್ರೀ ಹೇಳಿದರು. ಆಗಸ್ಟ್ 18ಕ್ಕೆ ನಾವು ಭೇಟಿ ಆಗಲು ಆಗಲ್ಲ, ಕಾರ್ಯಕ್ರಮಗಳಿವೆ. ನಮ್ಮಮೇಲೆ ದೂರುಗಳಿದ್ದರೆ ಸಮಾಜದ ಅಧ್ಯಕ್ಷರಿಗೆ ದೂರು ಸಲ್ಲಿಸಿ ಎಂದು ಶ್ರೀಗಳು ತಿಳಿಸಿದರು.

ರೆಸಾರ್ಟ್ ನಲ್ಲಿ ಕುಳಿತು ಸಭೆ ಮಾಡಿದರೆ ಕುಡುಕರು ಪಾದಯಾತ್ರೆಗೆ ಬರುತ್ತಾರೆ. ಮಠದ ಇತಿಹಾಸದಲ್ಲಿ ಇದೊಂದು ಕಪ್ಪು ಚುಕ್ಕೆ. ಸಿರಿಗೆರೆ ಮಠ ಪವಿತ್ರವಾದದ್ದು ಎಂದ ಸಿರಿಗೆರೆ ಶ್ರೀಗಳು, ನಾವು ಹಾಲುಕುಡಿದು ಕೊಂಡು ಇದ್ದೇವೆ, ಆಲ್ಕೋಹಾಲ್ ಕುಡಿದು ಕೊಂಡು ಅಲ್ಲ. ನಮ್ಮನ್ನು ಕಾಣಬೇಕೆಂದಿದ್ದರೆ ಸಂಘದ ಅಧ್ಯಕ್ಷರಿಗೆ ಹೇಳಲಿ, ನಾವಿಲ್ಲದಾಗ ಬಂದು ಸಿಗಲಿಲ್ಲ ಎನ್ನುವುದು ಬೇಡ ಎಂದು ಕಿವಿಮಾತು ಹೇಳಿದರು.

# ನನಗೆ ಶಾಲಿನಿ ರಜನೀಶ್ ಸ್ಫೂರ್ತಿ

**ದಾವಣಗೆರೆ:** ಕರ್ನಾಟಕ ಸರಕಾರದ ಮುಖ್ಯ ಕಾರ್ಯದರ್ಶಿಯಾಗಿ ನೇಮಕವಾದ ಡಾ. ಶಾಲಿನಿ ರಜನೀಶ್ ಅವರಿಗೆ ಹೃತ್ಪೂರ್ವಕ

ಅಭಿನಂದನೆಗಳನ್ನು ಹೇಳಿರುವ ದಾವಣಗೆರೆ ಲೋಕಸಭಾ ಕ್ಷೇತ್ರದ ಸದಸ್ಯೆ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು, ವೈಯಕ್ತಿಕವಾಗಿ ನೀವು ನಿಮ್ಮ ಆಡಳಿತ ಕೌಶಲ್ಯದಿಂದ ನನಗೆ ಸ್ಫೂರ್ತಿ ನೀಡಿದ್ದೀರಿ ಎಂದು ಹೇಳಿದ್ದಾರೆ. ಈ ಸಂಬಂಧ ಪತ್ರ ಬರೆದಿರುವ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು, ನಿಮ್ಮಿಂದ ಮತ್ತಷ್ಟು ಒಳ್ಳೆಯ ಕಾರ್ಯಗಳು ಆಗಲಿ ಎಂದು ಆಶಿಸಿದ್ದಾರೆ.

ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿಯಾಗಿ ನೇಮಕಗೊಂಡ ನಿಮಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ವೈಯಕ್ತಿಕವಾಗಿ ನೀವು ನಿಮ್ಮ ಆಡಳಿತ ಕೌಶಲ್ಯದಿಂದ ನನಗೆ ಸ್ಫೂರ್ತಿ ನೀಡಿದ್ದೀರಿ. ಈ ಪ್ರತಿಷ್ಠಿತ ಸ್ಥಾನವು ನಿಮ್ಮ ಅಸಾಧಾರಣ ಸಮರ್ಪಣೆ, ಕಠಿಣ ಪರಿಶ್ರಮ ಮತ್ತು ವರ್ಷಗಳಲ್ಲಿ ಸಾರ್ವಜನಿಕ ಸೇವೆಗೆ ಗಮನಾರ್ಹ ಕೊಡುಗೆಗಳಿಗೆ ಸಾಕ್ಷಿಯಾಗಿದೆ.

ನಿಮ್ಮ ವ್ಯಾಪಕ ಅನುಭವ ಮತ್ತು ಅನುಕರಣೀಯ ನಾಯಕತ್ವವು ರಾಜ್ಯದಲ್ಲಿ ಧನಾತ್ಮಕ ಬದಲಾವಣೆ ಮತ್ತು ಅಭಿವೃದ್ಧಿಗೆ ಸತತವಾಗಿ ಚಾಲನೆ ನೀಡಿದೆ. ಪಾರದರ್ಶಕತೆ, ದಕ್ಷತೆ ಮತ್ತು ನವೀನ್ಯತೆಗೆ ನಿಮ್ಮ ಬದ್ಧತೆಯು ಆಡಳಿತಕ್ಕೆ ಉನ್ನತ

ಗುಣಮಟ್ಟವನ್ನು ಹೊಂದಿಸಿದೆ ಮತ್ತು ನಮ್ಮ ರಾಜ್ಯ ವ್ಯವಹಾರಗಳ ಚುಕ್ಕಾಣಿ ಹಿಡಿದಿರುವ ನಿಮ್ಮೊಂದಿಗೆ, ಕರ್ನಾಟಕವು ಪ್ರಗತಿ ಮತ್ತು ಸಮೃದ್ಧಿಯ ಹೊಸ ಎತ್ತರಗಳನ್ನು ಸಾಧಿಸುವುದನ್ನು ಮುಂದುವರಿಸುತ್ತದೆ ಎಂದು ನನಗೆ ವಿಶ್ವಾಸವಿದೆ.

ನಿಮ್ಮ ಅಧಿಕಾರಾವಧಿಯು ಕರ್ನಾಟಕದ ಜನರಿಗೆ ಪರಿಣಾಮಕಾರಿ ಉಪಕ್ರಮಗಳು, ಯಶಸ್ವಿ ನೀತಿಗಳು ಮತ್ತು ಅರ್ಥಪೂರ್ಣ ಪ್ರಗತಿಯಿಂದ ಗುರುತಿಸಲ್ಪಡಲಿ. ನಿಮ್ಮ ದೃಷ್ಟಿಕೋನ ಮತ್ತು ನಾಯಕತ್ವವು ನಿಸ್ಸಂದೇಹವಾಗಿ ಉಜ್ವಲ ಭವಿಷ್ಯದತ್ತ ಆಡಳಿತವನ್ನು ಪ್ರೇರೇಪಿಸುತ್ತದೆ ಮತ್ತು ಮಾರ್ಗದರ್ಶನ ಮಾಡುತ್ತದೆ ಎಂದು ಪ್ರಭಾ ಮಲ್ಲಿಕಾರ್ಜುನ್ ಅವರು ಹೇಳಿದ್ದಾರೆ.

# ವಿನಯತೆ, ಸತತ ಓದಿನಿಂದ ಯಶಸ್ಸು

**ದಾವಣಗೆರೆ:** ಚನ್ನಗಿರಿ ಶ್ರೀಚನ್ನಮ್ಮಾಜಿ ಸಮುದಾಯ ಭವನದಲ್ಲಿ ನಡೆದ 2023–24ನೇ ಸಾಲಿನ ಶ್ರೀಬಸವ ಪ್ರಿಯ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿ.ಯು.ಸಿ ಯಲ್ಲಿ ಅತ್ಯುತ್ತಮ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಬಸವ ಪ್ರತಿಭಾ ಪುರಸ್ಕಾರ ಹಾಗೂ ಸ್ನೇಹ ಸಿಂಚನ ಸ್ವಾಗತ ಸಮಾರಂಭದಲ್ಲಿ ರಾಜ್ಯ ಯುವ ನಾಯಕರು, ಇನ್ಸೈಟ್ಸ್ ಐಎಎಸ್ ಸಂಸ್ಥೆಯ ಸಂಸ್ಥಾಪಕ ನಿರ್ದೇಶಕ ಜಿ.ಬಿ. ವಿನಯ್ ಕುಮಾರ್ ಅವರು ಪಾಲ್ಗೊಂಡರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವುದು, ಓದುವುದರ ಪ್ರಾಮುಖ್ಯತೆ ಬಗ್ಗೆ ತಿಳಿಸಿಕೊಟ್ಟರು. ದಿನನಿತ್ಯ ಹೊಸದನ್ನು ಕಲಿಯುವ ಹಂಬಲ, ದೊಡ್ಡದಾಗಿ ಏನನ್ನಾದರೂ ಸಾಧಿಸುವ ಮಹತ್ವಾಕಾಂಕ್ಷೆ ಜೊತೆಗೆ ನಾವು ಸಾಧಿಸಲಿದ್ದೇವೆ ಎಂಬ ಅಹಂಕಾರ ಹತ್ತಿರ ಬಿಟ್ಟುಕೊಳ್ಳದೇ ವಿನಯತೆಯನ್ನು ಬೆಳೆಸಿಕೊಳ್ಳಿ ಎಂದು ಸಲಹೆ ನೀಡಿದರು, ದ್ವಿತೀಯ ಹಾಗೂ ಹತ್ತನೆಯ ತರಗತಿಯ ಮಕ್ಕಳು ತಮ್ಮ ಮುಂದಿನ ಅತ್ಯುತ್ತಮ ಕೋರ್ಸ್‌ಗಳನ್ನು ಆಯ್ಕೆ ಮಾಡುವುದಕ್ಕಿಂತ ಅತ್ಯುತ್ತಮ ಕಾಲೇಜುಗಳನ್ನು ಆಯ್ಕೆ ಮಾಡಿಕೊ ಳ್ಳಲು ಸಲಹೆ ನೀಡಿದರು, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ.ಶ್ರೀಗುರುಬಸವ ಮಹಾಸ್ವಾಮೀಜಿ ಜಿ.ಬಿ ವಿನಯ್ ಕುಮಾರ್ ರವರನ್ನು ಸನ್ಮಾನಿಸಿ ನೆನಪಿನಕಾಣಿಕೆ ನೀಡಿ ಗೌರವಿಸಿದರು, ಈ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಡಾ. ಧನಂಜಯ್, ಬಿಜೆಪಿ ಮುಖಂಡ ಹೆಚ್.ಎಸ್.ಶಿವಕುಮಾರ್ ಮತ್ತಿತರರು ಹಾಜರಿದ್ದರು.

ಬಸವ ಪ್ರತಿಭಾ ಪುರಸ್ಕಾರ ಹಾಗೂ ಸ್ನೇಹ ಸಿಂಚನ ಸ್ವಾಗತ ಸಮಾರಂಭದಲ್ಲಿ ರಾಜ್ಯ ಯುವ ನಾಯಕರು, ಇನ್ಸೈಟ್ಸ್ ಐಎಎಸ್ ಸಂಸ್ಥೆಯ ಸಂಸ್ಥಾಪಕ ನಿರ್ದೇಶಕ ಜಿ.ಬಿ. ವಿನಯ್ ಕುಮಾರ್ ಅವರು ಮಾತನಾಡಿದರು.

# ಪಿಎಸ್‌ಐ ಸಾವಿನ ತನಿಖೆ ಸಿಬಿಐಗೆ ವಹಿಸಿ

**ಮೊಳಕಾಲ್ಮುರು:** ಯಾದಗಿರಿ ಜಿಲ್ಲೆಯ ನಗರ ಠಾಣೆಯ ಪಿ.ಎಸ್.ಐ.ಪರಶುರಾಮ್ ಸಾವಿನ ಪ್ರಕರಣವನ್ನು ಸಿ.ಬಿ.ಐ ತನಿಖೆಗೆ ವಹಿಸಬೇಕೆಂದು ಡಿ.ಎಸ್.ಎಸ್.ಹಿರಿಯ ಮುಖಂಡ ಶ್ರೀನಿವಾಸ್ ಮೂರ್ತಿ ಒತ್ತಾಯಿಸಿದರು. ಪಟ್ಟಣದ ತಾಲೂಕು ಆಡಳಿತ ಸೌಧ ಆವರಣದಲ್ಲಿ ಪ್ರತಿಭಟನೆ ನಡೆಸಿ ತಹಸೀಲ್ದಾರ್ ಜಗದೀಶ್ ರವರಿಗೆ ಮನವಿ ಪತ್ರ ಸಲಿಸಿ ಮಾತನಾಡಿದರು. ಯಾದಗಿರಿ ಜಿಲ್ಲೆಯ ನಗರ ಠಾಣೆ ಪಿ.ಎಸ್.ಐ.ಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ದಲಿತ ಯುವಕ ಪರಶುರಾಂ ಛಲವಾದಿ ಅವರನ್ನು ಅಲ್ಲಿನ ಯಾದಗಿರಿ ಶಾಸಕ ಚನ್ನಾರೆಡ್ಡಿ ಪಾಟೀಲ್ ಮತ್ತು ಅವರ ಮಗ ಹಂಪನಗೌಡ 30 ಲಕ್ಷ ಹಣ ಕೊಡಬೇಕು ಹಾಗೂ ನಿನ್ನಂತಹ ಕೀಳು ಜಾತಿಯವನು ನನ್ನ ಕ್ಷೇತ್ರದಲ್ಲಿ ಕೆಲಸ ಮಾಡಲೇಬಾರದು, ಬೇರೆಯವರು 50 ಲಕ್ಷ ಕೊಟ್ಟು ನೌಕರಿ ಮಾಡಲು ಸಿದ್ಧರಿದ್ದಾರೆ. ಮೊದಲು ನೀನು ಇಲ್ಲಿಂದ ತೊಲಗು. ಇಲ್ಲ 30 ಲಕ್ಷ ಹಣ ಕೊಡು ಎಂದು ಮಾನಸಿಕವಾಗಿ ಕಿರುಕುಳ ನೀಡಿರುವ ಶಾಸಕನನ್ನು ಈ ಕೂಡಲೇ ಶಾಸಕ ಸ್ಥಾನದಿಂದ ವಜಾಗೊಳ್ಳಬೇಕು, ಹಾಗೂ ಅವನ ಮಗನನ್ನು ಕೂಡಲೇ ಬಂಧಿಸಬೇಕು ಈ ಘಟನೆಯ ಸತ್ಯಾಸತ್ಯತೆಯನ್ನು ಪರಮಾರ್ಶಿಸಲು ಕರ್ನಾಟಕ ಸರಕಾರ ಈ ಪ್ರಕರಣವನ್ನು ಸಿಬಿಐಗೆ ವಹಿಸಬೇಕೆಂದು ಎಂದು ಒತ್ತಾಯಿಸಿದರು. ಸ್ಥಳದಲ್ಲಿ ಡಿಎಸ್ ಎಸ್ ಮುಖಂಡರಾದ ರಾಯಾಪುರ ನಾಗೇಂದ್ರಪ್ಪ, ಚಂದ್ರಣ್ಣ, ನಾಗರಾಜಕಟ್ಟೆ, ಶಿವಣ್ಣ, ಸಿದ್ದಾರ್ಥ, ಮರಿಸ್ವಾಮಿ, ಭಟ್ರಹಳ್ಳಿ ಧನಂಜಯ್, ಅನಿಲ್, ತಿಪ್ಪೇಸ್ವಾಮಿ ಸೇರಿದಂತೆ ಹಲವರಿದ್ದರು.

# ಭದ್ರಾವತಿ ಕಾರ್ಖಾನೆ ಪುನಾರಂಭಕ್ಕೆ ಸಂಸದ ಮನವಿ

## ವಿಐಎಸ್ಎಲ್ ಕುರಿತು ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಜತೆ ಚರ್ಚೆ

**ಶಿವಮೊಗ್ಗ:** ಭದ್ರಾವತಿ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಆದಷ್ಟು ಬೇಗನೆ ಬಂಡವಾಳ ಹೂಡಿಕೆ ಪಟ್ಟಿಯಿಂದ ಕೈಬಿಟ್ಟು ಕಾರ್ಖಾನೆಯ ಪುನರುಜ್ಜೀವನಗೊಳಿಸುವ ಸಲುವಾಗಿ ಅಗತ್ಯ ಬಂಡವಾಳವನ್ನು ಹೂಡಲು ನಿರ್ದೇಶನ ನೀಡುವಂತೆ ಸಂಸದ ರಾಘವೇಂದ್ರ, ಕೇಂದ್ರ ಸಚಿವ ಕುಮಾರಸಾಮಿ ಅವರನ್ನು ಕೋರಿದ್ದಾರೆ.

ಮಂಗಳವಾರ ನವದೆಹಲಿಯಲ್ಲಿ ಮಾಜಿ ಪ್ರಧಾನ ಮಂತ್ರಿ ದೇವೇಗೌಡರವರ ಸಮ್ಮುಖದಲ್ಲಿ ಕೇಂದ್ರ ಬೃಹತ್ ಕೈಗಾರಿಕಾ ಸಚಿವರಾದ ಎಚ್.ಡಿ.ಕುಮಾರಸ್ವಾಮಿ ಅವರನ್ನು ಭೇಟಿಯಾಗಿ ವಿಐಎಸ್ಎಲ್ ಕುರಿತು ಅನೇಕ ವಿಚಾರ ಚರ್ಚೆ ಮಾಡಲಾಯಿತು.

ಈ ಕಾರ್ಖಾನೆಯ ಪುನರ್ಜೀವನಗೊಳಿಸುವ ಸಂಬಂಧ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಈ ಹಿಂದೆ ಲೋಕಸಭಾ ಸದಸ್ಯರಾಗಿದ್ದಾಗ ರಾಜ್ಯ ಮತ್ತು ಕೇಂದ್ರ ಸರಕಾರದೊಂದಿಗೆ ನಡೆಸಲಾದ ಹಲವು ಪ್ರಯತ್ನಗಳ ಬಗ್ಗೆ ವಿವರವಾಗಿ ಸಚಿವರಿಗೆ ತಿಳಿಸಲಾಯಿತು ಎಂದು ಸಂಸದರು ಹೇಳಿದ್ದಾರೆ.

ಭದ್ರಾವತಿ ವಿಐಎಸ್ಎಲ್ ಕಾರ್ಖಾನೆಯನ್ನು ಪುನರ್ಜೀವನ ಗೊಳಿಸುವುದರಿಂದ ಕೇವಲ ಕರ್ನಾಟಕದಲ್ಲಿ ಕೈಗಾರಿಕಾ ಅಭಿವೃದ್ಧಿ ಅಷ್ಟೇ ಅಲ್ಲದೆ ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಮಹತ್ತರ ಪಾತ್ರ ವಹಿಸುವುದರೊಂದಿಗೆ ಭದ್ರಾವತಿ ತಾಲೂಕಿನ ಸಹಸ್ರಾರು ಕಾರ್ಮಿಕ ಕುಟುಂಬಗಳಿಗೆ ಆರ್ಥಿಕ ಭದ್ರತೆಯನ್ನು ನೀಡುತ್ತದೆ ಎಂಬ ಅಂಶವನ್ನು ಸಚಿವರಿಗೆ ಮನವರಿಕೆ ಮಾಡಿ ಕೊಡಲಾಯಿತು ಎಂದು ಅವರು ಹೇಳಿದ್ದಾರೆ.

ನವದೆಹಲಿಯಲ್ಲಿ ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು ಸಂಸದ ರಾಘವೇಂದ್ರ ಭೇಟಿಯಾಗಿ ವಿಐಎಸ್ಎಲ್ ಕುರಿತು ಮನವಿ ಸಲ್ಲಿಸಲಾಯಿತು. ಕೇಂದ್ರ ಸಚಿವ ಸೋಮಣ್ಣ ಮತ್ತಿತರರು ಇದ್ದರು.

ಈ ಸಂದರ್ಭದಲ್ಲಿ ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ ಸೋಮಣ್ಣ ರವರು, ಭದ್ರಾವತಿ ವಿಐಎಸ್ಎಲ್ ನೌಕರರ ಸಂಘದ ಪದಾಧಿಕಾರಿಗಳಾದ ಜಗದೀಶ ಜೆ, ಮಲ್ಲಿಕಾರ್ಜುನ ಕೆ.ಬಿ, ಅಮೃತ್ ಕುಮಾರ್, ಶಮನು ಕೆ.ಆರ್, ಮೋಹನ್.ಎಸ್ ಹಾಗೂ ಗುತ್ತಿಗೆ ಕಾರ್ಮಿಕ ನೌಕರರ ಪರವಾಗಿ ವಿನೋದ್ ಕುಮಾರ್ ಎಸ್, ಕಿರಣ್ ಜೆ. ಮತ್ತು ಆನಂದ್ ಇವರುಗಳು ಉಪಸ್ಥಿತರಿದ್ದರು.

ನಮ್ಮ ಬೇಡಿಕೆಗೆ ಆದಷ್ಟು ತ್ವರಿತವಾಗಿ ಅಗತ್ಯ ಅನುದಾನ ದೊಂದಿಗೆ ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸುವುದಾಗಿ ಸನ್ಮಾನ್ಯ ಎಚ್ ಡಿ ಕುಮಾರಸ್ವಾಮಿ ಅವರು ಭರವಸೆ ನೀಡಿದ್ದಾರೆ ಎಂದು ಸಂಸದ ರಾಘವೇಂದ್ರ ತಿಳಿಸಿದ್ದಾರೆ.

### ಮತ್ತೆ ವಿಮಾನ ರಾತ್ರಿ ಲ್ಯಾಂಡಿಂಗ್

ಜನವರಿಯಲ್ಲಿ ಸ್ಥಗಿತಗೊಂಡ ರಾತ್ರಿ ಲ್ಯಾಂಡಿಂಗ್ ಕೆಲಸದ ಪುನರಾರಂಭವನ್ನು ಆಉಅಂ ಅನುಮೋದಿಸಿದೆ. ಓಕಗಈ ಎಕ್ಸಿಕ್ಯೂಟಿಂಗ್ ಏಜೆನ್ಸಿಯಾಗಿದೆ ಮತ್ತು ಈಎಇಅರೇಖಾ ಚಿತ್ರಗಳು, ಸಂಬಂಧಿತ ದಾಖಲೆಗಳನ್ನು ಪರಿಶೀಲಿಸಿ ಪರಿಕಲ್ಪನೆ/ವಿನ್ಯಾಸ ಮತ್ತು ಕಾರ್ಯಗತಗೊಳಿಸುವಿಕೆಯ ಮಟ್ಟದ ಅನುಮೋ ದನೆ ನೀಡಿದೆ ಎಂದು ಸಂಸದ ರಾಘವೇಂದ್ರ ತಿಳಿಸಿದ್ದಾರೆ. ಜನವರಿ 2024 ರ ಹೊತ್ತಿಗೆ ಸುಮಾರು 65 ಪ್ರತಿಶತದಷ್ಟು ಕೆಲಸ ಪೂರ್ಣಗೊಂಡಿದೆ; ಉಳಿದ ಕೆಲಸವು ಕನಿಷ್ಠ ಎರಡು ತಿಂಗಳು ಗಳನ್ನು ತೆಗೆದುಕೊಳ್ಳುತ್ತದೆ ಮತ್ತು ಎಲ್ಲಾ ಹವಾಮಾನ ಕಾರ್ಯಾಚರಣೆ ಸಕ್ರಿಯಗೊಳಿಸುವ ಮೊದಲು ಈಎಇ ಅಪೂರ್ಣಗೊಂಡ ಯೋಜನೆಯನ್ನು ಮರುಪರಿಶೀಲಿಸುತ್ತದೆ ಎಂದು ಅವರು ವಿವರಿಸಿದ್ದಾರೆ. ಈ ಎಲ್ಲಾ ಪ್ರಕ್ರಿಯೆಗಳು 3-4 ತಿಂಗಳುಗಳನ್ನು ತೆಗೆದುಕೊ ಳ್ಳಬಹುದು. ಈ ಚಳಿಗಾಲದ ಋತುವಿನ ಆಗಮನದ ಮೊದಲು, ಶಿವಮೊಗ್ಗ ವಿಮಾನ ನಿಲ್ದಾಣವನ್ನು ಎಲ್ಲಾ ಹವಾಮಾನ ಕಾರ್ಯಾಚರಣೆಗೆ ನವೀಕರಿಸಲಾಗುತ್ತದೆ ಮತ್ತು ಈ ವಿಮಾನ ನಿಲ್ದಾಣದಲ್ಲಿ ಪ್ರತಿಕೂಲ ಹವಾಮಾನ, ಮಳೆ, ರಾತ್ರಿ ಮುಂತಾದ ಅನಿರೀಕ್ಷಿತ ವಿಮಾನ ಕಾರ್ಯಾಚರಣೆ ಮತ್ತು ಪ್ರಯಾಣಿಕರ ಅನಾನುಕೂಲತೆಗಳನ್ನು ನಿವಾರಿಸಲಾಗುತ್ತದೆ ಎಂದು ಅವರು ಭರವಸೆ ನೀಡಿದ್ದಾರೆ.

## ಸಮಾಚಾರ ಸಣ್ಣದಲ್ಲ

### ಭಾವಸಾರ ಸಮಾಜದ ಪ್ರತಿಭಾ ಪುರಸ್ಕಾರ

**ಶಿವಮೊಗ್ಗ:** ಭಾವಸಾರ ಕ್ಷತ್ರಿಯ ಮಹಾಜನ ಸಮಾಜ, ಶ್ರೀರಾಮಸೇವಾ ಭಾವಸಾರ ಕ್ಷತ್ರಿಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಹಾಗೂ ಅಂಗ ಸಂಸ್ಥೆಗಳ ವತಿಯಿಂದ ಇಲ್ಲಿನ ಗಾಂಧಿಬಜಾರ್ ಶ್ರೀ ತುಳಜಾ ಭವಾನಿ ದೇವಸ್ಥಾನ ಆವರಣದಲ್ಲಿ ಆ.25 ರಂದು ಸಂಜೆ 5 ಗಂಟೆಗೆ ಎಸ್ಎಸ್ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ.80 ರಷ್ಟು ಅಂಕ ಪಡೆದು ಉತ್ತೀರ್ಣರಾದ ಸಮಾಜದ ವಿದ್ಯಾರ್ಥಿಗಳಿಗೆ 'ಪ್ರತಿಭಾ ಪುರಸ್ಕಾರ' ಕಾರ್ಯಕ್ರಮ ಆಯೋಜಿಸ ಲಾಗಿದೆ ಎಂದು ಬಾಹುಸಾರ ಸಮಾಜದ ಅಧ್ಯಕ್ಷ ಟಿ.ವಿ.ಗಜೇಂದ್ರನಾಥ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಮಕ್ಕಳಿಗೆ ಶುದ್ಧ ನೀರಿನ ಘಟಕ ಕೊಡುಗೆ

**ಶಿವಮೊಗ್ಗ:** ಆರೋಗ್ಯಕ್ಕೆ ಶುದ್ಧ ಕುಡಿಯುವ ನೀರು ಎಲ್ಲರಿಗೂ ಅವಶ್ಯಕ ಅದರಲ್ಲಿ ಮಕ್ಕಳಿಗೆ ಅತ್ಯವಶ್ಯಕ. ಆದ್ದರಿಂದ ತಮ್ಮ ಹುಟ್ಟು ಹಬ್ಬದ ನೆನಪಿಗೆ ಶುದ್ಧ ಕುಡಿಯುವ ನೀರಿನ ಘಟಕವನ್ನು ಚೇತನ ಹಿರಿಯ ಪ್ರಾಥಮಿಕ ಶಾಲೆಗೆ, ರೋಟರಿ ಕ್ಲಬ್ ಶಿವಮೊಗ್ಗ, ಜ್ಯೂಬಿಲಿ ಕ್ಲಬ್ ಮೂಲಕ ಕೊಡುಗೆ ನೀಡುತ್ತಿರುವುದಾಗಿ ಸತೀಶ್ ತಿಳಿಸಿದರು. ಮಾಜಿ ಸಹಾಯಕ ಗೌರ್ನರ್ ರಾಜೇಂದ್ರಕುಮಾರ್ ಮಾತನಾಡಿ, ಪ್ರತಿಯೊಬ್ಬರು ತಮ್ಮ ದುಡುಮೆಯಲ್ಲಿ ಹತ್ತು ಭಾಗ ಅವಶ್ಯಕತೆ ಇರುವವರಿಗೆ ನೀಡುವುದರಿಂದ ಸತಕ್ಷ ಸಮಾಜ ನಿರ್ಮಾಣ ಸಾಧ್ಯ. ರೋಟರಿಯ ಎಲ್ಲ ಸದಸ್ಯರು ಶತಮಾನದಿಂದ ಈ ರೀತಿಯ ಕಾರ್ಯದಲ್ಲಿ ತೊಡಗಿಸಿ ಕೊಂಡಿದೆ ಎಂದ ಅವರು, ಸಂತೃಪ್ತಿ ಜೀವನದಿಂದ ವಿಶ್ವ ಶಾಂತಿ ಸಾಧ್ಯ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಭಾರದ್ವಾಜ್ ಸ್ವಾಗತಿಸಿ, ಲಕ್ಷ್ಮೀನಾರಾಯಣ್ ನಿರೂಪಿಸಿ, ಉಮಾದೇವಿ ವಂದಿಸಿದರು.

### ಮದುವೆಯಾಗುವುದಾಗಿ ನಂಬಿಸಿ ವಂಚನೆ: ದೂರು

**ಶಿವಮೊಗ್ಗ:** ಮದುವೆಯಾಗುವುದಾಗಿ ನಂಬಿಸಿ ದೈಹಿಕ ಸಂಪರ್ಕ ಬೆಳೆಸಿದ್ದಲ್ಲದೆ ಆಕೆಯಿಂದಲೇ ಲಕ್ಷ ಲಕ್ಷ ಹಣ ಪಡೆದು ವಂಚಿಸಿ ತಲೆಮರೆಸಿಕೊಂಡಿದ್ದ ಬಿಜೆಪಿ ಮಾಧ್ಯಮ ಪ್ರಮುಖನೊಬ್ಬನನ್ನು ಶಿವಮೊಗ್ಗ ಮಹಿಳಾ ಪೊಲೀಸರು ಬಂಧಿಸಿದ್ದಾರೆ. ಜು.26 ರಂದು 43 ವರ್ಷದ ಮಹಿಳೆ ಶರತ್ ಕಲ್ಯಾಣಿಯ ವಿರುದ್ಧ ವಂಚನೆ ಪ್ರಕರಣ ದಾಖಲಿಸಿದ್ದರು. ಮಹಿಳಾ ಪೊಲೀಸ್ ಇನ್ ಸ್ಪೆಕ್ಟರ್ ನ ತಂಡ ಕಾರ್ಯಾಚರಣೆ ನಡೆಸಿ ವಿಜಯಪುರ ಜಿಲ್ಲೆಯಲ್ಲಿ ಶರತ್ ನನ್ನ ಬಂಧಿಸಿರುವುದಾಗಿ ಮಾಧ್ಯಮವೊಂದು ಪ್ರಕಟಿಸಿದೆ. ಮದುವೆಯಾಗುವುದಾಗಿ ನಂಬಿಸಿ ಬಲವಂತವಾಗಿ ದೈಹಿಕ ಸಂಪರ್ಕ ಮಾಡಿ ನನ್ನಿಂದಲೇ ಹಣ ಪಡೆದ ಶರತ್ ಕಲ್ಯಾಣಿ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಮಹಿಳೆ ದೂರಿನಲ್ಲಿ ಮನವಿ ಮಾಡಿದ್ದಾರೆ. ಬಿಜೆಪಿಯ ಜಿಲ್ಲಾ ಸಾಮಾಜಿಕ ಜಾಲತಾಣದ ಸಂಚಾಲಕನಾಗಿದ್ದ ಶರತ್ ಕಲ್ಯಾಣಿಯನ್ನು ಮತ್ತು ಪಕ್ಷದ ಜಿಲ್ಲಾಧ್ಯಕ್ಷ ಟಿ.ಡಿ ಮೇಘರಾಜ್ ವಜಾಗೊಳಿಸಿರುವುದಾಗಿ ತಿಳಿದು ಬಂದಿದೆ.

### ಬೀದಿ ದೀಪಗಳಿಲ್ಲದೆ ಹೆಚ್ಚುತ್ತಿರುವ ಅಪಘಾತ

**ಶಿವಮೊಗ್ಗ:** ನಗರದ ಎಂಆರ್ಎಸ್ ವೃತ್ತದಿಂದ ಊರುಗಡೂರು ವೃತ್ತದವರೆಗೆ ಬೈಪಾಸ್ ರಸ್ತೆಯಲ್ಲಿ ಬೀದಿ ದೀಪಗಳು ಇಲ್ಲದೆ, ಅನೇಕ ಅಪಘಾತಗಳು ಸಂಭವಿಸುತ್ತಿದ್ದು, ಈ ಬಗ್ಗೆ ಪಾಲಿಕೆ ಮತ್ತು ಪೊಲೀಸ್ ಇಲಾಖೆ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ಈ ರಸ್ತೆಯಲ್ಲಿ ಮೈತ್ರಿ ನರ್ಸಿಂಗ್ ಶಾಲೆ, ನಂದನ್ ಶಾಲೆ ಸೇರಿದಂತೆ ನಾಲ್ಕು ಶಾಲಾ ಕಾಲೇಜುಗಳಿವೆ. ರಾತ್ರಿಯೊತ್ತು ಬೀದಿ ದೀಪಗಳು ಇಲ್ಲದ ಕಾರಣ ಹಲವಾರು ಅಪಘಾತಗಳು ಸಂಭವಿಸುತ್ತಿದೆ. ಇತ್ತೀಚಿಗಷ್ಟೇ 2 ಕೆಎಸ್ಆರ್‌ಟಿಸಿ ಬಸ್ ಅಪಘಾತವಾಗಿ ಓರ್ವನ ಸಾವಿಗೆ ಕಾರಣವಾಗಿತ್ತು. ಆಟೋ ಮತ್ತು ದ್ವಿಚಕ್ರ ವಾಹನಗಳು ಕೂಡ ಕತ್ತಲೆಯಲ್ಲಿ ಅನೇಕ ಅಪಘಾತಕ್ಕೆ ಕಾರಣವಾಗಿದ್ದು, ಕೂಡಲೇ ಬೀದಿದೀಪದ ವ್ಯವಸ್ಥೆ ಕಲ್ಪಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

### ಸರಕಾರಿ ಶಾಲೆಗಳ ಬಾಗಿಲು ಮುಚ್ಚಬಾರದು

**ಶಿವಮೊಗ್ಗ:** ಸರಕಾರಿ ಶಾಲೆಗಳು ಬಾಗಿಲು ಮುಚ್ಚಬಾರದು ಎಂದು ಎಸ್‌ಡಿಎಂಸಿ ರಾಜ್ಯಾಧ್ಯಕ್ಷ ಉಮೇಶ್ ಗಂಗವಾಡಿ ಹೇಳಿದರು. ಗುತ್ಯಪ್ಪಕಾಲೋನಿಯಲ್ಲಿರುವ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ, ರಾಜ್ಯ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆ ವತಿಯಿಂದ ನಡೆದ ಎಸ್‌ಡಿಎಂಸಿ ಕಾರ್ಯಗಾರದಲ್ಲಿ ಮಾತನಾಡಿ ದರು. ಸರಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಕರಿದ್ದಾರೆ. ಶುಲ್ಕವೂ ಇಲ್ಲ. ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳು ಇಂದು ಉಳಿಯಬೇಕಾಗಿದೆ. ಅವುಗಳ ಬಲವರ್ದನೆಗೆ ಪ್ರೋತ್ಸಾಹ ನೀಡಬೇಕು ಎಂದರು.

{ ರಾಘವೇಂದ್ರ } ಸಂಸದ

**ಭದ್ರಾವತಿ ವಿಐಎಸ್ಎಲ್ ಕಾರ್ಖಾನೆಯನ್ನು ಪುನರ್ಜೀವನಗೊಳಿಸುವುದರಿಂದ ಕೇವಲ ಕರ್ನಾಟಕದಲ್ಲಿ ಕೈಗಾರಿಕಾ ಅಭಿವೃದ್ಧಿ ಅಷ್ಟೇ ಅಲ್ಲದೆ ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಮಹತ್ತರ ಪಾತ್ರ ವಹಿಸುವುದರೊಂದಿಗೆ ಭದ್ರಾವತಿ ತಾಲೂಕಿನ ಸಹಸ್ರಾರು ಕಾರ್ಮಿಕ ಕುಟುಂಬಗಳಿಗೆ ಆರ್ಥಿಕ ಭದ್ರತೆ ನೀಡುತ್ತದೆ.**

## ಬೆಂಕಿಗೆ ಆಹುತಿಯಾದ ಸಾರಿಗೆ ಬಸ್

**ಸಾಗರ:** ಭಟ್ಕಳದಿಂದ ಬೆಂಗಳೂರಿಗೆ ಹೊರಟ್ಟಿದ್ದ ವಾಯುವ್ಯ ಕರ್ನಾಟಕ ರಾಜ್ಯ ಸಾರಿಗೆ ಬಸ್‌ನಲ್ಲಿ ಬೆಂಕಿ ಕಾಣಿಸಿಕೊಂಡು ಕ್ಷಣ ಕಾಲ ಆತಂಕಕ್ಕೆ ಕಾರಣವಾದ ಘಟನೆ ಸಾಗರ ಸಮೀಪ ನಡೆದಿದೆ.

ಹೊನ್ನಾವರ, ಮಾವಿನಗುಂಡಿ ಮಾರ್ಗವಾಗಿ ಸಾಗಿ ಬರುತ್ತಿದ್ದ ಬಸ್‌ನಲ್ಲಿ ತಾಂತ್ರಿಕ ದೋಷದ ಕಾರಣ ಮಾವಿನಗುಂಡಿಯಿಂದಲೇ ಸಣ್ಣ ಪ್ರಮಾಣದಲ್ಲಿ ಹೊಗೆ ಕಾಣಿಸಿಕೊಂಡಿತ್ತು. ಈ ಕುರಿತು ಪ್ರಯಾಣಿಕರು ಚಾಲಕನ ಗಮನಕ್ಕೆ ತಂದರೂ ಚಾಲಕ ನಿರ್ಲಕ್ಷ ಮಾಡಿದ ಪರಿಣಾಮ ಸಾಗರದ ಎಲ್‌ಬಿ ಕಾಲೇಜು ಸಮೀಪ ಏಕಾಏಕಿ ಇಡೀ ಬಸ್‌ಗೂ ಬೆಂಕಿ ಆವರಿಸಿತು ಎನ್ನುವುದು ಪ್ರಯಾಣಿಕರ ಆರೋಪ.

ನಂತರವೇ ಚಾಲಕ ವಾಹನ ನಿಲ್ಲಿಸಿದ್ದಾನೆ. ಬಸ್‌ನಲ್ಲಿ 12 ಜನ ಪ್ರಯಾಣಿಕರಿದ್ದ ಎಲ್ಲರೂ ಅಪಾಯದಿಂದ ಪಾರಾಗಿದ್ದಾರೆ.

ನಂತರ ಅಗ್ನಿಶಾಮಕ ದಳದವರು ಬಂದು ಬೆಂಕಿ ನಂದಿಸಿದ್ದಾರೆ. ಆಗಲೇ ಬಸ್ ಭಾಗಶ: ಕರಕಲಾಗಿತ್ತು. ಈ ನಡುವೆ ಬೆಂಗಳೂರು ಪ್ರಯಾಣಿಸುವ ಪ್ರಯಾಣಿಕರಿಗೆ ಮುಂದಿನ ವ್ಯವಸ್ಥೆ ಕಲ್ಪಿಸದೆ ನಿರ್ವಾಹಕ ನಿರ್ಲಕ್ಷ ತೋರಿರುವುದೂ ಕೂಡ ಪ್ರಯಾಣಿಕರಿಗೆ ನಡುದಾರಿಯಲ್ಲಿ ಬೀಳುವಂತಾಗಿದ್ದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ಪತ್ರಕರ್ತರ ಬಗ್ಗೆ ಅಪಪ್ರಚಾರ, ಸೂಕ್ತ ಕ್ರಮಕ್ಕೆ ಆಗ್ರಹ

**ಸಾಗರ:** ಸಾಮಾಜಿಕ ಜಾಲತಾಣಗಳಲ್ಲಿ ಪತ್ರಕರ್ತರ ಬಗ್ಗೆ ಅಪಪ್ರಚಾರ ಮಾಡುತ್ತಿರುವವರ ವಿರುದ್ಧ ಸೂಕ್ತ ಕ್ರಮ ಜರುಗಿಸುವಂತೆ ಒತ್ತಾಯಿಸಿ ಮಂಗಳವಾರ ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಸಾಗರ ಶಾಖೆ ವತಿಯಿಂದ ಉಪವಿಭಾಗಾಧಿಕಾರಿಗಳ ಕಚೇರಿಗೆ ಮನವಿ ಸಲ್ಲಿಸಲಾಯಿತು.

> **ಕೆಲವು ತಿಂಗಳುಗಳಿಂದ ಫೇಸ್‌ಬುಕ್, ವ್ಯಾಟ್ಸಪ್ ಇನ್ನಿತರೆಗಳಲ್ಲಿ ಪತ್ರಕರ್ತರ ಬಗ್ಗೆ ಸುಳ್ಳುಸುದ್ದಿ ಹರಿದು ಬಿಡುವ ಮೂಲಕ ನಿಜವಾಗಿಯೂ ಪತ್ರಿಕಾ ಕ್ಷೇತ್ರದಲ್ಲಿ ಕೆಲಸ ಮಾಡುವ ಪತ್ರಕರ್ತರ ಕಾರ್ಯಕ್ಷಮತೆ ಕುಗ್ಗಿಸುವ ಪ್ರಯತ್ನ ನಡೆಸಲಾಗುತ್ತಿದೆ. ಇತ್ತೀಚಿಗೆ ನಗರಸಭೆಯಲ್ಲಿ ನಡೆದಿದೆ ಎನ್ನಲಾದ ಸೇಲ್ ಸರ್ಟಿಫಿಕೇಟ್ ಹಗರಣದಲ್ಲಿ ಪತ್ರಕರ್ತರೊಬ್ಬರಿಗೆ ಪೌರಾಯುಕ್ತರು 1.25 ಲಕ್ಷ ರು. ಮೌಲ್ಯದ ಐಫೋನ್ ಕೊಟ್ಟಿದ್ದಾರೆ ಎನ್ನುವ ಸುದ್ದಿ ಹರಿಬಿಡಲಾಗಿದೆ.**
> **-ಮಹೇಶ್ ಹೆಗಡೆ,** ಸಂಘದ ಜಿಲ್ಲಾ ಕಾರ್ಯದರ್ಶಿ

ಸಂಘದ ಜಿಲ್ಲಾ ಕಾರ್ಯದರ್ಶಿ ದೀಪಕ್ ಸಾಗರ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಪತ್ರಕರ್ತರು ಎಂದು ಹೇಳಿಕೊಳ್ಳುವ ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ನೈಜ ಪತ್ರಕರ್ತರ ಬಗ್ಗೆ ಇಲ್ಲಸಲ್ಲದ ಆರೋಪಗಳನ್ನು ಹರಿದು ಬಿಡುವ ಮೂಲಕ ತೇಜೋವಧೆ ಮಾಡುತ್ತಿದ್ದಾರೆ. ತಮ್ಮ ವೈಯಕ್ತಿಕ ಲಾಭಕ್ಕಾಗಿ ಕೆಲವರು ಇಂತಹ ಹೀನ ಕೃತ್ಯದಲ್ಲಿ ತೊಡಗಿದ್ದು, ಇಂತಹವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುವ ಅಗತ್ಯವಿದೆ. ದುರುದ್ದೇಶಪೂರ್ವಕವಾಗಿ ಪತ್ರಕರ್ತರನ್ನು ಗುರಿಯಾಗಿಸಿಕೊಂಡು ತಾವು ಆರ್ಥಿಕ ಲಾಭ ಪಡೆಯುವ ಹುನ್ನಾರ ಇದಾಗಿದೆ. ಸಂಘದ ಅಧ್ಯಕ್ಷ ಜಿ.ನಾಗೇಶ್, ಉಪಾಧ್ಯಕ್ಷ ಲೋಕೇಶಕುಮಾರ್, ಖಜಾಂಚಿ ಎಂ.ಜಿ.ರಾಘವೇಂದ್ರ, ಪತ್ರಕರ್ತರಾದ ಎಂ.ರಾಘವೇಂದ್ರ, ಇಮ್ರಾನ್ ಸಾಗರ್, ಉಮೇಶ್ ಮೊಗವೀರ, ಗಿರೀಶ್ ರಾಯ್ಕರ್, ರಮೇಶ್ ಗುಂಡೂಮನೆ, ಸತ್ಯನಾರಾಯಣ, ಮಾ.ಸ.ನಂಜುಂಡಸ್ವಾಮಿ, ವಸಂತ್, ಮಾ.ವೆಂ.ಸ. ಪ್ರಸಾದ್, ಅಖಿಲೇಶ್ ಚಿಪ್ಳಿ, ಜಮೀಲ್ ಸಾಗರ್, ಶಿವಕುಮಾರ್ ಗೌಡ, ರಾಜೇಶ್ ಬಡ್ತಿ ಇನ್ನಿತರರು ಹಾಜರಿದ್ದರು.

ಪತ್ರಕರ್ತರ ಬಗ್ಗೆ ಅಪಪ್ರಚಾರ ಮಾಡುತ್ತಿರುವವರ ವಿರುದ್ಧ ಸೂಕ್ತ ಕ್ರಮ ಜರುಗಿಸಲು ಪತ್ರಕರ್ತರ ಸಂಘದ ಸಾಗರ ಶಾಖೆ ವತಿಯಿಂದ ಉಪವಿಭಾಗಾಧಿಕಾರಿಗಳ ಕಚೇರಿಗೆ ಮನವಿ ಸಲ್ಲಿಸಲಾಯಿತು.

## ಸಾಗರ ಬದಲಾಗದ ಮೀಸಲು, ಮಹಿಳೆಗೆ ಅಧ್ಯಕ್ಷ ಪಟ್ಟ..!

ರಮೇಶ್ ಹೆಗಡೆ ಗುಂಡೂಮನೆ ಸಾಗರ

ಎರಡೂವರೆ ವರ್ಷದ ( 30 ತಿಂಗಳ) ಒಂದು ಅವಧಿಯ ನಗರ ಸಭೆಯ ಆಡಳಿತ ಕಳೆದ ವಿಧಾನ ಸಭಾ ಚುನಾವಣೆಗೂ ಮುನ್ನ ಎಂದರೆ 2023ರ ಏ.29 ಕ್ಕೆ ಮುಕ್ತಾಯವಾಗಿದೆ. ಆದರೆ ನಂತರ ಸುಮಾರು ಒಂದೂವರೆ ವರ್ಷ ಅಧ್ಯಕ್ಷ, ಉಪಾಧ್ಯಕ್ಷ ಮೀಸಲು ಪ್ರಕಟವಾಗದೆ ಜನರಿಂದ ಆಯ್ಕೆಗೊಂಡಿದ್ದ ಜನಪ್ರತಿನಿಧಿಗಳು ಅಜ್ಞಾತವಾಸ ಅನುಭವಿಸುವಂತಾಗಿರುವುದು ಈಗ ಹಳೆಯ ಕತೆ. ಅಂತೂ ಇಂತೂ ಈಗ ಎಲ್ಲ ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್ ಆಡಳಿತದ ಅಧ್ಯಕ್ಷ, ಉಪಾಧ್ಯಕ್ಷ ಮೀಸಲು ಘೋಷಣೆ ಸೋಮವಾರ ಪ್ರಕಟಗೊಂಡಿದೆ.

ಸಾಗರದ ಹಿಂದಿನ ಎರಡೂವರೆ ವರ್ಷದ ಅವಧಿಗೂ ಅಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳಾ ಮೀಸಲು ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಬಿಸಿಎ ಮೀಸಲಾತಿ ಬಂದಿತ್ತು. ಒಟ್ಟು 31 ಸ್ಥಾನದ ನಗರ ಸಭೆಯಲ್ಲಿ ಸಹಜವಾಗಿ ಆಗ ಬಹುಮತ ಪಡೆದಿರುವ ಬಿಜೆಪಿಯ ಮಧುರಾ ಶಿವಾನಂದ ಅಧ್ಯಕ್ಷರಾಗಿಯೂ ಮತ್ತು ವಿ. ಮಹೇಶ್ ಉಪಾಧ್ಯಕ್ಷರಾಗಿಯೂ ಅಧಿಕಾರ ನಡೆಸಿದ್ದರು. ಸಹಜವಾಗಿ ಉಳಿದ ಕೆಲ ಮಹಿಳಾ ಆಕಾಂಕ್ಷಿಗಳಿಗೆ ಇದು ಬೇಸರ ತರಿಸಿದ್ದು ಆಗಾಗ ಅಲ್ಲಲ್ಲಿ ಕೇಳಿ ಬಂದರೂ ಬಹಿರಂಗವಾಗಿರಲಿಲ್ಲ. ಹಾಗೆ ನೋಡಿದರೆ ಕಳೆದ 7 ವರ್ಷಗಳಿಂದಲೂ ನಗರ ಸಭೆಯಲ್ಲಿ ಮಹಿಳೆಯರೆ ಅಧ್ಯಕ್ಷ ಪಟ್ಟದಲ್ಲಿ ಕುಳಿತು ಅಧಿಕಾರ ಮಾಡಿರುವುದು ಕಂಡು ಬರುತ್ತಿದೆ. ಈಗ ಅದು ಮತ್ತೆ ಪುನಾರವರ್ತನೆಗೊಂಡಿದೆ. ಈಗಲೂ ಮೇಲ್ನೋಟಕ್ಕೆ ಬಿಜೆಪಿಯ ಬಲ ಅಧಿಕಾರ ಹಿಡಿಯುವ ಸ್ಥಾನದಲ್ಲಿದೆ ಆದರೆ ರಾಜಕೀಯ ಮೇಲಾಟಗಳು ಯಾವ ಕ್ಷಣದಲ್ಲಿ ಹೇಗೆ ಬದಲಾಗಲಿದೆ ಎನ್ನುವುದು ಹೇಳುವುದಕ್ಕೆ ಅಸಾಧ್ಯ. ಕ್ಷೇತ್ರದಲ್ಲಿ ಕಾಂಗ್ರೆಸ್ ಶಾಸಕರಿರುವ ಕಾರಣ ಅವರ ಬಲದ ಆಧಾರದ ಮೇಲೆ ಕಾಂಗ್ರೆಸ್ ಪಕ್ಷದಲ್ಲಿರುವ ಮಹಿಳಾ ಸದಸ್ಯರೂ ಕೂಡ ಗದ್ದುಗೆ ಏರುವ ಪ್ರಯತ್ನ ಮಾಡುವ ಸಾಧ್ಯತೆ ಅಲ್ಲಗಳೆಯುವಂತಿಲ್ಲ. ಒಟ್ಟಿನಲ್ಲಿ ಸದಸ್ಯರಾಗಿ 2019ರಲ್ಲಿ ಆಯ್ಕೆಗೊಂಡರೂ ಸಕಾಲದಲ್ಲಿ ಮೀಸಲು ಪ್ರಕಟಗೊಳ್ಳದೆ, ಅಜ್ಞಾತದಲ್ಲಿ ಕಳೆದ ದಿನವೇ ಹೆಚ್ಚಿರುವ ಈಗಿನ ಅವಧಿಯ ಸದಸ್ಯರಿಗೆ ಇನ್ನುಳಿದ ಸುಮಾರು ಒಂದು ವರ್ಷದಲ್ಲಿ ತಮ್ಮ ಆಡಳಿತದ ಛಾಪನ್ನು ಮೂಡಿಸುವ ಅನಿವಾರ್ಯತೆ ಇದೆ. ಹಾಗೂ ಮುಂದಿನ ಚುನಾವಣೆಗೆ ಸಿದ್ಧತೆ ಕೂಡ ಮಾಡಿಕೊಳ್ಳುವ ಅನಿವಾರ್ಯತೆಯೂ ಇದೆ.

ಈ ನಡುವೆ ಮುಂದೆ ಅಧಿಕಾರದ ಗದ್ದುಗೆ ಏರುವ ಆಕಾಂಕ್ಷಿಗಳು ಮನಸ್ಸಿನಲ್ಲಿ ಮಣ್ಣು ತಿನ್ನುವ ಕೆಲಸ ಶುರು ಮಾಡಿದ್ದಾರೆ. ಯಾರ್ಯಾರು ಆಕಾಂಕ್ಷಿಗಳು ಎನ್ನುವುದು ಬಹುತೇಕ ಆಯಾ ಪಕ್ಷದವರಿಗೂ ಮತ್ತು ಸಾಗರದ ಜನತೆಗೂ ಗೊತ್ತು ಆದರೆ ಏಕೋ ಬಹಿರಂಗಗೊಳಿಸುವುದಕ್ಕಿಂತ ಪಕ್ಷವೇ ತಮ್ಮನ್ನು ಆಯ್ಕೆ ಮಾಡಲಿ ಎನ್ನುವ ಇರಾದೆಯಲ್ಲಿ ಆಕಾಂಕ್ಷಿಗಳಿದ್ದಾರೆ. ಅಂತೂ ಶ್ರಾವಣದ ಸೋಮವಾರ ಸಾಗರದ ನಗರ ಸಭೆಯ ಮಹಿಳಾ ಸದಸ್ಯರಿಗೆ ಶುಭ ಸುದ್ದಿ ನೀಡಿದೆ. ಅದರಲ್ಲಿ ಅದೃಷ್ಟ ಯಾರಿಗಿದೆ ಎನ್ನುವುದು ಇನ್ನಷ್ಟೇ ತಿಳಿಯಬೇಕಿದೆ.

## ಶರಣ್ಯ ಸಂಸ್ಥೆಯ ಸೇವೆ ಶ್ಲಾಘನೀಯ

**ಶಿವಮೊಗ್ಗ:** ಶರಣ್ಯ ಸಂಸ್ಥೆಯು ನಿರಾಶಿತ ರೋಗಿಗಳಿಗೆ ವೈದ್ಯಕೀಯ ಸೌಲಭ್ಯಗಳೊಂದಿಗೆ ಸೇವೆ ನೀಡುತ್ತಿರುವುದು ಶ್ಲಾಘನೀಯವಾಗಿದೆ ಎಂದು ರೋಟರಿ ಕ್ಲಬ್ ಶಿವಮೊಗ್ಗ ಸೆಂಟ್ರಲ್ ಅಧ್ಯಕ್ಷ ಕಿರಣ್ ಕುಮಾರ್ ಅಭಿಪ್ರಾಯ ಪಟ್ಟರು.

ಗಾಜನೂರಿನಲ್ಲಿರುವ ಶರಣ್ಯ ಆರೈಕೆ ಕೇಂದ್ರಕ್ಕೆ ರೋಟರಿ ಕ್ಲಬ್ ಶಿವಮೊಗ್ಗ ಸೆಂಟ್ರಲ್ ಹಾಗೂ ಆನ್ ಕ್ಲಬ್ ಸದಸ್ಯರು ಭೇಟಿ ನೀಡಿ, ಶರಣ್ಯ ಸಂಸ್ಥೆಯು ರೋಗಿಗಳನ್ನು ಆರೈಕೆ ಮಾಡುತ್ತಿರುವ ರೋಗಿಗಳಿಗೆ ಉಪಚರಿಸಿ ಸಂತ್ರಸ್ತರ ಜತೆಯಿದ್ದು ಸಾಂತ್ವಾನಿಸಿ ಶರಣ್ಯ ಸಂಸ್ಥೆಯ ಅಧ್ಯಕ್ಷರು ಹಾಗೂ ಸಿಬ್ಬಂದಿಗಳೊಂದಿಗೆ ಸಂಸ್ಥೆ ನೀಡುತ್ತಿರುವ ಸೇವೆಗಳ ಬಗ್ಗೆ ಮಾಹಿತಿ ತಿಳಿಸಿದರು. ಸಂಸ್ಥೆಯ ವೈದ್ಯ ಡಾ. ತಾನಾಜಿ ಮಾತನಾಡಿ, ರೋಗಿಗಳನ್ನು ನೋಡಿಕೊಳ್ಳಲಾಗದ ಸ್ಥಿತಿಯಲ್ಲಿ ನಮ್ಮ ಸಂಸ್ಥೆಗೆ ತರುತ್ತಾರೆ, ಆಗ ತುಂಬಾ ಆರೈಕೆಯಿಂದ ನೋಡಿಕೊಳ್ಳುತ್ತೇವೆ. ತುಂಬಾ ಜನರು ಗುಣಮುಖರಾಗಿ ಮತ್ತೆ ಮನೆಗೆ ಹೋಗಿದ ಉದಾಹರಣೆಗಳೂ ಕೂಡ ಸಾಕಷ್ಟಿದೆ ಎಂದರು. ಇದೇ ಸಂದರ್ಭದಲ್ಲಿ ರೋಟರಿ ಕ್ಲಬ್ ಶಿವಮೊಗ್ಗ ಸೆಂಟ್ರಲ್ ವತಿಯಿಂದ ಶರಣ್ಯ ಆರೈಕೆ ಕೇಂದ್ರಕ್ಕೆ ರೋಟರಿಯನ್ ಕಿರಣ್ ಕುಮಾರ್ ಹಾಗೂ ರೋಟರಿಯನ್ ಧರ್ಮೇಂದ್ರ ಸಿಂಗ್ ಆರ್ಥಿಕ ನೆರವು ಮತ್ತು ಗಣೇಶ್.ಎಂ.ಅಂಗಡಿಯವರಿಂದ ವಾಕರ್‌ನ್ನು ಕೊಡುಗೆಯಾಗಿ ನೀಡಿದರು. ಈ ವೇಳೆ ಕಾರ್ಯದರ್ಶಿ ಈಶ್ವರ್ .ಬಿ.ವಿ, ಬಸವರಾಜ್, ಅಸಿಸ್ಟೆಂಟ್ ಗವರ್ನರ್ ರವಿ ಕೋಟೋಜಿ, ಜೋನಲ್ ಲೆಫ್ಟಿನೆಂಟ್ ಮಂಜುನಾಥ್ ಕದಂ, ಜೈಶೀಲ್ ಶೆಟ್ಟಿ, ಗುರುರಾಜ್, ಮಂಜುನಾಥ್ ಹೆಗಡೆ, ಬಲ ರಾಮ್, ಸಂತೋಷ್, ಗಣೇಶ್ ಅಂಗಡಿ, ರಾಜಶ್ರೀ ಬಸವರಾಜ್, ದೀಪ ಜೈಷೀಲ್ ಶೆಟ್ಟಿ, ಜ್ಯೋತಿ ಶ್ರೀರಾಮ್, ಗೀತಾ ಜಗದೀಶ್, ಶುಭ ಚಿದಾನಂದ್ ಶರಣ್ಯ ಸಿಬ್ಬಂದಿ ವರ್ಗದವರು ಇದ್ದರು.

## ಗಂಗನಕೊಪ್ಪ ರಸ್ತೆ ಹಾಳು, ಕೇಳುವವರಾರು ಗ್ರಾಮಸ್ಥರ ಗೋಳು?

**ಹೊಸನಗರ:** ಸುಮಾರು 10 ವರ್ಷಗಳಿಂದ ಫಾತಿಮಾಬಿಯವರ ಮನೆಯಿಂದ ದಿ.ಗೋವಿಂದಪ್ಪನವರ ಗದ್ದೆಗೆ ಶಿವಪ್ರಕಾಶ್ ಭಟ್‌ರವರ ಮನೆಯವರೆವಿಗೆ ಮಣ್ಣು ರಸ್ತೆ ಸಂಪೂರ್ಣ ಹಾನಿಯಾಗಿದ್ದು, ಇಲ್ಲಿಯ ಗ್ರಾಮಸ್ಥರು ಓಡಾಟ ನಡೆಸುವುದೇ ಕಷ್ಟಕರವಾಗಿದ್ದು ಸರಿ ಮಾಡುವವರು ಯಾರು ಇಲ್ಲವಾಗಿದೆ.

ಈ ಭಾಗಗಳಲ್ಲಿ ಕೋಟೆಕಾನು, ಬಲಗ, ಕೋಟೆ ಇತ್ಯಾದಿ ಗ್ರಾಮಗಳಿಂದು ಶಾಲೆಯ ವಿದ್ಯಾರ್ಥಿಗಳು ವೃದ್ಧರು ಅಂಗವಿಕಲರಿದ್ದು ಈ ರಸ್ತೆಯಲ್ಲಿ ವಿದ್ಯಾರ್ಥಿಗಳು ಶಾಲೆಗೆ ಹೋಗುವುದೇ ಕಷ್ಟಕರವಾಗಿದೆ. ಗ್ರಾಮಸ್ಥರು ಆಸ್ಪತ್ರೆ ಹೊಸನಗರ ಟೌನ್‌ಗೆ ಬರಲು ಸಾಧ್ಯವಾಗುತ್ತಿಲ್ಲ ಇಲ್ಲಿ ಇರುವವರು ಹೆಚ್ಚಿನ ಸಂಖ್ಯೆಯಲ್ಲಿ ಹೈನುಗಾರಿಕೆ ಕೆಲಸ ಮಾಡುತ್ತಿದ್ದು, ಪ್ರತಿ ದಿನ ಎರಡು ಬಾರಿ ಹಾಲನ್ನು ಡೈರಿಗೆ ಹಾಕಲು ಓಡಾಟ ನಡೆಸಬೇಕಾಗಿದ್ದು ಕಾಲು ನಡುಗೆಯಲ್ಲಿ ಅಥವಾ ಬೈಕ್‌ನಲ್ಲಿ ಎರಡು ಕಿ.ಮೀಟರ್ ರಸ್ತೆ ಸಂಪೂರ್ಣ ಹಾಳಾಗಿರುವ ಕಾರಣ ಓಡಾಟ ನಡೆಸಲು ಕಷ್ಟಕರವಾಗಿದೆ

**ಇಬ್ಬರ ಜಗಳ ಗ್ರಾಮಸ್ಥರಿಗೆ ಕಷ್ಟ:** ಹೊಸನಗರದ ಗಂಗನಕೊಪ್ಪ ರಸ್ತೆ 2012ರಲ್ಲಿ ಎಂ ಗುಡ್ಡೆಕೊಪ್ಪ ಗ್ರಾಮ ಪಂಚಾಯತಿಯಿಂದ ಮಣ್ಣು ರಸ್ತೆ ರಿಪೇರಿ ಮಾಡಲಾಗಿತ್ತು. ಈ ರಸ್ತೆ ಸುಮಾರು 75 ವರ್ಷಗಳಿಂದ ಗಂಗನಕೊಪ್ಪದ ಗ್ರಾಮಸ್ಥರು ಓಡಾಟ ನಡೆಸುತ್ತಿದ್ದರು ಇತ್ತೀಚಿಗೆ ಗಂಗನಕೊಪ್ಪ ಗೌಡರ ಕುಟುಂಬ ಈ ರಸೆಯ ಜಾಗ ಅವರಿಗೆ ಸೇರಿರುವುದಾಗಿ ತೋಟಗಾರಿಕೆ ಇಲಾಖೆಯ ಮೇಲೆ ನ್ಯಾಯಾಲಯದಲ್ಲಿ ಕೇಸು ಹಾಕಿದ್ದರು ಈಗ ನ್ಯಾಯಾಲಯದಲ್ಲಿ ವ್ಯಾಜ್ಯ ಇತ್ಯರ್ಥವಾಗಿದೆ. ಗಂಗನಕೊಪ್ಪ ಗೌಡರ ಕುಟುಂಬಕ್ಕೆ ಸೇರಿದ ಜಾಗದಲ್ಲಿ ರಸ್ತೆ ಇರುವುದರಿಂದ ಗ್ರಾಮಸ್ಥರಿಗೆ ಓಡಾಟ ಮಾಡಲು ಮಾತ್ರ ಅವಕಾಶವಿದ್ದು, ಹಾಳಾಗಿರುವ ರಸ್ತೆ ರಿಪೇರಿ ಮಾಡಲು ಬಿಡುತ್ತಿಲ್ಲವೆಂದು ಅಲ್ಲಿನ ನಿವಾಸಿಗಳು ದೂರುತ್ತಿದ್ದಾರೆ.

**ತಹಸೀಲ್ದಾರ್ ರಶ್ಮೀ ಹಾಲೇಶ್ ಇ.ಓ ನರೇಂದ್ರಕುಮಾರ್‌ರವರೇ ಬಂದು ರಸ್ತೆಯ ತೀರ್ಮಾನ ಮಾಡಿಕೊಡಿ:** ಗಂಗನಕೊಪ್ಪದ ನಿವಾಸಿಗಳು ಸುಮಾರು 15ವರ್ಷಗಳಿಂದ ರಸ್ತೆಯ ವಿಚಾರದಲ್ಲಿ ನರಕ ಯಾತನೆ ಅನುಭವಿಸುತ್ತಿದ್ದು ಗ್ರಾಮ ಪಂಚಾಯತಿಗೆ ಈಗಾಗಲೇ ದೂರು ನೀಡಲಾಗಿದ್ದರೂ ಅವರಿಂದ ಏನೂ ಮಾಡಲು ಸಾಧ್ಯವಾಗುತ್ತಿಲ್ಲ ದಕ್ಷ ಪ್ರಾಮಾಣಿಕ ಅಧಿಕಾರಿಯಾಗಿ ತಾಲೂಕು ಕಚೇರಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ತಹಸೀಲ್ದಾರ್ ರಶ್ಮೀ ಹಾಲೇಶ್ ತಾಲೂಕು ಪಂಚಾಯತಿ ಕಾರ್ಯನಿರ್ವಹಣಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ನರೇಂದ್ರಕುಮಾರ್‌ರವರು ಜನರ ಕಷ್ಟಗಳಿಗೆ ಸ್ಪಂದಿಸುತ್ತಿದ್ದು ಒಮ್ಮೆ ಗಂಗನಕೊಪ್ಪ ಗ್ರಾಮಕ್ಕೆ ಬಂದು ಗಂಗನಕೊಪ್ಪ ರಸ್ತೆ ನೋಡಿ ರಸ್ತೆಯ ತಿರ್ಮಾನ ಮಾಡಿ ಈ ರಸ್ತೆಗೆ ಮುಕ್ತಿ ಕೊಡಿಸಲೀ ಎಂದು ಅಲ್ಲಿನ ಗ್ರಾಮಸ್ಥರು ಕೇಳಿಕೊಂಡಿದ್ದಾರೆ.

ಹೊಸನಗರ ತಾಲೂಕು ಎಂ ಗುಡ್ಡೆಕೊಪ್ಪ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗಂಗನಕೊಪ್ಪ ರಸ್ತೆ ಸಂಪೂರ್ಣ ಹಾಳಾಗಿರುವುದು.

### ಶಾಸಕರಿಗೆ ಮನವಿ

ಎರಡು ವರ್ಷಗಳ ಹಿಂದೆ ರಸ್ತೆ ರಿಪೇರಿ ಮಾಡಿಸಿಕೊಡಿ ಎಂದು ಮಾಜಿ ಶಾಸಕ ಹರತಾಳು ಹಾಲಪ್ಪನವರು ಶಾಸಕರಾಗಿದ್ದ ಸಂದರ್ಭದಲ್ಲಿ ದಿ.ಗೋವಿಂದಪ್ಪನವರ ನೇತೃತ್ವದಲ್ಲಿ ಗಂಗನಕೊಪ್ಪ ಗ್ರಾಮಸ್ಥರು ಮನವಿ ಪತ್ರ ಸಲ್ಲಿಸಿದ್ದು ಇದರಿಂದ ಯಾವುದೇ ಪ್ರಯೋಜನವಾಗಿಲ್ಲ. ಬಡವರ ಬಂಧು ಜನರ ಕಷ್ಟ-ಸುಖಗಳಿಗೆ ಬಾಗಿಯಾಗುತ್ತಾರೆಂಬ ನಂಬಿಕೆಯಿಂದ ಸಾಗರ-ಹೊಸನಗರ ಶಾಸಕ ಬೇಳೂರು ಗೋಪಾಲಕೃಷ್ಣರವರಿಗೆ ಗಂಗನಕೊಪ್ಪ ನಿವಾಸಿ ಸುಪ್ರಕಾಶ ಭಟ್ ಹಾಗೂ ರಾಧಕೃಷ್ಣಭಟ್‌ರವರ ನೇತೃತ್ವದಲ್ಲಿ ಗಂಗನಕೊಪ್ಪದ ನಿವಾಸಿಗಳು ಮನವಿ ಪತ್ರ ಸಲ್ಲಿಸಿದ್ದು ರಸ್ತೆ ರಿಪೇರಿ ಮಾಡಿಸಿಕೊಡುವುದಾಗಿ ಭರವಸೆ ನೀಡಿದ್ದಾರೆ.

## ಧರ್ಮಗಳ ನಡುವಿನ ಶಾಂತಿ ಕಾಪಾಡಿ

**ಶಿವಮೊಗ್ಗ:** ಸಮಾಜದಲ್ಲಿ ಸರ್ವಧರ್ಮಗಳು ಸೃಷ್ಟಿಕರ್ತನಿಂದಲೇ ಉದ್ಭವಿಸಿವೆ. ಆದ್ದರಿಂದ ಶಾಂತಿ, ಸೌಹಾರ್ದತೆಯಿಂದ ಬಾಳಬೇಕು. ಇದರಿಂದ, ಸಮಾಜದಲ್ಲಿ ಧರ್ಮಗಳ ನಡುವಿನ ಶಾಂತಿ ಕಾಪಾಡಬಹುದು ಎಂದು ಅಹ್ಮದೀಯ ಮುಸ್ಲಿಂ ಮಹಿಳಾ ಸಂಘಟನೆ ಜಿಲ್ಲಾ ಅಧ್ಯಕ್ಷೆ ಅನಿಸ್ ಫಾತಿಮಾ ಹೇಳಿದರು. ಇತ್ತೀಚೆಗೆ ಅಹ್ಮದೀಯ ಮುಸ್ಲಿಂ ಮಹಿಳಾ ಸಂಘಟನೆ ವತಿಯಿಂದ ಆಯೋಜಿಸಿದ್ದ ಸರ್ವಧರ್ಮ ಸಮಾವೇಶ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಪರಸ್ಪರ ಗೌರವ, ಸಹಿಷ್ಣತೆ ಮತ್ತು ಹೃದಯಪೂರ್ವಕ ಸಂವಾದಗಳ ಮೂಲಕ ವಿಶ್ವ ಶಾಂತಿಯತ ದಾರಿ ತೋರಿಸುವ ಮಹತ್ತರ ಪ್ರಯತ್ನವನ್ನು ಈ ರೀತಿಯ ಕಾರ್ಯಕ್ರಮಗಳ ಮೂಲಕ ಮಾಡಬಹುದು ಎಂದರು. ಗ್ರಾಮಾಂತರ ಪೊಲೀಸ್ ಠಾಣೆ ಪೊಲೀಸ್ ಉಪನಿರೀಕ್ಷಕಿ ಎಲ್. ಸ್ವಪ್ನಾ, ಕುವೆಂಪು ವಿಶ್ವವಿದ್ಯಾಲಯ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮ ಸಂಯೋಜಕಿ ಡಾ. ಶುಭಾ ಮರವಂತೆ, ಕಟೀಲ್ ಅಶೋಕ್.ಪೈ ಮೆಮೋರಿಯಲ್ ಕಾಲೇಜು ಪ್ರಾಚಾರ್ಯೆ ಡಾ. ಕೆ. ಸಂಧ್ಯಾ ಕಾವೇರಿ, ಕುವೆಂಪು ವಿಶ್ವವಿದ್ಯಾಲಯ ದೂರ ಶಿಕ್ಷಣ ನಿರ್ದೇಶನಾಲಯ ಬೋಧನಾ ನಿರ್ದೇಶಕಿ ಡಾ. ಎಚ್. ಕೆ. ಹಸೀನಾ, ಶಿಕಾರಿಪುರ ಬ್ರಹ್ಮಕುಮಾರಿ ಈಶ್ವರ ವಿಶ್ವ ವಿದ್ಯಾಲಯ ಆಡಳಿತಾಧಿಕಾರಿ ರಾಜಯೋಗಿನಿ ಕುಮಾರಿ ಸ್ನೇಹಾ ಅಕ್ಕ, ಗುರುದ್ವಾರ, ಗುರುನಾನಕ್ ದರ್ಬಾರ್ ಸೇವಾದಾರ ಜಗದೀಶ್ ಕೌರ್, ಚಿತ್ರದುರ್ಗ ಜಿಲ್ಲಾಧ್ಯಕ್ಷೆ ಅಮ್ತುರ್ ರಹೀಮ್ ಮರ್ಝುರ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಯೋಧರ ಸೇವೆ ನಿತ್ಯ ಸ್ಮರಣೀಯ

**ಶಿವಮೊಗ್ಗ:** ದೇಶಕ್ಕಾಗಿ ಸೇವೆ ಸಲ್ಲಿಸಿದ ಯೋಧರು ಸೈನಿಕ ಅಧಿಕಾರಿಗಳು ನಿತ್ಯ ಸ್ಮರಣೀಯರು ಎಂದು ಶಿವಮೊಗ್ಗ ಇನ್ನರ್ ವೀಲ್ ಕ್ಲಬ್ ಶಿವಮೊಗ್ಗ ಪೂರ್ವ ಸಂಸ್ಥೆಯ ಅಧ್ಯಕ್ಷೆ ವಾಗ್ದೇವಿ ಬಸವರಾಜ್ ಅಭಿಪ್ರಾಯ ವ್ಯಕ್ತಪಡಿಸಿದರು. ರಾಜೇಂದ್ರ ನಗರದ ರೋಟರಿ ಸಭಾಂಗಣದಲ್ಲಿ 20 ವರ್ಷಗಳ ಕಾಲ ವಾಯು ಸೇನೆಯಲ್ಲಿ ಸೇವೆ ಸಲ್ಲಿಸಿ ದೇಶದ ವಿವಿಧ ಭಾಗಗಳಲ್ಲಿ ಅನೇಕ ಸೇವೆ ಸಲ್ಲಿಸಿದ ಮಹಾಬಲೇಶ್ವರ ಹೆಗಡೆ ದಂಪತಿಗಳಿಗೆ ಇನ್ನರ್ ವೀಲ್ ಕ್ಲಬ್ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಲಾಯಿತು. ಈ ವೇಳೆ ಮಾತನಾಡಿದ ಅವರು, ದೇಶಕ್ಕಾಗಿ ಹಗಲಿರಳು ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿ ಚಳಿ ಮಳೆ ಗಾಳಿಯಲ್ಲಿ ಯಾವುದನ್ನು ಲೆಕ್ಕಿಸದೆ ಗಡಿ ಭಾಗಗಳಲ್ಲಿ ದೇಶವನ್ನು ಕಾಯುತ್ತಿರುವ ಯೋಧರಿಗೆ ದೊಡ್ಡದೊಂದು ಸಲಾಂ ಅರ್ಪಿಸುತ್ತಿದ್ದೇವೆ ಎಂದು ನುಡಿದರು. ಮಹಾಬಲೇಶ್ವರ ಹೆಗಡೆಯವರು ಮಾತನಾಡಿ, ದೇಶ ಸೇವೆಯಲ್ಲಿ ಮಾಡಿದ ಕೆಲಸ ನಿಜವಾಗು ತೃಪ್ತಿ ತಂದಿದೆ. ಇಂತಹ ಪವಿತ್ರವಾದ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದು ತುಂಬಾ ಹೆಮ್ಮೆಯಾಗಿದೆ. ಸಮಾರಂಭದಲ್ಲಿ ಇನ್ನರ್ ವೀಲ್ ಮಾಜಿ ಅಧ್ಯಕ್ಷೆ ಬಿಂದು ವಿಜಯ ಕುಮಾರ್, ಶ್ವೇತಾ ಆಶಿತ್, ಮಧುರ ಮಹೇಶ್, ಜಯಂತಿ ವಾಲಿ, ಲತಾ ಸೋಮಣ್ಣ, ವೇದ ನಾಗರಾಜ್, ವಿಜಯ ರಾಯ್ಕರ್, ರಾಜೇಶ್ವರಿ ಪ್ರತಾಪ್, ವೀಣಾ ಹರ್ಷ, ನಮಿತಾ ಸೂರ್ಯನಾರಾಯಣ್, ಜ್ಯೋತಿ ಸುಬ್ಬೆಗೌಡ, ವಿನೋದಾದಳವೆ, ವಾಣಿ ಪ್ರವೀಣ್, ಗೀತಾ ಬಸವ ಕುಮಾರ್, ಪೂರ್ಣಿಮಾ ನರೇಂದ್ರ, ಲಾವಣ್ಯ ಶಶಿಧರ್, ಸುಮಾ ರವಿ, ಆಶಾ ಶ್ರೀಕಾಂತ್ ಇದ್ದರು.

## ವಿದ್ಯಾರ್ಥಿ ಸಾಂಸ್ಕೃತಿಕ ಸ್ಪರ್ಧೆಗಳು ಆ.10ಕ್ಕೆ

**ಶಿವಮೊಗ್ಗ:** ಸಹ್ಯಾದ್ರಿ ಕಲಾ ಕಾಲೇಜಿನಲ್ಲಿ ಆ.10ರಂದು ಬೆಳಿಗ್ಗೆ 9ಗಂಟೆಗೆ ಅಂತರ ಕಾಲೇಜು ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಾಂಸ್ಕೃತಿಕ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಪ್ರಾಚಾರ್ಯ ಡಾ.ಸೆಯ್ಯದ್ ಸನ್ನಾವುಲ್ಲಾ ತಿಳಿಸಿದ್ದಾರೆ. ಅಂತರ ಕಾಲೇಜು ಮಟ್ಟದಲ್ಲಿ ನಡೆಯುವ ಈ ಸಾಂಸ್ಕೃತಿಕ ಸ್ಪರ್ಧೆಯನ್ನು ಸಹ್ಯಾದ್ರಿ ಸಿರಿ-2ಕೆ24 ಎಂಬ ಹೆಸರಿನಲ್ಲಿ ಆಯೋಜಿ ಸಲಾಗಿದ್ದು, ಕುವೆಂಪು ವಿವಿ ವ್ಯಾಪ್ತಿಯ ಪದವಿ ಕಾಲೇಜು ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶವಿದೆ. ಒಂದು ಕಾಲೇಜಿನಿಂದ 15 ವಿದ್ಯಾರ್ಥಿಗಳ ಭಾಗವಹಿಸಬಹುದಾಗಿದೆ. ಪ್ರತಿ ಕಾಲೇಜಿಗೆ ಪ್ರವೇಶ ಶುಲ್ಕ 500ರು. ನಿದಿಗಪಡಿಸಲಾಗಿದೆ. ವಿಜೇತವಾದ ಕಾಲೇಜು ತಂಡಕ್ಕೆ ಸಮಗ್ರ ಪ್ರಶಸ್ತಿ ನೀಡಲಾಗುವುದು. ಸ್ಪರ್ಧೆಗಳು ಜಾನಪದ ಸಮೂಹ ಗಾಯನ, ಜಾನಪದ ಸಮೂಹ ನೃತ್ಯ ಆಶು ಭಾಷಣ, ಮುಖವರ್ಣ ಕಲೆ, ಛಾಯಾಗ್ರಹಣ ಮತ್ತು ವೀಡಿಯೋಗ್ರಫಿ ವಿಭಾಗಳಲ್ಲಿ ನಡೆಯಲಿದೆ. ಜನಪದ ಸಮೂಹ ಗಾಯನ ತಂಡದಲ್ಲಿ 5 ಜನರಿಗೆ ಅವಕಾಶವಿದೆ ಮತ್ತಯ 5 ನಿ. ಮಾತ್ರ. ತಮಟೆ, ಖಂಜಾರ, ತಾಳ, ಗೆಜ್ಜೆ ವಾದ್ಯಗಳನ್ನು ಬಳಸಬೇಕು. ನೃತ್ಯದಲ್ಲಿ 6ಜನರು ಭಾಗವಹಿಸಬಹುದಾಗಿದ್ದು, 5 ನಿ.ಮಾತ್ರ, ನೃತ್ಯವು ಭಾರತೀಯ ಸಂಸ್ಕೃತಿಯನ್ನು ವೈಭವಿಕರಿಸುವಂತಿರಬೇಕು. ಹೆಚ್ಚಿನ ವಿವರಕ್ಕೆ ವಿದ್ಯಾರ್ಥಿ ಕ್ಷೇಮಾಧಿಕಾರಿ ಡಾ.ಮಂಜುನಾಥ್ ಕೆ.ಎನ್. ಅವರನ್ನು ಸಂಪರ್ಕಿಸಬಹುದಾಗಿದೆ ಅಥವಾ ಮೊ.9972480254ನ್ನು ಸಂಪರ್ಕಿಸಬಹುದು.

## ಕಳಪೆ ಕಾಮಗಾರಿ: ಕ್ರಮಕ್ಕೆ ರೈತರ ಆಗ್ರಹ

**ಸಾಗರ:** ನೂತನವಾಗಿ ನಿರ್ಮಿಸಿರುವ ತಾಲೂಕು ಕಚೇರಿ ಕಟ್ಟಡ ಆಡಳಿತ ಸೌಧದ ಕಳಪೆ ಕಾಮಗಾರಿ ನಡೆಸಿದ ಗುತ್ತಿಗೆದಾರನ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಹಾಗೂ ರೈತರ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಮಂಗಳವಾರ ಶಿವಮೊಗ್ಗ ಜಿಲ್ಲಾ ರೈತ ಸಂಘ (ಡಾ. ಎಚ್.ಗಣಪತಿಯಪ್ಪ ಸ್ಥಾಪಿತ) ವತಿಯಿಂದ ತಹಸೀಲ್ದಾರ್ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು. ಸಂಘದ ಜಿಲ್ಲಾಧ್ಯಕ್ಷ ದಿನೇಶ್ ಶಿರವಾಳ ಮಾತನಾಡಿ, ಸುಮಾರು 13 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಲಾಗಿರುವ ಆಡಳಿತ ಸೌಧ ಸಂಪೂರ್ಣ ಕಳಪೆ ಕಾಮಗಾರಿಯಿಂದ ಕೂಡಿದ್ದು, ಹತ್ತು ಕೋಟಿ ರು. ಕಟ್ಟಡ ನಿರ್ಮಾಣವಾಗುತ್ತಿರುವ ಸಂದರ್ಭದಲ್ಲಿಯೆ ರೈತ ಸಂಘ ಕಟ್ಟಡ ಸೋರುತ್ತಿರುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರೂ ಕೂಡಾ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಆಡಳಿತ ಸೌಧದಲ್ಲಿ ಅಧಿಕಾರಿ ನೌಕರರು ಛತ್ರಿ ಹಿಡಿದು ಕುಳಿತುಕೊಳ್ಳುವ ಸ್ಥಿತಿ ಇದೆ. ತಕ್ಷಣ ಕಳಪೆ ಕಾಮಗಾರಿ ಮಾಡಿದ ಗುತ್ತಿಗೆದಾರನನ್ನು ಕಪ್ಪುಪಟ್ಟಿಗೆ ಸೇರಿಸಬೇಕು. ಸಂಬಂಧಪಟ್ಟ ಎಂಜಿನಿಯರ್ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ವಿಪರೀತ ಮಳೆಯಿಂದ ಮನೆ ಕಳೆದುಕೊಂ ಡವರಿಗೆ ಸರಕಾರ ಕೇವಲ 1.20 ಲಕ್ಷ ರು. ಪರಿಹಾರ ನೀಡುತ್ತಿದೆ. ಇದು ಅತ್ಯಂತ ಕಡಿಮೆಯಾಗಿದೆ. ಸರಕಾರ ಐದು ಲಕ್ಷ ರು. ಪರಿಹಾರ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

# ...ಹಿಂಸಾ ದಳ್ಳುರಿ

← ಮೊದಲಪುಟದಿಂದ

ಮಾಜಿ ಪ್ರಧಾನಿ ಶೇಖ್ ಹಸೀನಾ ಮನವಿ ಮೇರೆಗೆ ಮಾನವೀಯ ದೃಷ್ಟಿಯಿಂದ ಭಾರತ ಆಶ್ರಯ ಕೊಟ್ಟಿದೆ ಎಂದು ಸ್ಪಷ್ಟಪಡಿಸಿದರು. ಹಸೀನಾ ದಿಢೀರ್ ದೇಶ ತೊರೆದು ಬಂದಿರುವುದರಿಂದ ಆಘಾತದಲ್ಲಿದ್ದಾರೆ. ಚೇತರಿಸಿಕೊಂಡು ಮುಂದಿನ ಕ್ರಮದ ಬಗ್ಗೆ ಯೋಚಿಸಲು ಅವರಿಗೆ ಅವಕಾಶ ಕೊಡಬೇಕು ಎಂದು ಜೈಶಂಕರ್ ತಿಳಿಸಿದರು.

**ವಿಮಾನ ವಾಪಸ್:** ಢಾಕಾದಿಂದ ಶೇಖ್ ಹಸೀನಾರನ್ನು ಹೊತ್ತು ಬಂದ ಬಾಂಗ್ಲಾ ವಾಯುಪಡೆ ವಿಮಾನ ವಾಪಸಾಗಿದೆ.ಹಸೀನಾ ಅವರನ್ನು ಹೊತ್ತ ವಿಶೇಷ ವಿಮಾನ ತ್ರಿಪುರದ ಅಗರ್ತಲದಲ್ಲಿ ಇಳಿದಿತ್ತು. ಅಲ್ಲಿಂದ ಅವರು ಭಾರತೀಯ ವಾಯುಪಡೆ ವಿಶೇಷ ವಿಮಾನದಲ್ಲಿ ದೆಹಲಿ ತಲುಪಿದ್ದರು.

**ಹಸೀನಾ ಬಾಂಗ್ಲಾಗೆ ವಾಪಸಾಗುವುದಿಲ್ಲ:** ವಿದೇಶದಲ್ಲಿರುವ ಶೇಖ್ ಹಸೀನಾರ ಪುತ್ರ ಸಾಜೀಬ್ ವಾಜೇದ್ ಪ್ರತಿಕ್ರಿಯೆ ನೀಡಿ, ಬಡದೇಶವಾಗಿದ್ದ ಬಾಂಗ್ಲಾದ ಸಮಗ್ರ ಅಭಿವೃದ್ಧಿಗೆ ಶ್ರಮಿಸಿದ ತಮ್ಮ ತಾಯಿಗೆ ಈ ಬೆಳವಣಿಗೆಯಿಂದ ತೀವ್ರ ಆಘಾತವಾಗಿದೆ. ತಮ್ಮ ಜೀವಕ್ಕೆ ಸುರಕ್ಷತೆ ಇಲ್ಲದ ಕಾರಣ ಅವರು ಇನ್ನೆಂದೂ ದೇಶದ ರಾಜಕಾರಣಕ್ಕೆ ವಾಪಸಾಗುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

# ಸಿಎಂ ವರ್ಚಸ್ಸು ಕುಗ್ಗಿಸುವ ಪ್ರಯತ್ನ ನಡೆದಿದೆ: ಶಾಸಕ ಲಕ್ಷ್ಮಣ ಸವದಿ

ಡಿ.ಕೆ.ಶಿವಕುಮಾರ್ ಹಾಗೂ ಎಚ್.ಡಿ. ಕುಮಾರಸ್ವಾಮಿ ಅವರವರೇ ಅವರವರ ಆಸ್ತಿಗಳ ಬಗ್ಗೆ ಹೇಳಿಕೊಳ್ಳುತ್ತಿದ್ದಾರೆ. ಇದರಲ್ಲಿ ನಾನು ಏನೂ ಹೇಳುವುದಿಲ್ಲ. ಸಂಪುಟ ಪುನಾರಚನೆಯ ತೀರ್ಮಾನವನ್ನು ಹೈಕಮಾಂಡ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿವೇಚನೆಗೆ ಬಿಟ್ಟಿದ್ದು. ನಾನು ಹೈಕಮಾಂಡ್ ಮತ್ತು ಸಿಎಂ ನಿರ್ಧಾರಕ್ಕೆ ಬದ್ಧ.

– ಲಕ್ಷ್ಮಣ ಸವದಿ ಶಾಸಕ

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವರ್ಚಸ್ಸನ್ನು ಕುಗ್ಗಿಸಲು ಮುಡಾ ಅಕ್ರಮದಲ್ಲಿ ಅವರ ಹೆಸರನ್ನು ತರಲಾಗುತ್ತಿದೆ ಎಂದು ಶಾಸಕ ಲಕ್ಷ್ಮಣ ಸವದಿ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಡಾದಲ್ಲಿ ಅಕ್ರಮ ನಡೆದಿರುವುದು ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಅಲ್ಲ. ಇದು 20 ವರ್ಷಗಳ ಹಳೆಯ ಕೇಸು. ಈಗೇಕೆ ಇದನ್ನು ಮುನ್ನಲೆಗೆ ತಂದರು? ಅವರು ಅಭಿಯೋಜನೆಗೆ ಕೇಳುತ್ತಾರೆ ಅಂತ ಸಿದ್ದರಾಮಯ್ಯ ಅವರಿಗೆ ನೋಟಿಸ್ ಯಾಕೆ ಕೊಟ್ರು? ಹಿಂದುಳಿದ ವರ್ಗದ ಪ್ರಭಾವಿಯಾಗಿರುವ ಸಿದ್ದರಾಮಯ್ಯನವರ ವರ್ಚಸ್ಸು ಕುಗ್ಗಿಸಲು ಸಂಚು ನಡೆದಿದೆ ಎಂದು ಟೀಕಿಸಿದರು.

ರಾಜ್ಯಪಾಲರು ಅಧಿಕಾರ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆಂದು ಜನರೇ ಮಾತನಾಡಿಕೊಳ್ಳುತ್ತಿದ್ದಾರೆ. ರಾಜ್ಯಪಾಲರು ಅನುಭವಿಗಳು. ಕೇಂದ್ರದಲ್ಲಿ ಅನೇಕ ವರ್ಷಗಳ ಕಾಲ ಮಂತ್ರಿಯಾಗಿ ಕೆಲಸ ಮಾಡಿದವರು. ನಾನು ಅವರನ್ನು ಹತ್ತಿರದಿಂದ ನೋಡಿದ್ದೇನೆ. ಹಾಗಾಗಿ ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಡಲ್ಲ ಅನ್ನುವ ವಿಶ್ವಾಸವಿದೆ ಎಂದರು.

ಬಿಜೆಪಿಯವರಿಗೆ ಪಾದಯಾತ್ರೆ ಮಾಡುವ ನೈತಿಕ ಹಕ್ಕಿಲ್ಲ. ಪಾದಯಾತ್ರೆ ಮಾಡುತ್ತಿರುವವರು ನೂರು ಪಟ್ಟು ಇವರಿಗಿಂತ ಅಕ್ರಮ ಮಾಡಿದ್ದಾರೆ ಎಂದು ಬಸನಗೌಡ ಪಾಟೀಲ್ ಯತ್ನಾಳ್ ಅವರೇ ಹೇಳಿದ್ದಾರೆ. ಹಿಂದೆ ಅಧಿಕಾರದಲ್ಲಿದ್ದಾಗ ಬಿಜೆಪಿಯವರು ಏನು ಮಾಡಿದ್ದರು ಎಂಬುದು ಗೊತ್ತಿದೆ. ಒಂದು ಬೆರಳು ತೋರಿಸಿದಾಗ ನಾಲ್ಕು ಬೆರಳು ನಮ್ಮ ಕಡೆ ತೋರಿಸುತ್ತಿರುತ್ತವೆ. ಬಿಜೆಪಿಯವರ ಘೋಷಣೆ, ಆರೋಪ ನೋಡಿದರೆ ನಗು ಬರುತ್ತಿದೆ ಎಂದರು.

# ಮಲೆನಾಡು ಭಾಗದಲ್ಲಿ ಮತ್ತೆ ಕಾಡಾನೆಯ ದಂಡು ಪ್ರತ್ಯಕ್ಷ

**ಚಿಕ್ಕಮಗಳೂರು:** ಮಲೆನಾಡು ಭಾಗದಲ್ಲಿ ಮತ್ತೆ ಕಾಡಾನೆಗಳ ಹಾವಳಿ ಹೆಚ್ಚಾಗಿದ್ದು, ಆತಂಕವನ್ನು ಸೃಷ್ಟಿಸಿದೆ. ಕಾಡಿನಿಂದ ನಾಡಿಗೆ ನುಗ್ಗಿರುವ ಕಾಡಾನೆಗಳು ನಡು ರಸ್ತೆಗೆ ಅಡ್ಡಹಾಕಿ ಭಯ ಹುಟ್ಟಿಸುತ್ತಿದೆ. ಚಿಕ್ಕಮಗಳೂರಿನ ಮೂಡಿಗೆರೆ ತಾಲೂಕಿನ ಸಾಲ್ಮರ ಗ್ರಾಮದ ಬಳಿ ಕಾಡಾನೆ ಹಿಂಡು ಪ್ರತ್ಯಕ್ಷಗೊಂಡಿದೆ. ಸುಮಾರು 18 ಕಾಡಾನೆಗಳು ಒಂದು ತೋಟದಿಂದ ಮತ್ತೊಂದು ತೋಟಕ್ಕೆ ಸವಾರಿ ಮಾಡುತ್ತಿದೆ. ಕಾಡಾನೆಗಳು ರಸ್ತೆ ದಾಟುವಾಗ ಗ್ರಾಮಸ್ಥರು ಆನೆಗಳು ಎಷ್ಟಿವೆ ಎಂದು ಲೆಕ್ಕ ಹಾಕಿದ್ದಾರೆ. ಹೊಸಪುರ, ಕಸ್ಕೆ ಬೈಲು, ಜಿ ಹೊಸಳ್ಳಿ ಗ್ರಾಮಸ್ಥರಲ್ಲಿ ಆತಂಕ ಹೆಚ್ಚಿದೆ. ವಾಹನ ಸವಾರರು, ತೋಟಕ್ಕೆ ತರಳುವ ಕಾರ್ಮಿಕರಿಗೆ ಅರಣ್ಯ ಇಲಾಖೆ ಎಚ್ಚರಿಕೆ ನೀಡಿದೆ. ಕಳೆದ 20 ದಿನಗಳಿಂದ 18 ಆನೆಗಳು ನಿರಂತರ ದಾಳಿ ಮಾಡುತ್ತಿವೆ.

## ರಾಜ್ಯದ ಜಲಾಶಯಗಳ ಮಟ್ಟ

| | ಜಲಾಶಯ | ಗರಿಷ್ಠ ಮಟ್ಟ | ಇಂದಿನ ಮಟ್ಟ | ಒಳಹರಿವು |
|---|---|---|---|---|
| 1. | ಕೆಆರ್‌ಎಸ್ | 124.80 | 123.75 | 16400 |
| 2. | ಕಬಿನಿ | 2284 | 2283.04 | 8547 |
| 3. | ಹಾರಂಗಿ | 2869 | 2855.79 | 6889 |
| 4. | ಹೇಮಾವತಿ | 2922 | 2921.95 | 11399 |
| 5. | ಆಲಮಟ್ಟಿ | 1633 | 1623.14 | 84696 |
| 6. | ತುಂಗಭದ್ರಾ | 1704.81 | 1696.67 | 302660 |
| 7. | ನಾರಾಯಣಪುರ | 1615 | 1610.71 | 208540 |

# ಒತ್ತಡದಲ್ಲೇ ಕೆಲಸ ಮಾಡಬೇಕು

**ಕೊಪ್ಪಳ:** ಪ್ರತಿದಿನ ಪೊಲೀಸ್ ಅಧಿಕಾರಿಗಳು ಕಲೆಕ್ಷನ್ ಮಾಡ್ಲೇಬೇಕು. ಬೆಂಗಳೂರಲ್ಲಿ ಪ್ರತಿದಿನ ಕಲೆಕ್ಷನ್ ದುಡ್ಡು ಬಂದಿಲ್ಲ ಅಂದ್ರೆ ಸಂಜೆಗೆ ಪೊಲೀಸರು ವಿಲಿವಿಲಿ ಒದ್ದಾಡುತ್ತಾರೆ ಎಂದು ಮಾಜಿ ಐಪಿಎಸ್ ಅಧಿಕಾರಿ ಭಾಸ್ಕರರಾವ್ ಬೇಸರ ಹೊರಹಾಕಿದ್ದಾರೆ.

ಕಾರಟಗಿ ತಾಲೂಕಿನ ಸೋಮನಾಳದಲ್ಲಿ ಪಿಎಸ್‌ಐ ಪರಶುರಾಮ್ ಸಾವಿನ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಸರಕಾರದಲ್ಲಿ ಎಲ್ಲಾ ಅಧಿಕಾರಿಗಳು ಒತ್ತಡದಲ್ಲೇ ಕೆಲಸ ಮಾಡಬೇಕು. ಸಿಎಂ ಹಾಗೂ ಗೃಹಸಚಿವರ ಒತ್ತಡದಲ್ಲೇ ಕೆಲಸ ಮಾಡ್ತಿದ್ದಾರೆ. ಮೊದಲು ಶಾಸಕರು ಹಾಗೂ ಸಚಿವರು ವರ್ಗಾವಣೆ ವಿಚಾರವಾಗಿ ಮನವಿ ಮಾಡ್ತಿದ್ರು. ಈಗ ಅದು ದಂಧೆಯಾಗಿ ಬದಲಾಗಿದೆ ಎಂದು ಆರೋಪಿಸಿದ್ದಾರೆ. ಈ ಬೆಳವಣಿಗೆಯನ್ನು ಸಣ್ಣಪುಟ್ಟವರು ತಡೆಯಲು ಆಗಲ್ಲ. ದೊಡ್ಡವರಿಂದಲೇ ಆಗಬೇಕು. ಈಗ ಒಂದು ರೂಟ್ ಮ್ಯಾಪ್ ಹಾಕಲಾಗಿದೆ. ಇಲಾಖೆಯಲ್ಲಿ ದಿನದ ವಸೂಲಿ ಶುರುವಾಗಿದೆ. ಪ್ರತಿದಿನ ಪೊಲೀಸ್ ಅಧಿಕಾರಿಗಳು ಕಲೆಕ್ಷನ್ ಮಾಡಲೇಬೇಕು. ಈ ವ್ಯವಸ್ಥೆ ನಾನು ಇದ್ದಾಗಲೂ ಇತ್ತು, ಈಗಲೂ ಇದೆ. ಮುಂದೆಯೂ ಇರಲಿದೆ ಎಂದು ಭಾಸ್ಕರರಾವ್ ಕಿಡಿಕಾರಿದರು.

# ಕಾನೂನು ಹೋರಾಟಕ್ಕೆ ವೇದಿಕೆ ಸಜ್ಜು

← ಮೊದಲಪುಟದಿಂದ

ಹೀಗಿರುವಾಗ ಯಾವುದೋ ಖಾಸಗಿ ದೂರಿನ ಮೇಲೆ ಪ್ರಾಸಿಕ್ಯೂಷನ್‌ಗೆ ಅವಕಾಶ ನೀಡಲು ಬರುವುದಿಲ್ಲ ಎನ್ನುವ ಸ್ಪಷ್ಟ ಅಭಿಪ್ರಾಯವನ್ನು ನೀಡಿದ್ದಾರೆ. ಆದ್ದರಿಂದ ಈ ಪ್ರಕರಣವನ್ನು ಇನ್ನಷ್ಟು ಗಟ್ಟಿಯಾಗಿ ಎದುರಿಸಲು ಕಾಂಗ್ರೆಸ್ ನಾಯಕರು ಸಜ್ಜಾಗಿದ್ದಾರೆ ಎನ್ನಲಾಗಿದೆ.

**ಕಾನೂನು ಹೋರಾಟಕ್ಕೆ ಸಿದ್ಧತೆ:** ಈ ಎಲ್ಲವನ್ನೂ ಮೀರಿ ಒಂದು ವೇಳೆ ರಾಜ್ಯಪಾಲರು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಅಭಿಯೋಜನೆಗೆ ಅವಕಾಶ ನೀಡಿದರೆ, ರಾಜ್ಯಪಾಲರ ನಡೆಯನ್ನು ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್‌ಗಳಲ್ಲಿ ಪ್ರಶ್ನಿಸುವುದಕ್ಕೂ ಬೇಕಾದ ಸಿದ್ಧತೆಗಳನ್ನು ಸಿದ್ದರಾಮಯ್ಯ ಹಾಗೂ ಆಪ್ತರು ಮಾಡಿಕೊಂಡಿದ್ದಾರೆ. ಈ ಪ್ರಕರಣವನ್ನೇ ಮುಂದಿಟ್ಟುಕೊಂಡು, 'ಕೇಂದ್ರ ಸರಕಾರ ಅಧಿಕಾರ ದುರ್ಬಳಕೆ' ಮಾಡಿಕೊಳ್ಳುತ್ತಿದೆ ಎನ್ನುವ ಸಂದೇಶವನ್ನು ರವಾನಿಸುವ ಲೆಕ್ಕಾಚಾರದಲ್ಲಿ ಕಾಂಗ್ರೆಸಿಗರಿದ್ದಾರೆ ಎಂದು ಮೂಲಗಳು ತಿಳಿಸಿವೆ.

**ಬಿಎಸ್‌ವೈ ಪ್ರಕರಣಕ್ಕೂ ಇದಕ್ಕೂ ವ್ಯತ್ಯಾಸವಿದೆ:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅವಕಾಶ ನೀಡಬೇಕು ಎನ್ನುವುದನ್ನು ಸಮರ್ಥಿಸಿಕೊಳ್ಳುವಾಗ ಬಹುತೇಕರು ಯಡಿಯೂರಪ್ಪ ಅವರ ಪ್ರಕರಣವನ್ನು ಉಲ್ಲೇಖಿಸುತ್ತಿದ್ದಾರೆ. ಆದರೆ ಯಡಿಯೂರಪ್ಪ ಅವರ ಪ್ರಕರಣದಲ್ಲಿ ಲೋಕಾಯುಕ್ತ ಸಂತೋಷ್ ಹೆಗ್ಡೆ ಅವರ ವರದಿಯಿತ್ತು. ಆದರೆ ಸಿದ್ದರಾಮಯ್ಯ ಅವರ ಮುಡಾ ಪ್ರಕರಣದಲ್ಲಿ ಯಾವುದೇ ತನಿಖಾ ಸಂಸ್ಥೆ ಅಥವಾ ಪೊಲೀಸರ ವರದಿಗಳಿಲ್ಲ. ಹೀಗಿರುವಾಗ ಖಾಸಗಿ ದೂರನ್ನೇ ಮುಂದಿಟ್ಟುಕೊಂಡು ಅಭಿಯೋಜನೆಗೆ ಅವಕಾಶ ನೀಡಿದರೆ, ಕೆಟ್ಟ ಸಂಪ್ರದಾಯಕ್ಕೆ ನಾಂದಿ ಹಾಡಿದಂತಾಗುತ್ತದೆ ಎನ್ನುವುದು ಕಾನೂನು ತಜ್ಞರ ಅಭಿಪ್ರಾಯವಾಗಿದೆ.

## ಎಚ್ಚರಿಕೆಯ ಹೆಜ್ಜೆಯಿಡಲು ಗೆಹ್ಲೋಟ್ ತೀರ್ಮಾನ

ಹಲವು ರಾಜ್ಯಗಳಲ್ಲಿ ರಾಜ್ಯಪಾಲರು ಹಾಗೂ ಸರಕಾರದ ನಡುವಿನ ತಿಕ್ಕಾಟಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲಿ ರಾಜ್ಯಪಾಲರಿಗೆ ಹಿನ್ನಡೆಯಾಗಿರುವುದರಿಂದ, ಈ ಪ್ರಕರಣದಲ್ಲಿ ಎಚ್ಚರಿಕೆಯ ಹೆಜ್ಜೆಯಿಡಲು ಥಾವರ್‌ಚಂದ್ ಗೆಹ್ಲೋಟ್ ತೀರ್ಮಾನಿಸಿದ್ದಾರೆ. ಖಾಸಗಿ ದೂರನ್ನು ಆಧರಿಸಿ ಸಿಎಂ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅವಕಾಶ ನೀಡುವ ವಿಚಾರದಲ್ಲಿ ಗೊಂದಲವಿದ್ದು ಈ ಹಿನ್ನೆಲೆಯಲ್ಲಿ ಪರಿಷ್ಕೃತ ನೋಟಿಸ್ ಜಾರಿಗೆ ರಾಜ್ಯಪಾಲರು ಮುಂದಾಗಿದ್ದಾರೆ ಎನ್ನಲಾಗಿದೆ. ಇದೇ ವೇಳೆ ಸಂಸತ್ ಅಧಿವೇಶನ ನಡೆಯುತ್ತಿರುವಾಗ ಪ್ರಾಸಿಕ್ಯೂಶನ್‌ಗೆ ಅವಕಾಶ ನೀಡಿದರೆ ಅಲ್ಲಿ ಕೋಲಾಹಲವಾಗುವುದು ನಿಶ್ಚಿತ. ರಾಜಕೀಯ ಕಾರಣಕ್ಕಾಗಿ ಕಾನೂನುಬದ್ಧವಾಗಿ ಚುನಾಯಿತವಾದ ಸರ್ಕಾರವನ್ನು ಅಸ್ಥಿರಗೊಳಿಸಲು ಸಂಘಟಿತ ಪ್ರಯತ್ನ ಮಾಡಲಾಗುತ್ತಿದೆ ಎನ್ನುವುದನ್ನು ಮುಂದಿಟ್ಟುಕೊಂಡು ಹೋರಾಟ ಮಾಡಿದರೆ ಕಾಂಗ್ರೆಸ್‌ಗೆ ಲಾಭವಾಗಲಿದೆ ಎನ್ನುವ ಮಾತುಗಳು ಕೇಳಿಬರುತ್ತಿವೆ.

# ಇನ್ಫಿಗೆ 38 ಸಾವಿರ ಕೋಟಿ ರೂ ಜಿಎಸ್‌ಟಿ ನೋಟಿಸ್

← ಮೊದಲಪುಟದಿಂದ

ಈ ಸಂಬಂಧ ಕಂಪನಿ ಹಣಕಾಸು ವಿಭಾಗದ ಅಧಿಕಾರಿಗಳು ಬೆಂಗಳೂರಿನ ಡಿಜಿಜಿಐ ಕಚೇರಿಯಲ್ಲಿ ಚರ್ಚೆ ನಡೆಸಿದ್ದು, ನೋಟಿಸ್‌ಗೆ ಪ್ರತಿಕ್ರಿಯೆ ದಾಖಲಿಸಲು 10 ದಿನಗಳ ಕಾಲಾವಕಾಶ ನೀಡುವಂತೆ ಕೋರಿದ್ದರು. ಇದೀಗ ಈ ವಿಚಾರದಲ್ಲಿ ಯಾವುದೇ ರಿಯಾಯಿತಿ ನೀಡಲು ಸಾಧ್ಯವಿಲ್ಲ ಎಂದು ಸರಕಾರ ಹೇಳಿರುವುದಾಗಿ ಮೂಲಗಳು ತಿಳಿಸಿವೆ.

2017ರಿಂ ದ 2022ರವರೆಗೆ ಕಂಪನಿಯು ವಿದೇಶಗಳಲ್ಲಿರುವ ತನ್ನ ಕಚೇರಿ ಮೂಲಕ ನಡೆಸಲಾದ ಸೇವಾ ಕಾರ್ಯಾಚರಣೆಗಳಿಗೆ ಭಾರತವು 4 ಶತಕೋಟಿ ಅಮೆರಿಕನ್ ಡಾಲರ್‌ನಷ್ಟು ತೆರಿಗೆ ವಿಧಿಸಿದೆ. ಈ ಮೊತ್ತವು ಜೂನ್ 30ಕ್ಕೆ ಕೊನೆಗೊಂಡ ತ್ರೈ ಮಾಸಿಕದಲ್ಲಿನ ಒಟ್ಟು ಆದಾಯದ ಶೇ 85ರಷ್ಟಾಗಿದೆ. ಆರ್ಥಿಕ ವರ್ಷ 2017–18ರ ಜಿಎಸ್‌ಟಿ ತೆರಿಗೆಗೆ ಸಂಬಂಧಿಸಿ 3898 ಕೋಟಿ ರು. ಮೊತ್ತಕ್ಕೆ ಅಂತಿಮಗೊಳಿಸಲಾಗಿತ್ತು.

ಕೇಂದ್ರ ಹಾಗೂ ರಾಜ್ಯಗಳಿಗೆ ಸಂಬಂಧಿಸಿ ಇದ್ದ ಎಲ್ಲಾ ಬಾಕಿಯನ್ನೂ ಪಾವತಿಸಲಾಗಿದೆ ಎಂದು ಕಂಪನಿ ಆ. 3ರಂದು ಕಂಪನಿ ಷೇರುಪೇಟೆಗೆ ಮಾಹಿತಿ ನೀಡಿತ್ತು.

ಈ ಬಗ್ಗೆ ಇನ್ಫೋಸಿಸ್ ಹಾಗೂ ಕೇಂದ್ರ ಹಣಕಾಸು ಸಚಿವಾಲಯ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಇನ್ಫಿಗೆ ನೀಡಿದ ಜಿಎಸ್‌ಟಿ ನೋಟಿಸ್‌ಗೆ ಗುರುವಾರ ಐಟಿ ಕಂಪನಿಗಳ ಒಕ್ಕೂಟ ನಾಸ್ಕಾಂ ಆಕ್ಷೇಪ ವ್ಯಕ್ತಪಡಿಸಿತ್ತು. ಇಂಥ ನೋಟಿಸ್‌ಗಳು ಕಂಪನಿಗಳನ್ನು ಆತಂತಕಕ್ಕೆ ದೂಡುತ್ತವೆ ಎಂದು ತಿಳಿಸಿತ್ತು.

# ..4ನೇ ದಿನಕ್ಕೆ ಯಾತ್ರೆ

← ಮೊದಲಪುಟದಿಂದ

ನಾವು ಮಾಡಿರುವ ಆರೋಪಗಳನ್ನು ಒಪ್ಪದಿದ್ದರೂ ಪರವಾಗಿಲ್ಲ, ನಿಮ್ಮ ಮೈತ್ರಿ ನಾಯಕರೇ ಮಾಡಿರುವ ಆರೋಪಗಳನ್ನು ನಂಬಿ ಎಂದು ವ್ಯಂಗ್ಯವಾಡಿದರು.

**ಸಿಎಂ ಫುಲ್ ರಿಲ್ಯಾಕ್ಸ್:** ಒಂದೆಡೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿಗರು ಪಾದಯಾತ್ರೆ ನಡೆಸುತ್ತಿದ್ದರೆ, ಮೈಸೂರಿನಲ್ಲಿರುವ ಸಿದ್ದರಾಮಯ್ಯ ಇದ್ಯಾವುದಕ್ಕೂ ತಲೆಕೆಡಿಸಿಕೊಳ್ಳದೇ ಫುಲ್ ರಿಲ್ಯಾಕ್ಸ್ ಮೂಡಲ್ಲಿದ್ದಾರೆ. ಮಂಗಳವಾರ ಸಂಜೆ ಶಿಷ್ಟಾಚಾರವನ್ನು ತ್ಯಜಿಸಿ, ಹುಣಸೂರಿನ ಮಾಜಿ ಶಾಸಕ ಎಚ್.ಪಿ.ಮಂಜುನಾಥ್ ಅವರ ಜತೆ ಕಾರಿನಲ್ಲಿ ಮೈಸೂರಿನ ಕುವೆಂಪುನಗರ ಬಳಿ ತಾವು ನೂತನವಾಗಿ ನಿರ್ಮಿಸುತ್ತಿರುವ ಮನೆ ನಿರ್ಮಾಣ ಕೆಲಸ ವೀಕ್ಷಿಸಿ, ಬಳಿಕ ಕಾರಲ್ಲೇ ಕುಳಿತು ಬಿಸಿಬಿಸಿ ಕಾಫಿ ಸವಿದರು.

ಮುಖ್ಯಮಂತ್ರಿಯಾದ ಬಳಿಕ ಸಿದ್ದರಾಮಯ್ಯ ಅವರು ಹಲವು ಬಾರಿ ಮೈಸೂರಿಗೆ ಭೇಟಿ ನೀಡಿದ್ದರೂ, ಈ ನಿವಾಸದತ್ತ ಹೋಗಿರಲಿಲ್ಲ. ಆದರೆ ಇದೀಗ ಈ ಪಾದಯಾತ್ರೆಯ ಗದ್ದಲದ ನಡುವೆ ತಮ್ಮ ನಿವಾಸ ಯಾವ ಹಂತಕ್ಕೆ ಬಂದಿದೆ? ಬಾಕಿ ಕೆಲಸಗಳೇನು ಎನ್ನುವ ಬಗ್ಗೆ ವೀಕ್ಷಿಸಿದ್ದಾರೆ. ಈ ನಡುವೆ ಬುಧವಾರ ಬೆಳಗ್ಗೆ 10 ಗಂಟೆಗೆ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸಿಎಂ ಸಿದ್ದರಾಮಯ್ಯ ಅವರ ಸುದ್ದಿಗೋಷ್ಠಿ ಆಯೋಜಿಸಿರುವುದು ಭಾರಿ ಕುತೂಹಲಕ್ಕೆ ಕಾರಣವಾಗಿದೆ.


**ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ,**
ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು.ದೂರವಾಣಿ: 080-22255210
ಸಂಖ್ಯೆ: ಕಾಅ/ಕವಿ.1/ಎಇ-4/2024-25/09 ದಿನಾಂಕ: 02.08.2024

**ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (2ನೇ ಕರೆ)**

ಮೇಲ್ಕಂಡ ಇಲಾಖೆಯ ಬೆಂಗಳೂರು, ಎಂ.ಜಿ.ರಸ್ತೆಯಲ್ಲಿನ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ 15.08.2024ರಂದು ಆಯೋಜಿಸಲಾಗಿರುವ ಸ್ವಾತಂತ್ರ್ಯ ದಿನಾಚರಣೆಗಾಗಿ ಬ್ಯಾರಿಕೇಡ್‌ಗಳು (ಎಂಎಜಡ್‌ಓ) ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳು ಮತ್ತು ಪೊಲೀಸ್ ಅಧಿಕಾರಿಗಳು ಹಾಗೂ ಬಿಬಿಎಂಪಿ ಆಯುಕ್ತರ, ಸುರಕ್ಷತೆಯ ಉದ್ದೇಶದಿಂದ ಸಾರ್ವಜನಿಕರ ಪ್ರವೇಶಾತಿ ನಿರ್ದೇಶನದಂತೆ ಹೆಚ್ಚುವರಿ ಬ್ಯಾರಿಕೇಡಿಂಗ್ ಕಾಮಗಾರಿಗಳು ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ (ಟೆಂಡರ್ ಉಲ್ಲೇಖ:ಪಿಡಬ್ಲ್ಯೂಡಿ/2024-25/ಬಿಡಿ/ವರ್ಕ್-ಇಂಡೆಂಟ್11893/ಕರೆ-2) ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://kppp.karnataka.gov.in) ಮೂಲಕ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ. ಕಾಮಗಾರಿಗಿಟ್ಟ ಅಂದಾಜು ಮೊತ್ತ: ರೂ.9.52 ಲಕ್ಷಗಳು. ಇಎಂಡಿ: ರೂ.23,800/-. ಕಾಮಗಾರಿಯ ದಸ್ತಾವೇಜು ಬೆಲೆ: ಇ-ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಕಾಲಾವಧಿ: 1 ತಿಂಗಳು. ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: 09.08.2024, ಸಂಜೆ 4.00 ಗಂಟೆಯೊಳಗೆ. ಟೆಂಡರ್‌ಗಳನ್ನು ತೆರೆಯುವ ದಿನಾಂಕ: ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಇತರೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ನಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ವಾಸಾಸಂಇ/ಉನಿ-ಸಿ.ಪಿ/1304/ಕೆವಿಎಂಸಿಎ/2024-25



**ಬೆಂಗಳೂರು ನಗರ ಜಿಲ್ಲಾ ಪಂಚಾಯತಿ**
ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.
ಸಂಖ್ಯೆ:ಕಾಅ/ಗ್ರಾಕುನೀ&ನೈವಿ/ಬೆಂನ/ತಾಂಸ/ಟೆಂಡರ್/04/2024-25 ದಿನಾಂಕ: 05-08-2024

**ಅಲ್ಪಾವಧಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಟೆಂಡರ್ ಪ್ರಕಟಣೆ**

2023-24 ನೇ ಸಾಲಿನ ವಿವಿಧ ಲೆಕ್ಕಶೀರ್ಷಿಕೆ ಅನುದಾನದಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಮೂಲಕ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: 14-08-2024 ರಂದು ಸಂಜೆ 4.00 ಗಂಟೆಯವರೆಗೆ ಸಲ್ಲಿಸಬಹುದಾಗಿರುತ್ತದೆ.
ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: https://kppp.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/1301/ಅಡ್ವರ್ಟೋರ್/2024-25



**ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್**
ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ಚಪ್ಪರದಕಲ್ಲು, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ – 560 110.
ದೂರವಾಣಿ : 080-2978 1057 ಇ-ಮೇಲ್: ceoruralzp5@gmail.com
ಸಂಖ್ಯೆ : BRZP/OTHE/41/2023-24/DESE/BRZP ದಿನಾಂಕ : 02-07-2024

**ಟೆಂಡರ್ ಪ್ರಕಟಣೆ**

ಸರ್ಕಾರದ ಆದೇಶದ ಸಂಖ್ಯೆ : ಗ್ರಾ.ಅ.ಪ./96/ಇ-ಆಡಳಿತ/2022, ಬೆಂಗಳೂರು, ದಿನಾಂಕ : 10-08-2023 ರ ಆದೇಶದಂತೆ ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯಾನ ಯೋಜನೆಯಡಿ ಜಿಲ್ಲಾ ಮಟ್ಟದಲ್ಲಿ ಒಂದು ಸಹಾಯಕ ಜಿಲ್ಲಾ ಯೋಜನಾ ವ್ಯವಸ್ಥಾಪಕರ ಸೇವೆಯನ್ನು ಪಡೆಯಲು ಅನುಮೋದನೆ ನೀಡಲಾಗಿರುತ್ತದೆ. ಅದರಂತೆ ಹೊರಗುತ್ತಿಗೆ ಆಧಾರದ ಮೇಲೆ ಸಹಾಯಕ ಜಿಲ್ಲಾ ಯೋಜನಾ ವ್ಯವಸ್ಥಾಪಕರನ್ನು ನೇಮಕ ಮಾಡಿಕೊಳ್ಳಲು ಈ ಕೆಳಕಂಡಂತೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಹುದ್ದೆ : ಸಹಾಯಕ ಜಿಲ್ಲಾ ಯೋಜನಾ ವ್ಯವಸ್ಥಾಪಕರು, ವಿದ್ಯಾರ್ಹತೆ : BE (C.S/E & C/I.S / MCA / BCA, ವಯೋಮಿತಿ : 25 ರಿಂದ 40 ವರ್ಷಗಳು, ಸಂಭಾವನೆ : ರೂ. 30,000/- (ಮೂವತ್ತು ಸಾವಿರ ಮಾತ್ರ), ಅರ್ಜಿ ಸಲ್ಲಿಸಬೇಕಾದ ದಿನಾಂಕ : 09-08-2024 ರಿಂದ 19-08-2024 ರ ವರೆಗೆ ಅರ್ಜಿ ಸಲ್ಲಿಸಬೇಕಾದ ಸ್ಥಳ : ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ.

ಸಹಿ/- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಬೆಂಗಳೂರು ಗ್ರಾ. ಜಿಲ್ಲಾ ಪಂಚಾಯತ್.
ವಾಸಾಸಂಇ/ಉನಿಕ/ಬೆಂಗ್ರಾಜಿ/ಮಣಿಪಾಲ್/1282/2024-25



**ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಯೋಜನಾ ಶಾಖೆ, ಚಾವಿಸನಿನಿ, ಮೈಸೂರು-570017, ದೂರವಾಣಿ: 0821-2544963
ಇ-ಮೇಲ್: gmproj@cescmysore.org, ವೆಬ್‌ಸೈಟ್: cescmysore.karnataka.gov.in
ಸಂಖ್ಯೆ: ಸೆಸ್ಕ್/ಪ್ರ.ವ್ಯ(ಯೋ)/ಉಪ್ರವ್ಯ(ಟಿ.ಎಲ್)/2024-25/9242 ದಿನಾಂಕ: 05.08.2024

**ಅಲ್ಪಾವಧಿ ಟೆಂಡರ್ ಪ್ರಕಟಣೆ** (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾ.ವಿ.ಸ.ನಿ.ನಿ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಯನ್ನು ಕೈಗೊಳ್ಳಲು ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

| ಕ್ರ. ಸಂ. | ವಿವರಗಳು | ವಿಚಾರಣೆ ಸಂಖ್ಯೆ/ ದಿನಾಂಕ |
|---|---|---|
| 1 | RAPDRP/IPDS ಪ್ರದೇಶದಲ್ಲಿ (ನಗರ ಪ್ರದೇಶ) ಸಾಫ್ಟ್‌ವೇರ್ ಮತ್ತು ಸ್ಟೇಷನರಿ ಜೊತೆಗೆ Android ಆಧಾರಿತ ಸ್ಪಾಟ್ ಬಿಲ್ಲಿಂಗ್ ಸಾಧನದ (SBD) ಪೂರೈಕೆ, ಏಕೀಕರಣ ಮತ್ತು ನಿರ್ವಹಣೆ | CESC/Proj-TL/ 2024-25/36 Dtd:01.08.2024 |
| 2 | ಚಾ.ವಿ.ಸ.ನಿ.ನಿ ಯಲ್ಲಿ ಹಾಲಿ ಅಸ್ತಿತ್ವದಲ್ಲಿರುವ ಇಆರ್‌ಪಿ ಸಾಫ್ಟ್‌ವೇರ್‌ಗಳ ವಾರ್ಷಿಕ ನಿರ್ವಹಣೆ ಹಾಗೂ ವಾರ್ಷಿಕ ತಾಂತ್ರಿಕ ಬೆಂಬಲ, ಹಾಲಿ ಇರುವ ಡೇಟಾ ಸೆಂಟರ್‌ನ ಹಾರ್ಡ್‌ವೇರ್ ಉನ್ನತೀಕರಣ, ವಿಪತ್ತು ಚೇತರಿಕೆ ಕೇಂದ್ರವನ್ನು ಸ್ಥಾಪಿಸಲು ಬೆಂಬಲ. | CESC/Proj-TL/ 2023-24/18/ 2024-25/Call-2 Dtd:02.08.2024 |
| 3 | ಚಾ.ವಿ.ಸ.ನಿ.ನಿ, ಮೈಸೂರಿನ ನಿಗಮ ಕಛೇರಿಯಲ್ಲಿ ನೆಟ್‌ವರ್ಕ್ ಮೂಲ ಸೌಕರ್ಯವನ್ನು ನವೀಕರಿಸುವುದು | CESC/Proj-TL/ 2024-25/ 34A/ Call-2 Dtd:05.08.2024 |

ಸದರಿ ಕಾಮಗಾರಿ ಮತ್ತು ಟೆಂಡರ್‌ನ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in/ ನಲ್ಲಿ ದಿನಾಂಕ: 06-08-2024 ಅಥವಾ ನಂತರ ಪಡೆಯಬಹುದಾಗಿರುತ್ತದೆ. ಇ-ಪೋರ್ಟಲ್‌ನ ಬಗ್ಗೆ ಮಾಹಿತಿಗಾಗಿ ಸಹಾಯವಾಣಿ +91-8046010000/ 8068948777ಗೆ ಅಥವಾ ಇ-ಮೇಲ್ ವಿಳಾಸ support@eprochelpdesk.com ಗೆ ಸಂಪರ್ಕಿಸಬಹುದಾಗಿದೆ.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ : 1912

ಸಹಿ/-
ಪ್ರಧಾನ ವ್ಯವಸ್ಥಾಪಕರು (ಯೋಜನೆಗಳು)
ಚಾವಿಸನಿನಿ, ಮೈಸೂರು
DIPR/MYS/KAVITA/375/2024-25



**ನಗರಸಭಾ ಕಾರ್ಯಾಲಯ, ಮಡಿಕೇರಿ. ಕೊಡಗು ಜಿಲ್ಲೆ.**
ಕಾವೇರಿ ಕಲಾಕ್ಷೇತ್ರದ ಹತ್ತಿರ, ಮಡಿಕೇರಿ – 571201
ದೂರವಾಣಿ: 08272-228323 ಫ್ಯಾಕ್ಸ್ 08272-223998
e-mail: itstaff_ulb_madikeri1@yahoo.com
ಸಂ:ಮನಸ/ತಾಂತ್ರಿಕ/ಜೆಇ.4/ಟೆಂಡರ್-02/2024-25 ದಿನಾಂಕ: 06-08-2024

**ಟೆಂಡರ್ ಪ್ರಕಟಣೆ**

2019-20ನೇ ಸಾಲಿನ ಎಸ್.ಎಫ್.ಸಿ ಕ್ಯಾಪಿಟಲ್ ಅಸ್ಸೆಟ್ ಉಳಿಕೆ ಅನುದಾನದಡಿ ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸಲು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧ್ಯಾದೇಶ 1999 ಹಾಗೂ ನಿಯಮ 2000 ಕ್ಕೆ ಒಳಪಟ್ಟು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (ಕೆ.ಡಬ್ಲ್ಯೂ-2) ನಿಯಮಾವಳಿಯಂತೆ KPP ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಟೆಂಡರ್ ವಿವರಗಳನ್ನು KPP ಪೋರ್ಟಲ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು KPP ಪೋರ್ಟಲ್ ಮುಖಾಂತರ ಸಲ್ಲಿಸಬಹುದು. ಹೆಚ್ಚಿನ ಮಾಹಿತಿ, ಕಾಮಗಾರಿ ವಿವರಣೆ, ನಿಭಂದನೆ ಹಾಗೂ ಷರತ್ತುಗಳಿಗೆ ಕಛೇರಿ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು. ಟೆಂಡರ್ ಡೌನ್‌ಲೋಡ್, ಅಪ್‌ಲೋಡ್, ಟೆಂಡರ್ ಪ್ರೋಸೆಸಿಂಗ್ ಮತ್ತು ಇ.ಎಂ.ಡಿ ಪಾವತಿ ಬಗ್ಗೆ ಸಂಬಂಧಪಟ್ಟಂತೆ ವಿವರಗಳನ್ನು ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಪಡೆಯಬಹುದು.

ಸಹಿ/- ಆಡಳಿತಾಧಿಕಾರಿಗಳು, ನಗರಸಭೆ, ಮಡಿಕೇರಿ ಹಾಗೂ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ.
ಸಹಿ/- ಪೌರಾಯುಕ್ತರು, ನಗರಸಭೆ, ಮಡಿಕೇರಿ.



**ಕಾವೇರಿ ನೀರಾವರಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನೀನಿನಿ, ನಂ.1 ಹೇಮಾವತಿ ಎಡದಂಡೆ ನಾಲಾ ವಿಭಾಗ, ಚನ್ನರಾಯಪಟ್ಟಣ, ದೂರವಾಣಿ: 08176-252204

**ಅಲ್ಪಾವಧಿ ಟೆಂಡರ್ ಪ್ರಕಟಣೆ-04/2024-25 ದಿನಾಂಕ: 03.08.2024 /ಐಟಂವಾರು ಟೆಂಡರ್(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ) Two cover System**

ವ್ಯವಸ್ಥಾಪಕ ನಿರ್ದೇಶಕರು, ಕಾನೀನಿನಿ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಈ ಕೆಳಗೆ ಕಾಣಿಸಿದ ಕಾಮಗಾರಿಗಳಿಗೆ ಕೆಪಿಡಬ್ಲ್ಯುಡಿ/ಸಿಪಿಡಬ್ಲ್ಯೂಡಿ ಹಾಗೂ ಇತರೆ ಸಾರ್ವಜನಿಕ ವಲಯದ ಸಂಸ್ಥೆಗಳ ಅರ್ಹಗುತ್ತಿಗೆದಾರರುಗಳಿಂದ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. ಕಾಮಗಾರಿಗಳ ಸಂಖ್ಯೆ 3 ಕಾಮಗಾರಿಗಳು ಕಾಮಗಾರಿಗಳ ವಿವರ: ಚನ್ನರಾಯಪಟ್ಟಣ ತಾಲ್ಲೂಕು, ದಂಡಿಗನಹಳ್ಳಿ ಹೋಬಳಿಯ ಆಲಗೊಂಡನಹಳ್ಳಿ ಕುಡಿಯುವ ನೀರಿನ ಯೋಜನೆಯ ಹೆಚ್ಚುವರಿ ಕೆರೆ ಕಟ್ಟೆಗಳಿಗೆ ನೀರನ್ನು ಹರಿಸುವ ಕಾಮಗಾರಿಗಳು. ಟೆಂಡರ್‌ಗಿಟ್ಟ ಕಾಮಗಾರಿಗಳ ಮೊತ್ತ: ರೂ. 491.11 ರಿಂದ ರೂ. 497.40 ಲಕ್ಷಗಳು. ಇ.ಎಂ.ಡಿ. ಮೊತ್ತ: ರೂ.737000/- ರಿಂದ ರೂ. 747000/- ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಿಂದ ಟೆಂಡರ್ ದಾಖಲೆಗಳನ್ನು ದಿನಾಂಕ:03.08.2024 ರಿಂದ ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:22.08.2024 ರ 16.00 ಘಂಟೆಯವರೆಗೆ, ಸ್ವೀಕೃತ ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:23.08.2024 ರಂದು 17.00 ಗಂಟೆಗಳು, ಅರ್ಹತೆ ಪಡೆದ ಗುತ್ತಿಗೆದಾರರ ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು. ಮೇಲ್ಕಂಡ ಕಾಮಗಾರಿಯ ಮುಂದೆ ನಮೂದಿಸಿರುವ ಟೆಂಡರ್‌ಗಿಟ್ಟ ಅಂದಾಜುಮೊತ್ತ ಹಾಗೂ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಟೆಂಡರ್ ದಾಖಲೆಯಲ್ಲಿ ನಮೂದಿಸಿದ ಟೆಂಡರ್‌ಗಿಟ್ಟ ಮೊತ್ತ ಮತ್ತು ಇ.ಎಂ.ಡಿ. ಮೊತ್ತವು ಅಂತಿಮವಾಗಿರುತ್ತದೆ ಮತ್ತು ಪ್ರಚಲಿತದಲ್ಲಿರುವ ತೆರಿಗೆಗಳು ಅನ್ವಯವಾಗುತ್ತದೆ. ಸೂಚನೆ: ಹೆಚ್ಚಿನ ವಿವರ/ ಮಾಹಿತಿಗಳನ್ನು (https://kppp.karnataka.gov.in) ವೆಬ್‌ಸೈಟ್‌ನಲ್ಲಿ ಹಾಗೂ ಕಛೇರಿಯಲ್ಲಿ ಪಡೆಯ ಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ನಂ.1, ಹೇಮಾವತಿ ಎಡದಂಡೆ ನಾಲಾ ವಿಭಾಗ, ಕಾನೀನಿ(ನಿ), ಚನ್ನರಾಯಪಟ್ಟಣ
ವಾಸಾಸಂಇ/ಹಿಸನಿ/ಹಾಸನ/254/ಕೆವಿಎಂಸಿಎ/2024-25



**ನಗರಸಭೆ ಕಾರ್ಯಾಲಯ ನೆಲಮಂಗಲ**
ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ-562123, ದೂ.: 080-27722735, ಸಹಾಯವಾಣಿ: 080-27723627, Web : www.nelamangalatown.mrc.gov.in, Email : itstaffnelamangala@gmail.com
ಸಂಖ್ಯೆ:ನಸನೆ/ಕಕಾ/ಟೆಂಪ್ರ/ವಿವ 02/2024-25 ದಿನಾಂಕ : 06.08.2024

**ಪ್ರಕಟಣೆ**

2024-25 ನೇ ಸಾಲಿನ ಎಸ್.ಎಫ್.ಸಿ ಶೇಕಡ 7.25, (Capital Asset) ಶೇ 24.10 ರ ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಯೋಜನೆಗಳಡಿ ವಿವಿಧ ಸಾಮಗ್ರಿಗಳ ಖರೀದಿಗಾಗಿ ಜೆಮ್ ಪೋರ್ಟಲ್‌ನಲ್ಲಿ ಟೆಂಡರ್ ಕರೆಯಲಾಗಿದೆ. ಟೆಂಡರ್‌ನಲ್ಲಿ ಬಾಗವಹಿಸಲು ಆಸಕ್ತಿಯಿರುವ ಜೆಮ್ ಪೋರ್ಟಲ್‌ನ ನೊಂದಾಯಿತ ಸರಬರಾಜುದಾರರು ಹೆಚ್ಚಿನ ಮಾಹಿತಿಗಾಗಿ www.gem.gov.in ವೆಬ್ ಸೈಟ್‌ನಲ್ಲಿ ಪರಿಶೀಲಿಸಬಹುದಾಗಿದೆ.

ವಿವರ ಕೆಳಕಂಡಂತಿದೆ

| ಕ್ರ.ಸಂ | ಟೆಂಡರ್ ಕರೆದಿರುವ ಸಾಮಗ್ರಿ ವಿವರ | ಕಾಯ್ದಿರಿಸಿರುವ ಮೊತ್ತ ರೂ. ಲಕ್ಷಗಳಲ್ಲಿ |
|---|---|---|
| 01 | ಇತರೆ ಹಿಂದುಳಿದ ಜಾತಿಯ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಸರ್ಕಾರಿ ವಿದ್ಯಾರ್ಥಿ ನಿಲಯಗಳಿಗೆ (ಬಿಸಿಎಮ್ ಹಾಸ್ಟೆಲ್) ಪಿಜನ್ ಬಾಕ್ಸ್ ಅಲ್ಮೇರಾಗಳನ್ನು ನೀಡುವುದು. (ಎಸ್.ಎಫ್.ಸಿ ಶೇ 7.25 ರಡಿ) Capital Asset | 2,52,600.00 |
| 02 | ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಿಗೆ ಕಮರ್ಷಿಯಲ್ ವಾಟರ್ ಪ್ಯೂರಿಫೈಯರ್‌ಗಳನ್ನು ನೀಡುವುದು. (ಎಸ್.ಎಫ್.ಸಿ ಶೇ 24.10 ರಡಿ ಎಸ್.ಸಿ.ಎಸ್.ಪಿ) | 3,84,000.00 |
| 03 | ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಿಗೆ ಕಮರ್ಷಿಯಲ್ ವಾಟರ್ ಪ್ಯೂರಿಫೈಯರ್‌ಗಳನ್ನು ನೀಡುವುದು. (ಎಸ್.ಎಫ್.ಸಿ ಶೇ 24.10 ರಡಿ ಟಿ.ಎಸ್.ಪಿ) | 1,60,000.00 |
| | ಒಟ್ಟು | 7,96,600.00 |

ಸಹಿ/- ಅಧ್ಯಕ್ಷರು ನಗರಸಭೆ, ನೆಲಮಂಗಲ
ಸಹಿ/- ಉಪಾಧ್ಯಕ್ಷರು ನಗರಸಭೆ, ನೆಲಮಂಗಲ
ಸಹಿ/- ಸ್ಥಾಯಿ ಸಮಿತಿ ಅಧ್ಯಕ್ಷರು ನಗರಸಭೆ, ನೆಲಮಂಗಲ
ಸಹಿ/- ಪೌರಾಯುಕ್ತರು, ನಗರಸಭೆ, ನೆಲಮಂಗಲ
ವಾ.ಸಾ.ಸಂ.ಇ/ವಾಪ್ರ/1313/ಎಸ್‌ಎಸ್‌ಸಿ/2024-25



**ಕರ್ನಾಟಕ ಗೃಹ ಮಂಡಳಿ**
3ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009
ದೂರವಾಣಿ: 080-22273511-16

**ಟೆಂಡರ್ ಪ್ರಕಟಣೆ**

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ನ್ನು ಕರೆಯಲಾಗಿದೆ ವಿವರಗಳು ಕೆಳಕಂಡಂತಿವೆ.

| ಕ್ರ. ಸಂ | ಕಾಮಗಾರಿಯ ಹೆಸರು | ಕಾಮಗಾರಿ ಇಂಡೆಂಟ್ & ಐಎಫ್‌ಟಿ ನಂ. | ಟೆಂಡರ್‌ಗಿಟ್ಟ ಮೊತ್ತ (ರೂ ಗಳಲ್ಲಿ) |
|---|---|---|---|
| 1. | ಕೊಡಗು ಜಿಲ್ಲೆ ಮಡಿಕೇರಿಯಲ್ಲಿ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದ 2ನೇ ಹಂತದ ಕಟ್ಟಡ ಕಾಮಗಾರಿ. (2ನೇ ಕರೆ) | Tender Reference Number KHB/2024-25/ BD/ WORK_INDENT239/CALL-2 & IFT No. 10/2024-25, Date: 06.08.2024 | 1,18,54,737/- |
| 2. | ಉತ್ತರ ಕನ್ನಡ ಜಿಲ್ಲೆ, ಕುಮುಟಾದಲ್ಲಿ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದ 2ನೇ ಹಂತದ ಕಟ್ಟಡ ಕಾಮಗಾರಿ. | Tender Reference Number KHB/2024-25/ BD/WORK_INDENT258 & IFT No. 30/2024-25 Date: 06.08.2024 | 1,29,70,957/- |
| 3. | ಉತ್ತರ ಕನ್ನಡ, ಜಿಲ್ಲೆ ಮುಂಡಗೋಡುನಲ್ಲಿ ಬಾಲಕಿಯರ ವಸತಿ ನಿಲಯದ 2ನೇ ಹಂತದ ಕಟ್ಟಡ ಕಾಮಗಾರಿ. | Tender Reference Number KHB/2024-25/ BD/WORK_INDENT257 & IFT No. 29/2024-25 Date: 06.08.2024 | 1,30,49,945/- |

ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ : 21.08.2024 ಸಂಜೆ 4.00 ಗಂಟೆವರೆಗೆ
ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ:
ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು
ದೂರವಾಣಿ: 080-22273511/ 080-22100077 website: https://kppp.karnataka.gov.in

ಸಹಿ/-
ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
DIPR/CP/1327/Zen/2024-25



ಕರ್ನಾಟಕ ಸರಕಾರ
[ಜಿಲ್ಲಾ ಪಂಚಾಯತ ಕಲಬುರಗಿ]
**ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಛೇರಿ, ಕಲಬುರಗಿ ಜಿಲ್ಲೆ**
ತಾರಫೇಲ್ 8ನೇ ಕ್ರಾಸ್, ಡಂಕಿನ ಭಾವಿ ಹತ್ತಿರ ಜೆಡಿಎ ಲೇಔಟ್, ಕಲಬುರಗಿ-585102
ದೂರವಾಣಿ ಸಂಖ್ಯೆ: 9148489157 ಇಮೇಲ್ ವಿಳಾಸ : dobcmgulbarga@gmail.com
ಸಂಖ್ಯೆ: ಹಿಂವಕಇ/ಗು/ಆಹಾರ/ಟೆಂಡರ್-2024-25 ದಿನಾಂಕ:05.08.2024

**:: ಟೆಂಡರ್ ಪ್ರಕಟಣೆ ::**

2024-25ನೇ ಸಾಲಿನಲ್ಲಿ ಕಲಬುರಗಿ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಹಾಗೂ ಆಶ್ರಮ ಶಾಲೆಗಳಿಗೆ, ಆಹಾರ ಮತ್ತು ಇತರೆ ಸಾಮಾಗ್ರಿಗಳ ಪೂರೈಕೆಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 1999 ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000 ನಿಯಮಗಳನ್ವಯ ಟೆಂಡರ್‌ನ್ನು ಇ-ಪ್ರಕ್ಯೂರ್‌ಮೆಂಟ್ (E-Procurement) ಮೂಲಕ ಅಹ್ವಾನಿಸಲಾಗಿದೆ.

ಇ – ಟೆಂಡರ್ ಘಟನಾವಳಿಗಳು

1) ಟೆಂಡರ್ ಪ್ರಕಟಣೆ ದಿನಾಂಕ : 05-08-2024, 2) ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ: ರೂ. 3624.19 ಲಕ್ಷ 3) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ : 05-08-2024, 4) ಪ್ರಿ ಬಿಡ್ ಮೀಟಿಂಗ್ ದಿನಾಂಕ: 13-08-2024 ಸಮಯ ಬೆಳಗ್ಗೆ 11.30ಗಂಟೆಗೆ ಸ್ಥಳ: ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ ಕಲಬುರಗಿ, 5) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 05-09-2024 05.30PM, 6) ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ: 06-09-2024 05.30PM, 7) ಹಣಕಾಸಿನ ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ: 09-09-2024 11.30AM 8) ಪಾವತಿಸಬೇಕಾದ ಇ.ಎಂ.ಡಿ ಮೊತ್ತ : ರೂ. 36.24 ಲಕ್ಷ, 9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಲಬುರಗಿ ಹಾಗೂ ಸದಸ್ಯ ಕಾರ್ಯದರ್ಶಿಗಳು ಟೆಂಡರ್ ಸಮಿತಿ ಕಲಬುರಗಿ, ದೂರವಾಣಿ ಸಂಖ್ಯೆ : 9148489157

ಸಹಿ/- ಜಿಲ್ಲಾ ಅಧಿಕಾರಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಲಬುರಗಿ ಜಿಲ್ಲೆ
ವಾ.ಸಾ.ಸಂ.ಇ/ಕಲಬುರಗಿ/301/ಕೆ.ಎಸ್.ಎಂ.ಸಿ.&ಎ/2024-25

## ಟ್ವೀಟೂ-ಖಾರಾ

**ರಾಹುಲ್ ಗಾಂಧಿ**
ಪ್ರತಿಪಕ್ಷ ನಾಯಕ

**ಕೋಟ್ಯಂತರ ಜನರು ಕಷ್ಟಪಟ್ಟು ಉಳಿಸಿ ಆರೋಗ್ಯ ವಿಮೆಗೆ ಪಾವತಿ ಮಾಡುವ ಪ್ರೀಮಿಯಂನಲ್ಲಿ ಮೋದಿ ಸರಕಾರ ಪ್ರತಿವರ್ಷ 24 ಸಾವಿರ ಕೋಟಿ ರು.ಗಳನ್ನು ವಸೂಲಿ ಮಾಡುತ್ತಿದೆ. ಪ್ರತಿಯೊಂದು ವಿಕೋಪಕ್ಕೆ ಮೊದಲು ತೆರಿಗೆ ಅವಕಾಶಕ್ಕಾಗಿ ನೋಡುವುದು ಬಿಜೆಪಿ ಸರಕಾರದ ಸಂವೇದನಾರಹಿತ ಚಿಂತನೆಗೆ ಸಾಕ್ಷಿಯಾಗಿದೆ. ಆರೋಗ್ಯ ಮತ್ತು ವಿಮಾ ಕ್ಷೇತ್ರಗಳನ್ನು ಜಿಎಸ್‌ಟಿಯಿಂದ ಹೊರಗಿಡಬೇಕು.**

**ಜಿತೇಂದ್ರ ಪ್ರತಾಪ್ ಸಿಂಗ್**
ಫಿನ್ಲೆಂಡ್

**ರಾಹುಲ್ ಗಾಂಧಿಯವರೇ ವಿಮಾ ಪ್ರೀಮಿಯಂ ಮೇಲೆ ಸೇವಾ ತೆರಿಗೆ ಹಾಕಿದ್ದು ಮನಮೋಹನ್ ಸಿಂಗ್ ಸರಕಾರ. ಆಗ ಶೇ. 15 ರಷ್ಟು ತೆರಿಗೆಯನ್ನು ವಿಮಾ ಪ್ರೀಮಿಯಂ ಮೇಲೆ ವಿಧಿಸಲಾಗಿತ್ತು. ಈ ಬಗ್ಗೆ ತೀವ್ರ ಕೋಲಾಹಲ ಎದ್ದಾಗ ಅದನ್ನು ಶೇ. 12.5ಕ್ಕೆ ಇಳಿಸಲಾಗಿತ್ತು. ನಂತರ ಈ ತೆರಿಗೆ ತೆಗೆದು ಜಿಎಸ್‌ಟಿ ವಿಧಿಸಲಾಗುತ್ತಿದೆ.**

ಸಿಎಂ ಪರವಾಗಿ ಬ್ಯಾಟ್ ಬೀಸುತ್ತಿರುವ ಎಲ್ಲ ನಾಯಕರು | ಸಚಿವರಿಗೆ ಟಾಸ್ಕ್ ಕೊಟ್ಟಿರುವ ಹಿನ್ನೆಲೆಯಲ್ಲಿ ಬಿಜೆಪಿ ವಿರುದ್ಧ ಮುಗಿಬಿದ್ದ ನಾಯಕರು

# ಹೈಕಮಾಂಡ್ ಸೂಚನೆ ಬೆನ್ನಲ್ಲೇ ಎಚ್ಚೆತ್ತ ಕೈ ಪಡೆ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬೆನ್ನಿಗೆ ನಿಲ್ಲಬೇಕು ಎನ್ನುವ ಸ್ಪಷ್ಟ ಸೂಚನೆಯ ಬೆನ್ನಲ್ಲೇ, ಇಡೀ ಸಚಿವ ಸಂಪುಟ ಹಾಗೂ ಪ್ರಮುಖ ನಾಯಕರು ಎಚ್ಚೆತ್ತಿದ್ದು ಸಿಎಂ ಪರವಾಗಿ ಬ್ಯಾಟ್ ಬೀಸಲು ಆರಂಭಿಸಿದ್ದಾರೆ.

ಮುಡಾ ಪ್ರಕರಣ ಬೆಳಕಿಗೆ ಬಂದ ಸಮಯದಲ್ಲಿ ಕೆಲ ಸಚಿವರನ್ನು ಹೊರತುಪಡಿಸಿ, ಇನ್ನುಳಿದವರು ತುಟಿ ಬಿಚ್ಚಿರಲಿಲ್ಲ. ಆದರೆ ಈ ವಿಷಯದಲ್ಲಿ ಸಿದ್ದರಾಮಯ್ಯ ಅವರ ಬೆಂಬಲಕ್ಕೆ ಎಲ್ಲರೂ ನಿಲ್ಲಬೇಕು. ಬಿಜೆಪಿ-ಜೆಡಿಎಸ್ ಪಾದಯಾತ್ರೆಯನ್ನು ವಿರೋಧಿಸುವುದರೊಂದಿಗೆ, ರಾಜ್ಯಪಾಲರ ನಡೆಯನ್ನು ಖಂಡಿಸಬೇಕು ಎಂದು ಹೈಕಮಾಂಡ್‌ನಿಂದ ಸೂಚನೆ ಬರುತ್ತಿದ್ದಂತೆ ಸಚಿವರು, ಶಾಸಕರು ಸಿದ್ದರಾಮಯ್ಯ ಪರವಾಗಿ ಮಾತನಾಡಲು ಶುರು ಮಾಡಿದ್ದಾರೆ.

ಮಂಗಳವಾರವೂ ರಾಜ್ಯದ ವಿವಿಧ ಭಾಗದಲ್ಲಿ ಸಿದ್ದರಾಮಯ್ಯ ಪರವಾಗಿ ಶಾಸಕರು, ಉಸ್ತುವಾರಿ ಸಚಿವರು ಮಾತನಾಡಿದ್ದು, ಸುಭದ್ರ ಸರಕಾರವನ್ನು ಅಸ್ಥಿರಗೊಳಿಸಬೇಕು ಎನ್ನುವ ಕಾರಣಕ್ಕೆ ಈ ರೀತಿ ನೋಟಿಸ್ ನೀಡುತ್ತಿದ್ದಾರೆ. ರಾಜಕೀಯ ಕಾರಣಕ್ಕೆ ರಾಜಭವನವನ್ನು ಬಳಸಿಕೊಳ್ಳುವುದು ಖಂಡನೀಯ ಎನ್ನುವ ಮಾತುಗಳನ್ನು ಆಡಿದ್ದಾರೆ.

**ಕಡತ ಯಜ್ಞಕ್ಕೆ ಕೈಹಾಕಿದ ಕಾಂಗ್ರೆಸ್**

ಈ ನಡುವೆ ಭಾನುವಾರ ನಡೆದ ಸಭೆಯಲ್ಲಿ ವೇಣುಗೋಪಾಲ್ ಹಾಗೂ ರಣದೀಪ್ ಸಿಂಗ್ ಸುರ್ಜೇವಾಲ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಎಲ್ಲ ಇಲಾಖೆಯಲ್ಲಿ ಬಿಜೆಪಿ, ಜೆಡಿಎಸ್ ಅಧಿಕಾರಾವಧಿಯಲ್ಲಿ ನಡೆದಿರುವ ಭ್ರಷ್ಟಾಚಾರ, ಅಕ್ರಮದ ಬಗ್ಗೆ ಮಾಹಿತಿ ಕಲೆಹಾಕುವಂತೆ ಸೂಚನೆ ನೀಡಲಾಗಿತ್ತು. ಇದರ ಬೆನ್ನಲ್ಲೇ, ಎಲ್ಲ ಇಲಾಖೆಯ ಸಚಿವರು ತಮ್ಮ ತಮ್ಮ ಇಲಾಖೆಯ ಕಡತಗಳನ್ನು ತರೆಸಿಕೊಂಡು ಪರಿಶೀಲಿಸುತ್ತಿದ್ದಾರೆ. ಅದರಲ್ಲಿಯೂ ಬೈರತಿ ಸುರೇಶ್ ಅವರು ತಮ್ಮ ಇಲಾಖೆಯಲ್ಲಿ ವ್ಯಾಪ್ತಿಯಲ್ಲಿರುವ ವಿವಿಧ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಹಂಚಿಕೆಯಾಗಿರುವ ನಿವೇಶನ? ಯಾರಿಗೆ ಹಂಚಿಕೆಯಾಗಿದೆ? ಯಾವ ಸಮಯದಲ್ಲಿ ಹಂಚಿಕೆಯಾಗಿದೆ ಎನ್ನುವ ಬಗ್ಗೆ ಮಾಹಿತಿ ಕಲೆಹಾಕುತ್ತಿದ್ದಾರೆ. ಈ ಎಲ್ಲವನ್ನು, ಮುಂದಿನ ದಿನದಲ್ಲಿ ಬಿಜೆಪಿ, ಜೆಡಿಎಸ್ ನಾಯಕರಿಗೆ ಪ್ರತ್ಯಾಸ್ತ್ರದ ರೀತಿ ಬಳಸಿಕೊಳ್ಳಲು ತೀರ್ಮಾನಿಸ ಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮುಡಾ ಪ್ರಕರಣ, ಬಿಜೆಪಿ ಜೆಡಿಎಸ್ ಪಾದಯಾತ್ರೆಗೆ ವಿರೋಧಿಸಿ ವಿಜಯಪುರದಲ್ಲಿ ಕಾಂಗ್ರೆಸ್ ಹಾಗೂ ಅಹಿಂದ ಸಂಘಟನೆ ನೇತೃತ್ವದಲ್ಲಿ ನಡೆದ ಬೃಹತ್ ಪ್ರತಿಭಟನೆ ನಡೆಯಿತು.

### ಮೈಸೂರಲ್ಲೇ ದಾಖಲೆ ಸಮೇತ ಬಿಡುಗಡೆ

**ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಹಂಚಿಕೆಯಾಗಿರುವ ನಿವೇಶನಗಳು ಅದರಲ್ಲಿಯೂ ಮುಡಾದಲ್ಲಿ ಕಳೆದ 10 ವರ್ಷದಲ್ಲಿ ಹಂಚಿಕೆಯಾಗಿರುವ ನಿವೇಶನಗಳ ಬಗ್ಗೆ ಮಾಹಿತಿ ಕಲೆ ಹಾಕಿರುವ ಬೈರತಿ ಸುರೇಶ್, ಮೈಸೂರಿನಲ್ಲಿ 9ರಂದು ನಡೆಯಲಿರುವ ಬೃಹತ್ ಸಮಾವೇಶದಲ್ಲಿ ದಾಖಲೆ ಸಮೇತ ಯಾರೆಲ್ಲ ನಿವೇಶನ ಪಡೆದಿದ್ದಾರೆ ಎನ್ನುವುದನ್ನು ಬಹಿರಂಗಪಡಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.**

### ರಾಜ್ಯಪಾಲರ ಕ್ರಮ ವಿರೋಧಿಸಿ ಹೊನ್ನಾಳಿ ಬಂದ್

**ಹೊನ್ನಾಳಿ:** ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಕ್ಕೆ ಸಂಬಂಧಿಸಿದಂತೆ ರಾಜ್ಯಪಾಲ ಥಾವರಚಂದ್ ಗೆಹಲೋಟ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೋಟಿಸ್ ನೀಡಿರುವ ಕ್ರಮ ವಿರೋಧಿಸಿ ಮಂಗಳವಾರ ಹೊನ್ನಾಳಿ ಬಂದ್ ನಡೆಯಿತು. ಸಿದ್ದರಾಮಯ್ಯ ಅಭಿಮಾನಿ ಬಳಗ ಹಾಗೂ ಅಹಿಂದ ಒಕ್ಕೂಟದ ಕಾರ್ಯಕರ್ತರು ಕರೆನೀಡಿದ ಬಂದ್ ಗೆ ಸಾರ್ವಜನಿಕರಿಂದ ಬೆಂಬಲ ವ್ಯಕ್ತಪಡಿಸಿದರು. ಪಟ್ಟಣದಲ್ಲಿ ಅಂಗಡಿಗಳು ಬಾಗಿಲು ಮುಚ್ಚಿದ್ದು, ಸಾರಿಗೆ ಸಂಚಾರ ಸ್ಥಗಿತಗೊಂಡಿತ್ತು. ಬಿಜೆಪಿ ಮತ್ತು ಜೆಡಿಎಸ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

### ನೋಟಿಸ್ ಹಿಂಪಡೆಯದಿದ್ದರೆ ಕಾನೂನು ಹೋರಾಟ

**ವಿಜಯಪುರ:** ಕರ್ನಾಟಕದ ರಾಜ್ಯಪಾಲರು ಪೂರ್ವಾಗ್ರಹ ಪೀಡಿತರಾಗಿದ್ದಾರೆ. ಅಬ್ರಹಾಂ ಅವರ ಪತ್ರಕ್ಕೆ 24 ಗಂಟೆಯಲ್ಲಿ ನೋಟಿಸ್ ನೀಡಿದ್ದಾರೆ. ರಾಜ್ಯದ ಇತಿಹಾಸದಲ್ಲಿ ಇಂತಹ ರಾಜ್ಯಪಾಲರನ್ನು ಕಂಡಿಲ್ಲ. ರಾಜ್ಯಪಾಲರ ಕ್ರಮ ಖಂಡಿಸಿ ಇಡೀ ರಾಜ್ಯದ ಜನ ಎಲ್ಲೆಡೆ ಹೋರಾಟ ಮಾಡುತ್ತಿದ್ದಾರೆ. ರಾಜ್ಯಪಾಲರು ನೋಟಿಸ್ ಹಿಂಪಡೆಯದಿದ್ದರೇ ನಾವು ಕಾನೂನು ಹೋರಾಟಕ್ಕೆ ಇಳಿಯುವುದು ಶತಸಿದ್ಧ ಎಂದು ಸಚಿವ ಶಿವಾನಂದ ಪಾಟೀಲ್ ಪರೋಕ್ಷವಾಗಿ ರಾಜ್ಯಪಾಲರಿಗೆ ಹಾಗೂ ಕೇಂದ್ರ ಬಿಜೆಪಿ ಸರಕಾರಕ್ಕೆ ಎಚ್ಚರಿಕೆ ನೀಡಿದರು.

### ಸಿದ್ದರಾಮಯ್ಯ ಪರ ಬೆಳಗಾವಿಯಲ್ಲಿ ಪ್ರತಿಭಟನೆ

**ಬೆಳಗಾವಿ:** ಶೋಷಿತ ಸಮುದಾಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ತೇಜೋವಧೆಗೆ ಬಿಜೆಪಿ ನಾಯಕರು ಹುನ್ನಾರ ನಡೆಸಿದ್ದಾರೆ ಎಂದು ಆರೋಪಿಸಿ ಮಂಗಳವಾರ ಕರ್ನಾಟಕ ಪ್ರದೇಶ ಕುರುಬರ ಸಂಘ, ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಹಾಗೂ ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ವತಿಯಿಂದ ಬೆಳಗಾವಿಯಲ್ಲಿ ಪ್ರತಿಭಟನೆ ನಡೆಯಿತು.

ಚನ್ನಮ್ಮ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ಅಭಿಮಾನಿಗಳು, ಸಿದ್ದರಾಮಯ್ಯನವರ ಭಾವಚಿತ್ರಕ್ಕೆ ಹಾಲಿನ ಅಭಿಷೇಕ ಮಾಡಿ, ಬಿಜೆಪಿ ವಿರುದ್ಧ ಘೋಷಣೆ ಮೊಳಗಿಸಿದರು.

# ಬಾಂಗ್ಲಾ ಹಿಂಸಾಚಾರ: ತಾಯ್ನಾಡಿಗೆ ಮರಳಿದ 25 ವಿದ್ಯಾರ್ಥಿಗಳು

**ಬೆಳಗಾವಿ:** ಬಾಂಗ್ಲಾದೇಶದಲ್ಲಿ ಭುಗಿಲೆದ್ದ ಹಿಂಸಾಚಾರದ ಪರಿಣಾಮ ಸಂಕಷ್ಟಕ್ಕೆ ಸಿಲುಕಿದ್ದ ಬೆಳಗಾವಿಯ 25 ವೈದ್ಯಕೀಯ ವಿದ್ಯಾರ್ಥಿಗಳು ಸುರಕ್ಷಿತವಾಗಿ ತಾಯ್ನಾಡಿಗೆ ಆಗಮಿಸಿದ್ದಾರೆ.

ಬಾಂಗ್ಲಾದಲ್ಲಿ ಹಿಂಸಾಚಾರ ಕೈ ಮೀರುವ ಹಂತಕ್ಕೆ ತಲುಪುತ್ತಿದ್ದಂತೆ ವಿದ್ಯಾರ್ಥಿಗಳ ಪೋಷಕರು ಬೆಳಗಾವಿ ಸಂಸದ



ಜಗದೀಶ್ ಶೆಟ್ಟರ್ ಹಾಗೂ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರ ಗಮನಕ್ಕೆ ತಂದಿದ್ದರು. ತಕ್ಷಣ ಭಾರತೀಯ ರಾಯಭಾರಿ ಕಚೇರಿಗೆ ಮಾಹಿತಿ ತೀಳಿಸುವ ಮೂಲಕ ಬೆಳಗಾವಿಯ 25 ವೈದ್ಯಕೀಯ ವಿದ್ಯಾರ್ಥಿಗಳನ್ನು ಕಳೆದ ಜುಲೈ 27 ರಂದು ಭಾರತಕ್ಕೆ ಕರೆತರಲಾಗಿದೆ. ಬಾಂಗ್ಲಾದೇಶದ ಕರಾಳ ಪರಿಸ್ಥಿತಿ ಕುರಿತು ಮಾಹಿತಿ ನೀಡಿದ ವೈದ್ಯಕೀಯ ಶಿಕ್ಷಣ ಪಡೆಯುತ್ತಿದ್ದ ವಿದ್ಯಾರ್ಥಿ ನೇಹಲ್ ಸವಣೂರು. ನಾವು ಬಾಂಗ್ಲಾದಲ್ಲೇ ಉಳಿದುಕೊಂಡಿದ್ದರೆ, ರೂಮಿನಲ್ಲಿ ಕೂಡಿ ಹಾಕಿ ಹಿಂಸೆ ನೀಡುತ್ತಿದ್ದರು. ಅಲ್ಲಿ ನಾವು ಸಾಕಷ್ಟು ನೋವು ಅನುಭವಿಸಿದೇವು. ಎಲ್ಲ ಕಡೆಯೂ ಕರ್ಫ್ಯೂ ಇತ್ತು, ಊಟಕ್ಕೂ ಪರದಾಡಬೇಕಾಯಿತು. ಎರಡೇ ನಿಮಿಷದಲ್ಲಿ ತಿನ್ನುವುದಕ್ಕೆ ಆಹಾರ ತಂದು ಕೋಣೆ ಸೇರುತ್ತಿದ್ದೇವು ಎಂದು ವಿವರಿಸಿದರು.

### ಹಿಂದೂಗಳೇ ಟಾರ್ಗೆಟ್

**ಯುವತಿಯರ ಹಾಸ್ಟೆಲ್ ಬಳಿ ಬಹಳಷ್ಟು ಸಮಸ್ಯೆಗಳು ಇದ್ದವು. ವಿದ್ಯಾರ್ಥಿನಿಯರು ಊಟಕ್ಕೂ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ದಿನಗಳೆದಂತೆ ಗಲಭೆಕೋರರು ಹಿಂದೂಗಳನ್ನೇ ಗುರಿಯಾಗಿಸಿ ದಾಳಿ ಮಾಡಲು ಪ್ರಾರಂಭಿಸಿದರು. ಇಂಟರ್‌ನೆಟ್ ಸೌಲಭ್ಯ ಕಡಿತ ಮಾಡಲಾಗಿತ್ತು. ಪರಿಸ್ಥಿತಿ ಕುರಿತು ಪೋಷಕರಿಗೆ ಮಾಹಿತಿ ನೀಡಲು ಸಾಧ್ಯವಾಗಲಿಲ್ಲ. ಭಾರತ ಸರಕಾರದ ಸಹಕಾರದಿಂದ ಮರಳಿ ಮನೆಗೆ ಬಂದಿದ್ದೇವೆ ಎಂದು ವಿದ್ಯಾರ್ಥಿ ನೇಹಲ್ ಸವಣೂರು ಹೇಳಿದರು.**

- ಬಾಂಗ್ಲಾದಲ್ಲಿ ನಡೆದ ಹಿಂಸೆ ವಿವರಿಸಿದ ವಿದ್ಯಾರ್ಥಿಗಳು
- ರೂಮಿನಲ್ಲಿ ಕೂಡಿ ಹಾಕಿ ಚಿತ್ರ ಹಿಂಸೆ
- ಕರಾಳ ಅನುಭವ ಮಾಹಿತಿ ನೀಡಿದ ವೈದಕೀಯ ವಿದ್ಯಾರ್ಥಿ ನೇಹಲ್ ಸವಣೂರು
- ಊಟಕ್ಕೂ ಪರದಾಡಿದ ವೈದಕೀಯ ವಿದ್ಯಾರ್ಥಿಗಳು
- ಭಾರತ ಸರಕಾರದಿಂದ ಮರಳಿ ಬಂದ 25 ವೈದ್ಯಕೀಯ ವಿದ್ಯಾರ್ಥಿಗಳು

ಅಭಿಮಾನಿಗಳು, ಕಾಂಗ್ರೆಸ್ ನಾಯಕರು, ಕಾರ್ಯಕರ್ತರಿಂದ ಶುಭಾಶಯ

# ಗೃಹ ಸಚಿವ ಪರಂಗೆ 73ನೇ ಹುಟ್ಟುಹಬ್ಬ ಸಂಭ್ರಮ

**ತುಮಕೂರು:** ಗೃಹ ಸಚಿವ ಡಾ.ಜಿ. ಪರಮೇಶ್ವರ್ ಅವರ 73ನೇ ಹುಟ್ಟುಹಬ್ಬವನ್ನು ನಗರದ ಹೆಗ್ಗೆರೆ ಸಮೀಪದ ಗೊಲ್ಲಹಳ್ಳಿಯಲ್ಲಿ ಆಚರಿಸಲಾಯಿತು.

ಗೊಲ್ಲಹಳ್ಳಿಯ ತಮ್ಮ ನಿವಾಸದಲ್ಲಿ ಅಭಿಮಾನಿಗಳು ಏರ್ಪಡಿಸಿದ್ದ ಜನ್ಮದಿನ ಆಚರಣೆ ಕಾರ್ಯಕ್ರಮದಲ್ಲಿ ಕೇಕ್ ಕತ್ತರಿಸಿದ ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರಿಗೆ ಅಭಿಮಾನಿಗಳು, ಕಾಂಗ್ರೆಸ್ ಪಕ್ಷದ ನಾಯಕರು, ಕಾರ್ಯಕರ್ತರಿಂದ ಶುಭಾಶಯಗಳ ಮಹಾಪೂರವೇ ಹರಿದು ಬಂದಿತು. ಸಚಿವರ ನಿವಾಸಕ್ಕೆ ಬೌದ್ಧಧರ್ಮದ ಗುರುಗಳು ಭೇಟಿ ನೀಡಿ ಹುಟ್ಟುಹಬ್ಬದ ಶುಭಾಶಯ ಕೋರಿದರು.

ಜಿಲ್ಲಾಡಳಿತದ ಪರವಾಗಿ ಜಿಲ್ಲಾಧಿಕಾರಿ ಶುಭಕಲ್ಯಾಣ್, ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿ. ಪ್ರಭು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ಕೆ.ವಿ., ಪಾಲಿಕೆ ಆಯುಕ್ತೆ ಬಿ.ವಿ. ಅಶ್ವಿಜಾ, ಅಪರ ಜಿಲ್ಲಾಧಿಕಾರಿ ತಿಪ್ಪೇಸ್ವಾಮಿ ಸೇರಿದಂತೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಶುಭಕೋರಿದರು.

ತುಮಕೂರು ಹಾಲು ಒಕ್ಕೂಟದ ವತಿಯಿಂದ ಆಡಳಿತಾಧಿಕಾರಿಗಳು, ವ್ಯವಸ್ಥಾಪಕ ನಿರ್ದೇಶಕ ಶ್ರೀನಿವಾಸ್ ಸಿಬ್ಬಂದಿ ವರ್ಗದವರು ಸಹ ಸಚಿವರಿಗೆ ಜನ್ಮದಿನದ ಶುಭ ಕೋರಿದರು. ನಿವಾಸದಲ್ಲಿ ಮಧ್ಯರಾತ್ರಿಯಿಂದಲೇ ಅಭಿಮಾನಿಗಳು, ಕೊರಟಗೆರೆ ವಿಧಾನಸಭಾ ಕ್ಷೇತ್ರದ ಮುಖಂಡರು, ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ಆಗಮಿಸಿ ತಮ್ಮ ನೆಚ್ಚಿನ ನಾಯಕನಿಗೆ ಬೃಹತ್ ಪುಷ್ಪಹಾರಗಳನ್ನು ಹಾಕುವ ಮೂಲಕ ಜನ್ಮದಿನದ ಶುಭ ಕೋರಿ, ಸಿಹಿ ಹಂಚಿ ಸಂಭ್ರಮ ವ್ಯಕ್ತಪಡಿಸಿದರು.

ಸಚಿವ ಪರಮೇಶ್ವರ್ ಹುಟ್ಟು ಹಬ್ಬದ ಅಂಗವಾಗಿ ಪೊಲೀಸ್ ಇಲಾಖೆ ಅಧಿಕಾರಿಗಳು ಶುಭಾಶಯ ಕೋರಿದರು.

**ಅಧಿಕಾರ ಶಾಶ್ವತವಲ್ಲ. ಭಗವಂತ ಅಧಿಕಾರವನ್ನು ಕೊಟ್ಟಾಗ ಬಡಜನರ ಸೇವೆ ಮಾಡಲು ಶ್ರಮಿಸಬೇಕು. ಹುಟ್ಟುಹಬ್ಬದ ಸಂದರ್ಭದಲ್ಲಿ ಜನರು ತೋರಿಸುವ ಪ್ರೀತಿಗೆ ಬೆಲೆಕಟ್ಟಲು ಸಾಧ್ಯವಿಲ್ಲ. ನನ್ನ ಜೀವನ ಬಡಜನರ ಸೇವೆಗೆ ಮೀಸಲು.**
**ಡಾ.ಜಿ.ಪರಮೇಶ್ವರ್** ಗೃಹ ಸಚಿವ

## ಸಮಾಚಾರ ಸಣ್ಣದಲ್ಲ

### ಅತ್ಯಾಚಾರ ಪ್ರಕರಣ: 10 ಮಂದಿಗೆ ಜಾಮೀನು

**ಧಾರವಾಡ:** ಹಾನಗಲ್ ತಾಲೂಕಿನಲ್ಲಿ ನಡೆದ ಮಹಿಳೆ ಮೇಲಿನ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಬಂಧಿತರಾಗಿರುವ 19 ಆರೋಪಿಗಳ ಪೈಕಿ 10 ಮಂದಿಗೆ ಧಾರವಾಡ ಹೈಕೋರ್ಟ್ ಪೀಠ ಷರತ್ತುಬದ್ಧ

ಜಾಮೀನು ಮಂಜೂರು ಮಾಡಿತು. ಜನವರಿ 11ರಂದು ಹಾನಗಲ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಆರೋಪಿ ಸಂಖ್ಯೆ 5, 6, 9, 10, 12, 14, 16, 17, 18, 19 ಸೇರಿದಂತೆ 10 ಮಂದಿಗೆ 2 ಲಕ್ಷ ರು. ಶ್ಯೂರಿಟಿಗಳೊಂದಿಗೆ ಜಾಮೀನು ಮಂಜೂರಾಗಿದೆ. ವಿಚಾರಣೆಗೆ ನಿಯಮಿತವಾಗಿ ಹಾಜರಿರಬೇಕು. ಸಾಕ್ಷಿಗಳಿಗೆ ಯಾವುದೇ ಬೆದರಿಕೆ ಹಾಕುವಂತಿಲ್ಲ ಎಂದು ಕೋರ್ಟ್ ಷರತ್ತು ವಿಧಿಸಿದೆ. ಇನ್ನು, ಪ್ರಕರಣದ 7 ಪ್ರಮುಖ ಆರೋಪಿಗಳಿಗೆ ಜಾಮೀನು ದೊರೆತಿಲ್ಲ. ಘಟನೆಯ ಹಿನ್ನೆಲೆ: ಹಾನಗಲ್ ಸಮೀಪದ ವಸತಿಗೃಹದಲ್ಲಿ ಜೋಡಿ ಯೊಂದು ತಂಗಿತ್ತು. ಈ ಬಗ್ಗೆ ಮಾಹಿತಿ ತಿಳಿದ ಕೆಲವು ಯುವಕರು ಏಕಾಏಕಿ ನುಗ್ಗಿ ಹಲ್ಲೆ ಮಾಡಿದ್ದರು. ನಂತರ ಹಾನಗಲ್ ಸಮೀಪದ ಅರಣ್ಯ ಪ್ರದೇಶಕ್ಕೆ ಮಹಿಳೆಯನ್ನು ಎಳೆದೊಯ್ದಿದ್ದ ಆರೋಪಿಗಳು ಸಾಮೂಹಿಕ ಅತ್ಯಾಚಾರ ಎಸಗಿದ್ದರು.

### ಶಾಸಕ ನರೇಂದ್ರ ಸ್ವಾಮಿಗೆ ಪಿತೃ ವಿಯೋಗ

**ಮಂಡ್ಯ:** ಅನಾರೋಗ್ಯದಿಂದ ಬಳಲುತ್ತಿದ್ದ ಮಳವಳ್ಳಿ ಶಾಸಕ ನರೇಂದ್ರಸ್ವಾಮಿ ಅವರ ತಂದೆ ಪಿ.ಎಸ್.



ಮಲ್ಲಯ್ಯ ಚಿಕಿತ್ಸೆ ಫಲಿಸದೇ ಸೋಮವಾರ ತಡರಾತ್ರಿ ಕೊನೆಯುಸಿರೆಳೆದಿದ್ದಾರೆ. ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ಪುರಗಾಲಿ ಗ್ರಾಮದ ಮಲ್ಲಯ್ಯ (93) ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆಂದು ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಿಸದೆ ಮಲ್ಲಯ್ಯ ಮೃತಪಟ್ಟಿದ್ದಾರೆ. ತಾಲೂಕು ಬೋರ್ಡ್ ಸದಸ್ಯರಾಗಿ, ಪುರಿಗಾಲಿ ಗ್ರಾ.ಪಂ, ಹಾಲು ಉತ್ಪಾದಕರ ಸಂಘ, ಪ್ರಾಥಮಿಕ ಕೃಷಿ ಪರಿಷತ್‌ನ ಅಧ್ಯಕ್ಷರಾಗಿ ಮಲ್ಲಯ್ಯ ಸೇವೆ ಸಲ್ಲಿಸಿದ್ದರು. ಮೃತರು ಪತ್ನಿ, ಶಾಸಕ ನರೇಂದ್ರಸ್ವಾಮಿ ಸೇರಿ ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.

### ಮಗನಿಂದಲೇ ತಾಯಿ ಮೇಲೆ ಅತ್ಯಾಚಾರ

**ಚಿಕ್ಕಬಳ್ಳಾಪುರ:** ಕುಡಿದ ಅಮಲಿನಲ್ಲಿದ್ದ ಮಗ ತನ್ನ ಹೆತ್ತ ತಾಯಿಯ ಮೇಲೆಯೇ ಅತ್ಯಾಚಾರ ಎಸಗಿರುವ ಘಟನೆ ಗುಡಿಬಂಡೆ ತಾಲೂಕಿನಲ್ಲಿ ನಡೆದಿದ್ದು ತಡವಾಗಿ ಬೆಳಕಿಗೆ ಬಂದಿದೆ. ತಾಲೂಕಿನ ಉಲ್ಲೋಡು ಗ್ರಾಪಂ ವ್ಯಾಪ್ತಿಯ ಚಿನ್ನಹಳ್ಳಿ ಗ್ರಾಮ ದಲ್ಲಿ ಭಾನುವಾರ ಘಟನೆ ನಡೆದಿದೆ.

ಮುಖ್ಯಮಂತ್ರಿ ವಿರುದ್ಧ ಆರಂಭಿಸಿ, ಡಿಕೆಶಿ ವಿರುದ್ಧ ವಾಗ್ದಾಳಿ | ಇಡೀ ಪಾದಯಾತ್ರೆ ಡೈವರ್ಟ್ ಆಗಿದ್ದಕ್ಕೆ ಬಿಜೆಪಿಗರ ಅಸಮಾಧಾನ

# ಪಾದಯಾತ್ರೆ ಗುರಿ ಬಿಜೆಪಿಯಲ್ಲೇ ಗೊಂದಲ

**ಬೆಂಗಳೂರು:** ಮುಡಾ, ವಾಲ್ಮೀಕಿ ಹಗರಣವನ್ನು ಮುಂದಿಟ್ಟುಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ದೋಸ್ತಿ ಪಕ್ಷಗಳು ಆರಂಭಿಸಿರುವ ಪಾದಯಾತ್ರೆ ಹಾದಿ ತಪ್ಪಿದೆಯೇ ಎನ್ನುವ ಅನುಮಾನ ಶುರುವಾಗಿದೆ.



ಪಾದಯಾತ್ರೆ ಆರಂಭಗೊಂಡ ದಿನದಿಂದಲೂ, ಇಡೀ ಯಾತ್ರೆಯನ್ನು ಕುಮಾರಸ್ವಾಮಿ ಅವರ ಭಾಷಣವೇ ಹೈಲೈಟ್ ಆಗುತ್ತಿದೆ. ಅವರ ಇಡೀ ಭಾಷಣದಲ್ಲಿ ಡಿ.ಕೆ.ಶಿವಕುಮಾರ್ ಅವರನ್ನು ಟೀಕಿಸುವುದು ಬಿಟ್ಟರೆ, ಇನ್ಯಾವುದೇ ಮಾತುಗಳನ್ನು ಆಡುತ್ತಿಲ್ಲ. ಇನ್ನು ವಿಜಯೇಂದ್ರ ಸೇರಿದಂತೆ ಕೆಲ ನಾಯಕರು ಮಾತನಾಡಿದರೂ, ಅವರೂ ಶಿವಕುಮಾರ್ ಅವರ ಆರೋಪಗಳಿಗೆ ಉತ್ತರಿಸುವುದರಲ್ಲಿಯೇ ಭಾಷಣವನ್ನು ಮುಗಿಸುತ್ತಿದ್ದಾರೆ ಎನ್ನುವ ಮಾತುಗಳು ಶುರುವಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ಆಗ್ರಹಿಸಿದ ಆರಂಭವಾದ ಬಿಜೆಪಿ-ಜೆಡಿಎಸ್ ನಾಯಕರ ಪಾದಯಾತ್ರೆ ಇದೀಗ ಈ ಉದ್ದೇಶವನ್ನೇ ಬಿಟ್ಟು ಡಿ.ಕೆ.ಶಿವಕುಮಾರ್ ವಿರುದ್ಧ ವಾಗ್ದಾಳಿಗೆ ವೇದಿಕೆಯನ್ನು ಬಳಸಿಕೊಳ್ಳಲಾಗುತ್ತಿದೆ. ಆದರೆ ಈ ವೈಯಕ್ತಿಕ ಟೀಕೆಯಿಂದ ಸರಕಾರಕ್ಕಾಗಲಿ, ಪಕ್ಷಕ್ಕಾಗಲಿ ಡ್ಯಾಮೇಜ್ ಆಗುವುದಿಲ್ಲ. ಆದರೂ ಕಳೆದ ನಾಲ್ಕು ದಿನಗಳಿಂದ ಆಣೆ-ಪ್ರಮಾಣದಲ್ಲಿಯೇ ಸಮಯ ಕಳೆಯುತ್ತಿರುವುದರಿಂದ ಪಾದಯಾತ್ರೆಯಲ್ಲಿ ಭಾಗವಹಿಸಿರುವ ಅನೇಕರಿಗೆ, ಈ ಪಾದಯಾತ್ರೆ ಯಾರ ವಿರುದ್ಧ ನಡೆಸಲಾಗುತ್ತಿದೆ ಎನ್ನುವ ಸಂದೇಹ ಶುರುವಾಗಿದೆ.

**ಡಿಕೆ ವ್ಯವಸ್ಥಿತ ತಂತ್ರ?:** ಪಾದಯಾತ್ರೆಯಲ್ಲಿ ಡಿ.ಕೆ. ಶಿವಕುಮಾರ್ ಅವರನ್ನು ಟಾರ್ಗೆಟ್ ಆಗಿದ್ದಾರೆ ಎನಿಸುತ್ತಿದೆ. ಆದರೆ ಕಾಂಗ್ರೆಸಿಗರ ಪ್ರಕಾರ, ಇಡೀ ಪಾದಯಾತ್ರೆ ಇದೇ ರೀತಿಯಲ್ಲಿ ನಡೆಯಬೇಕು

ಎನ್ನುವುದು ಡಿ.ಕೆ.ಶಿವಕುಮಾರ್ ಅವರ ಲೆಕ್ಕಾಚಾರವಾಗಿತ್ತು ಎನ್ನಲಾಗುತ್ತಿದೆ. ಡಿ.ಕೆ.ಶಿವಕುಮಾರ್ ಹಾಗೂ ಕುಮಾರಸ್ವಾಮಿ ಅವರ ವೈಯಕ್ತಿಕ ನಿಂದನೆ ಇದೇ ಮೊದಲಲ್ಲ. ಆದ್ದರಿಂದ ಮತ್ತೊಮ್ಮೆ ಇದೇ ವೈಯಕ್ತಿಕ ಟೀಕಾಪ್ರಹಾರ ನಡೆಸಿಕೊಂಡರೆ ಯಾರಿಗೂ ಡ್ಯಾಮೇಜ್ ಆಗುವುದಿಲ್ಲ. ಆದರೆ ಮುಡಾ, ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ಬಗ್ಗೆ ಮಾತನಾಡಿದರೆ ಪಕ್ಷಕ್ಕೆ ಡ್ಯಾಮೇಜ್ ಆಗುತ್ತದೆ ಎನ್ನುವ ಕಾರಣಕ್ಕೆ ಬಿಜೆಪಿ ಪಾದಯಾತ್ರೆ ಆರಂಭಿಸುವ ಮೊದಲೇ, ಡಿಕೆ ಬಿಜೆಪಿಗರ ವಿರುದ್ಧ ವಾಗ್ದಾಳಿ ಆರಂಭಿಸಿದರು. ಈ ಆರೋಪಗಳಿಗೆ ಸಮರ್ಥನೆ ಕೊಡುವಲ್ಲಿಯೇ ಬಿಜೆಪಿ-ಜೆಡಿಎಸ್‌ನ ಪಾದಯಾತ್ರೆ ನಾಲ್ಕು ದಿನ ಕಳೆದಿದೆ. ಮುಂದಿನ ದಿನದಲ್ಲಿಯೂ ಕಾಂಗ್ರೆಸಿಗರ ಆರೋಪಕ್ಕೆ ಸಮರ್ಥನೆ ಕೊಡುವುದರಲ್ಲಿಯೇ ಮುಗಿಯಲಿದೆ ಎನ್ನುವುದು ಕಾಂಗ್ರೆಸಿಗರ ಲೆಕ್ಕಾಚಾರವಾಗಿದೆ.

ಈ ನಡೆಯನ್ನು ಗಮನಿಸಿದರೆ, ಬಿಜೆಪಿ-ಜೆಡಿಎಸ್ ನಾಯಕರ ಹೋರಾಟದ ದಾರಿ ತಪ್ಪಿಸುವ ಉದ್ದೇಶದಿಂದಲೇ ಪಾದಯಾತ್ರೆ ಆರಂಭಕ್ಕೂ ಮುನ್ನ ದಿನವೇ ಕಾಂಗ್ರೆಸ್ ಜನಾಂದೋಲನ ಯಾತ್ರೆ ಆರಂಭಿಸಿ, ದೇವೇಗೌಡ ಹಾಗೂ ಯಡಿಯೂರಪ್ಪ ಕುಟುಂಬದ ವಿರುದ್ಧ ವಾಗ್ದಾಳಿ ನಡೆಸಲಾಯಿತು.

**ನಮ್ಮ ಪಾದಯಾತ್ರೆಯ ಉದ್ದೇಶ ವಾಲ್ಮೀಕಿ ಮತ್ತು ಮುಡಾ ಹಗರಣದ ಕುರಿತು ಜನರಿಗೆ ತಿಳಿಸುವುದು. ಎರಡು ದಿನಗಳಿಂದ ವೈಯಕ್ತಿಕ ಟೀಕೆಗಳು ಹೆಚ್ಚಾಗಿವೆ. ಇದರಿಂದ ಕಾರ್ಯಕರ್ತರ ಹುಮ್ಮಸ್ಸು ಕಡಿಮೆಯಾಗುತ್ತಿದೆ ಅನಿಸುತ್ತಿದೆ. ಇವರ ವಾಗ್ಯುದ್ಧಕ್ಕೆ ಬೇರೆ ಕಡೆ ವೇದಿಕೆ ಕಲ್ಪಿಸಿಕೊಡಬೇಕು. ಮುಖ್ಯಮಂತ್ರಿ ವಿರುದ್ಧದ ಹೋರಾಟ ಮರೆತು ಬಿಟ್ಟರು ಅನಿಸುತ್ತಿದೆ. ನಮ್ಮ ಗುರಿಯಿರುವುದು ಸಿಎಂ ರಾಜೀನಾಮೆ. ನಿರಂತರವಾಗಿ ಅದಕ್ಕೆ ಒತ್ತು ಕೊಡಬೇಕು.**
**-ಎಸ್.ಆರ್. ವಿಶ್ವನಾಥ್** ಬಿಜೆಪಿ ಶಾಸಕ

### ದಾರಿ ತಪ್ಪಿರುವುದು ಸರಿಯಲ್ಲ: ಬಿಜೆಪಿಯಲ್ಲೇ ಅಸಮಾಧಾನ

**ಈ ರೀತಿ ಪಾದಯಾತ್ರೆ ಆರಂಭಿಸುವ ಉದ್ದೇಶಕ್ಕೂ, ಸಾಗುತ್ತಿರುವ ದಾರಿಗೂ ಅಜಗಜಾಂತರವಾಗುತ್ತಿರುವುದಕ್ಕೆ ಬಿಜೆಪಿಯಲ್ಲಿಯೇ ಅಸಮಾಧಾನ ಶುರುವಾಗಿದೆ. ಮುಡಾ, ವಾಲ್ಮೀಕಿ ಹಗರಣದ ಬಗ್ಗೆ ಚರ್ಚಿಸುವ ಬದಲು, ವೈಯಕ್ತಿಕ ಟೀಕೆಗಳಿಗೆ ಈ ಪಾದಯಾತ್ರೆಯನ್ನು ಬಳಸಿಕೊಂಡರೆ, ಪಕ್ಷದ ಕಾರ್ಯಕರ್ತರಿಗೆ ಕೆಟ್ಟ ಸಂದೇಶ ರವಾನೆಯಾಗುತ್ತದೆ. ಕುಮಾರಸ್ವಾಮಿ ಅವರ ರೀತಿಯಲ್ಲಿಯೇ ವಿಜಯೇಂದ್ರ ಅವರು ಡಿಕೆ ಅವರನ್ನು ಟಾರ್ಗೆಟ್ ಮಾಡಿ ಮಾತನಾಡುವುದರಿಂದ ಯಾವುದೇ ಪ್ರಯೋಜನವಿಲ್ಲ. 140 ಕಿಮೀ ಪಾದಯಾತ್ರೆ ಮಾಡಿದರೂ, ಕಾಂಗ್ರೆಸ್‌ಗೆ ಯಾವುದೇ ಡ್ಯಾಮೇಜ್ ಆಗುತ್ತಿಲ್ಲ ಎಂದಾದರೆ ಇಷ್ಟು ಕಷ್ಟಪಡುವುದು ಏಕೆ ಬೇಕಿತ್ತು ಎನ್ನುವ ಪ್ರಶ್ನೆಗಳನ್ನು ಹಲವು ಕಾರ್ಯಕರ್ತರು ಎತ್ತಿದ್ದಾರೆ ಎನ್ನಲಾಗಿದೆ.**

ಬಿಜೆಪಿ-ಜೆಡಿಎಸ್ ನಾಯಕರು ಇದೀಗ ಡಿ.ಕೆ. ಶಿವಕುಮಾರ್ ಮಾಡುತ್ತಿರುವ ಆರೋಪಕ್ಕೆ ಪ್ರತ್ಯಾರೋಪ ಹಾಗೂ ಸಮರ್ಥನೆ ನೀಡುವಲ್ಲಿಯೇ ಸಮಯ ಕಳೆಯುತ್ತಿದ್ದಾರೆ.

### ದೇಶದ ಮೊದಲ ಟೆಕ್ ಯಾತ್ರೆಗೆ ಖರ್ಗೆ ಚಾಲನೆ

**ಮೈಸೂರು:** ಕರ್ನಾಟಕ ಇಎಸ್‌ಡಿಎಂ (ಎಲೆಕ್ಟ್ರಾನಿಕ್ ಸಿಸ್ಟಮ್ಸ್ ಡಿಸೈನ್ ಮತ್ತು ತಯಾರಿಕೆ) ವಲಯದಲ್ಲಿ ಕರ್ನಾಟಕವನ್ನು ಜಾಗತಿಕ

ನಾಯಕನನ್ನಾಗಿಸುವ ಗುರಿಯಿದ್ದು ಉದ್ಯಮಗಳ ಬೆಳೆಸುವ ವಾತಾವರಣ ಸೃಷ್ಟಿಸುವುದು ರಾಜ್ಯ ಸರಕಾರದ ಉದ್ದೇಶವಾಗಿದೆ ಎಂದು ಮಾಹಿತಿ ತಂತ್ರಜ್ಞಾನ ಖಾತೆ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ. ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ) ಮತ್ತು ಇಂಡಿಯಾ ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್ ಅಸೋಸಿಯೇಷನ್ (ಐಇಎಸ್‌ಎ) ಸಹಯೋಗದಲ್ಲಿ ಮೈಸೂರಿನಲ್ಲಿ 4ನೇ ಆವೃತ್ತಿ ಅನಾವರಣ ವೇಳೆ ನೀಡಿದ ಸಂದೇಶದಲ್ಲಿ ಸಚಿವರು ಮೈಸೂರನ್ನು ಉದ್ಯೋಗಶೀಲ ನಗರವನ್ನಾಗಿಸು ವುದಾಗಿ ಹೇಳಿದ್ದಾರೆ.

ಮೈಸೂರಿನಲ್ಲಿ ಸೆಮಿಕಂಡಕ್ಟರ್, ಎಲಿಮೆಂಟ್ ಮ್ಯಾನೇಜ್‌ಮೆಂಟ್ ಸಿಸ್ಟಂ ಮತ್ತು ಘಟಕ ಗೋದಾಮು, 20ಕ್ಕೂ ಹೆಚ್ಚು ಕಂಪನಿಗಳು ಸೇರ್ಪಡೆಗೊಳ್ಳುತ್ತಿದ್ದು ಸುಮಾರು 600 ಕೋಟಿ ರು.ಹೊಸ ಹೂಡಿಕೆ ಹರಿದು ಬಂದಿದೆ. ಹೆಚ್ಚುವರಿಯಾಗಿ 150 ಎಕರೆ ಪಿಸಿಬಿ ಕ್ಲಸ್ಟರ್ ಸ್ಥಾಪಿಸುವ ಉದ್ದೇಶದಿಂದ ಪ್ರಸ್ತುತ ಪರೀಕ್ಷಾ ಸೌಲಭ್ಯವನ್ನು ವಿಸ್ತರಿಸಲು, ಮಲ್ಟಿಟೆನೆನ್ಸಿ ಕ್ಲೀನ್ ರೂಮ್ ಸೇರಿಸಲು ಉದ್ದೇಶಿಸಿದ್ದೇವೆ. ಇದು 5000 ಹೊಸ ಉದ್ಯೋಗಗಳಿಗೆ ಚಾಲನೆ ನೀಡಲಿದೆ ಎಂದು ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

### ಪಾದಯಾತ್ರೆ ಮಾಡುವವರಿಗೆ ಸಮಾವೇಶದ ಮೂಲಕ ಉತ್ತರ

**ಅಥಣಿ:** ಮುಡಾ ಹಗರಣ ವಿಚಾರದಲ್ಲಿ ಮುಖ್ಯಮಂತ್ರಿಗಳು ರಾಜೀನಾಮೆ ಕೊಡುವ ಅಗತ್ಯವಿಲ್ಲ. ಅದರಲ್ಲಿ ಅವರ ಪಾತ್ರವೇನು ಇಲ್ಲ, ವಿರೋಧ ಪಕ್ಷದವರಿಗೆ ಅದರ ಬಗ್ಗೆ ಆರೋಪ ಮಾಡುವುದು, ಪಾದಯಾತ್ರೆ ಮಾಡುವುದು ಅವರಿಗೆ ಹಕ್ಕಿದೆ, ಅವರು ಮಾಡಲಿ. ನಾವು ಸಮಾವೇಶದ ಮೂಲಕ ಉತ್ತರ ನೀಡುತ್ತೇವೆ ಎಂದು ಸಚಿವ

ಸತೀಶ್ ಜಾರಕಿಹೊಳಿ ಅಭಿಪ್ರಾಯಪಟ್ಟರು.

ಸುದ್ದಿಗಾರರೊಂದಿಗೆ ಮಾತನಾಡಿ, ಮುಡಾ ವಿಚಾರವಾಗಿ ರಾಜ್ಯಪಾಲರು ಪ್ರಾಶುಕ್ಯೂಷನ್‌ಗೆ ಅನುಮತಿ ಕೊಟ್ಟರೆ ನಾವು ಕಾನೂನು ರೀತಿ ಹೋರಾಟ ಮಾಡುತ್ತೇವೆ. ಬಿಜೆಪಿ ಮತ್ತು ಜೆಡಿಎಸ್ ಜಂಟಿಯಾಗಿ ಹಮ್ಮಿಕೊಂಡಿರುವ ಪಾದಯಾತ್ರೆಗೆ ಪರ್ಯಾಯವಾಗಿ ಕಾಂಗ್ರೆಸ್ ಪಕ್ಷ ಮೈಸೂರಿನಲ್ಲಿ ಸಮಾವೇಶ ನಡೆಸಿ ವಿರೋಧಪಕ್ಷದವರಿಗೆ ಉತ್ತರ ನೀಡಲಾಗುವುದು ಎಂದು ಹೇಳಿದರು.

ರಾಜ್ಯದಲ್ಲಿ ಬಿಜೆಪಿ ಸರಕಾರದ ಅವಧಿಯಲ್ಲಿನ ಸುಮಾರು 21 ಹಗರಣಗಳಾಗಿವೆ. ಅವುಗಳ ತನಿಖೆ ಇಲ್ಲಿಯವರೆಗೆ ಮಂದವಾಗಿತ್ತು. ಇನ್ನು ಕ್ರಮೇಣ ಚುರುಕುಗೊಳಲಿವೆ. ಡಿಕೆಶಿ ಮತ್ತು ಎಚ್‌ಡಿಕೆ ಮಧ್ಯ ನಡೆಯುತ್ತಿರುವ ವಾಕ್ ಸಮರ ಆರೋಗ್ಯಪೂರ್ಣವಾದ ಬೆಳವಣಿಗೆಯಲ್ಲ, ನಾವು ಜನಪ್ರತಿನಿಧಿಗಳು, ಜನರ ಸೇವೆಯನ್ನು ಮಾಡುವುದರಲ್ಲಿ ಮಾದರಿಯಾಗಿರಬೇಕು. ರಾಜ್ಯದ ಜನರು ನಮ್ಮನ್ನು ಗಮನಿಸುತ್ತಿರುತ್ತಾರೆ ಎಂಬುದು ನನ್ನ ಅಭಿಪ್ರಾಯ ಎಂದರು.

ಬೆಟಗೇರಿ ಸೈಂಟ್ ಮೇರಿಸ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಘಟನೆ

# ವಿದ್ಯಾರ್ಥಿಗಳ ಕೂದಲಿಗೆ ಕತ್ತರಿ: ಶಿಕ್ಷಕನಿಗೆ ಧರ್ಮದೇಟು

**ಗದಗ:** ಆರು ಮಂದಿ ವಿದ್ಯಾರ್ಥಿಗಳ ಮಕ್ಕಳ ಕೂದಲು ಕಟ್ ಮಾಡಿದ್ದ ಕಂಪ್ಯೂಟರ್ ಶಿಕ್ಷಕನಿಗೆ ಧರ್ಮದೇಟು ನೀಡಿದ ಘಟನೆ ನಗರದ ಬೆಟಗೇರಿ ಸೈಂಟ್ ಮೇರಿಸ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದಿದೆ.

ಬಿನೋಯ್ ಎಂಬ ಶಿಕ್ಷಕ ಸ್ಕೂಲ್ ಮಕ್ಕಳ ಹೇರ್ ಕಟ್ ಮಾಡುವ ಮೂಲಕ ಉದ್ಧಟತನ ಮೆರೆದಿದ್ದ. ಕೂದಲು ಕಟ್ ಮಾಡುವ ವೇಳೆ 7ನೇ ತರಗತಿ ಆದಿತ್ಯ ಎಂಬ ವಿದ್ಯಾರ್ಥಿ ಹಣೆಗೆ ಕತ್ತರಿಯಿಂದ ಗಾಯವಾಗಿದೆ. ಕೂದಲು ಕಟ್ ಮಾಡಬೇಡಿ ಎಂದು ಬಾಲಕ ಗೋಗರೆದು ಒದ್ದಾಡಿದರೂ ಬಿಡದೆ ತುಂಡರಿಸಿದ್ದ. ಈ ವೇಳೆ ಹಣೆಗೆ ಗಾಯವಾಗಿದೆ. ವಿದ್ಯಾರ್ಥಿಗೆ ದೃಷ್ಟಿ ಕಡಿಮೆ ಇದೆ ನಂಜಾದರೆ ಏನು ಮಾಡುವುದು? ಏನಾದ್ರೂ ಆದರೆ ಹೇಗೆ ಎಂದು ಪಾಲಕರು ಕಿರಿಕ್ ಮಾಡಿದ್ದರು.

ನಾವು ಕಳೆದ 15 ದಿನಗಳ ಹಿಂದೆಯಷ್ಟೇ ಕಟಿಂಗ್ ಮಾಡಿಸಿದ್ದೇವೆ. ಕೂದಲು ಹೆಚ್ಚು ಬಂದಿರಲಿಲ್ಲ. ಆದರೂ ಶಿಕ್ಷಕ ಕಟ್ ಮಾಡುವ ಅವಶ್ಯಕತೆ ಏನಿತ್ತು? ಪಾಲಕರಿಗೆ ಹೇಳಬೇಕಿತ್ತು. ಏಕಾಏಕಿ ಕೂದಲು ಕಟ್ ಮಾಡಿರುವುದು ಯಾವ ಎಷ್ಟರ ಮಟ್ಟಿಗೆ ಸರಿ ಅಂತ ತಗಾದೆ ತೆಗೆದಿದ್ದರು. ಸ್ಥಳಕ್ಕೆ ಶ್ರೀರಾಮ ಸೇನೆ ಕಾರ್ಯಕರ್ತರು ಆಗಮಿಸಿದ್ದರು. ಈ ವೇಳೆ ಸ್ಕೂಲ್ ಆವರಣದಲ್ಲಿ ಕೆಲಕಾಲ ಹೈಡ್ರಾಮಾ ನಡೆಯಿತು. ನಂತರ ಸ್ಥಳಕ್ಕೆ ಗದಗ ಶಹರ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್ ಬುರಡಿ ಆಗಮಿಸಿದರು.

ಮೊದಲು ಶಿಕ್ಷಕನಾದವರು ಚೆನ್ನಾಗಿರಬೇಕು. ಶಿಕ್ಷಕನಾದವನು ಹೆಬ್ಬುಲಿ ಕಟಿಂಗ್ ಮಾಡಿಸಿಕೊಂಡಿದ್ದಿ, ಮಕ್ಕಳಿಗೆ ಕಟಿಂಗ್ ಮಾಡಿಸಿಕೊಂಡು ಬಾ ಎನ್ನುವುದು ಯಾವ ನ್ಯಾಯ? ಮೊದಲು ನೀನು ಸರಿಯಾಗಿರು ಎಂದು ಕೂಡಿದ ಜನರು ಬಿಇಒ ಸಮ್ಮುಖದಲ್ಲೇ ಶಿಕ್ಷಕನಿಗೆ ಧರ್ಮದೇಟು ನೀಡಿದರು.

### ವಜಾಗೊಳಿಸಲು ಆಗ್ರಹ

**ಬಿನೋಯ್ ವಿರುದ್ಧ ಕೇಸ್ ದಾಖಲಾಗಬೇಕು, ವೃತ್ತಿಯಿಂದ ವಜಾಗೊಳಿಸುವಂತೆ ಪೋಷಕರು ಆಗ್ರಹಿಸಿದರು. ನಂತರ ದುರ್ವರ್ತನೆ ತೋರಿದ ಶಿಕ್ಷಕನ ಬಗ್ಗೆ ಬಿಇಒ ಅವರು ವರದಿ ಪಡೆದುಕೊಂಡರು. ಮೇಲಾಧಿಕಾರಿಗಳಿಗೆ ವರದಿ ನೀಡಿ ಮುಂದಿನ ಕ್ರಮ ಜರುಗಿಸುವುದಾಗಿ ಭರವಸೆ ನೀಡಿದರು. ಶಿಕ್ಷಕ ಬಿನೋಯ್ ನನ್ನು ಪೊಲೀಸ್ ವಶಕ್ಕೆ ಪಡೆದುಕೊಂಡರು. ಈ ವೇಳೆ ಅನೇಕ ಪಾಲಕರು, ಸಂಘಟಕರು ಉಪಸ್ಥಿತರಿದ್ದರು.**

### 8ರ ಬಳಿಕ ರೈಲು ಪುನರಾರಂಭ

**ಹಾಸನ:** ಭೂಕುಸಿತದಿಂದ ಸ್ಥಗಿತಗೊಂಡಿರುವ ಬೆಂಗಳೂರು-ಮಂಗಳೂರು ನಡುವಣ ರೈಲು ಸಂಚಾರ ಆ. 8ರ ಬಳಿಕವೇ ಪುನರಾರಂಭವಾಗಲಿದೆ ಎಂದು ಮೈಸೂರು ರೈಲ್ವೇ ವಿಭಾಗ ತಿಳಿಸಿದೆ.



ಸಕಲೇಶಪುರ ತಾಲೂಕು ಎಡಕುಮೇರಿ ಮತ್ತು ಕಡಗರವಳ್ಳಿ ರೈಲು ನಿಲ್ದಾಣಗಳ ನಡುವೆ ರೈಲು ಹಳಿ ಪಕ್ಕ ಭೂಕುಸಿತ ಉಂಟಾಗಿರುವುದರಿಂದ ಬೆಂಗಳೂರು-ಮಂಗಳೂರು ನಡುವೆ 12 ರೈಲುಗಳ ಸಂಚಾರವನ್ನು ಜು. 27ರಿಂದ ರದ್ದು ಪಡಿಸಲಾಗಿದ್ದು, ಆ. 8ರ ವರೆಗೆ ಮುಂದುವರಿಯಲಿದೆ ಎಂದು ತಿಳಿಸಲಾಗಿದೆ. ಭೂಕುಸಿತದ ಸ್ಥಳದಲ್ಲಿ ರಕ್ಷಣೆಯ ತಡೆಗೋಡೆ ನಿರ್ಮಾಣದ ಕಾರ್ಯಾಚರಣೆ ಭರದಿಂದ ಸಾಗುತ್ತಿದ್ದು, ಹಳಿ ಸರಿಪಡಿಸುವ ಕಾರ್ಯ ಬಹುತೇಕ ಪೂರ್ಣಗೊಂಡಿದೆ. ಪರೀಕ್ಷಾರ್ಥವಾಗಿ ಗೂಡ್ಸ್ ಎಂಜಿನ್ ಚಲಾಯಿಸಲಾಗಿದೆ. ಆದರೆ ಪ್ರಯಾಣಿಕರ ರೈಲು ಸಂಚಾರಕ್ಕೆ ಸುರಕ್ಷಾ ಕ್ರಮಗಳ ಪ್ರಕ್ರಿಯೆ ನಡೆಯಬೇಕಾಗಿದೆ. ಹಾಗಾಗಿ ಆ. 8ರ ವರೆಗೂ ರೈಲು ಸಂಚಾರ ಇರುವುದಿಲ್ಲ ಎಂದು ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

**{ಸಾ.ರಾ.ಮಹೇಶ್}** ಮಾಜಿ ಸಚಿವ

**ಡಿ.ಕೆ. ಶಿವಕುಮಾರ್ ನೀವು ಸಿಎಂ ಆಗಿ ಯಾರು ಬೇಡ ಅಂದ್ರು. ಹೈಕಮಾಂಡ್ ನಲ್ಲಿ ಏನು ತೀರ್ಮಾನ ಆಗಿದೆಯೋ ಗೊತ್ತಿಲ್ಲ. ಏನೋ ನಮ್ಮವ್ರು ಒಬ್ಬರು ಮುಖ್ಯಮಂತ್ರಿ ಆಗಲಿ ಎಂದು ಜನರು ನಿಮಗೆ 136 ಸ್ಥಾನ ಕೊಟ್ಟಿದ್ದಾರೆ. ಮುಂದೆ ನೀವೂ ಸಿಎಂ ಆದರೆ ಸಂತೋಷ. ಅದನ್ನು ಬಿಟ್ಟು ದೇವೇಗೌಡರ ಕುಟುಂಬದ ಮೇಲೆ ಏಕೆ ದ್ವೇಷ ಕಾರುತ್ತೀರಾ?**

## ಸಂಪಾದಕೀಯ

# ಭದ್ರತೆ ಬಗ್ಗೆ ಕಟ್ಟೆಚ್ಚರ ಅಗತ್ಯ

ಬಾಂಗ್ಲಾದೇಶದ ರಾಜಕೀಯ ಬೆಳವಣಿಗೆ ಹಿನ್ನೆಲೆಯಲ್ಲಿ ಭಾರತ ತನ್ನ ರಕ್ಷಣೆಯ ವಿಚಾರದಲ್ಲಿ ಇನ್ನಷ್ಟು ಎಚ್ಚರ ವಹಿಸಬೇಕಾಗಿದೆ. ನೆರೆಹೊರೆಯ ರಾಷ್ಟ್ರಗಳು ಮಿತ್ರರಾಷ್ಟ್ರಗಳಾಗಿದ್ದಾಗ ಭದ್ರತೆಯ ಬಗ್ಗೆ ಹೆಚ್ಚಿನ ಆತಂಕವಿರುವುದಿಲ್ಲ. ಆದರೆ ಮಿತ್ರರಾಷ್ಟ್ರಗಳೇ ಶತ್ರು ರಾಷ್ಟ್ರಗಳ ಜತೆ ಸೇರಿದರೆ ಇದಕ್ಕಿಂತ ಹೆಚ್ಚಿನ ಅಪಾಯ ಮತ್ತೊಂದಿಲ್ಲ. ಕಳೆದ ಒಂದು ದಶಕದಲ್ಲಿ ಭಾರತದ ಪರಮಾಪ್ತ ರಾಷ್ಟ್ರಗಳು ಕೂಡ ಶತ್ರು ರಾಷ್ಟ್ರದ ಜತೆ ಕೈ ಜೋಡಿಸಿದ ಉದಾಹರಣೆಗಳಿವೆ. ಬದಲಾದ ಈ ರಾಜತಾಂತ್ರಿಕ ಸಂಬಂಧಕ್ಕೆ ಅನುಗುಣವಾಗಿ ನಾವೂ ದೇಶದ ರಕ್ಷಣಾ ನೀತಿಯನ್ನು ಬದಲಾಯಿಸಿಕೊಳ್ಳುವುದು ಅನಿವಾರ್ಯ. ಅಮೆರಿಕವನ್ನು ಹಿಂದಿಕ್ಕಿ ವಿಶ್ವದ ಸೂಪರ್ ಪವರ್ ಆಗಲು ಹೊರಟಿರುವ ಚೀನಾ ನೆರೆಹೊರೆಯ ರಾಷ್ಟ್ರಗಳೆಲ್ಲವನ್ನೂ ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಪ್ರಯತ್ನಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಕ್ಸಿ ಜಿನ್‌ಪಿಂಗ್ ಅವರು ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾದ ನಂತರ ಚೀನಾ, ಆಕ್ರಮಣಕಾರಿ ವಿದೇಶಾಂಗ ನೀತಿಯನ್ನು ಅನುಸರಿಸಿಕೊಂಡು ಬರುತ್ತಿದೆ. ತನ್ನ 'ಬೆಲ್ಟ್ ಅಂಡ್ ರೋಡ್' ನೀತಿಯನುಸಾರ ಸಣ್ಣರಾಷ್ಟ್ರಗಳನ್ನು ಸಾಲದ ಕೂಪದಲ್ಲಿ ಬೀಳಿಸಿ ಬಳಿಕ ತನ್ನೆದುರು ಮಂಡಿಯೂರುವಂತೆ ಮಾಡಲು ಚೀನಾ ಯಶಸ್ವಿಯಾಗಿದೆ. ಚೀನಾದ ಈ ತಂತ್ರದ ಕಾರಣದಿಂದಲೇ ಭಾರತದ ನಿಕಟ ಮಿತ್ರರಾಗಿದ್ದ ನೇಪಾಳ, ಶ್ರೀಲಂಕಾ, ಮಾಲ್ಡೀವ್ಸ್ ನಂತಹ ರಾಷ್ಟ್ರಗಳು ಈಗ ಚೀನಾದ ತೆಕ್ಕೆಗೆ ಬಿದ್ದಿವೆ. ಇನ್ನು ಸಾಲದ ಸುಳಿಯಲ್ಲಿ ಸಿಲುಕಿರುವ ಪಾಕಿಸ್ತಾನವಂತೂ ಸಂಪೂರ್ಣವಾಗಿ ಚೀನಾವನ್ನು ಅವಲಂಬಿಸಿದೆ. ಶೇಖ್ ಹಸೀನಾ ಪ್ರಧಾನಿ ಆಗಿರುವ ತನಕ ಬಾಂಗ್ಲಾದೇಶವು ಚೀನಾದ ತಂತ್ರಗಾರಿಕೆಗೆ ಮರುಳಾಗಿರಲಿಲ್ಲ. ಮಾತ್ರವಲ್ಲ ದೇಶದ ಆಯಕಟ್ಟಿನ ಜಾಗದಲ್ಲಿ ತನ್ನ ಬಂದರು ಅಭಿವೃದ್ಧಿಗೆ ಭಾರತಕ್ಕೆ ಅವಕಾಶ ನೀಡಿತ್ತು. ಇದೀಗ ಸೇನಾಡಳಿತವು ಭಾರತದ ಬಗ್ಗೆ ಯಾವ ನಿಲುವು ತೆಗೆದುಕೊಳ್ಳಲಿದೆ ಎಂದ ಕಾದು ನೋಡಬೇಕಾಗಿದೆ. ಬಾಂಗ್ಲಾದಲ್ಲಿ ನಡೆದ ಹಠಾತ್ ವಿದ್ಯಮಾನಗಳಲ್ಲಿ ಚೀನಾ ಮತ್ತು ಪಾಕಿಸ್ತಾನದ ಕೈವಾಡವಿರುವುದು ಸ್ಪಷ್ಟ. ಇದಕ್ಕೆ ಆಧಾರ ಎಂಬಂತೆ ಪ್ರಧಾನಿ ಹಸೀನಾ ಅವರು ದೇಶ ತೊರೆದ ಬೆನ್ನಲ್ಲೇ ಭಾರತ ವಿರೋಧಿ ನಿಲುವು ಹೊಂದಿರುವ ಬಾಂಗ್ಲಾ ನ್ಯಾಷನಲ್ ಪಾರ್ಟಿ ನಾಯಕಿ ಖಲೀದಾ ಜಿಯಾ ಅವರನ್ನು ಜೈಲಿನಿಂದ ಬಿಡುಗಡೆ ಮಾಡಲಾಗಿದೆ. ಪೆಸಿಫಿಕ್ ಮತ್ತು ಹಿಂದೂ ಮಹಾಸಾಗರದಲ್ಲಿ ತನ್ನ ಪ್ರಾಬಲ್ಯ ಹೆಚ್ಚಿಸಿಕೊಂಡಿರುವ ಚೀನಾ ಭಾರತವನ್ನು ಹತ್ತಿಕ್ಕಲು ವ್ಯೂಹ ಹೆಣೆಯುತ್ತಲೇ ಇದೆ. ಈಗಾಗಲೇ ಶ್ರೀಲಂಕಾ, ನೇಪಾಳ ಮತ್ತು ಮಾಲ್ಡೀವ್ಸ್‌ನಲ್ಲಿ ತನ್ನ ವ್ಯಾಪಾರ ಮತ್ತು ಭದ್ರತಾ ಹಿತಾಸಕ್ತಿಗಳನ್ನು ಭದ್ರಪಡಿಸಿಕೊಳ್ಳಲು ಆಯಕಟ್ಟಿನ ಸ್ಥಳಗಳಲ್ಲಿ ಹೂಡಿಕೆ ಮಾಡಿದೆ. ಬಾಂಗ್ಲಾ ಬೆಳವಣಿಗೆ ಹಿನ್ನೆಲೆಯಲ್ಲಿ ಭಾರತ ಭದ್ರತೆಯ ಬಗ್ಗೆ ಕಟ್ಟೆಚ್ಚರ ವಹಿಸಬೇಕಿದೆ.

## ಸೊಂಪಾದಕೀಯ

# ದಟ್ಟಣೆ ಎಂಬ ಪೆಡಂಭೂತ!

ರಾಜಧಾನಿ ಬೆಂಗಳೂರು ಐಟಿ ಸಿಟಿ, ಸ್ಟಾರ್ಟ್-ಅಪ್ ಹಬ್, ಸಿಲಿಕಾನ್ ವ್ಯಾಲಿ ಎಂದೆಲ್ಲ ಹೆಸರು ಪಡೆದಿದೆ. ಆದರೆ ಇದರ ಜತೆಜತೆಗೆ ಟ್ರಾಫಿಕ್ ಸಮಸ್ಯೆಯನ್ನೂ ಅಷ್ಟೇ ದೊಡ್ಡ ಪ್ರಮಾಣದಲ್ಲಿ ಹೊತ್ತು ಕೂತಿದೆ. ಸಂಚಾರ ದಟ್ಟಣೆ ತಗ್ಗಿಸಲು ಮೆಟ್ರೋ, ಬಿಎಂಟಿಸಿ ಬಸ್‌ನಂಥ ಸಮೂಹ ಸಾರಿಗೆಗೆ ಹೆಚ್ಚೆಚ್ಚು ಅವಕಾಶ ನೀಡಲಾಗುತ್ತಿದೆ. ಆದರೂ ರಸ್ತೆಯಲ್ಲಿ ವಾಹನ ಮುತ್ತಿಕೊಂಡರೆ, ಮೆಟ್ರೋ, ಬಿಎಂಟಿಸಿಯಲ್ಲಿ ಜನ ಮುತ್ತಿಕೊಂಡಿರೋದು ಎಲ್ಲರಿಗೂ ಗೊತ್ತಿರೋ ಸತ್ಯ. ಅದಕ್ಕೆ ಸುರಂಗ ಮಾರ್ಗ ಕೊರೆದು, ಸಂಚಾರವನ್ನು ತಗ್ಗಿಸೋ ಪ್ಲಾನ್‌ನಲ್ಲಿ ಸರಕಾರವಿದೆ. ಈ ಯೋಜನೆ ಪೂರ್ಣಗೊಂಡು ಸುರಂಗದಲ್ಲಿ ವಾಹನಗಳು ಹೋಗುವಷ್ಟರಲ್ಲಿ ಸುರಂಗದಲ್ಲಿಯೂ ಸಂಚಾರ ದಟ್ಟಣೆ ಆಗುವಂಥ ಸ್ಥಿತಿ ನಿರ್ಮಾಣವಾದ್ರೂ ಅಚ್ಚರಿಯಿಲ್ಲ. ಬೆಂಗಳೂರಿನ ಟ್ರಾಫಿಕ್‌ನಲ್ಲಿ ಅದರಲ್ಲಿಯೂ ಬೆಳಗ್ಗೆ ಹಾಗೂ ಸಾಯಂಕಾಲದ ಸಮಯದಲ್ಲಿ ಕೆಲವೊಂದಷ್ಟು ಜಂಕ್ಷನ್‌ನಲ್ಲಿ ತಗಲಾಕಿಕೊಂಡರೆ, ರಾತ್ರಿಯ ಡಿನ್ನರ್ ಅನ್ನು ಅಲ್ಲೇ ಸಿಗೋ ಹೋಟೆಲ್‌ನಲ್ಲಿ ಮಾಡಿಕೊಂಡು ಬರೋದು ಒಳ್ಳೇದು. ಇಂಥ ಸ್ಥಿತಿಯಲ್ಲಿ ಸಿಕ್ಕಿ ಹಾಕಿಕೊಂಡಿದ್ದ ಬುದ್ಧಿವಂತರೊಬ್ಬರು, ಗೂಗಲ್ ಮ್ಯಾಪ್ ಓಪನ್ ಮಾಡಿ ಟ್ರಾಫಿಕ್‌ನ ಹನುಮನ ಬಾಲವನ್ನು ದಾಟಿ ಮನೆಗೆ ಹೋಗಲು ಇನ್ನೆಷ್ಟು ಹೊತ್ತು ಬೇಕಾಗಬಹುದು ಎಂದು ನೋಡಿದ್ದಾರೆ. ಅವರಿಗೆ ಕಾದಿದ್ದ ಷಾಕ್ ಏನೆಂದರೆ, ಹಾಯಾಗಿ ಕಾರಿನಲ್ಲಿ ಹೋದರೆ 15 ಕಿ.ಮೀ. ಸಾಗಲು 46 ನಿಮಿಷ ಬೇಕಿತ್ತು. ಅದೇ 'ನಟರಾಜ್ ಸರ್ವೀಸ್' (ನಡೆದುಕೊಂಡು ಹೋದರೆ) ಮೂಲಕ 43 ನಿಮಿಷಕ್ಕೆ ಮನೆ ತಲುಪಬಹುದಾಗಿತ್ತು. ನಡೆಯುವ ಬದಲು ಓಡಿದರೆ ಇನ್ನೂ 10 ನಿಮಿಷ ಮೊದಲೇ ತಲುಪಬಹುದು ಅನ್ನೋದು ಬೇರೆ ಮಾತು. ಮುಕ್ಕಾಲು ಗಂಟೆ ಕಾರಿನಲ್ಲಿ ಕೂತು ಕೂತು ಬೆನ್ನು ತುರಿಸಿಕೊಳ್ಳೋ ಬದಲು, ಮನೆಯಿಂದ ಕಚೇರಿಗೆ ವಾಕಿಂಗ್ ಮಾಡಿದ್ರೆ ಹೇಗೆ ಅನ್ನೋದು ಅನೇಕರ ಐಡಿಯಾ ಆಗಿದೆ. ದಿನ ಬೆಳಗ್ಗೆ 10 ಕಿ.ಮೀ. ಟ್ರೆಡ್ ಮಿಲ್‌ನಲ್ಲಿ ಓಡಿ, ಸಂಜೆ ಐದು ಕಿ.ಮೀ. ಪಾರ್ಕ್‌ನಲ್ಲಿ ರೌಂಡ್ ಹಾಕೋ ಬದ್ಲು, ಅದೇ 15 ಕಿ.ಮೀ. ಅನ್ನು ಮನೆಯಿಂದ ಕಚೇರಿಗೆ, ಕಚೇರಿಯಿಂದ ಮನೆಗೆ ನಡೆದುಕೊಂಡು ಬಂದ್ರೆ ಹೇಗೆ ಅನ್ನೋ ಪ್ಲಾನ್ ಅನೇಕರದ್ದಂತೆ. ಆದರೂ ಬ್ರ್ಯಾಂಡ್ ಬೆಂಗಳೂರಿನ ಭಾಗವಾಗಿ ಫುಟ್‌ಪಾತ್ ಅನ್ನು ಸ್ವಲ್ಪ ಅಗಲವಾಗಿ ಮಾಡೋದೇ ಬೆಟರ್ ಅಲ್ವಾ?

## ಸಂಪಾದಕರ ಸದ್ಯಶೋಧನೆ

# ಬೂಸಾ ವಿವಾದದ ಹಿನ್ನೆಲೆ

ಸುಮಾರು ಐವತ್ತೊಂದು ವರ್ಷಗಳ ಹಿಂದೆ, ಕನ್ನಡ ಸಾಹಿತ್ಯದ ಬಗ್ಗೆ ತೀರಾ ಕೀಳುಮಟ್ಟದ ಟೀಕೆ ಮಾಡಿದರೆಂಬ ಕಾರಣಕ್ಕೆ ರಾಜ್ಯ ಸರಕಾರದ ಸಚಿವರೊಬ್ಬರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಗಿ ಬಂದಿತ್ತು ಅಂದ್ರೆ, ಈಗಿನ ಕಾಲದವರು ಯಾರೂ ನಂಬುವುದಿಲ್ಲ. 'ಕನ್ನಡ ಸಾಹಿತ್ಯದಲ್ಲಿ ಏನಿದೆ? ಬರೀ ಬೂಸಾ' ಎಂದು ಹೇಳಿದ್ದಕ್ಕೆ ದೇವರಾಜ ಅರಸು ಸಂಪುಟದಲ್ಲಿ ಸಚಿವರಾಗಿದ್ದ ಬಿ.ಬಸವಲಿಂಗಪ್ಪ ರಾಜೀನಾಮೆ ನೀಡಬೇಕಾಯಿತು. ಒಂದು ವೇಳೆ ಈಗ ಸಚಿವರೊಬ್ಬರು ಹಾಗೆ ಹೇಳಿದರೆ ಅದು ಸಿಂಗಲ್ ಕಾಲಂ ಸುದ್ದಿಯಾಗಬಹುದು ಮತ್ತು ಅದು ಸಣ್ಣ ಚರ್ಚೆಯನ್ನೂ ಹುಟ್ಟಿಸದೇ ಹೋಗಬಹುದು. ಆದರೆ ಆ ದಿನಗಳಲ್ಲಿ ಇದು ರಾಜಕೀಯ ಸುಂಟರಗಾಳಿಯನ್ನೇ ಎಬ್ಬಿಸಿತ್ತು ಅಂದರೆ ನಂಬುವುದು ಕಷ್ಟ. 1973ರ ನವೆಂಬರಿನಲ್ಲಿ ಮೈಸೂರು ವಿಶ್ವವಿದ್ಯಾಲಯದ ಶತಮಾನೋತ್ಸವ ಕಟ್ಟಡದಲ್ಲಿ 'ಹೊಸ ಅಲೆಗಳು' ಎಂಬ ವಿಷಯದ ಬಗ್ಗೆ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಥಾಟ್ಸ್ ಎಂಬ ಸಂಸ್ಥೆಯು ಆ ಕಾರ್ಯಕ್ರಮವನ್ನು ಆಯೋಜಿಸಿತ್ತು. ಲಾಯರ್ ಸಂಜೀವಯ್ಯ ಮತ್ತು ಸಚಿವ ಬಿ.ಬಸವಲಿಂಗಪ್ಪ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಆ ಕಾರ್ಯಕ್ರಮದ ಆರಂಭದಲ್ಲಿ ಲಾಯರ್ ಸಂಜೀವಯ್ಯ ಮಾತಾಡಲು ಎದ್ದು ನಿಂತರು. ಅವರು ಇಂಗ್ಲಿಷಿನಲ್ಲಿ ಮಾತನ್ನು ಶುರು ಮಾಡಿದರು. ಐದು ನಿಮಿಷಗಳಾಗುತ್ತಿದಂತೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರು, 'ಕನ್ನಡದಲ್ಲಿ ಮಾತಾಡಿ' ಎಂದು ಒತ್ತಾಯ ಮಾಡಿದರು. ಅದಕ್ಕೆ ಸಂಜೀವಯ್ಯ ಜಗ್ಗಲಿಲ್ಲ. ಮೂಲತಃ ದಲಿತರಾಗಿದ್ದ ಅವರಿಗೆ, ನಾವೂ ಮೇಲ್ಜಾತಿಯವರಂತೆ ಇಂಗ್ಲಿಷಿನಲ್ಲಿ ಮಾತಾಡಬಲ್ಲೆವು ಎಂಬುದನ್ನು ಸಾಬೀತು ಮಾಡುವ ಉತ್ಸಾಹವಿದ್ದಂತಿತ್ತು. ಹೀಗಾಗಿ ಕನ್ನಡದಲ್ಲಿ ಮಾತಾಡಿ ಎಂಬ ಕೂಗು ಪದೇ ಪದೇ ಕೇಳಿಬಂದರೂ ಅವರು ಅದನ್ನು ಸ್ವಲ್ಪವೂ ಲೆಕ್ಕಿಸದೇ ತಮ್ಮ ಮಾತನ್ನು ಇಂಗ್ಲಿಷಿನಲ್ಲಿ ಮುಂದುವರಿಸಿದರು. ಅಷ್ಟೊತ್ತಿಗೆ ಸಭಾಂಗಣದಲ್ಲಿ ತುಸು ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿತ್ತು. ಸಂಜೀವಯ್ಯ ಅವರ ಭಾಷಣ ಮುಗಿಯುತ್ತಿದ್ದಂತೆ ಕೆಲವರು ಅವರಿಗೆ ಧಿಕ್ಕಾರ ಕೂಗಿದರು. 'ಕನ್ನಡ ವಿರೋಧಿ ಸಂಜೀವಯ್ಯ' ಎಂಬ ಘೋಷಣೆಗಳೂ ಕೇಳಿ ಬಂದವು. ಸಂಜೀವಯ್ಯ ಭಾಷಣದ ನಂತರ ಸಚಿವ ಬಸವಲಿಂಗಪ್ಪ ಮಾತಿಗೆ ಎದ್ದು ನಿಂತರು. ಸಂಜೀವಯ್ಯನವರ ಮಾತನ್ನು ಸಮರ್ಥಿಸುವ ಧಾಟಿಯಲ್ಲಿ ಮತ್ತು ಕನ್ನಡಪರ ಘೋಷಣೆಗಳನ್ನು ಕೂಗಿದವರನ್ನು ಪ್ರಶ್ನಿಸುವ ರೀತಿಯಲ್ಲಿ ಬಸವಲಿಂಗಪ್ಪನವರು, 'ಕನ್ನಡದಲ್ಲಿ ಏನಿದೆ? ಅದರಲ್ಲಿ ಇರುವ ಬಹುಪಾಲು ಬರಿ ಬೂಸಾ' ಎಂದುಬಿಟ್ಟರು. ಮರುದಿನ ಪತ್ರಿಕೆಗಳಲ್ಲಿ ಬಸವಲಿಂಗಪ್ಪನವರು ಹೇಳಿದ 'ಬೂಸಾ' ಹೇಳಿಕೆ ಮುಖಪುಟದಲ್ಲಿ ಪ್ರಧಾನವಾಗಿ ವರದಿಯಾಯಿತು. ಬಸವಲಿಂಗಪ್ಪನವರು ಕನ್ನಡಿಗರನ್ನು ಮತ್ತು ಕನ್ನಡ ಸಾಹಿತ್ಯವನ್ನು ಅವಮಾನಿಸಿದ್ದಾರೆ, ಇದು ಕನ್ನಡ ಅಸ್ಮಿತೆಗೆ ಧಕ್ಕೆ ತರುವಂಥ ವಿಷಯ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಮುಂದಿನ ದಿನಗಳಲ್ಲಿ ಪತ್ರಿಕೆಗಳಲ್ಲಿ ಈ ವಿಷಯ ದೊಡ್ಡ ಚರ್ಚೆಯನ್ನು ಹುಟ್ಟು ಹಾಕಿತಲ್ಲದೇ, ರಾಜ್ಯದೆಲ್ಲೆಡೆ ತೀವ್ರ ಆಕ್ರೋಶಕ್ಕೆ ಕಾರಣವಾಯಿತು. ಬಸವಲಿಂಗಪ್ಪನವರ ಪ್ರತಿಕೃತಿಯನ್ನು ಕೆಲವರು ಸುಟ್ಟರು. ಪ್ರತಿಭಟನೆ ಕ್ರಮೇಣ ಬೇರೆ ಬೇರೆ ಊರುಗಳಿಗೂ ಹಬ್ಬಿತು. ಇದರಿಂದ ಎಚ್ಚೆತ್ತ ಬಸವಲಿಂಗಪ್ಪನವರು, 'ಕನ್ನಡ ಸಾಹಿತ್ಯಕ್ಕೆ ನನ್ನ ವಿರೋಧವಿಲ್ಲ. ನಾನು ಕೂಡ ಕನ್ನಡಿಗ. ಆದರೆ ಕೆಲವು ಜನ ಬರೆದಿದ್ದು ಬೂಸಾ ಸಾಹಿತ್ಯ. ಅಂಥವರು ತಾವು ಬರೆದು, ಕೊಬ್ಬು ಬೆಳೆಸಿಕೊಂಡಿದ್ದಾರೆ. ಅಂಥವರ ಸಂಖ್ಯೆ ಸಮಾಜದಲ್ಲಿ ಹೆಚ್ಚಿದೆ. ಸಮಾಜದಲ್ಲಿ ಕಂದಾಚಾರ, ಜಾತಿ, ಮೌಢ್ಯ ಹರಡುವವರು ಹೆಚ್ಚುತ್ತಿದ್ದಾರೆ. ಇಂಥವರು ಬರೆದ ಸಾಹಿತ್ಯ ಬೂಸಾ ಎಂದು ನಾನು ಹೇಳಿದ್ದೇನೆ. ಅಂಥವರು ಈಗ ನನ್ನ ಮೇಲೆ ಕೆಂಗಣ್ಣು ಬೀರಿದ್ದಾರೆ. ನಾನು ಅದಕ್ಕೆಲ್ಲ ಜಗ್ಗುವುದಿಲ್ಲ. ನಾನು ನನ್ನ ಹೇಳಿಕೆಗೆ ಬದ್ಧನಾಗಿದ್ದೇನೆ' ಎಂದು ಹೇಳಿದರು. ಇದು ಬಸವಲಿಂಗಪ್ಪನವರ ವಿರೋಧಿಗಳನ್ನು ಮತ್ತಷ್ಟು ಕೆರಳಿಸಿತು. ಈ ಹೊತ್ತಿಗೆ ಸಚಿವರ ಪರ-ವಿರೋಧ ಎಂಬ ಎರಡು ಗುಂಪುಗಳಾದವು. ಈ ಎರಡು ಗುಂಪುಗಳೂ ಚಳವಳಿಗಳನ್ನು ಆರಂಭಿಸಿದರು. ಮುಂದೇನಾಯಿತು, ನೋಡೋಣ.

# ಬ್ರಿಟಿಷ್ ಸಾಮ್ರಾಜ್ಯಕ್ಕೆ ನಾಗರಿಕತೆಯನ್ನು ಕಲಿಸಿದ ಚಾಡ್ವಿಕ್



ಹಿಂದಿರುಗಿ ನೋಡಿದಾಗ

ಡಾ.ನಾ.ಸೋಮೇಶ್ವರ
vveditoped@gmail.com

Dolly died of dysentery, Polly got the pox
Kevin caught cholera, Harry, whooping cough
Maisie died of measles, Hugh died of ague
Toby was taken by typhoid, And Dot was too
Rats lice and fleas, My only company
Since you've all gone, I'm left on my own
With these rats lice and fleas
Friedrich Engels (1820-1895)
(The Condition of the Working Class in England from 1887)

ಬ್ರಿಟಿಷ್ ಮೆಡಿಕಲ್ ಜರ್ನಲ್ (ಬಿಎಂಜೆ) ವಿಶ್ವದ ಅತಿಮುಖ್ಯ ವೈದ್ಯಕೀಯ ನಿಯತಕಾಲಿಕಗಳಲ್ಲಿ ಒಂದು. ಈ ನಿಯತಕಾಲಿಕದ ಸದಸ್ಯರು ಸಾಮಾನ್ಯವಾಗಿ ವೈದ್ಯರು ಇಲ್ಲವೇ ವಿಜ್ಞಾನಿಗಳು ಆಗಿರುವ ಸಾಧ್ಯತೆಯೇ ಹೆಚ್ಚು. 2007ರಲ್ಲಿ ಬಿಎಂಜೆ ಒಂದು ಸಮೀಕ್ಷೆಯನ್ನು ಕೈಗೊಂಡಿತು. ಕ್ರಿ.ಶ.1900ರ ಆರಂಭದಲ್ಲಿ ಮನುಷ್ಯನ ಜೀವಿತಾವಧಿಯು ಸರಾಸರಿ 32 ವರ್ಷಗಳಾಗಿತ್ತು. ಇದು 2000ನೇ ವರ್ಷದ ವೇಳೆಗೆ ಸರಾಸರಿ 66.8 ವರ್ಷಗಳಷ್ಟಕ್ಕೆ ಹೆಚ್ಚಿತು. ಮನುಷ್ಯನ ಜೀವಿತಾವಧಿಯ ಈ ಹೆಚ್ಚಳಕ್ಕೆ ಕಾರಣಗಳೇನು ಎಂದು ಅದು ಹುಡುಕಿತು, 70 ಪ್ರಮುಖ ಸಂಶೋಧನೆಗಳನ್ನು ಪಟ್ಟಿ ಮಾಡಿತು. ಆನಂತರ ಸಂಪಾದಕೀಯ ಮಂಡಳಿಯು 70 ಸಂಶೋಧನೆಗಳಲ್ಲಿ 15 ಪ್ರಮುಖ ಸಂಶೋಧನೆಗಳ ಆಯ್ಕೆ ಮಾಡಿ ಒಂದು ಪಟ್ಟಿಯನ್ನು ಸಿದ್ಧ ಪಡಿಸಿತು. ಆ ಪಟ್ಟಿಯನ್ನು ಬಿಎಂಜೆಯಲ್ಲಿ ಪ್ರಕಟಿಸಿತು. ಈ 15 ಸಂಶೋಧನೆಗಳಲ್ಲಿ ಮನುಕುಲದ ಆರೋಗ್ಯವನ್ನು ಕಾಪಾಡುವ ಪ್ರಯತ್ನದಲ್ಲಿ ಮಹಾ ತಿರುವನ್ನು ಕೊಟ್ಟ ಸಂಶೋಧನೆಯು ಯಾವುದೆಂಬುದನ್ನು ಸೂಚಿಸುವಂತೆ ಕೇಳಿಕೊಂಡಿತು. 11,300 ಓದುಗರು ಪ್ರತಿಕ್ರಿಯೆಯನ್ನು ನೀಡಿದರು. ಅವುಗಳಲ್ಲಿ ಶುದ್ಧ ಕುಡಿಯುವ ನೀರು ಹಾಗೂ ಒಳಚರಂಡಿ ವ್ಯವಸ್ಥೆಯು ಪ್ರಥಮ ಸ್ಥಾನವನ್ನು ಗಳಿಸಿತು. ನಂತರದ ಸ್ಥಾನಗಳಲ್ಲಿ ಪ್ರತಿಜೈವಿಕ ಔಷಧಗಳು, ಅರಿವಳಿಕೆ, ಲಸಿಕೆ ಇತ್ಯಾದಿಗಳು ಆಯ್ಕೆಯಾದವು. ಈ ಹಿನ್ನೆಲೆಯಲ್ಲಿ, ವೈಯುಕ್ತಿಕ ಸ್ವಚ್ಛತೆ, ಕುಡಿಯಲು ಶುದ್ಧ ನೀರು ಹಾಗೂ ಉತ್ತಮ ಒಳಚರಂಡಿ ವ್ಯವಸ್ಥೆಯು ಒಂದು ಸಮಾಜ/ದೇಶದ ಆರೋಗ್ಯವನ್ನು ನಿರ್ಧರಿಸುತ್ತದೆ ಎನ್ನುವ ಸತ್ಯವು ವೇದ್ಯವಾಗುತ್ತದೆ.

ಫ್ರೆಡ್ರಿಕ್ ಎಂಗೆಲ್ಸ್ ಜರ್ಮನ್ ದಾರ್ಶನಿಕ, ಇತಿಹಾಸಕಾರ, ಸೈದ್ಧಾಂತಿಕ ರಾಜಕೀಯ ತಜ್ಞ, ಪತ್ರಕರ್ತ ಹಾಗೂ ಸಮಾಜವಾದಿ ಕ್ರಾಂತಿಕಾರ. ಈತ ಕಾರ್ಲ್ ಮಾರ್ಕ್ಸ್‌ನ ಗೆಳೆಯ ಹಾಗೂ ಮಾರ್ಕ್ಸ್‌ವಾದದ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲವನಾಗಿದ್ದ. ಈತನು ಲಂಡನ್ನಿನ ಮ್ಯಾಂಚೆಸ್ಟರಿನಲ್ಲಿ ವಾಸವಾಗಿದ್ದ. ಅಲ್ಲಿನ ಕಾರ್ಮಿಕರ ಮಕ್ಕಳ ಆರೋಗ್ಯವನ್ನು ಕುರಿತು ಮೇಲಿನ ಕವನವನ್ನು ಒಳಗೊಂಡ ಒಂದು ಪುಸ್ತಕವನ್ನು ಬರೆದ. ಮ್ಯಾಂಚೆಸ್ಟರಿನ ಬಡ ಕಾರ್ಮಿಕರ ಮಕ್ಕಳಲ್ಲಿ, ಶೇ.53ರಷ್ಟು ಮಕ್ಕಳು 5 ವರ್ಷಗಳಾಗುವ ಮೊದಲೇ ತೀರಿಕೊಂಡರೆ, ಗ್ರಾಮಾಂತರ ಪ್ರದೇಶಗಳಲ್ಲಿ ಶೇ.32ರಷ್ಟು ಬಡಮಕ್ಕಳು ಸಾಯುತ್ತಿದ್ದುದನ್ನು ದಾಖಲಿಸಿದ.

ಚಾರ್ಲ್ಸ್ ಡಿಕನ್ಸ್ ತನ್ನ ಕಾದಂಬರಿಗಳಲ್ಲಿ ಲಂಡನ್ ನಗರದ ಕೊಳಕನ್ನು ಕಣ್ಣಿಗೆ ಕಟ್ಟುವಂತೆ ಬರೆದಿದ್ದಾನೆ. ಬಡತನ-ಕೊಳಕು- ಅನಾರೋಗ್ಯ-ಸಾವುಗಳ ನಡುವೆ ನಿಕಟ ಸಂಪರ್ಕವಿರುವುದನ್ನು ಮೊದಲ ಬಾರಿಗೆ ಗಮನಿಸಿದವನು ಲಂಡನ್ನಿನ ವಕೀಲ ಹಾಗೂ ಸಮಾಜ ಸುಧಾರಕ ಎಡ್ವಿನ್ ಚಾಡ್ವಿಕ್. ಲಂಡನ್ ನಗರವನ್ನು ಒಳಗೊಂಡಂತೆ ಸಮಸ್ತ ಬ್ರಿಟನ್ನಿಗೆ ಸ್ವಸ್ಥ ಸಮಾಜದ ಮೂಲ ಪಾಠಗಳನ್ನು ಕಲಿಸಿಕೊಟ್ಟು, ಅವರನ್ನು ನಾಗರಿಕರನ್ನಾಗಿ ಮಾಡಿದವನು ಚಾಡ್ವಿಕ್. ಈತ ಲಂಡನ್ ನಗರದ ಲಂಕಾಷೈರ್ ಪ್ರದೇಶದ ಲಾಂಗ್‌ಸೈಟ್ ಎಂಬಲ್ಲಿ ಜನವರಿ 24, 1800ರಲ್ಲಿ ಜನಿಸಿದ. ಎಡ್ವಿನ್ ಚಾಡ್ವಿಕ್ ಬಾಲಕನಾಗಿದ್ದಾಗಲೇ ಅವನ ತಾಯಿ ತೀರಿಹೋದಳು. ಹಾಗಾಗಿ ತಂದೆಯು ಲಾಂಗ್‌ಸೈಟ್ ಬಿಟ್ಟು ಲಂಡನ್ ನಗರಕ್ಕೆ ಬಂದು ನೆಲೆಸಿದ.

ಚಾಡ್ವಿಕ್ ವಕೀಲಿಕೆಯನ್ನು ಕಲಿಯಲಾರಂಭಿಸಿದ. ಜತೆಯಲ್ಲಿ ತನ್ನ ದೈನಂದಿನ ಖರ್ಚಿಗಾಗಿ ಪತ್ರಿಕೆಗಳಿಗೆ ಲೇಖನಗಳನ್ನು ಬರೆದ. ಅವನ ಲೇಖನಗಳ ಪ್ರಮುಖ ವಿಷಯವು ಸಮಾಜದ ಆಗುಹೋಗುಗಳಾಗಿದ್ದವು. ಲಂಡನ್ ನಗರದಲ್ಲಿ ಅಪಘಾತಗಳನ್ನು ತಡೆಗಟ್ಟುವುದು ಹೇಗೆ ಎನ್ನುವ ಇವನ ಬರಹವು ಸಂಶೋಧನಾತ್ಮಕ ಲೇಖನವಾಗಿ ದೊಡ್ಡ ಹೆಸರನ್ನು ತಂದುಕೊಟ್ಟಿತು. ಆನಂತರ ಅವನು ಆರೋಗ್ಯವನ್ನು ಕುರಿತು ಲೇಖನಗಳನ್ನು ಬರೆದ. ಇವನ ಲೇಖನಗಳು ಜೆರೇಮಿ ಬೆಂಥಮ್ ಗಮನಕ್ಕೆ ಬಂದವು. ಈತನು ಇಂಗ್ಲೆಂಡಿನ ನ್ಯಾಯಾಧೀಶ, ದಾರ್ಶನಿಕ ಹಾಗೂ ಸಮಾಜ ಸುಧಾರಕನಾಗಿದ್ದ. ಚಾಡ್ವಿಕ್ ಬರಹಗಳಿಂದ ಪ್ರೇರಿತನಾಗಿ ಅವನನ್ನು ತನ್ನ ಕಾರ್ಯದರ್ಶಿಯನ್ನಾಗಿ ನೇಮಿಸಿಕೊಂಡ. ಚಾಡ್ವಿಕ್ ಒಮ್ಮೆಲೆ ಲಂಡನ್ನಿನ ವಿದ್ವತ್ ಹಾಗೂ ಅಧಿಕಾರಿ ವಲಯದೊಳಗೆ ಪ್ರವೇಶವನ್ನು ಪಡೆದ. 1601ರಲ್ಲಿ ಲಂಡನ್ನಿನಲ್ಲಿ ಬಡವರ ಕಾನೂನು ಅಥವಾ 'ಪೂರ್ ಲಾ' ಎಂಬ ಒಂದು ಕಾನೂನು ಜಾರಿಗೆ ಬಂದಿತ್ತು. ಇದು ಬ್ರಿಟನ್ ಇತಿಹಾಸದಲ್ಲಿ ಬಡಜನರ ಹಿತಕ್ಕಾಗಿ ರೂಪುಗೊಂಡ ಪ್ರಥಮ ಕಾನೂನಾಗಿತ್ತು. 1832ರಲ್ಲಿ ಈ ಕಾನೂನಿಗೆ ತಿದ್ದುಪಡಿಯನ್ನು ತರಲು ಒಂದು ರಾಯಲ್ ಕಮಿಷನ್ ಆಯೋಗವನ್ನು ರಚಿಸಿದರು. ಈ ಆಯೋಗದಲ್ಲಿ ಅಸಿಸ್ಟೆಂಟ್ ಕಮಿಷನರ್ ಆಗಿ ಚಾಡ್ವಿಕ್ ಸ್ಥಾನವನ್ನು ಪಡೆದ. ಬಡವರಿಗಾಗಿ ಹಣವು ವಿಪರೀತ ಖರ್ಚಾಗುತ್ತಿತ್ತು. ಬೊಕ್ಕಸದ ಮೇಲೆ ವಿಪರೀತ ಹೊರೆ ಬೀಳುತ್ತಿತ್ತು. ಅದನ್ನು ಕಡಿಮೆ ಮಾಡುವುದು ಆಯೋಗ ರಚನೆಯ ಮೂಲ ಉದ್ದೇಶವಾಗಿತ್ತು. ದಣಿವರಿಯದ ಚಾಡ್ವಿಕ್ ಹಗಲು-ರಾತ್ರಿ ವಿಕ್ಟೋರಿಯನ್ ಲಂಡನ್ನಿನಾದ್ಯಂತ ಸುತ್ತಾಡಿ, ತನ್ನ ವರದಿಯನ್ನು ಸಿದ್ಧಪಡಿಸಿದ. ಅದರ ಮುಖ್ಯಾಂಶಗಳು ಹೀಗಿದ್ದವು:

- ಬಡಜನರ ನಾನಾ ಸಮಸ್ಯೆಗಳಿಗೆ ಹಣವು ಕಾರಣವಲ್ಲ; ಅವರ ಅನಾರೋಗ್ಯವೇ ಮುಖ್ಯ ಕಾರಣ.
- ಲಂಡನ್ನಿನ 1/8 ಭಾಗದಲ್ಲಿರುವ ಶ್ರೀಮಂತರಿಗೆ ಮಾತ್ರ ಶುದ್ಧ ಕುಡಿಯುವ ನೀರು ದೊರೆಯುತ್ತಿದೆ. ಬಡವರು ವಾಸಿಸುವ ಕಡೆ ಕುಡಿಯಲು ಶುದ್ಧ ನೀರು ದೊರೆಯುತ್ತಿಲ್ಲ ಹಾಗೂ ಒಳಚರಂಡಿಯ ವ್ಯವಸ್ಥೆಯಿಲ್ಲ.
- ಅನಾರೋಗ್ಯಕ್ಕೆ ಮುಖ್ಯ ಕಾರಣ ರಸ್ತೆಯಲ್ಲಿ ಯಾವಾಗಲೂ ಹರಿಯುತ್ತಿರುವ ಕೊಳಕು.
- ಬಡವರು ಕೊಳಕಿನ ನಡುವೆಯೇ ಜೀವಿಸಬೇಕಾಗಿರುವ ಹಾಗೂ ಬಡವರ ಮಕ್ಕಳು ಬೇಗ ಅನಾರೋಗ್ಯಕ್ಕೆ ತುತ್ತಾಗುವ ಕಾರಣ, ಸಾವಿನ ಪ್ರಮಾಣ ಬಡ ಮಕ್ಕಳಲ್ಲೇ ಅಧಿಕ.
- ಬಡವರ ಜೀವನಶೈಲಿಯಲ್ಲಿ ಸಾಕಷ್ಟು ಸುಧಾರಣೆಯನ್ನು ತಂದರೆ, ಅವರು ಆರೋಗ್ಯವಂತರಾಗುತ್ತಾರೆ.

1834ರಲ್ಲಿ ಚಾಡ್ವಿಕ್ ವರದಿಯನ್ನಾಧರಿಸಿ, ಬಡವರ ಕಾನೂನಿಗೆ ತಿದ್ದುಪಡಿಯನ್ನು ತರಲಾಯಿತು. ಒಂದು ಕೇಂದ್ರ ಮಂಡಲಿಯನ್ನು ರಚಿಸಿದರು. ಎಲ್ಲರಿಗೂ ಪರಿಹಾರವು ಸಮಾನವಾಗಿ ದೊರೆಯಬೇಕೆಂದು ಮೂವರು ಕಮಿಷನರುಗಳನ್ನೊಳಗೊಂಡ 'ಎ ಸೆಂಟ್ರಲ್ ಪೂರ್ ಲಾ ಬೋರ್ಡ್' ಸ್ಥಾಪಿಸಿದರು. ಚಾಡ್ವಿಕ್ ಕಾರ್ಯದರ್ಶಿಯಾದ. ಚಾಡ್ವಿಕ್ ತಂದ ಬದಲಾವಣೆಗಳು ಕೆಲವರಿಗೆ ಹಿಡಿಸಲಿಲ್ಲ. ಬಡವರಿಗಾಗಿ ಜಾರಿಯಲ್ಲಿದ್ದ ಕಾನೂನನ್ನು ದುರುಪಯೋಗಪಡಿಸಿಕೊಂಡವರು ಸಾಕಷ್ಟು ಜನರಿದ್ದರು. ಚಾಡ್ವಿಕ್ ಬಡವರಾಗಿರುವ ಎಲ್ಲರಿಗೂ ಉಚಿತ ಸಹಾಯವನ್ನು ನೀಡಲಿಲ್ಲ. ಗಟ್ಟಿಮುಟ್ಟಾಗಿರುವ ಬಡಜನರಿಗೆ ಬಿಟ್ಟಿ ಹಣವನ್ನು ನೀಡಲಿಲ್ಲ, ದುಡಿಯಲು ಕೆಲಸವನ್ನು ನೀಡಿದ. ದುಡಿದು ತಿನ್ನಿರೆಂದ.

1838ರಲ್ಲಿ ಟೈಫಸ್ ಸೋಂಕು ಲಂಡನ್ನಿನಲ್ಲಿ ಹರಡಿತು. ಬಡತನಕ್ಕೂ ಟೈಫಸ್ ಸೋಂಕು ಹರಡುವುದಕ್ಕೂ ಸಂಬಂಧವಿರುವುದನ್ನು ಗಮನಿಸಿದ ಚಾಡ್ವಿಕ್, ಇದನ್ನು ನಿರೂಪಿಸಲು ಅರ್ನಾಟ್ ಸ್ಮಿತ್, ಸೌತ್ ವುಡ್ ಸ್ಮಿತ್ ಮತ್ತು ಜೇಮ್ಸ್ ಕೇ ಶಟಲವರ್ತ್ ಎಂಬ ವೈದ್ಯರ ಸಹಾಯವನ್ನು ಪಡೆದ. ಬಡತನಕ್ಕೂ, ಲಂಡನ್ನಿನ ಕೊಳಕಿಗೂ ಹಾಗೂ ಸೋಂಕು ರೋಗಗಳಿಗೂ ಸಂಬಂಧ ಇರುವುದನ್ನು ನಿರೂಪಿಸಲು ಇಂಥ ಒಂದು ಅಧ್ಯಯನವು ಬ್ರಿಟನ್ನಿನ ಇತಿಹಾಸದಲ್ಲಿ ಮೊದಲ ಬಾರಿಗೆ ಸಂಭವಿಸಿತ್ತು. ಚಾಡ್ವಿಕ್ ಒಂದು ಪ್ರಶ್ನೋತ್ತರ ಸಿದ್ಧಪಡಿಸಿದ. ಲಂಡನ್ ನಗರದ ಎಲ್ಲ ಸ್ತರದ ಜನರಿಗೆ ಈ ಪ್ರಶ್ನೋತ್ತರವನ್ನು ಕಳುಹಿಸಿಕೊಟ್ಟ. ಎಲ್ಲರಿಂದ ಸಂಗ್ರಹಿಸಿದ ಮಾಹಿತಿಯನ್ನು ತಾನೇ ಸ್ವಯಂ ವಿಶ್ಲೇಷಿಸಿದ. ಒಂದು ವರದಿಯನ್ನು ಸಿದ್ಧಪಡಿಸಿದ. 1838ರಲ್ಲಿ ಆರಂಭವಾದ ಈ ಅಧ್ಯಯನವು 1842ರಲ್ಲಿ ಗ್ರೇಟ್ ಬ್ರಿಟನ್ನಿನ ಕಾರ್ಮಿಕ ಜನರ ನೈರ್ಮಲ್ಯ ಸ್ಥಿತಿ-ಗತಿಯನ್ನು ಕುರಿತ ವರದಿಯಾಗಿ (ದಿ ರಿಪೋರ್ಟ್ ಆನ್ ದಿ ಸ್ಯಾನಿಟರಿ ಕಂಡಿಷನ್ಸ್ ಆಫ್ ದಿ ಲೇಬರಿಂಗ್ ಪಾಪ್ಯುಲೇಷನ್ ಆಫ್ ಗ್ರೇಟ್ ಬ್ರಿಟನ್) ಬಿಡುಗಡೆಯಾಯಿತು. ಈ ಅಧ್ಯಯನ ಹಾಗೂ ವರದಿಯ ಪ್ರಕಟಣೆಗೆ ತಗುಲಿದ ಎಲ್ಲ ಖರ್ಚು ವೆಚ್ಚವನ್ನು ಚಾಡ್ವಿಕ್ ತನ್ನ ಕಿಸೆಯಿಂದ ಭರಿಸಿದ. ಜಾನ್ ರೋ ಎನ್ನುವವನು ಲಂಡನ್ನಿಗೆ ಮಾದರಿಯಾಗಬಹುದಾದ ಒಳಚರಂಡಿಯನ್ನು ರೂಪಿಸಿದ್ದ. ಚಾಡ್ವಿಕ್ ಅದನ್ನು ಶಿಫಾರಸು ಮಾಡಿದ. ಡಾ.ಡೈಸ್ ಗುತ್ರಿಯು ಶಿಫಾರಸು ಮಾಡಿದ ಹಾಗೆ ಪ್ರತಿಯೊಂದು ಮನೆಗೂ ಕುಡಿಯುವ ಶುದ್ಧ ನೀರಿನ ಶಾಶ್ವತ ಸಂಪರ್ಕವನ್ನು ಒದಗಿಸಬೇಕೆಂದು ಹೇಳಿದ. ಅದೂ ಚಾಡ್ವಿಕ್‌ನ ವರದಿಯಲ್ಲಿತ್ತು. ಈ ವರದಿಯು ಸಾರ್ವಜನಿಕರ ಗಮನವನ್ನು ಒಮ್ಮೆಲೆ ಸೆಳೆಯಿತು. ಆಗ ಅರಸೊತ್ತಿಗೆಯೂ ಈ ವರದಿಯನ್ನು ಗಂಭೀರವಾಗಿ ತೆಗೆದುಕೊಂಡು, ಅದನ್ನು ಜಾರಿಗೆ ತರುವ ಬಗ್ಗೆ ಒಂದು ರಾಯಲ್ ಕಮಿಷನ್ ಅನ್ನು ಆಯೋಜಿಸಿತು. ಈ ಆಯೋಗದ ಅನಧಿಕೃತ ಕಾರ್ಯದರ್ಶಿಯಾಗಿ ಚಾಡ್ವಿಕ್ ಲಂಡನ್ನಿನ ನಿಜದರ್ಶನವನ್ನು ಮಾಡಿಸಿದ. ಇದರ ಫಲವಾಗಿ ಲಂಡನ್ನಿನ ಬಡವ-ಬಲ್ಲಿದರೆನ್ನದೆ ಎಲ್ಲರಿಗೂ ಕುಡಿಯಲು ಶುದ್ಧ ನೀರು ದೊರೆಯಿತು. ಅತ್ಯುತ್ತಮ ಚರಂಡಿ ವ್ಯವಸ್ಥೆಯು ರೂಪುಗೊಂಡ ಕಾರಣ ರಸ್ತೆಗಳು ಕೊಳಚೆಮುಕ್ತವಾದವು. ಚರಂಡಿಯ ನೀರೆಲ್ಲವೂ ನಗರದ ಹೊರಗಿದ್ದ ಹೊಲ-ಗದ್ದೆಗಳಿಗೆ ಹರಿಯಲಾರಂಭಿಸಿತು.

ಒಂದು ಕಾನೂನನ್ನು ರೂಪಿಸುವುದು ದೊಡ್ಡದಲ್ಲ. ಆ ಕಾನೂನನ್ನು ಅಕ್ಷರಶಃ ಜಾರಿಗೆ ತರುವುದು ಹಾಗೂ ಅದು ನಿರಂತರವಾಗಿ ಮುಂದುವರೆಯುವಂತೆ ನೋಡಿಕೊಳ್ಳುವುದು ಸವಾಲಿನ ಕೆಲಸವಾಗುತ್ತದೆ. 1831ರಲ್ಲಿ ಲಂಡನ್ನಿನಲ್ಲಿ ಕಾಲರಾ ಕಾಣಿಸಿಕೊಂಡು 16,000 ಜನರ ಸಾವಿಗೆ ಕಾರಣವಾಗಿತ್ತು. 1842ರ ತನ್ನ ವರದಿಯಲ್ಲಿ, 'ಕಾಲರಾ ಸೋಂಕು ಹರಡಬೇಕಾದರೆ ಚರಂಡಿ ನೀರು ಕುಡಿಯುವ ನೀರಿನ ಸಂಪರ್ಕಕ್ಕೆ ಬರಬಾರದು' ಎಂದು ಚಾಡ್ವಿಕ್ ಸೂಚಿಸಿದ್ದ. ಆದರೆ ಅಧಿಕಾರಿಗಳ ಅಜಾಗರೂಕತೆಯಿಂದ ಮತ್ತೆ ಕಾಲರಾ ಕಾಣಿಸಿಕೊಂಡಿತು. ಹಾಗಾಗಿ 1948ರಲ್ಲಿ ಸಾರ್ವಜನಿಕ ಆರೋಗ್ಯ ಕಾಯಿದೆ ಜಾರಿಗೆ ಬಂದಿತು. ಇದರಲ್ಲಿ ಕುಡಿಯುವ ನೀರು ಮತ್ತು ಚರಂಡಿ ನೀರು ಪ್ರತ್ಯೇಕವಾಗಿ ಹರಿಯುವ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದರು. ಸರಕಾರವೇ ಎಲ್ಲವನ್ನೂ ಮಾಡಲಿ ಎಂದು ನಿರೀಕ್ಷಿಸುವ ಬದಲು, ಸ್ಥಳೀಯರು ತಮ್ಮ ತಮ್ಮ ಬಡಾವಣೆಯ ನೈರ್ಮಲ್ಯದ ಬಗ್ಗೆ ಆಸಕ್ತಿಯನ್ನು ವಹಿಸಬೇಕು ಎಂದು ಚಾಡ್ವಿಕ್ ಶಿಫಾರಸು ಮಾಡಿದ. 1848-1854ರವರೆಗೆ ಜನರಲ್ ಬೋರ್ಡ್ ಆಫ್ ಹೆಲ್ತ್ ಕಮಿಷನರ್ ಆಗಿ ಚಾಡ್ವಿಕ್ ಕೆಲಸವನ್ನು ಮಾಡಿದ.

ಲಂಡನ್ನಿನ ಕಾರ್ಖಾನೆಗಳಲ್ಲಿ ಬಾಲ ಕಾರ್ಮಿಕರು ದುಡಿಯುತ್ತಿದ್ದರು. ಅವರ ಸ್ಥಿತಿ-ಗತಿಗಳನ್ನು ಅಧ್ಯಯನ ಮಾಡಿದ ಚಾಡ್ವಿಕ್, 'ಮಕ್ಕಳು ಶಾಲೆಗೆ ಹೋಗಿ ವಿದ್ಯೆಯನ್ನು ಕಲಿಯಬೇಕು. ಅದಕ್ಕೆ ಅಗತ್ಯ ಸಮಯವನ್ನು ಮೀಸಲಿಡಬೇಕು. ಆನಂತರ ಅವರು ಕಾರ್ಖಾನೆಗಳಲ್ಲಿ ದುಡಿಯಬಹುದು' ಎಂದ. ಈತನ ಅಧ್ಯಯನದ ಫಲವಾಗಿ ಕಾರ್ಖಾನೆಗಳ ಅಧಿನಿಯಮ, 1933 ಜಾರಿಗೆ ಬಂದಿತು.

ಅಂದಿನ ಲಂಡನ್ನಿನಲ್ಲಿ ಮರಣ ಪ್ರಮಾಣ ಪತ್ರವನ್ನು (ಡೆತ್ ಸರ್ಟಿಫಿಕೇಟ್) ನೀಡುವಾಗ, ಸತ್ತ ದಿನಾಂಕವನ್ನು ಮಾತ್ರ ನಮೂದಿಸುತ್ತಿದ್ದರು. ಮರಣಕ್ಕೆ ಕಾರಣವನ್ನೂ ನಮೂದಿಸಬೇಕೆಂದು ಆಗ್ರಹಿಸಿ, ಅದನ್ನು ಚಾಡ್ವಿಕ್ ಜಾರಿಗೆ ತಂದ (1836).

1838ರಲ್ಲಿ ಲಂಡನ್ನಿನ ಪೊಲೀಸ್ ಕಮಿಷನರ್ ತನ್ನ ಅಧ್ಯಯನದ ಸಾರಾಂಶವನ್ನು ಬರೆದ. ಅಪರಾಧವು ಘಟಿಸಿದ ಮೇಲೆ, ಅಪರಾಧಿಯನ್ನು ಹಿಡಿದು, ಶಿಕ್ಷೆಯನ್ನು ಕೊಡುವುದು ಪೊಲೀಸರ ಮುಖ್ಯ ಕೆಲಸವಲ್ಲ. ಅಪರಾಧವು ನಡೆಯದ ಹಾಗೆ ಜನಜಾಗೃತಿಯನ್ನು ಉಂಟು ಮಾಡುವುದು ಪೊಲೀಸರ ಹೊಣೆ ಎಂದ.

ಎಡ್ವಿನ್ ಚಾಡ್ವಿಕ್, ಬ್ರಿಟನ್ನಿನ ಶತ ಶತಮಾನಗಳ ಅಜ್ಞಾನವನ್ನು ತೊಡೆದು ನಾಗರಿಕತೆಯ ನಿಜ ದರ್ಶನವನ್ನು ಮಾಡಿಸಿದ ಪುಣ್ಯಾತ್ಮ. ಹಾಗಾಗಿ ಈತನಿಗೆ 1889ರಲ್ಲಿ ಬ್ರಿಟನ್ ಆಳರಸರು 'ನೈಟ್ ಹುಡ್' ಗೌರವವನ್ನು ದಯಪಾಲಿಸಿದರು. ಈಗ ಚಾಡ್ವಿಕ್, ಸರ್ ಎಡ್ವಿನ್ ಚಾಡ್ವಿಕ್ ಎಂಬ ಗೌರವಕ್ಕೆ ಪಾತ್ರನಾದ. ಜುಲೈ 6, 1890ರಂದು ಇಂಗ್ಲೆಂಡಿನ ಸರ್ರೆಯಲ್ಲಿ ಚಾಡ್ವಿಕ್ ಮರಣಿಸಿದ.

# ಗಾತ್ರಕ್ಕಿಂತ ಗುಣಮಟ್ಟ ತುಂಬಾ ಮುಖ್ಯ

ಸಾಧನೆ-ಸಂಕಲ್ಪ

ಗಿರಿರಾಜ್ ಸಿಂಗ್
vveditoped@gmail.com

ನಾವು 2024ರ ಆಗಸ್ಟ್ 7ರಂದು 10ನೇ ರಾಷ್ಟ್ರೀಯ ಕೈಮಗ್ಗ ದಿನವನ್ನು ಆಚರಿಸುತ್ತಿದ್ದೇವೆ. ನಿಮಗೆಲ್ಲಾ ತಿಳಿದಿರುವಂತೆ 1905ರ ಆಗಸ್ಟ್ 7ರಂದು ಕೋಲ್ಕತ್ತಾದ ಟೌನ್‌ಹಾಲ್‌ನಲ್ಲಿ ಸ್ವದೇಶಿ ಚಳವಳಿಯನ್ನು ಆರಂಭಿಸಲಾಗಿತ್ತು. ನಮ್ಮ ಸ್ವಾತಂತ್ರ್ಯ ಹೋರಾಟದ ಭಾಗವಾಗಿ ಚಳವಳಿಯು ದೇಶೀಯ ಉತ್ಪನ್ನಗಳು ಮತ್ತು ಉತ್ಪಾದನಾ ವಿಧಾನಗಳನ್ನು ಪುನರುಜ್ಜೀವನಗೊಳಿಸುವ ಗುರಿಯನ್ನು ಹೊಂದಿತ್ತು. ಈ ಐತಿಹಾಸಿಕ ಸಂದರ್ಭವನ್ನು ಸ್ಮರಿಸಲು ಮತ್ತು ನಮ್ಮ ಕೈಮಗ್ಗ ಪರಂಪರೆಯನ್ನು ಆಚರಿಸಲು, ಮಾನ್ಯ ಪ್ರಧಾನಮಂತ್ರಿ, ನರೇಂದ್ರ ಮೋದಿ ಅವರು 2015ರಲ್ಲಿ ಆಗಸ್ಟ್ 7ರ ದಿನವನ್ನು 'ರಾಷ್ಟ್ರೀಯ ಕೈಮಗ್ಗ ದಿನ'ವೆಂದು ಘೋಷಿಸಿದರು. ಈ ಕಾರ್ಯಕ್ರಮವು ಭಾರತದ ಕೈಮಗ್ಗ ಕಾರ್ಮಿಕರನ್ನು ಗೌರವಿಸಲು ಮತ್ತು ಕೈಮಗ್ಗ ಕ್ಷೇತ್ರಕ್ಕೆ ಉತ್ತೇಜನ ನೀಡಲು ಪ್ರಯತ್ನಿಸುತ್ತದೆ.

ಕೈಮಗ್ಗ ಕ್ಷೇತ್ರವು ಗ್ರಾಮೀಣ ಮತ್ತು ಅರೆ-ಗ್ರಾಮೀಣ ಜೀವನೋಪಾಯದ ಮಹತ್ವದ ಮೂಲವಾಗಿದ್ದು, 35 ಲಕ್ಷಕ್ಕೂ ಅಧಿಕ ಜನರು ಅದರಲ್ಲಿ ತೊಡಗಿಸಿಕೊಂಡಿದ್ದಾರೆ. ಅವರಲ್ಲಿ 25 ಲಕ್ಷಕ್ಕೂ ಅಧಿಕ ಮಹಿಳೆಯರು ಎಂಬುದು ಗಮನಾರ್ಹ. ಹಾಗಾಗಿ, ಈ ಕ್ಷೇತ್ರವು ಮಹಿಳೆಯರ ಆರ್ಥಿಕ ಸಬಲೀಕರಣದ ಪ್ರಮುಖ ಮೂಲವಾಗಿದೆ. ಜವಳಿ ಸಚಿವಾಲಯವು ದೇಶಾದ್ಯಂತ ಕೈಮಗ್ಗ ಕ್ಷೇತ್ರವನ್ನು ಉತ್ತೇಜಿಸಲು ಹಲವು ಉಪಕ್ರಮಗಳನ್ನು ಕೈಗೊಂಡಿದೆ.

ಗೌರವಾನ್ವಿತ ಪ್ರಧಾನ ಮಂತ್ರಿ ಅವರು 28 ಜುಲೈ 2024ರಂದು ತಮ್ಮ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಗ್ರಾಮೀಣ ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವಲ್ಲಿ ಕೈಮಗ್ಗ ಕ್ಷೇತ್ರಕ್ಕಿರುವ ಪ್ರಾಮುಖ್ಯವನ್ನು ಪ್ರಮುಖವಾಗಿ ಪ್ರಸ್ತಾಪಿಸಿದ್ದರು. ಆ ಬಗ್ಗೆ ನಾನು ನಿಮ್ಮ ಗಮನವನ್ನು ಸೆಳೆಯಲು ಬಯಸುತ್ತೇನೆ. ಕೈಮಗ್ಗ ಉತ್ಪನ್ನಗಳನ್ನು ಮತ್ತು ಸುಸ್ಥಿರ ಫ್ಯಾಷನ್ ಅನ್ನು ಪ್ರೋತ್ಸಾಹಿಸಲು ಆಧುನಿಕ ತಂತ್ರಜ್ಞಾನವನ್ನು ಬಳಸುತ್ತಿರುವ ನವೋದ್ಯಮಗಳತ್ತ ಅವರು ಗಮನ ಸೆಳೆದಿದ್ದರು. ಸ್ಥಳೀಯ ಕೈಮಗ್ಗ ಉತ್ಪನ್ನಗಳನ್ನು ಜನಪ್ರಿಯಗೊಳಿಸಲು ಮತ್ತು #MyProductMyPride ಎಂಬ ಹ್ಯಾಶ್ ಟ್ಯಾಗ್‌ನೊಂದಿಗೆ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳಲು ಅವರು ನಾಗರಿಕರಿಗೆ ಕರೆ ನೀಡಿದ್ದರು.

ಕಳೆದ ಕೆಲವು ವರ್ಷಗಳಲ್ಲಿ, ಭಾರತದ ಕೈಮಗ್ಗ ಕ್ಷೇತ್ರವು ಸುಸ್ಥಿರತೆ ಮತ್ತು ನಿಧಾನಗತಿಯ ಫ್ಯಾಷನ್‌ನ ದಾರಿದೀಪವಾಗಿ ಹೊರಹೊಮ್ಮುತ್ತಿದೆ. ಇಂದು ನಾವು ಕೈಮಗ್ಗದ ಪುನರುತ್ಥಾನವನ್ನು ಆಚರಿಸುತ್ತಿರುವಾಗ ಗಾತ್ರಕ್ಕಿಂತ ಗುಣಮಟ್ಟಕ್ಕೆ ಆದ್ಯತೆ ನೀಡುವ ಪ್ರಾಮುಖ್ಯವನ್ನು ಒತ್ತಿಹೇಳಲು ನಾನು ಬಯಸುತ್ತೇನೆ ಮತ್ತು ಕೈಮಗ್ಗ ಕ್ಷೇತ್ರದಲ್ಲಿ ಸುಸ್ಥಿರ ವೇಗವನ್ನು ಕಾಪಾಡಿಕೊಳ್ಳಲು ಭಾರತದ ಜನರಿಗೆ ಒತ್ತಾಯಪಡಿಸುತ್ತೇನೆ. ಕೈಮಗ್ಗ ನೇಯ್ಗೆ ಒಂದು ಪಾರಂಪರಿಕ ಕರಕುಶಲ ಕೆಲಸವಾಗಿದ್ದು ಅದು ನಿಧಾನ, ಸುಸ್ಥಿರ ಮತ್ತು ನೈತಿಕ ಶೈಲಿಯ ತತ್ವಗಳನ್ನು ಒಳಗೊಂಡಿದೆ.

ಕಳೆದ ದಶಕದಲ್ಲಿ ಸರಕಾರದ ನಿರಂತರ ಪ್ರಯತ್ನಗಳ ಜತೆಗೆ ಸ್ಥಳೀಯವಾಗಿ ಉತ್ಪಾದಿಸಿದ ವಸ್ತುಗಳತ್ತ ಜನರ ಗಮನಾರ್ಹ ಪರಿವರ್ತನೆಯಿಂದ ಅದು ವೇಗದ ಫ್ಯಾಷನ್ ಆಗಿ ಬದಲಾಗುತ್ತಿರುವುದು ಕಂಡುಬಂದಿದೆ. ಪ್ರಧಾನಮಂತ್ರಿ, ನರೇಂದ್ರ ಮೋದಿ ಅವರು ಹೆಮ್ಮೆಯಿಂದ ಭಾರತೀಯ ಕೈಮಗ್ಗದ ಬಟ್ಟೆಗಳನ್ನು ಧರಿಸುತ್ತಾರೆ ಮತ್ತು ಜಾಗತಿಕವಾಗಿ ಅವುಗಳನ್ನು ಪ್ರಚಾರ ಮಾಡುತ್ತಾರೆ ಮತ್ತು ಅದರ ಯಶಸ್ಸಿನ ಬಹು ದೊಡ್ಡ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಹೆಚ್ಚಿನ ಜನರು ಆ ಆಂದೋಲನಕ್ಕೆ ಕೈಜೋಡಿಸಲು ಇದು ಸಕಾಲ.

ಸುಸ್ಥಿರತೆಯನ್ನು ಉತ್ತೇಜಿಸುವುದು ಮಾತ್ರವಲ್ಲದೆ, ಕೈಮಗ್ಗ ವಲಯವು ಮಹಿಳೆಯರು ಮತ್ತು ದುರ್ಬಲ ಸಮುದಾಯಗಳನ್ನು ಸಬಲೀಕರಣಗೊಳಿಸಲು ಗಮನಾರ್ಹ ಅವಕಾಶಗಳನ್ನು ನೀಡುತ್ತದೆ, ಅವರಿಗೆ ಆರ್ಥಿಕ ಭವಿಷ್ಯವನ್ನು ಒದಗಿಸುತ್ತದೆ ಮತ್ತು ಅವರ ಕುಶಲತೆಯ ಬಗ್ಗೆ ಹೆಮ್ಮೆಯನ್ನು ಮೂಡಿಸುತ್ತದೆ. ಮಹಿಳೆಯರು ಸ್ಪಿನ್ನರ್, ಡೈಯರ್ ಮತ್ತು ನೇಕಾರರಾಗಿ ಕ್ಷೇತ್ರವನ್ನು ಉನ್ನತೀಕರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಾರೆ. ಅವರ ಅಮೂಲ್ಯ ಕೊಡುಗೆಗಳನ್ನು ಶ್ಲಾಘಿಸುತ್ತೇನೆ. ಸಾಂಪ್ರದಾಯಿಕ ಸಮುದಾಯಗಳು ಮತ್ತು ವಿಶೇಷವಾಗಿ ದೇಶಾದ್ಯಂತದ ಮಹಿಳೆಯರ ಕೊಡುಗೆಗಳನ್ನು ನಾನು ಸಂಪೂರ್ಣವಾಗಿ ಗುರುತಿಸುತ್ತೇನೆ ಮತ್ತು ಗೌರವಿಸುತ್ತೇನೆ. ಅವರಿಲ್ಲದಿದ್ದರೆ ಕೈಮಗ್ಗ ಕ್ಷೇತ್ರವು ದೊಡ್ಡ ಅನಾನುಕೂಲತೆಯನ್ನು ಎದುರಿಸಬೇಕಾಗುತ್ತದೆ. ಅವರ ಕೊಡುಗೆಗಳನ್ನು ಉಳಿಸಿಕೊಳ್ಳಲು ಮತ್ತು ಸುಸ್ಥಿರಗೊಳಿಸಲು ಅವರನ್ನು ಘನತೆ ಮತ್ತು ಗೌರವದಿಂದ ನಡೆಸಿಕೊಳ್ಳುವುದು ಕಡ್ಡಾಯವಾಗಿದೆ. ಅಲ್ಲದೆ, ಕೈಮಗ್ಗ ಕ್ಷೇತ್ರದಲ್ಲಿ ಅನೇಕ ಮಹಿಳಾ ನೇತೃತ್ವದ ಸಹಕಾರ ಸಂಘಗಳು ಮತ್ತು ಸ್ವ-ಸಹಾಯ ಗುಂಪುಗಳು ಹೊರಹೊಮ್ಮಿವೆ. ಈ ಸಂಸ್ಥೆಗಳು ತರಬೇತಿ ಮತ್ತು ಸಂಪನ್ಮೂಲಗಳನ್ನು ಒದಗಿಸುವುದು ಮಾತ್ರವಲ್ಲದೆ ಒಗ್ಗಟ್ಟು ಹಾಗೂ ಸಾಮೂಹಿಕ ಶಕ್ತಿಯನ್ನು ಬೆಳೆಸುವ ಬೆಂಬಲ ಜಾಲವನ್ನು ಸಹ ಒದಗಿಸುತ್ತವೆ. ಒಗ್ಗೂಡುವ ಮೂಲಕ, ಮಹಿಳಾ ಸ್ವಸಹಾಯ ಗುಂಪುಗಳು ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆಗಳನ್ನು ದೊರಕಿಸಿಕೊಡಬಹುದು, ದೊಡ್ಡ ಮಾರುಕಟ್ಟೆಗಳನ್ನು ಹೊಂದಬಹುದು ಮತ್ತು ನ್ಯಾಯಯುತ ವೇತನ ಹಾಗೂ ಉತ್ತಮ ದುಡಿಯುವ ಪರಿಸ್ಥಿತಿಗಳಿಗಾಗಿ ಸಲಹೆ ನೀಡಬಹುದು. ನೇಯ್ಗೆ ಕೌಶಲಗಳು, ವಿನ್ಯಾಸ ನಾವೀನ್ಯತೆ ಮತ್ತು ಉದ್ಯಮಶೀಲತೆಯ ಸಾಮರ್ಥ್ಯಗಳನ್ನು ಸುಧಾರಿಸುವ ಗುರಿಯನ್ನು ಹೊಂದಿರುವ ಶೈಕ್ಷಣಿಕ ಕಾರ್ಯಕ್ರಮಗಳು ಹಾಗೂ ಉಪಕ್ರಮಗಳು ಮಹಿಳೆಯರನ್ನು ಮತ್ತಷ್ಟು ಸಬಲೀಕರಣಗೊಳಿಸುತ್ತವೆ. ಹೊಸ ತಂತ್ರಗಳಲ್ಲಿ ನೈಪುಣ್ಯ ಸಾಧಿಸುವ ಮೂಲಕ ಮತ್ತು ಆಧುನಿಕ ವಿನ್ಯಾಸಗಳನ್ನು ಅನ್ವೇಷಿಸುವ ಮೂಲಕ, ಮಹಿಳಾ ನೇಕಾರರು ತಮ್ಮ ಕರಕುಶಲತೆಯ ಸುಸ್ಥಿರತೆಯನ್ನು ಖಾತ್ರಿಪಡಿಸುವ ಮೂಲಕ ಸಮಕಾಲೀನ ಮಾರುಕಟ್ಟೆಗಳನ್ನು ಆಕರ್ಷಿಸಬಲ್ಲ ಉತ್ತಮ-ಗುಣಮಟ್ಟದ ಉತ್ಪನ್ನಗಳನ್ನು ತಯಾರಿಸಬಹುದು.

ಕಸೂತಿ ಮತ್ತು ಪ್ರಿಂಟಿಂಗ್‌ಗಳು ಮೌಲ್ಯವರ್ಧನೆಯನ್ನು ಮಾಡಿ ಕೈಮಗ್ಗವನ್ನು ವೃದ್ಧಿಸುವುದೇ ಅಲ್ಲದೆ ಸಾಂಪ್ರದಾಯಿಕ ಜವಳಿಗಳಿಗೆ ಹೊಸ ಜೀವವನ್ನು ನೀಡುತ್ತವೆ, ನವೀನ ಮತ್ತು ಹೆಚ್ಚು ಅಪೇಕ್ಷೆಯ ಉತ್ಪನ್ನಗಳನ್ನು ಉತ್ಪಾದಿಸುತ್ತವೆ. ಕಸೂತಿ, ಸೂಜಿ ಕೆಲಸಗಳನ್ನು ಒಳಗೊಂಡಿರುವ ಒಂದು ಸಂಕೀರ್ಣವಾದ ಕಲಾಪ್ರಕಾರ, ಕೈಮಗ್ಗದ ಬಟ್ಟೆಗಳಿಗೆ ಆಳ ಮತ್ತು ವೈಶಿಷ್ಟ್ಯವನ್ನು ಸೇರಿಸುತ್ತದೆ. ಜರ್ದೋಜಿ, ಕಂಠ, ಅಥವಾ ಚಿಕಂಕರಿಯಂಥ ವಿವಿಧ ತಂತ್ರಗಳನ್ನು ಸಂಯೋಜಿಸುವ ಮೂಲಕ, ಕುಶಲಕರ್ಮಿಗಳು ಸರಳವಾದ ಕೈಮಗ್ಗದ ಜವಳಿಗಳನ್ನು ವಿಸ್ತೃತವಾದ, ಒಂದು-ರೀತಿಯ ತುಣುಕುಗಳಾಗಿ ಪರಿವರ್ತಿಸಬಹುದು. ಇದು ಸೌಂದರ್ಯದ ಆಕರ್ಷಣೆಯನ್ನು ಮಾತ್ರವಲ್ಲದೆ ಉತ್ಪನ್ನಗಳ ಮಾರುಕಟ್ಟೆ ಮೌಲ್ಯವನ್ನು ವೃದ್ಧಿಸುತ್ತದೆ, ಕುಶಲಕರ್ಮಿಗಳಿಗೆ ಉತ್ತಮ ಆರ್ಥಿಕ ಅವಕಾಶಗಳನ್ನು ಒದಗಿಸುತ್ತದೆ. ಕೈಮಗ್ಗದ ಬಟ್ಟೆಗಳೊಂದಿಗೆ ಈ ಮೌಲ್ಯವರ್ಧನೆಯ ತಂತ್ರಗಳನ್ನು ಸಂಯೋಜಿಸುವುದು ಸಾಂಪ್ರದಾಯಿಕ ಮತ್ತು ಸಮಕಾಲೀನ ಮಾರುಕಟ್ಟೆಗಳಿಗೆ ಇಷ್ಟವಾಗುವಂಥ ಉತ್ಪನ್ನಗಳನ್ನು ರೂಪಿಸುತ್ತದೆ. ಈ ಸಂಯೋಜನೆಯು ಶತಮಾನಗಳಷ್ಟು ಹಳೆಯದಾದ ಕರಕುಶಲ ಕಲೆಗಳನ್ನು ಸಂರಕ್ಷಿಸುತ್ತದೆ ಮತ್ತು ಪುನರುಜ್ಜೀವನಗೊಳಿಸುತ್ತದೆ. ಜತೆಗೆ ಕೈಯಿಂದ ಮಾಡಿದ, ಪರಿಸರ-ಸ್ನೇಹಿ ಜವಳಿ ಬಳಕೆಯನ್ನು ಪ್ರೋತ್ಸಾಹಿಸುವ ಮೂಲಕ ಸುಸ್ಥಿರ ಫ್ಯಾಷನ್ ಅನ್ನು ಉತ್ತೇಜಿಸುತ್ತದೆ.

ಕೈಮಗ್ಗ ಉದ್ಯಮದಲ್ಲಿ ತಂತ್ರಜ್ಞಾನ ಮತ್ತು ನಾವೀನ್ಯಗಳ ಸಂಯೋಜನೆಯಿಂದ ನೇಕಾರರು ಅನುಭವಿಸುತ್ತಿರುವ ದುಷ್ಪರಿಣಾಮವನ್ನು ನಿವಾರಿಸಲು, ಉತ್ಪಾದಕತೆ ಹೆಚ್ಚಳಕ್ಕೆ ನೆರವಾಗಲಿದೆ ಮತ್ತು ಈ ಸಾಂಪ್ರದಾಯಿಕ ಕರಕುಶಲತೆ ಸಂರಕ್ಷಿಸಲು ಉತ್ತಮ ಭರವಸೆಯನ್ನು ಹೊಂದಿದೆ. ಅತ್ಯಾಧುನಿಕ ಪ್ರಗತಿಗಳು ಕೈಮಗ್ಗ ನೇಯ್ಗೆಗೆ ಸಂಬಂಧಿಸಿದ ಭೌತಿಕ ಒತ್ತಡವನ್ನು ಗಮನಾರ್ಹವಾಗಿ ನಿವಾರಿಸುತ್ತವೆ ಮತ್ತು ಇಡೀ ಪ್ರಕ್ರಿಯೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮತ್ತು ಕಡಿಮೆ ಶ್ರಮದಾಯಕವಾಗಿಸುತ್ತದೆ. ಹೆಚ್ಚುವರಿಯಾಗಿ, ಕಂಪ್ಯೂಟರ್-ಸಹಾಯದ ವಿನ್ಯಾಸ (ಸಿಎಡಿ) ಸಾಫ್ಟ್‌ವೇರ್ ನೇಕಾರರನ್ನು ನೇಯ್ಗೆ ಆರಂಭಿಸುವ ಮೊದಲು ಸಂಕೀರ್ಣ ಮಾದರಿಗಳು ಮತ್ತು ಬಣ್ಣ ಸಂಯೋಜನೆಗಳೊಂದಿಗೆ ಪ್ರಯೋಗಿಸಲು ಶಕ್ತಗೊಳಿಸುತ್ತದೆ. ಇದು ಸಮಯವನ್ನು ಉಳಿಸುವುದಲ್ಲದೆ ದೋಷಗಳ ಅಪಾಯವನ್ನು ತಗ್ಗಿಸುತ್ತದೆ ಮತ್ತು ಇದು ಉತ್ತಮ ಗುಣಮಟ್ಟದ ಉತ್ಪನ್ನಗಳಿಗೆ ಕಾರಣವಾಗುತ್ತದೆ. ಡಿಜಿಟಲ್ ವೇದಿಕೆಗಳು ಮತ್ತು ಇ-ವಾಣಿಜ್ಯ ಜಾಲತಾಣಗಳು ನೇಕಾರರಿಗೆ ವ್ಯಾಪಕ ಮಾರುಕಟ್ಟೆಗಳ ಲಭ್ಯತೆಯನ್ನು ಒದಗಿಸುತ್ತವೆ, ಅವರನ್ನು ನೇರವಾಗಿ ಗ್ರಾಹಕರೊಂದಿಗೆ ಸಂಪರ್ಕಿಸುತ್ತವೆ ಮತ್ತು ಮಧ್ಯವರ್ತಿಗಳ ಮೇಲಿನ ಅವಲಂಬನೆಯನ್ನು ತಗ್ಗಿಸುತ್ತವೆ.

ಈ ವರ್ಷ ರಾಷ್ಟ್ರೀಯ ಕೈಮಗ್ಗ ದಿನವನ್ನು ಸ್ಮರಿಸುವುದಕ್ಕಾಗಿ, ಇಂದು ನಾನು ಎರಡು ಪ್ರತಿಜ್ಞೆಗಳನ್ನು ಕೈಗೊಳ್ಳುವಂತೆ ಎಲ್ಲರಿಗೂ ಮನವಿ ಮಾಡುತ್ತೇನೆ. ಅವೆಂದರೆ, ಕೈಮಗ್ಗ ಉತ್ಪನ್ನದ ಜತೆ ಸೆಲ್ಫಿ ತೆಗೆದುಕೊಳ್ಳಬೇಕು ಮತ್ತು ಸಾಮಾಜಿಕ ಮಾಧ್ಯಮದಲ್ಲಿ ಅದನ್ನು ಹಂಚಿಕೊಳ್ಳಬೇಕು; ಎರಡನೆಯದಾಗಿ ಕೈಮಗ್ಗದ ಉತ್ಪನ್ನವನ್ನು ತಮ್ಮ ಕಪಾಟುಗಳು ಮತ್ತು ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರತಿಜ್ಞೆಯನ್ನು ಮಾಡಬೇಕು. ಕೈಮಗ್ಗದ ಉತ್ಪನ್ನಗಳ ಪ್ರತಿಯೊಂದು ತುಣುಕೂ ವಿಭಿನ್ನವಾಗಿವೆ. ನೇಕಾರರು ಉತ್ಪನ್ನಗಳನ್ನು ಕಾಳಜಿ ಮತ್ತು ಗಮನದಿಂದ ನೇಯುತ್ತಿದ್ದು, ಅದು ಅವರ ಬದ್ಧತೆ ಮತ್ತು ಕರಕುಶಲತೆಯನ್ನು ಪ್ರತಿಬಿಂಬಿಸುತ್ತದೆ. ಕೈಮಗ್ಗ ಉತ್ಪನ್ನಗಳನ್ನು ಆಯ್ಕೆ ಮಾಡುವ ಮೂಲಕ, ನಾವು ಸಾಂಪ್ರದಾಯಿಕ ಜವಳಿಗಳ ಸೌಂದರ್ಯ ಮತ್ತು ವೈವಿಧ್ಯತೆಯನ್ನು ಆಚರಿಸುತ್ತೇವೆ ಮತ್ತು ಆ ಮೂಲಕ ಕುಶಲಕರ್ಮಿಗಳ ಜೀವನೋಪಾಯಕ್ಕೆ ಕೊಡುಗೆ ನೀಡುತ್ತೇವೆ, ಅವರ ಅಮೂಲ್ಯ ಕೌಶಲಗಳನ್ನು ಭವಿಷ್ಯದ ಪೀಳಿಗೆಗೆ ವರ್ಗಾಯಿಸುವುದನ್ನು ನಾವು ಖಾತ್ರಿಪಡಿಸಿಕೊಳ್ಳುತ್ತೇವೆ. ಕೈಮಗ್ಗ ಉದ್ಯಮದಲ್ಲಿ ಗುಣಮಟ್ಟ, ಸ್ಥಿರತೆ ಮತ್ತು ತಂತ್ರಜ್ಞಾನಕ್ಕೆ ಆದ್ಯತೆ ನೀಡುವುದು ಅತ್ಯಂತ ಮುಖ್ಯವಾಗಿದೆ. ನವೀನ ವಸ್ತುಗಳು ಮತ್ತು ವಿಧಾನಗಳನ್ನು ಪರಿಚಯಿಸುವ ಮೂಲಕ ಕೈಮಗ್ಗ ನೇಯ್ಗೆ ಹೆಚ್ಚು ಆಕರ್ಷಕವಾಗಬಹುದು. ಪ್ರತಿಯೊಬ್ಬರೂ ಪ್ರಾದೇಶಿಕ ಕುಶಲಕರ್ಮಿಗಳು ಮತ್ತು ಸಾಂಪ್ರದಾಯಿಕ ನೇಯ್ಗೆ ಸಮುದಾಯಗಳನ್ನು ಬೆಂಬಲಿಸಬೇಕು ಹಾಗೂ ತಮ್ಮ ಬಟ್ಟೆ ಖರೀದಿಗಳ ಬಗ್ಗೆ ಎಚ್ಚರದಿಂದಿರಬೇಕು. ಅದು ನಮ್ಮ ಮೇಲೆ, ಅವುಗಳನ್ನು ತಯಾರಿಸಿದ ಜನರು ಮತ್ತು ಭೂಮಿಯ ಮೇಲೆ ಪರಿಣಾಮ ಬೀರುತ್ತದೆ. ಕೈಮಗ್ಗದ ಉತ್ಪನ್ನಗಳು, ನ್ಯಾಯಯುತ ವ್ಯಾಪಾರ, ಪ್ರಾದೇಶಿಕ ಉತ್ಪಾದನೆ, ಸುಸ್ಥಿರತೆ ಮತ್ತು ಕರಕುಶಲತೆಯ ಮೇಲೆ ಗಮನವನ್ನು ಕೇಂದ್ರೀಕರಿಸುವುದರಿಂದ ಆಂದೋಲನವು ಬೆಳವಣಿಗೆಯಾಗಲು ಸಹಾಯ ಮಾಡುತ್ತದೆ ಮತ್ತು ಕೈಮಗ್ಗ ನೇಕಾರರಿಗೆ ಸಲ್ಲಬೇಕಾದ ನಿಜವಾದ ಬೆಲೆ ಮತ್ತು ಗೌರವವನ್ನು ಸಲ್ಲಿಸುತ್ತದೆ.

ಕೈಮಗ್ಗ ಉದ್ಯಮವನ್ನು ಬೆಂಬಲಿಸುವ ಮೂಲಕ ನಾವು ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವುದರ ಜತೆಗೆ, ಮಹಿಳಾ ಸಬಲೀಕರಣ ಮತ್ತು ಲಿಂಗ ಸಮಾನತೆಯಲ್ಲೂ ಯಶಸ್ಸು ಸಾಧಿಸಿದ್ದೇವೆ ಮತ್ತು ವಿಶ್ವಸಂಸ್ಥೆಯ (ಎಸ್‌ಡಿಜಿ) 2030ರ ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ, ಹಲವನ್ನು ಸಾಧಿಸಲು ಅದು ಸಹಾಯಕವಾಗಿದೆ.

(ಲೇಖಕರು ಕೇಂದ್ರ ಜವಳಿ ಸಚಿವರು)

## ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

### ದೊಡ್ಡಸ್ತಿಕೆಯ ಪ್ರದರ್ಶನ

ಸಂಪಾದಕರ ಸದ್ಯಶೋಧನೆಯಲ್ಲಿನ ಕಿರುಬರಹಕ್ಕೆ (ವಿಶ್ವವಾಣಿ ಆ.6) ಈ ಪ್ರತಿಕ್ರಿಯೆ. ವಿದೇಶಕ್ಕೆ ಹೋದವರು ಅಲ್ಲಿ ಶಾಪಿಂಗ್ ಮಾಡುವುದು ಅಲ್ಲಿಯ ವಿಶೇಷತೆ, ಸಂಸ್ಕೃತಿ ಅಥವಾ ಇನ್ನಾವುದನ್ನೋ ತಿಳಿಯಲು ಎನ್ನುವುದಕ್ಕಿಂತ, ಮರಳಿ ಬಂದ ಮೇಲೆ ತಮ್ಮ ಆಪ್ತರ ಸಮ್ಮುಖದಲ್ಲಿ ಅವನ್ನು ಪ್ರದರ್ಶನ ಮಾಡಬೇಕೆಂಬ ಹಂಬಲವೇ ಇಲ್ಲಿ ಪ್ರಬಲವಾಗಿರುತ್ತದೆ. ಮನೆಗೆ ಯಾರೇ ಹೊರಗಿನವರು ಬಂದರೂ ತಮ್ಮಲ್ಲಿರುವ ವಿಶೇಷ ವಸ್ತುಗಳನ್ನು ತೋರಿಸುವುದು ಕೆಲವರ ಅಭ್ಯಾಸವಾಗಿರುತ್ತದೆ ಎಂದರೂ ತಪ್ಪಾಗದು. ಅದರಲ್ಲೂ 'ವಿದೇಶಿ ಮಾಲು' ಎಂದಮೇಲೆ ಹಾಗೇ ಬಚ್ಚಿಟ್ಟುಕೊಳ್ಳಲು ಸಾಧ್ಯವೇ?! ಬಂದವರಿಗೂ ಅರಿವಾಗಬೇಕಲ್ಲವೇ ಇವರೂ 'ಫಾರಿನ್ ರಿಟರ್ನ್ಡ್' ಅಂತ!

ಇದೊಂದು ಪ್ರತಿಷ್ಠೆಯ, ಒಣಜಂಭದ ಅಥವಾ ಶ್ರೀಮಂತಿಕೆಯ ಪ್ರದರ್ಶನದ ದ್ಯೋತಕವೇ ಹೊರತು, ಇದರ ಹಿಂದೆ ಇನ್ನಾವ ಕಾರಣವೂ ಇರುವುದಿಲ್ಲ. ನಮ್ಮಲ್ಲಿ ಕೆಲವರಿಗೆ ಇಂದಿಗೂ ಈ 'ಫಾರಿನ್ ಕ್ರೇಝ್' ಬಿಟ್ಟಿಲ್ಲ. ವಿದೇಶಕ್ಕೆ ಹೋಗದಿದ್ದವರೂ 'ವಿದೇಶಿ ಮೂಲದವು' ಅಂತ ಕರೆಸಿಕೊಳ್ಳುವ ಕೆಲ ಸಾಮಗ್ರಿಗಳನ್ನು ಸಂಗ್ರಹ ಮಾಡಿಟ್ಟಿರುವವರಿದ್ದಾರೆ. ಅದೇ ಉದ್ದೇಶವನ್ನು ಪೂರೈಸುವ ನಮ್ಮ ದೇಶದ್ದೇ ವಸ್ತುವು ಇನ್ನೂ ಕಡಿಮೆ ಬೆಲೆಗೆ ಸಿಗುವಂತಿದ್ದರೂ ಮತ್ತು ಅದು ಹೆಚ್ಚು ಬಾಳಿಕೆ ಬರುವಂಥದ್ದಾಗಿದ್ದರೂ, ಫಾರಿನ್ ಟ್ರೇಡ್ ಮಾರ್ಕ್‌ನ ವಸ್ತುಗಳಿಗೆ ಜೋತುಬೀಳುವ ಜನ ನಮ್ಮಲ್ಲಿದ್ದಾರೆ. ಇದೊಂದು ಮಾನಸಿಕ ಕಾಯಿಲೆ ಎಂದರೂ ತಪ್ಪಾಗಲಾರದು. ಇದು ಕೆಲವರಲ್ಲಿ ಹೆಚ್ಚು, ಇನ್ನು ಕೆಲವರಲ್ಲಿ ತುಸು ಕಡಿಮೆ. ಅಷ್ಟೇ ವ್ಯತ್ಯಾಸ!

ವಿದೇಶಿ ಮಾಲು ಎಂದರೆ ಗುಣಮಟ್ಟದ್ದು ಎಂಬ ಭ್ರಾಂತಿಯು ನಮ್ಮನ್ನು ವಿದೇಶಿ ವಸ್ತುಗಳತ್ತ ಕೊಂಡೊಯ್ಯುತ್ತದೆ ಎಂಬುದರಲ್ಲಿ ಸಂಶಯವೇ ಬೇಡ. ಹಾಗಂತ ವಿದೇಶದಿಂದ ಬಂದವರು ನಮ್ಮ ದೇಶದ ವಸ್ತುಗಳಿಗೆ ಅಷ್ಟೊಂದು ಆಸಕ್ತಿ ವಹಿಸುತ್ತಾರೆಯೇ? ಇಂಥವರು ವಿರಳ. ಆದರೆ ನಾವೇ ಒತ್ತಾಯಪೂರ್ವಕವಾಗಿ ನಮ್ಮ ವಸ್ತುಗಳನ್ನು 'ಪರದೇಶಿ'ಗಳಿಗೆ ಗಿಫ್ಟ್ ಕೊಟ್ಟು, 'ಜೀವನ ಪಾವನವಾಯಿತು' ಅಂದುಕೊಳ್ಳುತ್ತೇವೆ!

**- ಶಂಕರನಾರಾಯಣ ಭಟ್** ಮಾಡಗೇರಿ

### ಅಪಾಯ ಕಟ್ಟಿಟ್ಟಬುತ್ತಿ

ಈಗ ಕೇರಳದ ವಯನಾಡಿನಲ್ಲಿ ಹಾಗೂ ಈ ಹಿಂದೆ ಕರ್ನಾಟಕದ ಕೊಡಗಿನಲ್ಲಿ ಗುಡ್ಡ ಕುಸಿತ ಉಂಟಾಗಿ ಅಪಾರ ಸಾವು-ನೋವು ಸಂಭವಿಸಿದ್ದು ನಿಜಕ್ಕೂ ಆಘಾತಕಾರಿ. ಹೀಗಾಗಿ, ಅವೈಜ್ಞಾನಿಕವಾಗಿ ಕಟ್ಟಿದ ಹೋಮ್‌ಸ್ಟೇಗಳು, ರೆಸಾರ್ಟ್‌ಗಳು ಈ ಎಲ್ಲವೂ ಈಗ ಚರ್ಚೆಯ ವಿಷಯವಾಗುತ್ತಿವೆ. ಬೆಂಗಳೂರಿನಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ. ಒಂದೆರಡು ಮಾಳಿಗೆ ಕಟ್ಟಲು ಪರವಾನಗಿ ಪಡೆದಿರುವ ಸಣ್ಣ ನಿವೇಶನಗಳಲ್ಲೂ ಕಾನೂನುಬಾಹಿರವಾಗಿ 3-4 ಮಹಡಿಗಳು ತಲೆಯೆತ್ತುತ್ತಲೇ ಇವೆ. ರಾಜಕಾಲುವೆಯನ್ನು ಒತ್ತುವರಿ ಮಾಡಿ ಕೆಲವು ಅಪಾರ್ಟ್‌ಮೆಂಟ್‌ಗಳನ್ನು ಕಟ್ಟಲಾಗಿದೆ. ದುರ್ದೈವವಶಾತ್ ಇಲ್ಲಿಯೂ ಹಾಗೆ ಧಾರಾಕಾರ ಮಳೆ ಸುರಿದರೆ ಇಂಥ ಕಟ್ಟಡಗಳಿಗೂ ಅಪಾಯ ಕಟ್ಟಿಟ್ಟಬುತ್ತಿ. ಆಗ ಅಲ್ಲಿ ನೆಲೆಸಿರುವ ಹಾಗೂ ಪಕ್ಕದ ಕಟ್ಟಡಗಳಲ್ಲಿ ವಾಸವಾಗಿರುವ ಜನರ ಪ್ರಾಣಗಳಿಗೂ ತೊಂದರೆ ಇದ್ದೇ ಇದೆ. ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವಂತಾಗಲು ಸರಕಾರ ಈಗಿಂದೀಗಲೇ ಕಾರ್ಯೋನ್ಮುಖವಾಗಬೇಕು.

**- ಬಿ.ಎನ್.ಭರತ್** ಬೆಂಗಳೂರು

**ಓದುಗರ ಒಣಿಗೆ ಭೇಟಿ ಕೊಡಿ**
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

## ಭಟ್ಟರ್ ಸ್ಕಾಚ್

● **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಇಪ್ಪತ್ತು ವರ್ಷಗಳ ಹಿಂದೆ ಹೋಗಿ ಜಗತ್ತನ್ನು ನೋಡಿದರೆ ಏನನಿಸುತ್ತದೆ?
**– ಟಿ.ಎನ್.ಸೀತಾರಾಂ ಧಾರಾವಾಹಿ ನೋಡಿದಂತೆ ಭಾಸವಾಗುತ್ತದೆ!**

● **ರಾಘಣ್ಣ, ಮೈಸೂರು**
ಭಟ್ರೇ, ನೆರೆಯ ಬಾಂಗ್ಲಾದ ಶೇಖ್ ಹಸೀನಾ ದೇಶಭ್ರಷ್ಟ ಆಗುತ್ತಿದ್ದಂತೆ ವಿದೇಶಮಂತ್ರಿ ಜೈಶಂಕರ್ ಏನಂದ್ರು?
**– 'ಯೇ ಹಸನೆ ಕಿ ಬಾತ್ ನಹಿ ಹೈ, ಬಲ್ಕಿ ಪಸೀನೇವಾಲಿ ಬಾತ್ ಹೈ'**

● **ಹರಿ ಓಂ ಶಾಸ್ತ್ರೀ, ಶಂಕರಪುರ**
ಭಟ್ರೇ, ತಮ್ಮ ದೇಶದಲ್ಲೇ ಉದ್ವಿಗ್ನ ಪರಿಸ್ಥಿತಿ ಇಟ್ಟುಕೊಂಡು ನಮ್ಮ ದೇಶದ ಪ್ರಮಾಣ ವಚನವನ್ನ ಹಸೀನಾ ಅಜ್ಜಿ ನೋಡಲು ಬಂದಿದ್ದು ಸರಿಯಾ?
**– ಅವರು ಆಗ ಬಂದಿದ್ದು ಅಡಗುತಾಣ ಎಲ್ಲಿ ಎಂಬುದನ್ನು ಕನ್ಫರ್ಮ್ ಮಾಡಿಕೊಳ್ಳಲು!**

● **ಮಧ್ವರಾಯ, ರಥಬೀದಿ ಉಡುಪಿ**
ಭಟ್ರೇ, ನಮ್ಮೂರ ಹೆಸರು (ರಜತಪೀಠ ಪುರ) ಅನ್ವರ್ಥಗೊಳಿಸುವ ಬಯಕೆ. ಐಡಿಯಾ ಕೊಡ್ತೀರಾ?
**– ಸ್ವಾಮಿಗಳ ಅಪ್ಪಣೆ ಪಡೆದು ರಥಬೀದಿಗೆ ಬೆಳ್ಳಿ ತಗಡು ಹೊಡೆಸಲು ಸಾಧ್ಯವೇ ನೋಡಿ!**

● **ರುಕ್ಕು, ಚಾಮರಾಜಪೇಟೆ**
ಭಟ್ರೇ, ಫೋನ್‌ಗಳು ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಪ್ರಕಾರ ಕೆಲಸ ಮಾಡಿದರೆ ಏನೆಂದು ಎಂಗೇಜ್ ಮೆಸೇಜ್ ಕೊಡಬಹುದು?
**– ನೀವು ಸಂಪರ್ಕಿಸಬೇಕೆಂದಿರುವ ಹುಡುಗ ಮತ್ತೊಂದು ಹುಡುಗಿಯೊಂದಿಗೆ ಸಂಭಾಷಣೆಯಲ್ಲಿ ನಿರತನಾಗಿದ್ದಾನೆ, ಮೂರು ತಾಸಿನ ನಂತರ ಪ್ರಯತ್ನಿಸಿ!**

● **ಗೋಪಾಲ, ಶ್ರೀರಂಗಪಟ್ಟಣ**
ಭಟ್ರೇ, ನಾನು ಮದುವೆ ಆಗೋ ಹುಡುಗಿ 'ನಾನು ಜಾಗರಣೆ ಸ್ಪೆಷಲಿಸ್ಟ್' ಅಂತಾಳಲ್ಲ?
**– ಸರಿಯಾಗಿ ಕೇಳಿಸಿಕೊಳ್ಳಬೇಕಿತ್ತು, 'ಒಗ್ಗರಣೆ ಸ್ಪೆಷಲಿಸ್ಟ್' ಇರಬಹುದು!**

● **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ಡಿಕೆಶಿ ಮತ್ತು ಎಚ್ಡಿಕೆ ಬೈಗುಳದಿಂದ ಗೊತ್ತಾಗೋದು ಏನು?
**– ಇಬ್ಬರ ಆಸ್ತಿ ಎಷ್ಟು ಎಂಬುದು!**

● **ಹರೀಶ ಬಿರಾಡೆ, (ಇಮೇಲ್ ಮೂಲಕ)**
ಭಟ್ರೇ, ರಾಜಕೀಯಕ್ಕೂ, ಸಿನಿಮಾಕ್ಕೂ ಏನು ವ್ಯತ್ಯಾಸ?
**– ರಾಜಕೀಯದಲ್ಲಿ ಎದುರಾಳಿಯ ರಹಸ್ಯ ಬಿಚ್ತೀನಿ ಅಂತಾರೆ, ಸಿನಿಮಾದಲ್ಲಿ ಬಿಚ್ತಾರೆ!**

● **ಎಲ್.ವಿ ಸತೀಶ, ಮೈಸೂರು**
ಭಟ್ರೇ, ಮನೆ ಕಳ್ಳರನ್ನು ಹಿಡಿಯೋದು ಹೇಗೆ?
**– ಅವರನ್ನು ಹಿಡಿಯಬೇಕಿಲ್ಲ, ಅವರಾಗಿಯೇ ಸಿಕ್ಕಿ ಬೀಳ್ತಾರೆ!**

# ನೀವು ಮಾತ್ರ ನನ್ನ ಜಾತಿ ಕೇಳಬಾರದು...

**ರಾಹುಲ್ ಗಾಂಧಿಯವರು ಮುಂಗಡಪತ್ರದ ಮೇಲಿನ ಚರ್ಚೆಯಲ್ಲಿ ತಮ್ಮ ವಿಚಾರ ಮಂಡಿಸುವಾಗ, ಅದು ಮುಂಗಡಪತ್ರದ ಕುರಿತಾದ ಭಾಷಣ ಎಂಬುದನ್ನು ಮರೆತು ರಾಜಕೀಯ ಭಾಷಣ ಮಾಡಿದರು. ಕೇಂದ್ರ ಸರಕಾರವನ್ನು ಟೀಕಿಸಲು ಮಹಾಭಾರತದ ಚಕ್ರವ್ಯೂಹವನ್ನು ಮೋದಿ ಸರಕಾರಕ್ಕೆ ಹೋಲಿಸಿದರು.**

**ಪ್ರಕಾಶಪಥ**
**ಪ್ರಕಾಶ್ ಶೇಷರಾಘವಾಚಾರ್**
vveditoped@gmail.com

ಲೋಕಸಭೆಯಲ್ಲಿ ಮುಂಗಡ ಪತ್ರದ ಮೇಲೆ ಬಿಜೆಪಿ ಸಂಸದ ಅನುರಾಗ್ ಠಾಕೂರ್ ಮಾಡಿದ ಭಾಷಣದಿಂದ ಕಾಂಗ್ರೆಸ್ ಪಕ್ಷ ಪತರಗುಟ್ಟಿ ಹೋಗಿದೆ. ತಮ್ಮ ಜಾತಿ ಯಾವುದು ಎಂದು ಹೇಳಿಕೊಳ್ಳದಿರುವವರು ಜಾತಿಗಣತಿಯನ್ನು ಕೇಳುತ್ತಿದ್ದಾರೆ ಎಂಬುದಾಗಿ ರಾಹುಲ್ ಗಾಂಧಿಯವರ ಹೆಸರನ್ನು ಹೇಳದೆ ಅವರು ಮಾಡಿದ ಟೀಕೆಯು ಕಾಂಗ್ರೆಸ್ಸಿಗರನ್ನು ಕೆರಳಿಸಿದೆ. 'ರಾಹುಲ್ ಗಾಂಧಿಯವರ ಜಾತಿ ಕೇಳುವುದಾ? ಇದೊಂದು ಅಸಾಂವಿಧಾನಿಕ ವರ್ತನೆ' ಎಂದು ಅವರು ರೋದಿಸುತ್ತಿದ್ದಾರೆ ಕಾಂಗ್ರೆಸ್ಸಿಗರ ರೋದನಕ್ಕೆ ಮೋದಿ– ವಿರೋಧಿಗಳು ಮತ್ತು 'ಇಂಡಿಯ' ಮೈತ್ರಿಕೂಟದ ನಾಯಕರುಗಳು ದನಿಗೂಡಿಸಿ, 'ರಾಹುಲ್ ಜಾತಿ ಕೇಳುವುದಾ? ಅದರಲ್ಲೂ ಲೋಕಸಭೆಯಲ್ಲಿ?' ಎಂದು ಗರಬಡಿದ ಹಾಗೆ ಕೇಳುತ್ತಿದ್ದಾರೆ.

ರಾಹುಲ್ ಗಾಂಧಿಯವರು ಮುಂಗಡಪತ್ರದ ಮೇಲಿನ ಚರ್ಚೆಯಲ್ಲಿ ತಮ್ಮ ವಿಚಾರ ಮಂಡಿಸುವಾಗ, ಅದು ಮುಂಗಡಪತ್ರದ ಕುರಿತಾದ ಭಾಷಣ ಎಂಬುದನ್ನು ಮರೆತು ರಾಜಕೀಯ ಭಾಷಣ ಮಾಡಿದರು. ಕೇಂದ್ರ ಸರಕಾರವನ್ನು ಟೀಕಿಸಲು ಮಹಾಭಾರತದ ಚಕ್ರವ್ಯೂಹವನ್ನು ಮೋದಿ ಸರಕಾರಕ್ಕೆ ಹೋಲಿಸಿದರು. ಮುಂಗಡಪತ್ರದಲ್ಲಿ ನೀಟ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯ ಕುರಿತು ಒಂದಕ್ಷರವಿಲ್ಲ, ಎಂಎಸ್‌ಪಿ ಗ್ಯಾರಂಟಿ ಘೋಷಿಸಲಿಲ್ಲ, ಅಗ್ನಿವೀರರ ಪಿಂಚಣಿಗೆ ಹಣ ಮೀಸಲಿಟ್ಟಿಲ್ಲ ಎಂದು ಟೀಕಿಸಿದರು. ಮುಂಗಡಪತ್ರದಲ್ಲಿ ನೀಟ್ ಪರೀಕ್ಷೆಯ ಸಮಸ್ಯೆಯ ಪ್ರಸ್ತಾಪ ಹೇಗೆ ಪ್ರಸ್ತುತ ಎಂದು ಅರ್ಥಮಾಡಿಸಲಿಲ್ಲ.

ವಿಶೇಷವಾಗಿ ಜಾತಿಗಣತಿಯ ಬಗ್ಗೆ ಪ್ರಬಲವಾಗಿ ಪ್ರತಿಪಾದಿಸುತ್ತಾ, ಇದೇ ಸದನದಲ್ಲಿ ನಾವು ಜಾತಿಗಣತಿಯನ್ನು ತಂದೇ ತರುತ್ತೇವೆ ಎಂದು ಘೋಷಿಸಿದರು. ಐದು ವರ್ಷದ ನಂತರ ಬರುವ ಚುನಾವಣೆಯ ಪ್ರಚಾರದ ವೇದಿಕೆಯಾಯಿತು ಸದನ. ಇವರ ಜಾತಿಯಾಧಾರಿತ ದಾಳಿಯು ಎಲ್ಲಿಗೆ ತಲುಪುತ್ತದೆ ಎಂದರೆ, ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಪ್ರತಿಗಳ ಮುದ್ರಣಕ್ಕೆ ಮುನ್ನ ನಡೆಸುವ ಹಲ್ವಾ ಸವಿಯುವ ಕಾರ್ಯಕ್ರಮದ ಚಿತ್ರವನ್ನು ಪ್ರದರ್ಶಿಸಿ, 'ಈ ಚಿತ್ರದಲ್ಲಿ ಒಬ್ಬನೇ ಒಬ್ಬ ದಲಿತ ಅಥವಾ ಆದಿವಾಸಿ ಮತ್ತು ಹಿಂದುಳಿದವರನ್ನು ನಾನು ಕಾಣುತ್ತಿಲ್ಲ. ಹಲ್ವಾ ಹಂಚುತ್ತಿರುವವರು ಶೇ.2 ಅಥವಾ 3ರ ವರ್ಗಕ್ಕೆ ಸೇರಿದ ಜನ, ಹಾಗೆಯೇ ಹಲ್ವಾ ಪಡೆಯುತ್ತಿರುವವರು ಶೇ.2 ಅಥವಾ 3ರ ವರ್ಗಕ್ಕೆ ಸೇರಿದವರು' ಎಂದು ಒಂದು ಸಮುದಾಯವನ್ನು ಗುರಿಯಾಗಿಸಿ ವಾಗ್ದಾಳಿ ಮಾಡಿದರು. ವಿರೋಧ ಪಕ್ಷದ ನಾಯಕರಾಗಿ ಮುಂಗಡಪತ್ರದ ಬಗ್ಗೆ ವಿಸ್ತೃತವಾಗಿ ವಿಷಯ ಮಂಡಿಸಿ ವಿತ್ತಸಚಿವೆಯನ್ನು ಇಕ್ಕಟ್ಟಿಗೆ ಸಿಲುಕಿಸುವುದಕ್ಕಿಂತ ಹೆಚ್ಚಾಗಿ ಅವರಿಗೆ ರಾಜಕೀಯ ಭಾಷಣವೇ ಪ್ರಿಯವಾಗಿತ್ತು!

ರಾಹುಲರ ಲೆಕ್ಕಾಚಾರವನ್ನು ಪಂಕ್ಚರ್ ಮಾಡಿದ್ದು ಸಂಸದ ಅನುರಾಗ್ ಠಾಕೂರ್ ಮತ್ತು ವಿತ್ತಸಚಿವೆ ನಿರ್ಮಲಾ ಸೀತಾರಾಮನ್ ಅವರು. ಇವರಿಬ್ಬರೂ ಪೈಪೋಟಿಯ ಮೇಲೆ ರಾಹುಲರ ಹಲ್ವಾ ಟೀಕೆಯನ್ನು ಚಿಂದಿ ಮಾಡಿದರು. ಯುಪಿಎ ಸರಕಾರದ ಅವಧಿಯ ಹಲವಾರು ಹಗರಣಗಳನ್ನು ನೆನಪಿಸಿದ ಅನುರಾಗ್‌ರವರು, 'ಇದರಲ್ಲಿ ಹಲ್ವಾ ತಿಂದವರು ಯಾರು?' ಎಂದು ತೀಕ್ಷ್ಣವಾಗಿ ಚುಚ್ಚಿ, 'ರಾಹುಲ್‌ರವರೇ ಹಲ್ವಾ ಸಿಹಿಯಾಗಿತ್ತಾ? ಅಥವಾ ಕಹಿಯಾಗಿತ್ತಾ?' ಎಂದು ಲೇವಡಿ ಮಾಡಿ ಕಾಂಗ್ರೆಸ್ ಪಾಳಯವನ್ನು ನಿರುತ್ತರಗೊಳಿಸಿದರು.

ಕಳೆದ ಒಂದು ವರ್ಷದಿಂದ ರಾಹುಲ್ ಗಾಂಧಿಯವರು ಪದೇಪದೆ ಪ್ರಸ್ತಾಪಿಸುತ್ತಿರುವುದು ಜಾತಿಗಣತಿಯನ್ನು ಮತ್ತು ಜಾತಿಯಾಧಾರಿತ ವಿಷಯಗಳನ್ನು. ಇವರು ಪ್ರತಿಯೊಬ್ಬರ ಜಾತಿಯ ಬಗ್ಗೆ ಪ್ರಶ್ನೆ ಕೇಳುವುದು ಸಮ್ಮತವು. ಪತ್ರಿಕಾಗೋಷ್ಠಿಯಲ್ಲಿ ಪತ್ರಕರ್ತರಿಗೆ, ನಿಮ್ಮ ಜಾತಿ ಯಾವುದು? ನಿಮ್ಮ ಮಾಲೀಕರ ಜಾತಿ ಯಾವುದು? ಎಂದು ಪ್ರಶ್ನಿಸುತ್ತಾರೆ. ಕಾಂಗ್ರೆಸ್ ವಕ್ತಾರೆ ಸುಪ್ರಿಯಾ ಶ್ರೀನಾತೆ ಅವರು, 'ರಾಹುಲ್ ಗಾಂಧಿಯವರು ಪತ್ರಕರ್ತರ ಜಾತಿ ಕೇಳಿದ್ದು ಸಂವಿಧಾನಬದ್ಧವಾಗಿದೆ' ಎಂದು ಸಮರ್ಥಿಸುತ್ತಾರೆ. ಆದರೆ ಅನುರಾಗ್ ಠಾಕೂರ್‌ರವರು ಸದನದಲ್ಲಿ ಜಾತಿಯ ಬಗ್ಗೆ ಪ್ರಶ್ನೆ ಮಾಡಿದಾಗ ಅದನ್ನು ಸಂವಿಧಾನ ವಿರೋಧಿ ನಡವಳಿಕೆ ಎಂದು ಅಬ್ಬರಿಸುತ್ತಾರೆ.

ರಾಹುಲ್ ಗಾಂಧಿಯವರು ಪ್ರಧಾನ ಮಂತ್ರಿಗಳ ಜಾತಿಯನ್ನು ಮುಂದಿಟ್ಟುಕೊಂಡು ಪ್ರಶ್ನಿಸುತ್ತಾರೆ.

ಹಾಗೆಯೇ ನ್ಯಾಯಾಧೀಶರ ನೇಮಕದಲ್ಲಿಯೂ ಇವರು ಜಾತಿಯ ಕುರಿತು ಪ್ರಶ್ನಿಸುತ್ತಾರೆ. 'ನರೇಂದ್ರ ಮೋದಿಯವರು ಎರಡು ರೀತಿಯ ಸೈನಿಕರನ್ನು ಸೃಷ್ಟಿಸಿದ್ದಾರೆ. ಒಂದು ವರ್ಗವು ಬಡವರು, ದಲಿತರು, ಆದಿವಾಸಿಗಳು, ಹಿಂದುಳಿದವರು, ಅಲ್ಪಸಂಖ್ಯಾತರು ಮತ್ತು ಆರ್ಥಿಕವಾಗಿ ದುರ್ಬಲರಾಗಿರುವವರನ್ನು ಒಳಗೊಂಡಿದ್ದರೆ, ಇನ್ನೊಂದು ವರ್ಗವು ಶ್ರೀಮಂತರ ಮಕ್ಕಳನ್ನು ಒಳಗೊಂಡಿದೆ' ಎಂದು ಹೇಳುವ ಮೂಲಕ ರಾಹುಲರು ಸೈನಿಕರ ನಡುವೆಯೂ ಜಾತಿಯ ಒಡಕು ಮೂಡಿಸಲು ಹಿಂಜರಿಯುವುದಿಲ್ಲ.

ಜಾತಿಗಣತಿಯನ್ನು ಬಲವಾಗಿ ಅಪ್ಪಿಕೊಂಡಿರುವ ರಾಹುಲ್ ಗಾಂಧಿಯವರು, ಕರ್ನಾಟಕದಲ್ಲಿ 2015ರಲ್ಲಿ ಕಾಂಗ್ರೆಸ್ ಸರಕಾರ ಕಾಂತರಾಜ್‌ರವರ ನೇತೃತ್ವದಲ್ಲಿ ಕೈಗೊಂಡ ಜಾತಿಗಣತಿ ವರದಿಯನ್ನು 2024 ಆದರೂ ಬಿಡುಗಡೆ ಮಾಡಿಲ್ಲ; ತಮ್ಮದೇ ಪಕ್ಷದ ಸರಕಾರವು ಮತ್ತೆ 2023ರಲ್ಲಿ ಅಧಿಕಾರಕ್ಕೆ ಬಂದು ಒಂದು ವರ್ಷ ಕಳೆದರೂ ಜಾತಿಗಣತಿಯ ವರದಿಯನ್ನು ಬಹಿರಂಗಪಡಿಸಲು ಸಾಧ್ಯವಾಗಿಲ್ಲ ಎಂಬುದನ್ನು ಮರೆತಂತಿದೆ. ಜಾತಿಗಣತಿಯ ಬಗ್ಗೆ ಅವರಿಗೆ ಬದ್ಧತೆ ಇದ್ದಿದ್ದರೆ, ಕರ್ನಾಟಕದಲ್ಲಿ 185 ಕೋಟಿ ರು. ವೆಚ್ಚ ಮಾಡಿ ಸಿದ್ಧಪಡಿಸಿರುವ ಜಾತಿಗಣತಿಯ ವರದಿಯನ್ನು ಬಿಡುಗಡೆ ಮಾಡಿ ಎಂದು ಸಿದ್ದರಾಮಯ್ಯನವರಿಗೆ ತಾಕೀತು ಮಾಡಬೇಕಿತ್ತು.

ವಾಸ್ತವವಾಗಿ ರಾಜ್ಯದ ಜಾತಿಗಣತಿಯ ವರದಿಯನ್ನು ಬಿಡುಗಡೆಗೊಳಿಸಿ ಅದರಿಂದ ಉಂಟಾದ ಲಾಭವನ್ನು ರಾಷ್ಟ್ರಮಟ್ಟದಲ್ಲಿ ಉಲ್ಲೇಖಿಸಿ ಇತರ ರಾಜ್ಯಗಳಿಗೆ ಮಾದರಿಯಾಗುವ ಸುವರ್ಣಾವಕಾಶ ಇವರಿಗಿದೆ. ಅಂಗೈಯಲ್ಲಿ ಬೆಣ್ಣೆಯಿದ್ದರೂ ತುಪ್ಪಕ್ಕಾಗಿ ಹುಡುಕುವ ಹಾಗೆ ರಾಹುಲ್‌ರವರು ಕಾಂತರಾಜ್ ವರದಿಯ ಬಗ್ಗೆ ಯಾವುದೇ ಕ್ರಮ ಕೈಗೊಳ್ಳಲು ಪ್ರಯತ್ನಿಸದೆ, ರಾಷ್ಟ್ರಮಟ್ಟದಲ್ಲಿ ಜಾತಿಗಣತಿಯ ಬಗ್ಗೆ ಅಬ್ಬರಿಸುವುದು ರಾಜಕೀಯವಾಗಿ ಲಾಭ ಬರಲಿ ಎಂಬ ಕಾರಣಕ್ಕಾಗಿ ಮಾತ್ರ.

ನಿರ್ಮಲಾ ಸೀತಾರಾಮನ್‌ರವರು ಸದನದಲ್ಲಿ ಮುಂಗಡಪತ್ರದ ಮೇಲೆ ಉತ್ತರ ನೀಡುವಾಗ, ರಾಹುಲ್ ಗಾಂಧಿಯವರಿಂದ ಹೊಮ್ಮಿದ ಜಾತಿಯ ಆರೋಪಕ್ಕೆ ತಿರುಗೇಟು ಕೊಡುವಾಗ, ಮೀಸಲಾತಿಯ ವಿಷಯದಲ್ಲಿನ ಕಾಂಗ್ರೆಸ್ಸಿನ ಇತಿಹಾಸವನ್ನು ನೆನಪಿಸಿ ಇಕ್ಕಟ್ಟಿಗೆ ಸಿಲುಕಿಸಿದರು. ರಾಹುಲ್ ಗಾಂಧಿಯವರ ಮುತ್ತಾತ ನೆಹರುರವರು 1961ರ ಜೂನ್ 27ರ ಪತ್ರವೊಂದರಲ್ಲಿ, ಜಾತಿ ಆಧಾರಿತ ಕೋಟಾಗಳು ಮತ್ತು ಸವಲತ್ತುಗಳ ಸಂಪ್ರದಾಯದ ಬಗ್ಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸುತ್ತಾರೆ. 'ನಾನು ಯಾವುದೇ ರೀತಿಯ ಮೀಸಲಾತಿಯನ್ನು ಇಷ್ಟಪಡುವುದಿಲ್ಲ, ವಿಶೇಷವಾಗಿ ಸೇವೆಯಲ್ಲಿ. ಅಸಮರ್ಥತೆ ಮತ್ತು ಎರಡನೇ ದರ್ಜೆಯ ಮಾನದಂಡಗಳಿಗೆ ಕಾರಣವಾಗುವ ಸಂಗತಿಗಳ ವಿರುದ್ಧ ನಾನು ಬಲವಾಗಿ ಪ್ರತಿಕ್ರಿಯಿಸುತ್ತೇನೆ' ಎಂದು ಅವರು ಬರೆದಿದ್ದಾರೆ. ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು, 'ನಾ ಜಾತ್ ಪರ್ ನಾ ಪಾತ್ ಪರ್, ಮೊಹರ್ ಲಗೇಗಿ ಹಾಥ್ ಪರ್' ಎಂಬ ಘೋಷಣೆಯನ್ನೇ ರಚಿಸಿದ್ದರು.

ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರು 1985ರ ಮಾರ್ಚ್‌ನಲ್ಲಿ ಪತ್ರಕರ್ತ ಅಲೋಕ್ ಮೆಹ್ತಾ ಅವರಿಗೆ ನೀಡಿದ ಸಂದರ್ಶನದಲ್ಲಿ, 'ಮೀಸಲಾತಿಯ ಹೆಸರಿನಲ್ಲಿ ಅವಿವೇಕಿಗಳಿಗೆ ಬಡ್ತಿ ನೀಡಬೇಡಿ' ಮತ್ತು 'ಮೀಸಲಾತಿಯ ಹೆಸರಿನಲ್ಲಿ ಮೂರ್ಖರನ್ನು ಪ್ರಚಾರ ಮಾಡುವುದರಿಂದ ಇಡೀ ದೇಶಕ್ಕೆ ಹಾನಿಯಾಗುತ್ತದೆ' ಎಂದು ಹೇಳಿದ್ದರು. ಮಂಡಲ್ ವರದಿಯ ಬಗ್ಗೆ ಸಂಸತ್ತಿನಲ್ಲಿ ಚರ್ಚೆಯಾದಾಗ, ಅದರ ಜಾರಿಯನ್ನು ರಾಜೀವ್ ಗಾಂಧಿ ಬಲವಾಗಿ ವಿರೋಧಿಸಿದ್ದರು.

1953ರಲ್ಲಿ ಕಾಕಾ ಸಾಹೇಬ್ ಕಾಲೇಕರ್ ನೇತೃತ್ವದಲ್ಲಿ ಹಿಂದುಳಿದ ವರ್ಗದವರ ಆರ್ಥಿಕ ಪರಿಸ್ಥಿತಿ ಅಧ್ಯಯನ ಮತ್ತು ಪರಿಹಾರ ನೀಡಲು ನೇಮಕ ಮಾಡಿದ್ದ ಆಯೋಗವು 1955ರಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಲು ಶಿಫಾರಸು ಮಾಡುವ ವರದಿಯನ್ನು ಸಲ್ಲಿಸುತ್ತದೆ. ಆದರೆ ಆ ವರದಿಯನ್ನು ಅಂಗೀಕಾರ ಮಾಡದೆ ಧೂಳುತಿನ್ನಲು ಬಿಡಲಾಗುತ್ತದೆ. 1980ರಲ್ಲಿ ಮಂಡಲ್ ಆಯೋಗವು ತನ್ನ ವರದಿಯನ್ನು ಸಲ್ಲಿಸಿ, ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಲು ಶಿಫಾರಸು ಮಾಡುತ್ತದೆ; ಆದರೆ ಅಂದಿನ ಕಾಂಗ್ರೆಸ್ ಸರಕಾರವು ಈ ವರದಿಯನ್ನೂ ಶೀತಲಪೆಟ್ಟಿಗೆಗೆ ಸೇರಿಸುತ್ತದೆ.

1992ರ ತಿರುಪತಿ ಎಐಸಿಸಿ ಅಧಿವೇಶನದಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಚುನಾವಣೆ ನಡೆದಾಗ ಪರಿಶಿಷ್ಟ ವರ್ಗಕ್ಕೆ ಸೇರಿದವರು ಒಬ್ಬರೂ ಆಯ್ಕೆಯಾಗುವುದಿಲ್ಲ. ಮುಜುಗರಕ್ಕೆ ಒಳಗಾದ ಕಾಂಗ್ರೆಸ್ ಚುನಾವಣೆಯನ್ನು ರದ್ದುಮಾಡಿ ನೇಮಕಾತಿ ಪ್ರಕ್ರಿಯೆಗೆ ಹಿಂದಿರುಗುತ್ತದೆ.

ರಾಹುಲ್ ಗಾಂಧಿಯವರು ಕಾಂಗ್ರೆಸ್ಸಿನ ಜಾತ್ಯತೀತ ಸಿದ್ಧಾಂತಕ್ಕೆ ತಿಲಾಂಜಲಿ ನೀಡಿ, ಜಾತಿ ರಾಜಕಾರಣದ ಚಕ್ರವ್ಯೂಹದಲ್ಲಿ ಸಿಲುಕಿದ್ದಾರೆ. 2017ರ ಗುಜರಾತ್ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ರಾಹುಲರು ಸೋಮನಾಥ ದೇವಾಲಯಕ್ಕೆ ಭೇಟಿಯಿತ್ತಾಗ, ಹಿಂದೂಯೇತರರಿಗೆ ಮೀಸಲಿದ್ದ ಅಲ್ಲಿನ ಸಂದರ್ಶಕರ ಪುಸ್ತಕದಲ್ಲಿ ತಮ್ಮ ಅನುಭವವನ್ನು ದಾಖಲಿಸುತ್ತಾರೆ. ಗುಜರಾತಿನ ಚುನಾವಣೆಯ ಸಂದರ್ಭದಲ್ಲಿ ರಾಹುಲ್ ತಾವು ಹಿಂದುವಲ್ಲ ಎಂದು ತಿಳಿಸುವ ವರ್ತನೆಯು ಬಿಜೆಪಿ ಚುನಾವಣಾ ಪ್ರಚಾರಕ್ಕೆ ಒಳ್ಳೆಯ ಆಹಾರವಾಗುತ್ತದೆ. ಕಾಂಗ್ರೆಸ್ ಪಕ್ಷಕ್ಕೆ ತಪ್ಪಿನ ಅರಿವಾಗಿ ವಿವಾದವನ್ನು ತಣ್ಣಗೆ ಮಾಡಲು ಮುಂದಾಗುತ್ತದೆ, 'ರಾಹುಲ್ ಗಾಂಧಿಯವರು ಜನೇದಾರಿ ಹಿಂದೂ' ಎಂದು ಸುರ್ಜೇವಾಲ ಸ್ಪಷ್ಟನೆ ನೀಡುತ್ತಾರೆ. 2018ರಲ್ಲಿ ರಾಜಸ್ಥಾನದ ಪುಷ್ಕರ್‌ನಲ್ಲಿ ಪೂಜೆ ಮಾಡಿಸುವಾಗ ರಾಹುಲ್‌ರವರು ತಾವೊಬ್ಬ ಕಾಶ್ಮೀರಿ ಬ್ರಾಹ್ಮಣ, ದತ್ತಾತ್ರೇಯ ಗೋತ್ರದವರು ಎಂದು ಗುರುತಿಸಿಕೊಳ್ಳುತ್ತಾರೆ.

ಸದನದಲ್ಲಿ ತಮ್ಮ ಚಕ್ರವ್ಯೂಹದ ತಂತ್ರಗಾರಿಕೆ ವಿಫಲವಾದ ಕಾರಣ, ಈಗ ತಮ್ಮ ಮನೆಯ ಮೇಲೆ ಜಾರಿ ನಿರ್ದೇಶನಾಲಯದವರು (ಇ.ಡಿ) ದಾಳಿ ಮಾಡಲು ಉದ್ದೇಶಿಸಿದ್ದಾರೆ, ಅವರಿಗಾಗಿ ಚಾಯ್ ಮತ್ತು ಬಿಸ್ಕತ್ತು ಕಾದಿದೆ ಎಂಬ ಆಧಾರರಹಿತ ಆರೋಪವನ್ನು 'ಎಕ್ಸ್' (ಟ್ವಿಟರ್) ಮಾಧ್ಯಮದ ಮೂಲಕ ಮಾಡಿದ್ದಾರೆ. ಇದು ಕೇವಲ ಸುದ್ದಿಯಲ್ಲಿರಲು ಅವರು ಮಾಡಿರುವ ಮತ್ತೊಂದು ತಂತ್ರವಾಗಿದೆ.

ಜಾತಿಯ ವಿಚಾರದಲ್ಲಿ ಕಾಂಗ್ರೆಸ್ ಅನುಸರಿಸುತ್ತಿರುವ ಇಬ್ಬಗೆಯ ನೀತಿಗೆ ರಾಹುಲ್ ಗಾಂಧಿ ಉತ್ತಮ ಉದಾಹರಣೆಯಾಗಿದ್ದಾರೆ. ರಾಹುಲರು ಪತ್ರಕರ್ತರ, ಪ್ರಧಾನಮಂತ್ರಿಯ, ಸೈನಿಕರ, ನ್ಯಾಯಾಧೀಶರ ಜಾತಿಯನ್ನು ಪ್ರಶ್ನಿಸಬಹುದು ಮತ್ತು ಜಾತಿಗಣತಿ ಬೇಡಿಕೆಯ ಮೂಲಕ 140 ಕೋಟಿ ಭಾರತೀಯರ ಜಾತಿ ಕೇಳಲು ಒತ್ತಾಯಿಸಬಹುದು; ಆದರೆ ತಮ್ಮ ಜಾತಿಯ ಬಗ್ಗೆ ಪ್ರಶ್ನೆ ಎದ್ದ ಕೂಡಲೇ, 'ಇದು ನನಗೆ ಮಾಡುತ್ತಿರುವ ಅಪಮಾನ' ಎನ್ನುತ್ತಾರೆ. ರಾಹುಲ್ ನೀಡುತ್ತಿರುವ ಸಂದೇಶವು ಸ್ಪಷ್ಟವಾಗಿದೆ. ಅದೆಂದರೆ– 'ಗಾಂಧಿ ಕುಟುಂಬ ಪ್ರಶ್ನಾತೀತ. ನಿಮ್ಮ ಜಾತಿಯನ್ನು ನಾನು ಕೇಳಬಹುದು, ಆದರೆ ನನ್ನ ಜಾತಿಯನ್ನು ನೀವು ಕೇಳಬಾರದು'.

**(ಲೇಖಕರು ಬಿಜೆಪಿಯ ವಕ್ತಾರರು)**

## ದಿನಸ್ಮರಣೆ
**ರಾಸುಮ ಭಟ್**

# ಅಣುಬಾಂಬ್ ದಾಳಿಗೆ ಕನಲಿದ ಹಿರೋಷಿಮಾ ಮತ್ತು ನಾಗಸಾಕಿ

ಜಗತ್ತು ಈಗಾಗಲೇ ಎರಡು ಮಹಾಯುದ್ಧಗಳನ್ನು ಕಂಡಿದೆ. ಪ್ರಸ್ತುತ ರಷ್ಯಾ-ಉಕ್ರೇನ್, ಇಸ್ರೇಲ್-ಪ್ಯಾಲೆಸ್ತೀನ್, ಅರ್ಮೇನಿಯಾ-ಅಜರ್‌ಬೈಜಾನ್ ನಡುವೆ ಯುದ್ಧ ನಡೆಯುತ್ತಿದೆ. ಇತ್ತೀಚಿನ ಮಾಹಿತಿಯಂತೆ, ಇಸ್ರೇಲ್ ಮತ್ತು ಇರಾನ್ ನಡುವೆ ಯಾವುದೇ ಕ್ಷಣದಲ್ಲಾದರೂ ಯುದ್ಧ ಪ್ರಾರಂಭವಾಗಬಹುದಾಗಿದ್ದು, ಅಮೆರಿಕವು ಇಸ್ರೇಲ್‌ನ ಮೆಡಿಟರೇನಿಯನ್ ಸಮುದ್ರದಲ್ಲಿ ತನ್ನ ಯುದ್ಧನೌಕೆಗಳು, ವಿಮಾನಗಳನ್ನು ನೆಲೆಗೊಳಿಸಿದೆ.

ಯುದ್ಧದಿಂದಾಗುವುದು ನಾಶ ಮಾತ್ರವೇ. ಯುದ್ಧದಿಂದ ಪ್ರಾಣಹಾನಿ, ನಿರಾಶ್ರಿತರ ಸಮಸ್ಯೆ ತಲೆದೋರುತ್ತದೆ ಮತ್ತು ಇದರ ಪರಿಣಾಮವನ್ನು ಮುಂದಿನ ಪೀಳಿಗೆಯವರು ಅನುಭವಿಸಬೇಕಾಗುತ್ತದೆ. ಇದಕ್ಕೆ ಉತ್ತಮ ಉದಾಹರಣೆ– ಎರಡನೇ ಮಹಾಯುದ್ಧದ ಸಮಯದಲ್ಲಿ ಅಮೆರಿಕವು 'ಲಿಟಲ್ ಬಾಯ್' ಎಂಬ ಅಣುಬಾಂಬ್ ಅನ್ನು ಜಪಾನಿನ ಹಿರೋಷಿಮಾ ನಗರದ ಮೇಲೆ ಪ್ರಯೋಗಿಸಿ ಲಕ್ಷಾಂತರ ಜನರ ಸಾವಿಗೆ ಕಾರಣವಾಗಿದ್ದು; ಇದರ ವಿಕಿರಣಗಳ ಪ್ರಭಾವವನ್ನು ಈಗಲೂ ಕಾಣಬಹುದಾಗಿದೆ.

1945ರ ಆಗಸ್ಟ್ 6ರ ಬೆಳಗ್ಗೆ ಸರಿಸುಮಾರು 8.15ರ ವೇಳೆಗೆ ಈ ಬಾಂಬ್ ಅನ್ನು ಹಿರೋಷಿಮಾ ನಗರದ ಮೇಲೆ ಪ್ರಯೋಗಿಸಲಾಯಿತು. ಬಳಿಕ ಆಗಸ್ಟ್ 9ರಂದು ನಾಗಸಾಕಿಯ ಮೇಲೂ ಅಣುಬಾಂಬ್ ದಾಳಿಯಾಯಿತು. ಈ ದಾಳಿಗಳ ಬಳಿಕವೇ ಆಗಸ್ಟ್ 15ರಂದು ಜಪಾನ್ ದೇಶವು ಅಮೆರಿಕಕ್ಕೆ ಶರಣಾಯಿತು, ಎರಡನೇ ಮಹಾಯುದ್ಧವು ಅಂತ್ಯಗೊಂಡಿತು. ಈ ಅಣುಬಾಂಬ್ ದಾಳಿಯ ಪರಿಣಾಮವಾಗಿ ಹಿರೋಷಿಮಾ ಜನಸಂಖ್ಯೆಯ ಶೇ.40ರಷ್ಟು ಜನರು ಸಾವನ್ನಪ್ಪಿದರು. ಆದರೆ ಬಾಂಬ್ ಸ್ಫೋಟವಾದ ಅದೆಷ್ಟೋ ವರ್ಷಗಳ ಬಳಿಕ, ಅಂದರೆ ಇಂದಿಗೂ ಅಲ್ಲಿನ ಜನರು ನೋವನ್ನು ಅನುಭವಿಸುತ್ತಿದ್ದಾರೆ.

ಹಿರೋಷಿಮಾ ಮೇಲಿನ ಬಾಂಬ್ ದಾಳಿಗೂ 6 ವರ್ಷಗಳ ಹಿಂದೆ (1939ರಲ್ಲಿ) ಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ಅವರು ಅಮೆರಿಕದ ಅಂದಿನ ಅಧ್ಯಕ್ಷ ರೂಸ್‌ವೆಲ್ಟ್‌ರಿಗೆ ಪತ್ರವೊಂದನ್ನು ಬರೆದಿದ್ದರು. ಅದರಲ್ಲಿ, ಅಮೆರಿಕ ಮತ್ತು ಫ್ರಾನ್ಸ್‌ನಲ್ಲಿ ಪರಮಾಣು ಬಾಂಬ್ ಬಗ್ಗೆ ನಡೆಯುತ್ತಿರುವ ಸಂಶೋಧನೆಗಳ ಉಲ್ಲೇಖ ಮಾಡಲಾಗಿತ್ತು. ಮುಖ್ಯವಾಗಿ, ಯುದ್ಧವನ್ನು ಕೊನೆಗೊಳಿಸಲು ಅಣುಬಾಂಬ್ ಅನ್ನು ಉಪಯೋಗಿಸುವುದು ಅಮೆರಿಕದ ರಹಸ್ಯ ಯೋಜನೆಯಾಗಿತ್ತು. 'ಒಂದೇ ಒಂದು ಪರಮಾಣು ಬಾಂಬು ಇಡೀ ಬಂದರು ಮತ್ತು ಸುತ್ತಮುತ್ತಲಿನ ಕೆಲವು ಪ್ರದೇಶವನ್ನೂ ನಾಶಮಾಡುವಷ್ಟು ಶಕ್ತಿಶಾಲಿಯಾಗಿರುತ್ತದೆ. ಈ ಪ್ರಯತ್ನಕ್ಕೆ ವಿಶ್ವದ ದೊಡ್ಡಣ್ಣ ಅಮೆರಿಕವು ಧನಸಹಾಯ ಮಾಡದಿದ್ದರೆ ಹಾಗೂ ಸೂಕ್ತ ವ್ಯವಸ್ಥೆಯನ್ನು ಮಾಡಿಕೊಳ್ಳದೆ ಹೋದಲ್ಲಿ, ಈ ಕೆಲಸವನ್ನು ಜರ್ಮನಿಯೇ ಮೊದಲು ಮಾಡುತ್ತದೆ' ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿತ್ತು.

ಅದಾದ ಕೆಲವು ವರ್ಷಗಳ ಬಳಿಕ, ಹಿರೋಷಿಮಾ ನಗರವು ಜಪಾನ್ ದೇಶದ ಪ್ರಮುಖ ಮಿಲಿಟರಿ ನೆಲೆಯಾಗಿದ್ದ ಕಾರಣ ಅಮೆರಿಕವು ಯೋಚನೆ ಮಾಡಿಯೇ ಈ ನಗರದ ಮೇಲೆ ಅಣುಬಾಂಬ್ ದಾಳಿಗೆ ಮುಂದಾಗಿತ್ತು. ಈ ದಾಳಿಗೆ ಅತಿಮುಖ್ಯ ಕಾರಣವೆಂದರೆ, ಅಲ್ಲಿಯವರೆಗೆ ಹಿರೋಷಿಮಾ ನಗರದ ಮೇಲೆ ಮಹಾಯುದ್ಧದ ಸಮಯದಲ್ಲಿ ದಾಳಿ ನಡೆದಿರಲಿಲ್ಲ ಮತ್ತು 1944ರಲ್ಲಿ ಜಪಾನ್ ದೇಶವು ಅಮೆರಿಕದ ಪರ್ಲ್ ಹಾರ್ಬರ್ ನೆಲೆಯ ಮೇಲೆ ದಾಳಿ ಮಾಡಿದ್ದರಿಂದ, ಅಮೆರಿಕವು ಯಾವುದೇ ರೀತಿಯಲ್ಲೂ ಕರುಣೆ ತೋರದೆ ಹಿರೋಷಿಮಾ ಮತ್ತು ನಾಗಸಾಕಿಗಳ ಮೇಲೆ ಅಣುಬಾಂಬ್ ಪ್ರಯೋಗಿಸಿಯೇಬಿಟ್ಟಿತು. ತನ್ಮೂಲಕ ಜಪಾನ್ ಅನ್ನು ಮಂಡಿಯೂರುವಂತೆ ಮಾಡಿ ಲಕ್ಷಾಂತರ ಜನರ ಮಾರಣಹೋಮಕ್ಕೆ ಮುನ್ನುಡಿ ಬರೆದು, ಜಗತ್ತಿನ ಸೂಪರ್ ಪವರ್ ರಾಷ್ಟ್ರವಾಗಿ ಹೊರಹೊಮ್ಮಿತು.

ನಂತರದ ದಿನಗಳಲ್ಲಿ ಹಲವಾರು ಯುದ್ಧಗಳು ನಡೆದರೂ ಅಣುಬಾಂಬ್ ಪ್ರಯೋಗವಾಗಿಲ್ಲ ಎಂಬುದು ನೆಮ್ಮದಿಯ ವಿಚಾರ. ಆದರೆ, ಹಿರೋಷಿಮಾ-ನಾಗಸಾಕಿಗಳ ಮೇಲಿನ ಅಣುಬಾಂಬ್ ದಾಳಿಯಿಂದ ಒದಗಿರುವ ಭೀಕರ ಪರಿಣಾಮಗಳನ್ನು ಈಗಾಗಲೇ ಮನಗಂಡಿರುವವರು ಮುಂದೆಂದೂ ಇಂಥ ದುಸ್ಸಾಹಸಕ್ಕೆ ಕೈಹಾಕದಿರಲಿ ಎಂದು ಆಶಿಸೋಣ.

**(ಲೇಖಕರು ಸಂಶೋಧನಾ ವಿದ್ಯಾರ್ಥಿ)**

# ಸಾಲಮನ್ನಾ ಸೌಲಭ್ಯ ಎಲ್ಲರಿಗೂ ದೊರಕಲಿ



**ದುಡ್ಡು-ಕಾಸು**
**ರಮಾನಂದ ಶರ್ಮಾ**
vveditoped@gmail.com

ತೆಲಂಗಾಣದಲ್ಲಿನ ಕಾಂಗ್ರೆಸ್ ಸರಕಾರವು ರೈತರ ಸಾಲವನ್ನು ಮನ್ನಾ ಮಾಡಲು ಕ್ರಮ ಕೈಗೊಂಡಿದೆ. ಇದಕ್ಕಾಗಿ 31 ಸಾವಿರ ಕೋಟಿ ರು. ಮೀಸಲಿಟ್ಟಿದ್ದು, 2018ರಿಂದ ಆರಂಭವಾಗಿ 2023ರ ಡಿಸೆಂಬರ್‌ವರೆಗೆ ರೈತರು ಪಡೆದ ಸಾಲಕ್ಕೆ ಈ ಸಾಲಮನ್ನಾ ಸೌಲಭ್ಯವು ಅನ್ವಯವಾಗಲಿದೆ. ಅಧಿಕಾರ ವಹಿಸಿಕೊಂಡ ಒಂದು ತಿಂಗಳೊಳಗಾಗಿ ಒಂದೂವರೆ ಲಕ್ಷ ರು.ವರೆಗಿನ ರೈತರ ಸಾಲವನ್ನು ಅದು ಮನ್ನಾ ಮಾಡಿದ್ದು, ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡಿದಂತೆ 2 ಲಕ್ಷ ರು.ವರೆಗಿನ ಸಾಲವನ್ನು 2024ರ ಆಗಸ್ಟ್ ಒಳಗಾಗಿ ಸಂಪೂರ್ಣವಾಗಿ ಮನ್ನಾ ಮಾಡಲಿದೆಯಂತೆ. ಈ ನಿಟ್ಟಿನಲ್ಲಿ ಅದು ತನ್ನದೇ ಆದ ನಿಯಮಾವಳಿ ಮತ್ತು ಕಾರ್ಯತಂತ್ರವನ್ನು ರೂಪಿಸಿದೆ. ಈವರೆಗೆ ಎರಡು ಹಂತದಲ್ಲಿ ನಡೆದ ಈ ಮನ್ನಾ ಅಭಿಯಾನದಲ್ಲಿ 5.45 ಲಕ್ಷ ರೈತರು ಫಲಾನುಭವಿಗಳಾಗಿದ್ದಾರಂತೆ.

ಒಟ್ಟಾರೆ ಹೇಳುವುದಾದರೆ ಸದ್ಯಕ್ಕೆ ತೆಲಂಗಾಣ ರಾಜ್ಯದಲ್ಲಿ ಸಾಲಮನ್ನಾ ಸದ್ದುಮಾಡುತ್ತಿದೆ. ದೇಶದಲ್ಲಿನ ಸಾಲಮನ್ನಾ ಇತಿಹಾಸವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಮುಂದಿನ ದಿನಗಳಲ್ಲಿ ಇದು ಒಂದು ರೀತಿಯಲ್ಲಿ ಸಮೂಹ ಸನ್ನಿಯಂತೆ, ಕಾಡ್ಗಿಚ್ಚಿನಂತೆ ಹರಡಿ ದೇಶದ ಎಲ್ಲ ರಾಜ್ಯಗಳು ರೈತರಿಗೆ ಈ ಭಾಗ್ಯವನ್ನು ನೀಡಲು ಮುಂದಾಗುವ ಸಾಧ್ಯತೆಯನ್ನು ತಳ್ಳಿಹಾಕಲಾಗದು. 2014ರ ಮೇ ತಿಂಗಳಿನಿಂದ ಈವರೆಗೆ ಉತ್ತರಪ್ರದೇಶ, ತೆಲಂಗಾಣ, ಆಂಧ್ರಪ್ರದೇಶ, ಕರ್ನಾಟಕ, ಪಂಜಾಬ್, ಮಹಾರಾಷ್ಟ್ರ, ಮಧ್ಯಪ್ರದೇಶ, ಛತ್ತೀಸ್‌ಗಢ, ಜಾರ್ಖಂಡ್ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಈ ಯೋಜನೆ ಜಾರಿಯಾಗಿದ್ದು ರೈತರ ಸುಮಾರು 2.54 ಲಕ್ಷ ಕೋಟಿ ರು. ಮೊತ್ತದ ಸಾಲವನ್ನು ಮನ್ನಾ ಮಾಡಲಾಗಿದೆ.

ರೈತರ ಸಾಲಮನ್ನಾ ಪ್ರಕ್ರಿಯೆಯು ಹೊಸ ಪರಿಕಲ್ಪನೆ ಅಥವಾ ಬೆಳವಣಿಗೆಯೇನಲ್ಲ, ಇದಕ್ಕೆ ನಾಲ್ಕು ದಶಕಗಳ ಸುದೀರ್ಘ ಇತಿಹಾಸವಿದೆ. ಇದು 80ರ ದಶಕದಲ್ಲಿ ದೇವಿಲಾಲ್ ಕೇಂದ್ರ ಮಂತ್ರಿಯಾಗಿದ್ದಾಗ, ಆರ್ಥಿಕ ಸಂಕಷ್ಟದಲ್ಲಿ ಸಿಲುಕಿರುವ ರೈತರಿಗಾಗಿ ಆರಂಭಿಸಿದ ಪರಿಪಾಠ. ಕಾಲಾನುಕ್ರಮದಲ್ಲಿ ಅಧಿಕಾರಕ್ಕೆ ಬಂದ ಸರಕಾರಗಳು ಇದನ್ನು ರೈತರ ಮತವನ್ನು ಭದ್ರವಾಗಿರಿಸಿಕೊಳ್ಳುವ ಅಸ್ತ್ರವನ್ನಾಗಿ ಮಾಡಿಕೊಂಡಿದ್ದು ಈಗ ಇತಿಹಾಸ. ಇದನ್ನು ಎಲ್ಲಾ ಪಕ್ಷಗಳು ತಮ್ಮ ರಾಜಕೀಯ ಅನುಕೂಲಕ್ಕೆ ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿವೆ. ಅತಿವೃಷ್ಟಿ–ಅನಾವೃಷ್ಟಿಯಂಥ ನೈಸರ್ಗಿಕ ವಿಪತ್ತುಗಳು ಎದುರಾದಾಗ ಮತ್ತು 'ಬೆಲೆ ಇದ್ದಾಗ ಬೆಳೆ ಇಲ್ಲ, ಬೆಳೆ ಇದ್ದಾಗ ಬೆಲೆ ಇಲ್ಲ' ಎನ್ನುವ ಪರಿಸ್ಥಿತಿಯಲ್ಲಿ, ರೈತರಿಗೆ ಬೇರೆ ಆದಾಯದ ಮೂಲ ಇಲ್ಲದಿದ್ದಾಗ ಅವರ ಸಾಲಮನ್ನಾ ಮಾಡುವ ಅನಿವಾರ್ಯತೆ ಉಂಟಾಗುತ್ತದೆ. ಅಂತೆಯೇ ಇದನ್ನು ತಪ್ಪು ಎನ್ನಲಾಗದು. ಆದರೆ, ಇತ್ತೀಚಿನ ದಿನಗಳಲ್ಲಿ ಇದು 'ಅಪವಾದ' ಆಗದೆ, 'ರೂಢ ಮಾದರಿ' ಆಗುತ್ತಿರುವುದು ವಿಶೇಷ ಮತ್ತು ಆತಂಕಕಾರಿ ಬೆಳವಣಿಗೆಯಾಗಿದೆ. ರೈತರ ಸಾಲಮನ್ನಾ ಮಾಡಬೇಕೆಂಬ ಪ್ರಸ್ತಾಪ ಮೊಳಕೆಯೊಡೆದಾಗಲೇ ಬ್ಯಾಂಕಿಂಗ್ ತಜ್ಞ ಸ್ಟೇಟ್ ಬ್ಯಾಂಕ್‌ನ ಎಸ್.ಕೆ. ತಲ್ವಾರ್, ಕರ್ನಾಟಕದ ಆಗಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಮತ್ತು ಹಲವು ಆರ್ಥಿಕ ಚಿಂತಕರು ವಿರೋಧಿಸಿದ್ದರು. 'ಇದು ಆರಂಭ ಮಾತ್ರ, ಮುಂದಿನ ದಿನಗಳಲ್ಲಿ ಇದು ರೂಢಮಾದರಿ ಆಗಬಹುದು ಮತ್ತು ಬೇರೆ ರೀತಿಯ ಸಾಲ ಪಡೆದವರೂ ಒತ್ತಡ ಹೇರಬಹುದು' ಎಂದು ಅವರು ಎಚ್ಚರಿಸಿದ್ದರು. ಆ ಎಚ್ಚರಿಕೆ ಇಂದು ಅನಾವರಣಗೊಂಡಿದೆ. ಸಾಲಮನ್ನಾಕ್ಕೆ ಬದಲಾಗಿ, ಸಂಕಷ್ಟದಲ್ಲಿದ್ದ ರೈತರಿಗೆ ಸಾಲದ ಮೇಲಿನ ಬಡ್ಡಿದರವನ್ನು ಇಳಿಸುವ ಮೂಲಕ ಅಥವಾ ಸಮಯ ಪರಿಮಿತಿಯೊಳಗೆ ಸಾಲ ಮರುಪಾವತಿಸುವವರಿಗೆ ಅಸಲಿನಲ್ಲಿ ಮತ್ತು ಬಡ್ಡಿಯಲ್ಲಿ ಸ್ವಲ್ಪ ವಿನಾಯಿತಿ ನೀಡುವ ಮೂಲಕ ಸಹಾಯ ಮಾಡಬಹುದು ಎಂದೂ ಈ ತಜ್ಞರು ಸೂಚಿಸಿದ್ದರು. ಆದರೆ, ಸಂಬಂಧಪಟ್ಟವರು ಈ ಸಲಹೆಯನ್ನು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ ಮತ್ತು ಈ ಸಲಹೆಯು ರಾಜಕಾರಣಿಗಳಿಗೂ ರುಚಿಸಲಿಲ್ಲ, ರೈತರ ಮತವನ್ನು ಭದ್ರವಾಗಿಸಿಕೊಳ್ಳುವ ಧಾವಂತದಲ್ಲಿದ್ದ ರಾಜಕಾರಣಿಗಳಿಗೆ ಅವರ ಸಲಹೆ ಇಷ್ಟವಾಗದೆ, ಸಾಲಮನ್ನಾವನ್ನು ವೈಚಾರಿಕವಾಗಿ ಮತ್ತು ತಾರ್ಕಿಕವಾಗಿ ಪ್ರಶ್ನಿಸಿದವರಿಗೆ 'ಅನ್ನದಾತ ರೈತರ ವಿರೋಧಿ' ಎಂಬ ಪಟ್ಟ ನೀಡುವುದರೊಂದಿಗೆ ಚರ್ಚಾವಿಷಯವು ಅಂತ್ಯವಾಯಿತು.

ವಾಸ್ತವವಾಗಿ ಅನ್ನದಾತನ ಸಾಲಮನ್ನಾ ಮಾಡುವುದರಲ್ಲಿ ಮೇಲ್ನೋಟಕ್ಕೆ ಅಥವಾ ತಾತ್ವಿಕವಾಗಿ ಯಾವುದೇ ತಪ್ಪಿಲ್ಲ. ಈ ದೇಶದಲ್ಲಿ ನಿಸರ್ಗದ ಕೃಪೆಯಿಂದಲೇ ಬಹುತೇಕ ಕೃಷಿ ಚಟುವಟಿಕೆಗಳು ನಡೆಯುತ್ತವೆ. ನಿಸರ್ಗ ಕೈಕೊಟ್ಟರೆ ರೈತನ ಬದುಕು ಹೈರಾಣಾಗುತ್ತದೆ ಮತ್ತು ಊಟಕ್ಕೇ ತತ್ವಾರವಾಗುತ್ತದೆ. ಅತಿವೃಷ್ಟಿ, ಅನಾವೃಷ್ಟಿ, ನೆರೆ ಮತ್ತು ಭೂಕುಸಿತ ಹೀಗೆ ಯಾವುದೇ ರೂಪದಲ್ಲಿ ನೈಸರ್ಗಿಕ ದುರಂತಗಳು ಘಟಿಸಬಹುದು. ಕೇರಳದ ವಯನಾಡು ಮತ್ತು ಕರ್ನಾಟಕದ ಶಿರೂರಿನಲ್ಲಿ ನಡೆದಂಥ ಪ್ರಾಕೃತಿಕ ವಿಕೋಪಗಳು ತೀರಾ ಇತ್ತೀಚಿನ ಉದಾಹರಣೆಗಳು ಮಾತ್ರ. ಅಂತೆಯೇ ಇಂಥ ಸಂದರ್ಭಗಳಲ್ಲಿ ಸರಕಾರದ ಸಹಾಯಹಸ್ತ ಬೇಕಾಗುತ್ತದೆ ಮತ್ತು ಅದು ಅನಿವಾರ್ಯವೂ ಹೌದು. ಸರಕಾರ ಬಿಟ್ಟು ಬೇರೆ ಯಾರೂ ರೈತರ ಸಹಾಯಕ್ಕೆ ಧಾವಿಸುವುದಿಲ್ಲ ಎನ್ನುವುದು ಇತಿಹಾಸದ ಸತ್ಯ.

ಆರ್ಥಿಕ ಸಂಕಷ್ಟಗಳು ರೈತರಿಗಷ್ಟೇ ಸೀಮಿತವಾಗಿವೆಯೇ ಎಂಬುದು ಸಾಲಮನ್ನಾ ವಿಚಾರದಲ್ಲಿನ ಮೂಲಭೂತ ಪ್ರಶ್ನೆಯಾಗಿದ್ದು, ಪ್ರಜ್ಞಾವಂತ ಜನರು ಈ ಕುರಿತು ಗಂಭೀರವಾಗಿ ಚರ್ಚಿಸುತ್ತಿದ್ದಾರೆ. ಈ ದಿನಗಳಲ್ಲಿ ಆರ್ಥಿಕ ಸುಧಾರಣೆ, ಉದಾರೀಕರಣ ಮತ್ತು ಜಾಗತೀಕರಣದ ನಂತರ ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳಲ್ಲಿ ಸಾಲವನ್ನು ಪಡೆಯದಿರುವವರೇ ಅಪರೂಪ. ಬ್ಯಾಂಕುಗಳಲ್ಲಿ 'ಯಾವುದಕ್ಕೆ ಸಾಲ ದೊರಕುತ್ತದೆ' ಎನ್ನುವ ಪಟ್ಟಿ ಮೊಳದುದ್ದವಿದ್ದರೆ, 'ಯಾವುದಕ್ಕೆ ಸಾಲ ಇಲ್ಲ' ಎನ್ನುವ ಪಟ್ಟಿ ಗೇಣುದ್ದ ಇರುತ್ತದೆ. ಸಾಲ ಪಡೆದು ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳದವರನ್ನು 'ಬಸ್ಸು ಮಿಸ್ ಮಾಡಿಕೊಂಡವರು' ಎಂದು ಗೇಲಿ ಕೂಡ ಮಾಡುವುದಿದೆ. ಸಾಲದ ಮೊತ್ತ ಸಣ್ಣದಿರಬಹುದು ಅಥವಾ ದೊಡ್ಡದಿರಬಹುದು, ಅದು ಬೇರೆ ಮಾತು. ಸಾಲ ಸಾಲವೇ. ಗೃಹಸಾಲ, ವಾಹನಸಾಲ, ಶಿಕ್ಷಣಸಾಲ, ಉದ್ಯಮಸಾಲ, ಕೈಗಾರಿಕೆ ಸಾಲ, ಕ್ರೆಡಿಟ್ ಕಾರ್ಡ್ ಸಾಲ ಮತ್ತು ಕನ್ಸ್ಯೂಮರ್ ಸಾಲಗಳನ್ನು ಪಡೆದವರು ಗಮನಾರ್ಹ ಸಂಖ್ಯೆಯಲ್ಲಿ ಆರ್ಥಿಕ ಸಂಕಷ್ಟದಲ್ಲಿ ಇದ್ದಾರೆ. ನೋಟು ರದ್ದತಿ, ಕೋವಿಡ್ ಮಹಾಮಾರಿ ಮತ್ತು ಹಣದುಬ್ಬರದಿಂದಾಗಿ ಅವರ ಆರ್ಥಿಕ ಸಂಕಷ್ಟ ತಾರಕಕ್ಕೇರಿದೆ. ಶೈಕ್ಷಣಿಕ ಸಾಲವನ್ನು ಪಡೆದಿರುವ ಲಕ್ಷಾಂತರ ವಿದ್ಯಾರ್ಥಿಗಳು ಉದ್ಯೋಗಕ್ಕಾಗಿ ಅಲೆದಾಡುತ್ತಿದ್ದು ಸಾಲ ಮರುಪಾವತಿಸಬೇಕಾದ ಒತ್ತಡದಲ್ಲಿದ್ದಾರೆ. ರಸ್ತೆಬದಿ ವ್ಯಾಪಾರಿಗಳು, ಗೂಡಂಗಡಿಯವರು, ಚಿಲ್ಲರೆ ವ್ಯಾಪಾರಿಗಳು ಮತ್ತು ವೈಯಕ್ತಿಕ ಸಾಲವನ್ನು ಪಡೆದವರೂ ಆರ್ಥಿಕ ದುಸ್ಥಿತಿಯಲ್ಲಿದ್ದಾರೆ.

ಇವರ ಆರ್ಥಿಕ ಬವಣೆಯು ಸರಕಾರ, ಬ್ಯಾಂಕು ಮತ್ತು ಹಣಕಾಸು ಸಂಸ್ಥೆಗಳಿಗೆ ಏಕೆ ಅರ್ಥವಾಗುತ್ತಿಲ್ಲ? ವಿವಿಧ ದೈನಂದಿನ ಬಾಬತ್ತುಗಳು, ವ್ಯವಹಾರಗಳ ಮೂಲಕ ಸರಕಾರದ ಬೊಕ್ಕಸಕ್ಕೆ ತೆರಿಗೆ ನೀಡುವ ಜನಸಾಮಾನ್ಯರಿಗೇಕೆ ಸಾಲಮನ್ನಾದ ಪ್ರಯೋಜನವಿಲ್ಲ? ಹಲವರು ಸಾಲದ ಮಾಸಿಕ ಕಂತುಗಳನ್ನು ಕೊಡಲಾರದೆ ತೊಳಲಾಡುತ್ತಿದ್ದಾರೆ. ರಸ್ತೆಬದಿ ವ್ಯಾಪಾರಿಗಳು ಮತ್ತು ಗೂಡಂಗಡಿಯವರು ಮೀಟರ್ ಬಡ್ಡಿಯ ಚಕ್ರಸುಳಿಯಲ್ಲಿ ಸಿಲುಕಿ ಹೈರಾಣಾಗುತ್ತಿದ್ದಾರೆ. ಇವರಿಗೆ ಸಾಲಮನ್ನಾ ಸೌಲಭ್ಯ ನೀಡಲು ಸಾಧ್ಯವಾಗದಿದ್ದರೆ, ಕನಿಷ್ಠಪಕ್ಷ ಬಡ್ಡಿಯ ವಿಷಯದಲ್ಲಾದರೂ ಸ್ವಲ್ಪ ಕರುಣೆಯನ್ನು ತೋರಿಸಬಹುದಿತ್ತು. ಇಂದು ರೈತನ ಆದಾಯ ಮತ್ತು ಹಿಡುವಳಿ ಎಷ್ಟೇ ಇರಲಿ, ಅವನಿಗೆ ಆದಾಯ ಕರದಿಂದ ವಿನಾಯಿತಿ ಇದೆ. ಆದರೆ ದುಡಿಯುವ ವರ್ಗ ಮತ್ತು ಇತರರಿಗೆ ಆದಾಯದ ಕೊನೆ ರುಪಾಯಿಯವರೆಗೂ ಕಂಪ್ಯೂಟರ್‌ನಲ್ಲಿ ಲೆಕ್ಕ ಹಾಕಿ ಆದಾಯ ಕರವನ್ನು ಪೀಕಿಸಲಾಗುತ್ತದೆ. ಈ ವರ್ಷ 7.25 ಕೋಟಿ ಜನರು ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿದ್ದಾರೆ. ಅವರಲ್ಲಿ ಅದೆಷ್ಟು ಜನರು ತೆರಿಗೆ ಕಟ್ಟಲು ಹೆಣಗಾಡಿದ್ದಾರೋ?

ಇತ್ತೀಚೆಗಂತೂ ಪಾತಾಳಗರಡಿಯಂತೆ ಇರುವ ಹೊಸ ಸಾಧನಗಳ ಮೂಲಕ ಆದಾಯವನ್ನು ಹುಡುಕಿ ತೆರಿಗೆಯನ್ನು ಹಾಕಲಾಗುತ್ತಿದೆ ಮತ್ತು ತೆರಿಗೆ ಪ್ರಮಾಣವೂ ಕ್ರಮೇಣ ಹೆಚ್ಚಾಗುತ್ತಿದೆ. ರೈತರಿಗೆ ನೀಡುವ ಬೆಳೆಸಾಲಗಳಿಗೆ ಹಲವು ಸಂದರ್ಭಗಳಲ್ಲಿ ಬಡ್ಡಿದರದಲ್ಲಿ ಮತ್ತು ಬಡ್ಡಿಯಲ್ಲಿ ಕಡಿತವಿದೆ. ಆದರೆ ಇತರರಿಗೆ ಈ ಭಾಗ್ಯ ಇರುವುದಿಲ್ಲ, ಹಾಗೆಯೇ, ರೈತರು ಹಲವು ಸಂದರ್ಭಗಳಲ್ಲಿ ಸರಕಾರದಿಂದ ಸಹಾಯಧನ (ಸಬ್ಸಿಡಿ) ಪಡೆಯುತ್ತಾರೆ. ಆದರೆ ಸಬ್ಸಿಡಿಗೂ ಕೃಷಿಯೇತರ ಸಾಲಗಾರರಿಗೂ ಎಣ್ಣೆ–ಶೀಗೇಕಾಯಿ ಸಂಬಂಧ. ಕೃಷಿಯೇತರ ಸಾಲ ಪಡೆದವರಿಗೆ ಯಾವುದೇ ರೀತಿಯ ವಿನಾಯಿತಿ ಇರುವುದಿಲ್ಲ. ಅವರು ಕಮರ್ಷಿಯಲ್ ದರದಲ್ಲಿ ಬಡ್ಡಿಯನ್ನು ನೀಡಬೇಕಾಗುತ್ತದೆ.

ಬದುಕಿನಲ್ಲಿ ಸಾಮಾಜಿಕ ನ್ಯಾಯ ಇರಬೇಕು ಎನ್ನುವ ಮಾತು ಪ್ರತಿಯೊಬ್ಬ ರಾಜಕಾರಣಿ, ಸಮಾಜಸೇವಕ ಮತ್ತು ರಾಜಕೀಯ ಪಕ್ಷಗಳಿಂದ ಕೇಳಿಬರುತ್ತದೆ. ಆದರೆ ವಾಸ್ತವದಲ್ಲಿ ಈ ನ್ಯಾಯ ಕೆಲವರಿಗಷ್ಟೇ ದೊರಕುತ್ತದೆ. ಇಂದು ಬ್ಯಾಂಕುಗಳು ಸುಮಾರು 15 ಲಕ್ಷ ಕೋಟಿ ರು.ನಷ್ಟು ಅನುತ್ಪಾದಕ ಸಾಲವನ್ನು 'ರೈಟ್ ಆಫ್' ಮಾಡಿವೆ. ಸುಮಾರು 1 ಲಕ್ಷ ಕೋಟಿ ರು.ನಷ್ಟು ಎಂಎಸ್‌ಎಂಇ ಸಾಲವನ್ನು ರೈಟ್ ಆಫ್ ಮಾಡಲಾಗಿದೆಯಂತೆ. ರೈಟ್ ಆಫ್ ಎಂಬುದು ಮನ್ನಾ ಅಲ್ಲ, ಅದು ಬೇರೆ ಮಾತು. ಆದರೆ, ಇದರ ಫಲಾನುಭವಿಗಳಲ್ಲಿ ಭಾರಿ ಉದ್ಯಮಿಗಳೇ ದೊಡ್ಡ ಪ್ರಮಾಣದಲ್ಲಿದ್ದು, ಮಧ್ಯಮ ವರ್ಗದವರು, ಆರ್ಥಿಕವಾಗಿ ಕೆಳಗಿರುವ ಜನಸಾಮಾನ್ಯರು ತುಂಬಾ ಕಡಿಮೆ ಎನ್ನುವ ಆರೋಪ ಕೇಳಿಬರುತ್ತಿದೆ. ರೈಟ್ ಆಫ್ ಪ್ರಕ್ರಿಯೆಯು ಮನ್ನಾ ಅಲ್ಲ ಎನ್ನುವುದು ಸತ್ಯವಾದರೂ, ರೈಟ್ ಆಫ್ ಆಗಿರುವುದರಲ್ಲಿ ರಿಕವರಿ ಪ್ರಮಾಣವು ಕೇವಲ ಶೇ.15ರಷ್ಟು ಎನ್ನುವುದು ಆತಂಕದ ವಿಷಯವಾಗಿದೆ. ಹೀಗಾಗಿ ರೈಟ್ ಆಫ್ ಕೂಡ ಮನ್ನಾದಂತೆ ಗೋಚರಿಸುತ್ತದೆ.

ಆರ್ಥಿಕ ಸಂಕಷ್ಟದಲ್ಲಿರುವವರಿಗೆ ಸಾಲಮನ್ನಾ ಮೂಲಕ ಸಹಾಯ ಮಾಡುವಾಗ ಸರಕಾರವು 'ಸರ್ವರಿಗೂ ಸಮಪಾಲು–ಸಮಬಾಳು' ತತ್ವವನ್ನು ಅನುಸರಿಸಬೇಕು ಮತ್ತು ಇದರ ಫಲವು ಆರ್ಥಿಕ ಸಂಕಷ್ಟದಲ್ಲಿ ಇರುವವರಿಗೆಲ್ಲಾ ದೊರಕುವಂತಾಗಬೇಕು. ಎಲ್ಲರನ್ನೂ ಒಂದೇ ಬುಟ್ಟಿಯಲ್ಲಿ ತೂಗಿ ಹೊಸ ಸಂಘರ್ಷವನ್ನು ತಪ್ಪಿಸಬೇಕು. ದೇಶವು ಈಗಾಗಲೇ ಗೋಚರವಾಗಿ, ಅಗೋಚರವಾಗಿ ಸಾಕಷ್ಟು ವಿಭಜನೆ ಕಂಡಿದ್ದು, 'ರೈತ', 'ರೈತೇತರ' ಎನ್ನುವ ಇನ್ನೊಂದು ವಿಭಜನೆ ಮುನ್ನೆಲೆಗೆ ಬಾರದಿರಲಿ ಎಂಬುದು ಸಹೃದಯಿಗಳ ಆಶಯ.

**(ಲೇಖಕರು ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)**

## ನಾರದ ಸಂಚಾರ
**ಕಲಹಪ್ರಿಯ**
naadigru@gmail.com

### ಗೊಂದಲದ ಗೂಡು

ಇದು ರಾಷ್ಟ್ರೀಯ ಜನತಾದಳ (ಆರ್‌ಜೆಡಿ) ಪಕ್ಷದ ನಾಯಕಮಣಿಗಳಿಗೆ ಸಂಬಂಧಿಸಿದ ಸುದ್ದಿ. ಆರ್‌ಜೆಡಿ ನಾಯಕ ಮನೋಜ್ ಕುಮಾರ್ ಝಾ ಅವರು ಇತ್ತೀಚೆಗೆ ರಾಜ್ಯಸಭೆಯಲ್ಲಿ ಮಾತನಾಡುವಾಗ, 'ಸಂವಿಧಾನದ ಒಂಬತ್ತನೇ ಅನುಸೂಚಿಯ ಪ್ರಕಾರ, ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಜಾರಿಗೆ ತರಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ?' ಎಂಬ ಪ್ರಶ್ನೆಯನ್ನು ಕೇಳುವ ಮೂಲಕ ಒಂದಷ್ಟು ಗೊಂದಲವನ್ನು ಹುಟ್ಟುಹಾಕಿದರಂತೆ. ಅವರ ಈ ಪ್ರಶ್ನೆಯೇ ಗೊಂದಲಮಯವಾಗಿತ್ತು; ಏಕೆಂದರೆ, ಬಿಹಾರ ವಿಧಾನಸಭೆಯಿಂದ ಅಂಗೀಕರಿಸಲ್ಪಟ್ಟ ಮತ್ತು ಪಟನಾ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ನೀಡಲ್ಪಟ್ಟ, ಹೆಚ್ಚಿಸಲಾದ ಮೀಸಲಾತಿಗಳಿಗೆ ಸಂಬಂಧಿಸಿದ ಎರಡು ಕಾನೂನುಗಳ ಕುರಿತಾದುದೇ ಆ ಪ್ರಶ್ನೆ ಎಂಬುದನ್ನೇನೂ ಅದು ಬಿಡಿಸಿ ಹೇಳಿರಲಿಲ್ಲ. ಒಬಿಸಿ ವರ್ಗದವರಿಗೆ ಮಾತ್ರವಲ್ಲದೆ, ಆರ್ಥಿಕವಾಗಿ ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳಿಗೆ ಸಂಬಂಧಿಸಿದಂತೆ ಕೂಡ ಮೀಸಲಾತಿಗಳ ಪ್ರಮಾಣವನ್ನು ಈ ಎರಡು ಕಾನೂನುಗಳು ಹೆಚ್ಚಿಸಿದ್ದವು. ಆದರೆ, ಈ ಪ್ರಶ್ನೆಗೆ ಉತ್ತರಿಸಿದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆಯ ರಾಜ್ಯ ಸಚಿವ ಬಿ.ಎಲ್. ವರ್ಮಾ ಅವರು, ಸದನದಲ್ಲಿ ಗೊಂದಲವನ್ನು ಮತ್ತಷ್ಟು ಹೆಚ್ಚಿಸಿದರಂತೆ; ಏಕೆಂದರೆ, ಅದು ಯಾವ ಪ್ರಶ್ನೆಗೆ ನೀಡಿದ ಉತ್ತರ ಎಂಬುದು ಸದನದಲ್ಲಿದ್ದ ಯಾರಿಗೂ ಅರ್ಥವಾಗಲಿಲ್ಲವಂತೆ!

ಈ ಎಲ್ಲದರ ನಡುವೆ ಆರ್‌ಜೆಡಿಯ ನಾಯಕ ಶಿಖಾಮಣಿ ತೇಜಸ್ವಿ ಯಾದವ್ ಅವರು ಪತ್ರಿಕಾಗೋಷ್ಠಿಯೊಂದನ್ನು ಕರೆದು, ಬಿಹಾರದ ಕಾನೂನುಗಳನ್ನು ಸಂವಿಧಾನದ ಒಂಬತ್ತನೇ ಅನುಸೂಚಿಯಲ್ಲಿ ಸೇರಿಸುವ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರಕಾರವು ಸಂಸತ್ತನ್ನು ತಪ್ಪುದಾರಿಗೆ ಎಳೆಯುತ್ತಿದೆ ಎಂದು ಆರೋಪಿಸಿದರಂತೆ. ಸದನದಲ್ಲಿ ಮಂಡನೆಯಾದ ಪ್ರಶ್ನೆ ಮತ್ತು ಉತ್ತರದ ಬಗ್ಗೆ ಪತ್ರಕರ್ತರೂ ಗೊಂದಲಗೊಂಡಿದ್ದರ ಜತೆಗೆ, ಏನನ್ನು ಬರೆಯಬೇಕು ಅಥವಾ ವರದಿ ಮಾಡಬೇಕು ಎಂಬ ಅನಿಶ್ಚಿತತೆಯಲ್ಲಿ ತೊಳಲಾಡಿದರಂತೆ. ಕೊನೆಗೆ ಈ ತೊಳಲಾಟ ಮತ್ತು ಗೊಂದಲವನ್ನು ತಡೆದುಕೊಳ್ಳಲಾಗದ ಕೆಲ ಪತ್ರಕರ್ತರು, 'ಈ ವಿಷಯದಲ್ಲಿ ಕೊಂಚ ಸ್ಪಷ್ಟೀಕರಣ ನೀಡ್ತೀರಾ ಶಿವಾ...?' ಎಂಬ ಧಾಟಿಯಲ್ಲಿ ತೇಜಸ್ವಿ ಯಾದವ್ ಅವರನ್ನು ಕೇಳಿದ್ದಕ್ಕೆ, 'ಈ ಪ್ರಪಂಚದಲ್ಲಿ ಕಾಣಬರುವ ಎಲ್ಲಾ ಗೊಂದಲಗಳ ಹಿಂದೆಯೂ ಪತ್ರಕರ್ತರ ಕರಾಮತ್ತೇ ಇರುತ್ತೆ ಕಣ್ರೀ...' ಎಂಬ ಆಣಿಮುತ್ತು ಉದುರಿಸಿ, ಸ್ಪಷ್ಟೀಕರಣವನ್ನು ಕೊನೆಗೂ ನೀಡದೆ, ಅಲ್ಲಿಂದ ಕಂಬಿಕಿತ್ತರಂತೆ!

ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದ ಪತ್ರಕರ್ತರು ಮತ್ತಷ್ಟು ಗೊಂದಲಗೊಂಡರಂತೆ!

### ನಾರಾಯಣ ನಾರಾಯಣ!

ಕೆಲವೊಂದು ಚಲನಚಿತ್ರ ಗೀತೆಗಳನ್ನು ಹಾಗೇ ಒಮ್ಮೆ ಗುನುಗಿಕೊಂಡು ಸುಮ್ಮನಿರಬೇಕೇ ವಿನಾ, ಅದರೊಳಗಿನ ಆಶಯವನ್ನು ಕಾರ್ಯರೂಪಕ್ಕೆ ತರಲು ಹೋಗಬಾರದು ಎಂಬುದನ್ನು ಪುಷ್ಟೀಕರಿಸುವ ಘಟನೆಯೊಂದು ವಿಜಯಪುರದಿಂದ ವರದಿಯಾಗಿದೆ. ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ಬಸ್‌ಗಾಗಿ ಕಾಯುತ್ತಿದ್ದ ಮಹಿಳೆಯೊಬ್ಬಳಿಗೆ ಪುರುಷ ಪುಂಗವನೊಬ್ಬ ಕಣ್ಣು ಹೊಡೆದು ಸನ್ನೆ ಮಾಡಿದನಂತೆ. ಮೊದಮೊದಲಿಗೆ ಇದನ್ನು ಮಹಿಳೆ ನಿರ್ಲಕ್ಷಿಸಿದರೂ, ಆತನ ಅಸಭ್ಯ ವರ್ತನೆ ತಾರಕಕ್ಕೇರಿದಾಗ, ಕಾಲಲ್ಲಿರುವುದನ್ನು ಕೈಗೆತ್ತಿಕೊಂಡು ಸಖತ್ತಾಗೇ ಪ್ರಸಾದ ಕೊಟ್ಟಳಂತೆ. 'ಕಣ್ಣು ಹೊಡೆಯಾಕಾ...' ಎಂಬ ಹಾಡನ್ನು ತೀರಾ ಗಂಭೀರವಾಗಿ ಪರಿಗಣಿಸಿದ್ದಕ್ಕೆ ಆ ಮಹಾನುಭಾವನಿಗೆ 'ಅಲ್ಲೇ ಡ್ರಾ, ಅಲ್ಲೇ ಬಹುಮಾನ'ದ ರೀತಿಯಲ್ಲಿ ಪ್ರತಿಫಲವು ಸಿಕ್ಕಿದ್ದು ವಿಶೇಷ!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942, Printed at M/s Digantha Mudhrana Ltd. NT Road, Shivamogga - 577 201

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 226

# ಬಾಂಗ್ಲಾದೇಶ ಮಧ್ಯಂತರ ಸರಕಾರಕ್ಕೆ ಮಾರ್ಗಸೂಚಿ ಪ್ರಕಟ

## ನೊಬೆಲ್ ಪುರಸ್ಕೃತ ಯೂನಸ್ ಮುಖ್ಯ ಸಲಹೆಗಾರ: ವಿದ್ಯಾರ್ಥಿ ಆಂದೋಲನ ಸಂಯೋಜಕರು

**ಢಾಕಾ:** ನೊಬೆಲ್ ಪ್ರಶಸ್ತಿ ಪುರಸ್ಕೃತ ಮುಹಮ್ಮದ್ ಯೂನಸ್ ಅವರು ಬಾಂಗ್ಲಾದೇಶದ ಮಧ್ಯಂತರ ಸರಕಾರದ ಮುಖ್ಯ ಸಲಹೆಗಾರರಾಗಿದ್ದಾರೆ ಎಂದು 'ತಾರತಮ್ಯ ವಿರೋಧಿ ವಿದ್ಯಾರ್ಥಿ ಆಂದೋಲನ'ದ ಸಂಯೋಜಕರು ತಿಳಿಸಿದ್ದಾರೆ.

ದೇಶ ರಕ್ಷಣೆಗಾಗಿ ವಿದ್ಯಾರ್ಥಿ ಸಮುದಾಯದ ಒತ್ತಾಯದ ಮೇರೆಗೆ ಪ್ರೊ. ಯೂನಸ್ ಅವರು ಮಧ್ಯಂತರ ಸರಕಾರದಲ್ಲಿ ನಿರ್ಣಾಯಕ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಒಪ್ಪಿದ್ದಾರೆ ಎಂದು ವಿದ್ಯಾರ್ಥಿ ಆಂದೋಲನದ ಪ್ರಮುಖ ಸಂಯೋಜಕ ನಹೀದ್ ಇಸ್ಲಾಂ ಹೇಳಿದ್ದಾರೆಂದು ಬಾಂಗ್ಲಾದೇಶದ ಡೈಲಿ ಸ್ಟಾರ್ ಪತ್ರಿಕೆ ಮಂಗಳವಾರ ವರದಿ ಮಾಡಿದೆ.

ಮಧ್ಯಂತರ ಸರಕಾರಕ್ಕೆ ಒಂದು ಅಚ್ಚುಕಟ್ಟಾದ ಮಾರ್ಗಸೂಚಿಗಳನ್ನು ರಚಿಸಿ ಘೋಷಿಸಲು 24 ಗಂಟೆ ಸಮಯ ಕೇಳಿದ್ದೆವು. ಆದರೆ, ಸದ್ಯದ ಪರಿಸ್ಥಿತಿ ಪರಿಗಣಿಸಿ, ತುರ್ತಾಗಿ ಘೋಷಿಸುತ್ತಿದ್ದೇವೆ ಎಂದು ನಹೀದ್ ಸುದ್ದಿಗಾರರಿಗೆ ತಿಳಿಸಿದರು.

ಮಧ್ಯಂತರ ಸರಕಾರವನ್ನು ರಚಿಸಲು ನಿರ್ಧರಿಸಿದ್ದೇವೆ. ಇದರಲ್ಲಿ ಬಾಂಗ್ಲಾದೇಶದಲ್ಲಿ ಎಲ್ಲರಿಗೂ ಇಷ್ಟವಾಗುವ, ಎಲ್ಲರೂ ಇಷ್ಟಪಡುವ ನೊಬೆಲ್ ಪ್ರಶಸ್ತಿ ಪುರಸ್ಕೃತ ಮೊಹಮ್ಮದ್ ಯೂನಸ್ ಅವರು ಮುಖ್ಯ ಸಲಹೆಗಾರರಾಗಿರುತ್ತಾರೆ. ಸಂಸತ್ತನ್ನು ಆದಷ್ಟು ಬೇಗ ವಿಸರ್ಜಿಸಿ ಮಧ್ಯಂತರ ಸರಕಾರ ರಚಿಸಲಾಗುವುದು ಎಂದು ರಾಷ್ಟ್ರಾಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಅವರು ಪ್ರಕಟಿಸಿದ ಕೆಲವೇ ಗಂಟೆಗಳಲ್ಲಿ ವಿದ್ಯಾರ್ಥಿ ಸಂಘಟನೆಯಿಂದ ಈ ಘೋಷಣೆ ಬಂದಿದೆ.

ಸೋಮವಾರ ತಡರಾತ್ರಿ ರಾಷ್ಟ್ರವನ್ನುದ್ದೇಶಿಸಿ ದೂರದರ್ಶನದ ಭಾಷಣದಲ್ಲಿ ಮಾತನಾಡಿದ, ಅಧ್ಯಕ್ಷರು ಹಲವಾರು ಪ್ರಕರಣಗಳಲ್ಲಿ ಶಿಕ್ಷೆಗೊಳಗಾದ ನಂತರ ಗೃಹಬಂಧನದಲ್ಲಿರುವ ಮಾಜಿ ಪ್ರಧಾನಿ ಖಲೀದಾ ಜಿಯಾ ಅವರನ್ನು ಬಿಡುಗಡೆ ಮಾಡಲು ಆದೇಶಿಸಿದರು. ಡಾ ಯೂನಸ್ ನೇತೃತ್ವದ ಮಧ್ಯಂತರ ಸರ್ಕಾರವನ್ನು ರಚಿಸಲು ಸಾಧ್ಯವಾದಷ್ಟು ಬೇಗ ಕ್ರಮಗಳನ್ನು ತೆಗೆದುಕೊಳ್ಳುವಂತೆ ನಹಿದ್ ಅಧ್ಯಕ್ಷರನ್ನು ಒತ್ತಾಯಿಸಿದರು.

ದೇಶದಲ್ಲಿ ಅರಾಜಕತೆ ಮತ್ತು ಜನರ ಜೀವನದ ಮೇಲೆ ಅಭದ್ರತೆ ಇರುವುದರಿಂದ, ಕಾನೂನು ಮತ್ತು ಸುವ್ಯವಸ್ಥೆಯನ್ನು ಪುನಃ ಸ್ಥಾಪಿಸಲು ತ್ವರಿತ ಮತ್ತು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳುವಂತೆ ನಾವು ಅಧ್ಯಕ್ಷರನ್ನು ಒತ್ತಾಯಿಸುತ್ತೇವೆ ಮತ್ತು ಸ್ವಾತಂತ್ರ್ಯ ಬಯಸುವ ವಿದ್ಯಾರ್ಥಿಗಳು ಸಹ ಕಾನೂನಿನ ಸಹಾಯಕ್ಕಾಗಿ ಬೀದಿಗಿಳಿಯುತ್ತಾರೆ ಎಂದು ಅವರು ಹೇಳಿದರು.

ವಿದ್ಯಾರ್ಥಿಗಳು ಪ್ರಸ್ತಾಪಿಸಿದ ಸರ್ಕಾರವನ್ನು ಹೊರತುಪಡಿಸಿ ಬೇರೆ ಯಾವುದೇ ಸರ್ಕಾರವನ್ನು ಸ್ವೀಕರಿಸಲಾಗುವುದಿಲ್ಲ. ನಾವು ಹೇಳಿದಂತೆ, ಯಾವುದೇ ಮಿಲಿಟರಿ ಸರ್ಕಾರ ಅಥವಾ ಮಿಲಿಟರಿ ಬೆಂಬಲಿತ ಸರ್ಕಾರ ಅಥವಾ ಫ್ಯಾಸಿಸ್ಟ್ ಸರ್ಕಾರವನ್ನು ಒಪ್ಪಿಕೊಳ್ಳುವುದಿಲ್ಲ ಎಂದು ನಹಿದ್ ಹೇಳಿದರು.

ತಾರತಮ್ಯ ವಿರೋಧಿ ವಿದ್ಯಾರ್ಥಿ ಆಂದೋಲನದ ವಿದ್ಯಾರ್ಥಿ ನಾಯಕ ನಹೀದ್ ಇಸ್ಲಾಂ ಮಧ್ಯಂತರ ಸರಕಾರ ರಚನೆಗೆ ಅಗತ್ಯವಾದ ಮಾರ್ಗಸೂಚಿಯನ್ನು ಢಾಕಾದಲ್ಲಿ ಸುದ್ದಿಗೋಷ್ಠಿಯಲ್ಲಿ ಪ್ರಕಟಿಸಿದರು. ವಿದ್ಯಾರ್ಥಿ ಮುಖಂಡರಾದ ಆಸಿಫ್ ಮಹಮುದ್, ಅಬು ಬಾಕರ್ ಮುಂಜುಂದಾರ್ ಜತೆಗಿದ್ದರು.

### ಯೂನಸ್ ಸಮ್ಮತಿ

ಢಾಕಾ: ವಿದ್ಯಾರ್ಥಿ ಸಂಘಟನೆಗಳ ಮನವಿಯಂತೆ ಸೇನೆಯ ಆಡಳಿತದ ಹಂಗಾಮಿ ಸರಕಾರಕ್ಕೆ ಮುಖ್ಯ ಸಲಹೆಗಾರರಾಗಲು 2006ರಲ್ಲಿ ನೊಬೆಲ್ ಶಾಂತಿ ಪುರಸ್ಕೃತರಾದ ಮುಹಮ್ಮದ್ ಯೂನಸ್ ಮಂಗಳವಾರ ಒಪ್ಪಿಗೆ ಸೂಚಿಸಿದ್ದಾರೆ. 'ಮುಹಮ್ಮದ್ ಯೂನಸ್ ಅವರನ್ನೇ ಮಧ್ಯಂತರ ಸರಕಾರದ ಮುಖ್ಯ ಸಲಹೆಗಾರರನ್ನಾಗಿ ಮಾಡಬೇಕು. ನಮಗೆ ಅವರ ಮೇಲೆ ಪೂರ್ಣ ನಂಬಿಕೆ ಇದೆ' ಎಂದು ವಿದ್ಯಾರ್ಥಿ ಸಂಘಟನೆಗಳು ಪಟ್ಟುಹಿಡಿದಿವೆ. ಬಳಿಕ ಯೂನಸ್ ಅವರ ಬಳಿ ವಿದ್ಯಾರ್ಥಿ ಸಂಘಟನೆಗಳು ಹಲವು ಬಾರಿ ಮನವಿ ಮಾಡಿದ್ದರಿಂದ ಅವರೂ ಮುಖ್ಯ ಸಲಹೆಗಾರರಾಗಲು ಒಪ್ಪಿಗೆ ಸೂಚಿಸಿದ್ದಾರೆ.ಮೈಕ್ರೋ ಫೈನಾನ್ಸ್, ಮೈಕ್ರೊ ಕ್ರೆಡಿಟ್ ಯೋಜನೆಗಳ ಮೂಲಕ ಗ್ರಾಮೀಣ ಬ್ಯಾಂಕ್ ಸ್ಥಾಪಿಸಿ ಮುಹಮ್ಮದ್ ಬಡತನದ ವಿರುದ್ಧ ಹೋರಾಡಿದವರು. ಯೂನುಸ್ 'ಬಡವರ ಬ್ಯಾಂಕರ್' ಎಂದೇ ಖ್ಯಾತರು. ಆದರೆ, ಶೇಖ್ ಹಸೀನಾ ವಿರೋಧಕ್ಕೆ ಗುರಿಯಾಗಿದ್ದರು. ಯೂನಸ್ ಬಡವರ ರಕ್ತ ಹೀರುತ್ತಿದ್ದಾರೆ ಎಂಬ ಆರೋಪವನ್ನು ಹಸೀನಾ ಮಾಡಿದ್ದರು. ಯೂನಸ್ ವಿರುದ್ಧ 190ಕ್ಕೂ ಅಧಿಕ ಕೇಸ್ ದಾಖಲಿಸಲಾಗಿತ್ತು. ಕಾರ್ಮಿಕ ಕಾನೂನು ಉಲ್ಲಂಘನೆ ಪ್ರಕರಣದಲ್ಲಿ ತಪ್ಪಿತಸ್ಥ ಎಂದು ಕೋರ್ಟ್ ತೀರ್ಪು ನೀಡಿತ್ತು. ಸದ್ಯ ಜಾಮೀನಿನ ಮೇಲಿರುವ ಯೂನಸ್, ವಿದೇಶದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

## ವಿದ್ಯಾರ್ಥಿ ಕ್ರಾಂತಿ ಶಕ್ತಿ ನಹೀದ್ ಇಸ್ಲಾಂ

**ಢಾಕಾ:** ಬಾಂಗ್ಲಾದೇಶದಲ್ಲಿ ಸರಕಾರಿ ನೌಕರಿಯಲ್ಲಿ ಮೀಸಲು ನೀತಿ ವಿರೋಧಿಸಿ 22 ದಿನಗಳ ಹಿಂದೆ ಆರಂಭವಾದ ಪ್ರತಿಭಟನೆ ಪ್ರಧಾನಿ ಶೇಖ್ ಹಸೀನಾ ಅವರ ಪದತ್ಯಾಗ, ಬಳಿಕ ದೇಶ ತೊರೆಯುವುದಕ್ಕೂ ಕಾರಣವಾಯಿತು. ರಾಷ್ಟ್ರಾದ್ಯಂತ 4 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು, ಜನರು ಪ್ರತಿಭಟನೆಯಲ್ಲಿ ಭಾಗಿಯಾಗುವ ಮಟ್ಟಿಗೆ ದೊಡ್ಡ ಮಟ್ಟದಲ್ಲಿ ಪ್ರತಿಭಟನೆಯನ್ನು ಮುನ್ನಡೆಸಿದ 26 ವರ್ಷದ ವಿದ್ಯಾರ್ಥಿ ನಾಯಕನೇ 'ನಹೀದ್ ಇಸ್ಲಾಂ'.

2 ಬಾರಿ ಅಪಹರಣಕ್ಕೊಳಗಾಗಿ ಹಲ್ಲೆಗೊಳಗಾದರೂ ಹೋರಾಟ ಬಿಡದ ನಹೀದ್ 'ತಾರತಮ್ಯ ವಿರೋಧಿ ವಿದ್ಯಾರ್ಥಿ ಸಂಘಟನೆ' ರಾಷ್ಟ್ರೀಯ ಸಂಚಾಲಕನಾಗಿದ್ದಾನೆ. ಬಾಂಗ್ಲಾದೇಶದಲ್ಲಿ ಅರಾಜಕತೆ ಸೃಷ್ಟಿಗೆ ನಹೀದ್‌ದೇ ಮುಖ್ಯ ಪಾತ್ರ.

1998ರಲ್ಲಿ ಢಾಕಾದಲ್ಲಿ ಜನಿಸಿದ ನಹೀದ್ ಇಸ್ಲಾಂ, ಸದ್ಯ ಢಾಕಾ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರದ ವಿದ್ಯಾರ್ಥಿ. ಈತನ ತಂದೆ ಶಿಕ್ಷಕ-ತಾಯಿ ಗೃಹಿಣಿ. ಹಸೀನಾ ಸರಕಾರದ ವಿರುದ್ಧ ಪ್ರತಿಭಟನೆ, ಹೋರಾಟ ವೇಳೆ ಹಲವು ಬಾರಿ ಪೊಲೀಸ್ ಬಂಧನಕ್ಕೊಳಗಾಗಿದ್ದರಿಂದ ನಹೀದ್ ಹೆಸರು ರಾಷ್ಟ್ರವ್ಯಾಪಿಯಾಯಿತು. ಮೀಸಲು ವಿರುದ್ಧದ ಹೋರಾಟದಲ್ಲಿ ಪ್ರಧಾನಿ ಹಸೀನಾ ಪ್ರತಿಭಟನಾ ನಿರತ ವಿದ್ಯಾರ್ಥಿಗಳನ್ನು 'ಭಯೋತ್ಪಾದಕರು' ಎಂದು ನಿಂದಿಸಿದರು. ಈ ಹೇಳಿಕೆಯೇ ವಿದ್ಯಾರ್ಥಿ ಸಂಘಟನೆಯಲ್ಲಿ ಭಾರಿ ಆಕ್ರೋಶಕ್ಕೆ ಕಾರಣವಾಯಿತು. ಈ ವೇಳೆ ನಹೀದ್ ಇಸ್ಲಾಂ 'ಈಗ ವಿದ್ಯಾರ್ಥಿಗಳು ದೊಣ್ಣೆ ಹಿಡಿದಿದ್ದಾರೆ. ಆ ದೊಣ್ಣೆಗಳಿಂದ ಕೆಲಸ ಆಗದೇ ಇದ್ದರೆ ಶಸ್ತ್ರಾಸ್ತ್ರ ಹಿಡಿಯುತ್ತಾರೆ' ಎಂದು ಅಬ್ಬರಿಸಿದ್ದ. ಆ ಬಳಿಕ ಹಸೀನಾ ರಾಜೀನಾಮೆಗೆ ಒತ್ತಾಯಿಸಿ ಭಾರಿ ಹಿಂಸಾತ್ಮಕ ಪ್ರತಿಭಟನೆ ಶುರುವಾಯಿತು.

ದೇಶದಲ್ಲಿ ಫ್ಯಾಸಿಸ್ಟ್ ಆಡಳಿತ ಕೊನೆಗೊಂಡು ಹೊಸ ಪ್ರಜಾಸತ್ತಾತ್ಮಕ ದೇಶ ನಿರ್ಮಾಣವಾಗಬೇಕು ಎಂಬುದು ನಹೀದ್ ವಾದ. ನಿರುದ್ಯೋಗ, ಸರಕಾರಿ ನೌಕರಿಯಲ್ಲಿ ತಾರತಮ್ಯ, ಹಣದುಬ್ಬರ ವಿಚಾರಗಳಿಗಾಗಿ ಆರಂಭವಾದ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿ ಕಳೆದ 22 ದಿನಗಳಲ್ಲಿ 440ಕ್ಕೂ ಅಧಿಕ ಮಂದಿ ಜೀವ ಕಳೆದುಕೊಂಡಿದ್ದಾರೆ.

**2 ಬಾರಿ ಅಪಹರಣ:** ಜು.19 ಮತ್ತು 26ರಂದು 2 ಬಾರಿ ನಹೀದ್‌ನನ್ನು ಮನೆಯಿಂದ ಎಳೆದೊಯ್ದು ಅಜ್ಞಾತ ಸ್ಥಳದಲ್ಲಿರಿಸಲಾಗಿತ್ತು. ಪ್ರತಿಭಟನೆಯಲ್ಲಿ ಆತನ ಪಾತ್ರದ ಬಗ್ಗೆ ಮಾಹಿತಿ ತಿಳಿಸುವಂತೆ ಒತ್ತಾಯಿಸಿ ಮಾರಣಾಂತಿಕ ಹಲ್ಲೆ ನಡೆಸಲಾಗಿತ್ತು. ಪೊಲೀಸ್ ಇಲಾಖೆ ಈ ಕೃತ್ಯ ನಡೆಸಿದೆ ಎಂಬ ಆರೋಪವಿತ್ತು. ಆದರೆ ಇಲಾಖೆ ನಿರಾಕರಿಸಿತ್ತು. 2 ದಿನಗಳ ಬಳಿಕ ನಹೀದ್ ಸೇತುವೆ ಕೆಳಗೆ ಪ್ರಜ್ಞಾಹೀನ ಸ್ಥಿತಿಯಲ್ಲಿ ಪತ್ತೆಯಾಗಿದ್ದ. ಆದರೂ ಛಲಬಿಡದೇ ಸರಕಾರದ ವಿರುದ್ಧ ಪ್ರತಿಭಟನೆ ಮುಂದುವರೆಸಿದ್ದ. ಕಿರಿಯ ಸೋದರ ಅಣ್ಣ ನಹೀದ್‌ನ ಛಲ-ಹೋರಾಟಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾನೆ.

**ಸೇನೆ ಆಡಳಿತಕ್ಕೆ ಬೆಂಬಲ:** ಷೇಕ್ ಹಸೀನಾ ರಾಜೀನಾಮೆ ಬಳಿಕ ಸೇನಾ ಮುಖ್ಯಸ್ಥ ವಖಾರ್-ಉಜ್-ಜಮಾನ್ ಮದ್ಯಂತರ ಸರಕಾರಕ್ಕೆ ಸಮಿತಿ ರಚನೆ ಮಾಡುವ ನಿರ್ಧಾರ ಪ್ರಕಟಿಸಿದರು. ಬಳಿಕ ನಹೀದ್ ಇಸ್ಲಾಂ ಸೇರಿದಂತೆ ಅನೇಕ ವಿದ್ಯಾರ್ಥಿ ನಾಯಕರ ಜತೆ ಸಭೆ ನಡೆಸಿದರು. ಆದರೆ ವಿದ್ಯಾರ್ಥಿ ಸಂಘಟನೆಯು ದೇಶದಲ್ಲಿ ಸೇನೆಯ ಆಡಳಿತ ಜಾರಿಯಾಗುವುದಕ್ಕೆ ಒಪ್ಪಿಗೆ ಸೂಚಿಸಲಿಲ್ಲ. ಎಲ್ಲಾ ಪಕ್ಷಗಳು-ವರ್ಗಗಳ ಪ್ರತಿಭಾವಂತರನ್ನು ಒಳಗೊಂಡ ಸಮಿತಿ ರಚಿಸಿ ಸರಕಾರ ನಡೆಸಬೇಕು. ಆ ಮಧ್ಯಂತರ ಸರಕಾರಕ್ಕೆ ನೊಬೆಲ್ ಶಾಂತಿ ಪುರಸ್ಕೃತ ಮುಹಮ್ಮದ್ ಯೂನುಸ್ ಅವರನ್ನು ಮುಖ್ಯ ಸಲಹೆಗಾರರನ್ನಾಗಿ ನೇಮಿಸಬೇಕು ಎಂದು ಪಟ್ಟು ಹಿಡಿಯಿತು. ಅದರಂತೆ ಹಂಗಾಮಿ ಸರಕಾರಕ್ಕೆ ಯೂನುಸ್ ಅವರನ್ನು ಮುಖ್ಯ ಸಲಹೆಗಾರರನ್ನಾಗಿ ಆಯ್ಕೆ ಮಾಡಲಾಗಿದೆ. ಯುನಸ್ ಅವರೂ ಇದಕ್ಕೆ ಸಮ್ಮತಿಸಿದ್ದಾರೆ.


**ಎಕ್ಸಿಸ್ ಬ್ಯಾಂಕ್** ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು –560009

**ತಗಾದೆ ಸೂಚನೆ**

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

| ಕ್ರ ಸಂ | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ | ನೋಟೀಸ್ ದಿನಾಂಕ | ಬರಬೇಕಾದ ಬಾಕಿ (ರೂ.ಗಳಲ್ಲಿ) |
|---|---|---|---|---|
| 01 | 1. ಶ್ರೀ.ಶರದ್ ಕುಮಾರ್ ಚೌರಾಸಿಯಾ, ಶ್ರೀ.ಕುಮಾರ್ ಚೌರಾಸಿಯಾ, 2. ಶ್ರೀಮತಿ. ಸೋನಾಲಿ, ಕೋಂ ಶ್ರೀ.ಶರದ್ ಕುಮಾರ್ ಚೌರಾಸಿಯಾ, ಇವರಿಬ್ಬರ ವಿಳಾಸ: 5, 2ನೇ ಮಹಡಿ, 1ನೇ ಕ್ರಾಸ್ ಕೃಷ್ಣಪ್ಪ ಗಾರ್ಡನ್ ತಾವರೆಕೆರೆ, ಬೆಂಗಳೂರು–560029. ಮತ್ತೊಂದು ವಿಳಾಸ: ಶ್ರೀ.ಶರದ್ ಕುಮಾರ್ ಚೌರಾಸಿಯಾ, ಶ್ರೀ.ಕುಮಾರ್ ಚೌರಾಸಿಯಾ, ಶ್ರೀಮತಿ.ಸೋನಾಲಿ, ಕೋಂ ಶ್ರೀ.ಶರದ್ ಕುಮಾರ್ ಚೌರಾಸಿಯಾ, ಫ್ಲಾಟ್.ಸಂ.ಇ.230, ಇ–ಬ್ಲಾಕ್, ವಕೀಲ್ ಡ್ಯಾಫಡಿಲ್ಸ್ ಚಾನೋಪುರ, ಬೊಮ್ಮಸಂದ, ಕರ್ನಾಟಕ, ಬೆಂಗಳೂರು–560099. ಮತ್ತೊಂದು ವಿಳಾಸ: ಶ್ರೀಮತಿ ಸೋನಾಲಿ, ಕೋಂ ಶ್ರೀ ಶರದ್ ಕುಮಾರ್ ಚೌರಾಸಿಯಾ, 108/3 ಸಿ ಪಟೇಲ್ ನಗರ ಮೀರಾಪುರ, ಅಲಹಾಬಾದ್–211003. | ಶ್ರೀ.ಶರದ್ ಕುಮಾರ್ ಚೌರಾಸಿಯಾ ಬಿನ್ ಶ್ರೀ ರಾಜೇಂದ್ರ ಚೌರಾಸಿಯಾ ರವರಿಗೆ ಸೇರಿದ ಸ್ಥಿರಾಸ್ತಿಗಳ ವಿವರ ಷೆಡ್ಯೂಲ್ –'ಎ' ಆಸ್ತಿ: ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳ ಗೊಂಡಿರುವ ವಸತಿ ಪರಿವರ್ತಿತ ಭೂಮಿ ಸರ್ವೆ ನಂ.102, ವಿಸ್ತೀರ್ಣ 1 ಎಕರೆ 39 ಗುಂಟೆಗಳು, ಈ ಆಸ್ತಿಯು ಮಡಿವಾಳ ಗ್ರಾಮ, ಕಸಬಾ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆಯಲ್ಲಿದೆ. ಅದರ ಮೇಲೆ ನಿರ್ಮಿಸಲಾದ ಅಪಾರ್ಟ್‌ಮೆಂಟ್ ಕಟ್ಟಡವು 132 ಫ್ಲಾಟ್‌ಗಳನ್ನು ಒಳಗೊಂಡಿರುವ ಸ್ಟಿಲ್ಟ್, ಗ್ರೌಂಡ್ ಮತ್ತು ಮೂರು ಮಹಡಿಗಳನ್ನು ಒಳಗೊಂಡಿರುತ್ತದೆ, ಜೊತೆಗೆ ಎಲ್ಲಾ ಹಕ್ಕುಗಳ ಬಾಧ್ಯತೆಗಳು, ಶೀರ್ಷಿಕೆ ಹಿತಾಸಕ್ತಿಯನ್ನೊಳಗೊಂಡ ಆಸ್ತಿಯಾಗಿರುತ್ತದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಭೂಮಿಯ ಸರ್ವೆ ನಂ.99, 100, 101, ಪಶ್ಚಿಮಕ್ಕೆ: ರಸ್ತೆ ಮತ್ತು ಸರ್ವೆ ನಂ.103,104, ಉತ್ತರಕ್ಕೆ: ಭೂಮಿಯ ಸರ್ವೆ ನಂ.106, ದಕ್ಷಿಣಕ್ಕೆ: ಭೂಮಿಯ ಸರ್ವೆ ನಂ.114. ಷೆಡ್ಯೂಲ್–ಬಿ ಆಸ್ತಿ: 0.86% ಅವಿಭಜಿತ ಪಾಲು, ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನು ಷೆಡ್ಯೂಲ್ –ಎ ಆಸ್ತಿಯಲ್ಲಿ ಹೊಂದಿದೆ. ವಿಸ್ತೀರ್ಣ 725.97 ಚದರ ಅಡಿ ಅಳತೆಯ ಅವಿಭಜಿತ ಪಾಲನ್ನು ಈ ಸೇಲ್ ಡೀಡ್ ಅಡಿಯಲ್ಲಿ ಮೊದಲ ವ್ಯಕ್ತಿಯಿಂದ ಎರಡನೇ ವ್ಯಕ್ತಿಗೆ ಮಾರಾಟ ಮಾಡಲು ಒಪ್ಪಿಗೆ ನೀಡಲಾಗಿದೆ. ಷೆಡ್ಯೂಲ್–ಸಿ ಆಸ್ತಿ : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳ ಗೊಂಡಿರುವ ಫ್ಲಾಟ್ ಸಂಖ್ಯೆ.230, ಇದು ಎರಡನೇ ಮಹಡಿಯಲ್ಲಿರುವ ಬ್ಲಾಕ್ ಇ ನಲ್ಲಿದೆ, ಇ–ಖಾತಾ ಸಂಖ್ಯೆ.1502 00101800621322, ವಿಸ್ತೀರ್ಣ 1197.68 ಚದರ ಅಡಿ, ನಿರ್ಮಿತ ಪ್ರದೇಶವು ಆರ್‌ಸಿಸಿ ರೂಫಿಂಗ್‌ನೊಂದಿಗೆ 3 ಬೆಡ್ ರೂಮ್‌ಗಳು, ಲಿವಿಂಗ್ ರೂಮ್‌ನಲ್ಲಿ ವಿಟ್ರಿಫೈಡ್ ಫ್ಲೋರಿಂಗ್, ಮುಖ್ಯ ಬಾಗಿಲಿಗೆ ಮರದ ಬಾಗಿಲು ಮತ್ತು ಅಲ್ಯೂಮಿನಿಯಂ ಕಿಟಕಿಗಳು, ಪ್ಯಾಸೇಜ್, ಲಾಬಿಗಳು, ಮೆಟ್ಟಿಲುಗಳಂತಹ ಸಾಮಾನ್ಯ ಪ್ರದೇಶದಲ್ಲಿ ಪ್ರಮಾಣಾನುಗುಣವಾದ ಪಾಲು ಸೇರಿದಂತೆ ಡ್ಯಾಫೊಡಿಲ್ಸ್ ಅಪಾರ್ಟ್‌ಮೆಂಟ್ ಎಂದು ಕರೆಯಲ್ಪಡುವ ವಸತಿ ಅಪಾರ್ಟ್‌ಮೆಂಟ್ ಸಂಕೀರ್ಣದಲ್ಲಿದೆ. ಜೊತೆಗೆ 1 ತೆರೆದ ಕಾರ್ ಪಾರ್ಕಿಂಗ್ ಸ್ಥಳವನ್ನು ಖರೀದಿದಾರರ ಏಕೈಕ ಬಳಕೆ ಮತ್ತು ಮೀಸಲಿಡಲಾಗಿದೆ. ಮತ್ತು ಚಕ್ಕುಬಂದಿ: ಪೂರ್ವಕ್ಕೆ: ತೆರೆದ ಸ್ಥಳ, ಪಶ್ಚಿಮಕ್ಕೆ: ಕಾರಿಡಾರ್, ಉತ್ತರಕ್ಕೆ: ತೆರೆದ ಸ್ಥಳ ಮತ್ತು ಫ್ಲಾಟ್ ಸಂಖ್ಯೆ–ಇ 229 ರ ಭಾಗ, ದಕ್ಷಿಣಕ್ಕೆ: ತೆರೆದ ಸ್ಥಳ ಮತ್ತು ಫ್ಲಾಟ್ ಸಂಖ್ಯೆ–ಇ 232 ನ ಭಾಗ. ಷೆಡ್ಯೂಲ್ 'ಬಿ' ಮತ್ತು 'ಸಿ' ಆಸ್ತಿಯ ಪ್ರಸ್ತುತ ಮಾರುಕಟ್ಟೆ ಮೌಲ್ಯ ರೂ.41,54,209/–(ರೂಪಾಯಿ ನಲವತ್ತೊಂದು ಲಕ್ಷದ ಐವತ್ತನಾಲ್ಕು ಸಾವಿರದ ಎರಡು ನೂರ ಒಂಭತ್ತು ಮಾತ್ರ) ಮತ್ತು ಅದರ ಪ್ರಕಾರ, ಅಗತ್ಯವಿರುವ ಸ್ಟ್ಯಾಂಪ್ ಸುಂಕವನ್ನು ಖರೀದಿದಾರರು/ರು ಪಾವತಿಸುತ್ತಾರೆ. ಯಾವುದೇ ಮಾಹಿತಿಗಾಗಿ ಶ್ರೀ ತ್ರೀಮೂರ್ತಿ 91 9036773553 ರವರನ್ನು ಸಂಪರ್ಕಿಸಿ. | 21.07.2024 ಎನ್‌ಪಿಎ ದಿನಾಂಕ 07.07.2024 | Loan No. PHR000902802292 POWER HOME VANILLA BRE HTR000905008529 POWER HOME VANILLA BRE ಒಟ್ಟು ಮೊತ್ತ ರೂ.31,82,834/– ದಿನಾಂಕ: 16.07.2024 ರಂದು ಇದ್ದಂತೆ |
| 02 | 1. ಶ್ರೀಮತಿ ಅಶ್ವಿನಿ ಸಿ, ಶ್ರೀ ಚಂದ್ರಶೇಖರ್, ಅಬ್ಬಿನಾಯ್ಡು ಸ್ಟುಡಿಯೋ ರಸ್ತೆ, 2ನೇ ಕ್ರಾಸ್, ಗಿರಿಜಾ ಅಪಾರ್ಟಮೆಂಟ್ ಎದುರು, ಸುಮುಖ ಲೇಔಟ್ ಚಿಕ್ಕಲಸಂದ್ರ, ಬೆಂಗಳೂರು–560061. 2. ಶ್ರೀಮತಿ ವಿಜಯಲಕ್ಷ್ಮಿ.ಟಿ, ಕೋಂ ಶ್ರೀ.ಚಂದ್ರಶೇಖರ್, ನಂ.43, 13ನೇ ಕ್ರಾಸ್ 1ನೇ ಮೇನ್ ಕುವೆಂಪು ನಗರ, ಇಟ್ಟಮಡು, ಬಿ.ಎಸ್.ಕೆ. 3ನೇ ಹಂತ, ಬೆಂಗಳೂರು560085. ಮತ್ತೊಂದು ವಿಳಾಸ: ಶ್ರೀಮತಿ ಅಶ್ವಿನಿ ಸಿ, ಶ್ರೀ ಚಂದ್ರಶೇಖರ್, ಶ್ರೀಮತಿ ವಿಜಯಲಕ್ಷ್ಮಿ.ಟಿ, ಕೋಂ ಶ್ರೀ ಚಂದ್ರಶೇಖರ್, ನಿವೇಶನ ನಂ.255 ಎ. ಸರ್ವೆ ನಂ.15/1,15/2 ಮೂಕಾಂಬಿಕ ಲೇಔಟ್, ಪುರದಪಾಳ್ಯ ಗ್ರಾಮ, ತಾವರಕೆರೆ ಹೋಬಳಿ–562130. | ಶ್ರೀಮತಿ ಅಶ್ವಿನಿ ಸಿ, ಶ್ರೀ ಚಂದ್ರಶೇಖರ್‌ರವರಿಗೆ ಸೇರಿದ ಸ್ಥಿರಾಸ್ತಿಗಳ ವಿವರ ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳ ಗೊಂಡಿರುವ ವಾಸಯೋಗ್ಯ ನಿವೇಶನ ನಂ. 255ಎ, ಸರ್ವೆ ನಂ. 15/1 ಮತ್ತು ಸರ್ವೆ ನಂ. 15/2 ರಲ್ಲಿ ಮೂಕಾಂಬಿಕಾ ಲೇಔಟ್ ಆಗಿ ರೂಪುಗೊಂಡಿರುವ ಭೂಮಿಯನ್ನು ವಾಸಯೋಗ್ಯ ಉದ್ದೇಶಕ್ಕಾಗಿ ಪರಿವರ್ತಿಸಲಾಗಿದ್ದು, ದಿನಾಂಕ : 10.9.2009 ರಂದು ವಿಶೇಷ ಜಿಲ್ಲಾಧಿಕಾರಿ, ಬೆಂಗಳೂರು ಜಿಲ್ಲೆ ರವರು ಹೊರಡಿಸಿರುವ ಅಧಿಕೃತ ಮೆಮೊರಾಂಡಮ್ NO.ALN(ST)SR-50/2009-10 ರ ಪ್ರಕಾರ ದಿನಾಂಕ: 15.02.2010 ರ ಮಾಗಡಿ ಯೋಜನಾ ಪ್ರಾಧಿಕಾರದಿಂದ ವೈಡೆ ಆರ್ಡರ್ ನಂ. MPA/LAO/25/2009-10 ರಂತೆ ಅನುಮೋದಿಸಲಾಗಿರುತ್ತದೆ. ಈ ಆಸ್ತಿಯು ಪುರದಪಾಳ್ಯ ಗ್ರಾಮ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿದ್ದು, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 25 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 48 ಅಡಿ, ಒಟ್ಟು ವಿಸ್ತೀರ್ಣ 1200 ಚದರ ಅಡಿ ಅಳತೆ, ಮತ್ತು ಚಕ್ಕುಬಂದಿ : ಪೂರ್ವಕ್ಕೆ: ನಿವೇಶನ ನಂ. 255, ಪಶ್ಚಿಮಕ್ಕೆ: 9 ಮೀಟರ್ ರಸ್ತೆ, ಉತ್ತರಕ್ಕೆ: 9 ಮೀಟರ್ ರಸ್ತೆ, ದಕ್ಷಿಣಕ್ಕೆ: ನಿವೇಶನ ನಂ. 254. ಯಾವುದೇ ಮಾಹಿತಿಗಾಗಿ ಶ್ರೀ ತ್ರಿಮೂರ್ತಿ 9036773553 ರವರನ್ನು ಸಂಪರ್ಕಿಸಿ | 21.07.2024 ಎನ್‌ಪಿಎ ದಿನಾಂಕ 09.07.2024 | Loan No. PHR000908562594 POWER HOME VANILLA BRE ಒಟ್ಟು ಮೊತ್ತ ರೂ. 15,42,654/– ದಿನಾಂಕ: 16.07.2024 ರಂದು ಇದ್ದಂತೆ |
| 03 | 1. ಶ್ರೀ.ಹರಿಹರನ್ ಜೆ, ಬಿನ್ ಶ್ರೀ.ಜಗನಾಥನ್, 2. ಶ್ರೀಮತಿ.ಕೋಕಿಲಾ ಆರ್, ಕೋಂ ಶ್ರೀ.ಹರಿಹರನ್ ಜೆ, ಇವರಿಬ್ಬರ ವಿಳಾಸ: ನಂ.7, 2ನೇ ಮಹಡಿ, ತ್ಯಾಗರಾಜ ಕಟ್ಟಡ, ನಾಗೊಂದನಹಳ್ಳಿ, ವೈಟ್‌ಫೀಲ್ಡ್, ಬೆಂಗಳೂರು–560066. ಮತ್ತೊಂದು ವಿಳಾಸ: ಶ್ರೀ.ಹರಿಹರನ್ ಜೆ, ಶ್ರೀ.ಜಗನಾಥನ್, ಶ್ರೀಮತಿ.ಕೋಕಿಲಾ ಆರ್, ಕೋಂ ಶ್ರೀ.ಹರಿಹರನ್ ಜೆ, ಫ್ಲಾಟ್ ನಂ.0802, 8ನೇ ಮಹಡಿ, ಟವರ್ 12, ಮೇದೇಹಳ್ಳಿ ಅತ್ತಿಬೆಲೆ, ಆನೇಕಲ್, ಬೆಂಗಳೂರು–560066. | ಶ್ರೀ.ಹರಿಹರನ್ ಜೆ, ಬಿನ್ ಶ್ರೀ.ಜಗನಾಥನ್‌ರವರಿಗೆ ಸೇರಿದ ಸ್ಥಿರಾಸ್ತಿಗಳ ವಿವರ ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳ ಗೊಂಡಿರುವ ವಾಸಯೋಗ್ಯ ಪರಿವರ್ತಿತ ಭೂಮಿಯ ಒಟ್ಟು ವಿಸ್ತೀರ್ಣ ಖರಾಬ್ ಭೂಮಿ ಸೇರಿದಂತೆ ಸುಮಾರು 11 ಎಕರೆ ಮತ್ತು 18 ಗುಂಟೆಗಳು ಸರ್ವೆ ಸಂಖ್ಯೆ. 39/1, 39/2, 40/3 ಮತ್ತು 42/1, ಈ ಆಸ್ತಿಯು ಎಂ ಮೇದೇಹಳ್ಳಿ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರಿನಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ.43 ರಲ್ಲಿನ ಜಮೀನುಗಳು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಮಾಯಸಂದ್ರ ಗಡಿ, ದಕ್ಷಿಣಕ್ಕೆ: ಸರ್ವೆ ನಂ.41 ರಲ್ಲಿನ ಜಮೀನುಗಳು. ಷೆಡ್ಯೂಲ್ "ಬಿ" ಆಸ್ತಿ: ವಿಸ್ತೀರ್ಣ 317.23 ಚದರ ಅಡಿ ಅವಿಭಾಜಿತ ಪಾಲು, ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನು ಷೆಡ್ಯೂಲ್ 'ಎ' ಆಸ್ತಿಯಲ್ಲಿ ವಿವರಿಸಲಾಗಿದೆ. ಷೆಡ್ಯೂಲ್ "ಸಿ" ಆಸ್ತಿ: ವಸತಿ ಅಪಾರ್ಟ್‌ಮೆಂಟ್ ಸಂಖ್ಯೆ. ಎ–802, ಪಿಐಡಿ ಸಂಖ್ಯೆ.150200101700620952, ಅಸೆಸ್‌ಮೆಂಟ್ ಸಂಖ್ಯೆ 1383/ಎ–802, ಟವರ್–12/ಬ್ಲಾಕ್–2 ರ ಎಂಟನೇ ಮಹಡಿಯು ಒಂದು ಹಾಲ್, ಎರಡು ಬೆಡ್ ರೂಮ್, ಅಡುಗೆಮನೆ, ಎರಡು ಬಾತ್ ರೂಮ್ ಮತ್ತು ಒಂದು ಕೊಠಡಿಯನ್ನು ಒಳಗೊಂಡಿದ್ದು "ಜನಾಧರ್ ಶುಭ" ಎಂದು ಕರೆಯಲ್ಪಡುವ ವಸತಿ ಅಪಾರ್ಟ್‌ಮೆಂಟ್ ಸಂಕೀರ್ಣವನ್ನು ಷೆಡ್ಯೂಲ್ ಎ ಆಸ್ತಿಯಲ್ಲಿ ನಿರ್ಮಿಸಲಾಗಿದೆ, ವಿಟ್ರಿಫೈಡ್ ಫ್ಲೋರಿಂಗ್‌ನೊಂದಿಗೆ ಬಾಲ್ಕನಿ ಪ್ರದೇಶವನ್ನು ಹೊರತುಪಡಿಸಿ (656 ಚದರ ಅಡಿ ಸೂಪರ್ ಬಿಲ್ಟ್ ಅಪ್ ಪ್ರದೇಶ) 462.20 ಚದರ ಅಡಿ ಕಾರ್ಪೆಟ್ ಪ್ರದೇಶವನ್ನು ಹೊಂದಿರುವ ಮತ್ತು ಸಾಮಾನ್ಯ ಅನುಪಾತದ ಪ್ರದೇಶಗಳಲ್ಲಿ ಪಾಲು, ಉದಾಹರಣೆಗೆ, ಪ್ಯಾಸೇಜ್/ಗಳು, ಮೆಟ್ಟಿಲು/ಗಳು, ನಾಳ/ಗಳು, ಬಾವಿ ಮತ್ತು / ಅಥವಾ ಕೊಠಡಿ/ಗಳು, ನೀರು, ಒಳಚರಂಡಿ ಮತ್ತು/ಅಥವಾ ವಿದ್ಯುತ್ ವಾಹಕ/ಗಳು ಮತ್ತು/ಅಥವಾ ಇತರ ಪ್ರದೇಶ/ಗಳು ಇತರ ಅಪಾರ್ಟ್‌ಮೆಂಟ್/ಗಳ ಖರೀದಿದಾರರು/ಗಳು ಸಾಮಾನ್ಯವಾಗಿ ಬಳಸಲ್ಪಡುತ್ತವೆ ಮತ್ತು ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಎ–801, ಪಶ್ಚಿಮಕ್ಕೆ: ತೆರೆದ ಸ್ಥಳ, ಉತ್ತರಕ್ಕೆ: ಸ್ಟೇರ್‌ಕೇಸ್, ದಕ್ಷಿಣಕ್ಕೆ: ತೆರೆದ ಸ್ಥಳ. (ಸೂಪರ್ ಬಿಲ್ಟ್ ಏರಿಯಾ ಎಂದರೆ ಪ್ರತಿ ಅಪಾರ್ಟ್‌ಮೆಂಟ್ ಯೂನಿಟ್‌ನ ವಿಶೇಷ ಮಹಡಿ ಪ್ರದೇಶ ಮತ್ತು ಸಾಮಾನ್ಯ ಅನುಪಾತದ ಪ್ರಮಾಣಾನುಗುಣವಾದ ಪ್ರದೇಶಗಳನ್ನು ಒಳಗೊಂಡಿದೆ ಗೋಡೆ/ಗಳು, ಮಾರ್ಗಗಳು/ಗಳು, ಮೆಟ್ಟಿಲು/ಗಳು, ಬಾವಿ ಮತ್ತು/ಅಥವಾ ಕೊಠಡಿ/ಗಳು, ನೀರು, ಒಳಚರಂಡಿ ಮತ್ತು/ಅಥವಾ ವಿದ್ಯುತ್ ವಾಹಕ/ಗಳು, ಉದ್ಯಾನವನಗಳು, ತೆರೆದ ಪಾರ್ಕಿಂಗ್ ಮತ್ತು/ಅಥವಾ ಇತರ ಪ್ರದೇಶ/ಗಳು ಇತರ ಅಪಾರ್ಟ್‌ಮೆಂಟ್/ಗಳ ಖರೀದಿದಾರರೊಂದಿಗೆ ಸಾಮಾನ್ಯವಾಗಿ ಬಳಸಲಾಗುತ್ತದೆ). ಯಾವುದೇ ಮಾಹಿತಿಗಾಗಿ ಶ್ರೀ ತ್ರಿಮೂರ್ತಿ 9036773553 ರವರನ್ನು ಸಂಪರ್ಕಿಸಿ | 21.07.2024 ಎನ್‌ಪಿಎ ದಿನಾಂಕ 09.07.2024 | Loan No. PHR000902744334 POWER HOME VANILLA BRE ಒಟ್ಟು ಮೊತ್ತ ರೂ. 13,57,087/– ದಿನಾಂಕ: 16.07.2024 ರಂದು ಇದ್ದಂತೆ |
| 04 | 1. ಶ್ರೀ ಅಬ್ದುಲ್ ವಹಾಬ್ ಎಂ ಎ ಬಿನ್ ಶ್ರೀ. ಅಬ್ದುಲ್ ಅಲೀಂ, ಕಟ್ಟಡ ಸಂಖ್ಯೆ.03, ಹೆಚ್. ನಂ.7 ಅಲ್ ಅಹಲಿ ಸಾಕರ್ ಅಕಾಡೆಮಿ ಹತ್ತಿರ ಅಬ್ಬಾಸ್ ಬಿನ್ ಸಿದ್ದಿಕ್ ಸೇಂಟ್, ಅಲ್ ರೆಹಬ್ "ಡಿ" ಜೆಡ್ಡಾ, ಸೌದಿ ಅರೇಬಿಯಾ–21474. 2. ಶ್ರೀಮತಿ ಮೈಮುನ್ನಿಸಾ ಎಂ ಎಲ್, ಕೋಂ ಶ್ರೀ ಅಬ್ದುಲ್ ಅಲೀಮ್, ನಂ. 1678, ರಾಜೀವ್ ನಗರ, 1ನೇ ಹಂತ, ಮೈಸೂರು, ಕರ್ನಾಟಕ–570019. ಮತ್ತೊಂದು ವಿಳಾಸ: ಶ್ರೀ.ಅಬ್ದುಲ್ ವಹಾಬ್ ಎಂ ಎ, ಬಿನ್ ಶ್ರೀ ಅಬ್ದುಲ್ ಅಲೀಂ, ಶ್ರೀಮತಿ ಮೈಮುನ್ನಿಸಾ ಎಂ ಎಲ್, ಕೋಂ ಅಬ್ದುಲ್ ಅಲೀಂ, ನಂ.1678, 7ನೇ ಕ್ರಾಸ್, ಶಿವಣ್ಣ ಸರ್ಕಲ್ ಹತ್ತಿರ, ರಾಜೀವನವರ 1ನೇ ಹಂತ, ಮೈಸೂರು, ಕರ್ನಾಟಕ–570019. | ಶ್ರೀ ಅಬ್ದುಲ್ ವಹಾಬ್ ಎಂ ಎ ಬಿನ್ ಶ್ರೀ. ಅಬ್ದುಲ್ ಅಲೀಂ ರವರಿಗೆ ಸೇರಿದ ಸ್ಥಿರಾಸ್ತಿಗಳ ವಿವರ ಆಸ್ತಿಯ ಡೂರ್ ಸಂಖ್ಯೆ.1678, ದೇವನೂರು ಎಕ್ಸಟೆನ್ಷನ್ 1ನೇ ಹಂತ, ಎನ್.ಆರ್. ಮೊಹಲ್ಲಾ, ಮೈಸೂರು ನಗರ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಆಸ್ತಿ ಸಂಖ್ಯೆ.1679, ಪಶ್ಚಿಮಕ್ಕೆ: ಆಸ್ತಿ ಸಂಖ್ಯೆ.1677, ಉತ್ತರಕ್ಕೆ: ಆಸ್ತಿ ಸಂಖ್ಯೆ.1693 ಮತ್ತು 1694 , ದಕ್ಷಿಣಕ್ಕೆ: ರಸ್ತೆ. ಪೂರ್ವದಿಂದ ಪಶ್ಚಿಮಕ್ಕೆ ಇರುವ ಸೈಟ್‌ನ ವ್ಯಾಪ್ತಿ: 9.00 (ಒಂಬತ್ತು) ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ 12.00 (ಹನ್ನೆರಡು) ಮೀಟರ್‌ಗಳು ಒಟ್ಟು 108.00 ಚದರ. ಮೀಟರ್ ಮತ್ತು ನಿರ್ಮಿಸಿದ ನೆಲ ಮಹಡಿಯಲ್ಲಿ 8.00 ಸ್ಕ್ವೇರ್ ಸೆರಾಮಿಕ್ ಫ್ಲೋರಿಂಗ್ ಜೊತೆಗೆ ನೀರು, ವಿದ್ಯುತ್ ಮತ್ತು ನೈರ್ಮಲ್ಯ ಸಂಪರ್ಕಗಳ ಆರ್‌ಸಿಸಿ ಮನೆಯನದನು ನಿರ್ಮಿಸಲಾಗಿದೆ. ಯಾವುದೇ ಮಾಹಿತಿಗಾಗಿ ಶ್ರೀ ತ್ರಿಮೂರ್ತಿ 9036773553 ರವರನ್ನು ಸಂಪರ್ಕಿಸಿ | 21.07.2024 ಎನ್‌ಪಿಎ ದಿನಾಂಕ 09.07.2024 | Loan No. LPR015101116429 ASSET POWER ಒಟ್ಟು ಮೊತ್ತ ರೂ. 11,80,004/– ದಿನಾಂಕ: 16.07.2024 ರಂದು ಇದ್ದಂತೆ |
| 05 | 1. ಮೇ॥ ಶ್ರೀ ಚಕ್ರ ಮೊಬೈಲ್ಸ್ ಮತ್ತು ಹೊಮ್ ಅಪ್‌ಲೈನ್ಸ್, ಹೆಚ್.ನಂ.1/23–ಬಿ4/241 ವಾರ್ಡ್ ನಂ.04, ವಿಷ್ಣುತೀರ್ಥ ನಗರ, ಕುಷ್ಟಗಿ, ಕೊಪ್ಪಳ–583277. 2. ಶ್ರೀ ಶಿವಕುಮಾರ್ ಪಟ್ಟದಕಲ್ಲು ಪ್ರತಿನಿಧಿಸುವ ಮಾಲೀಕು: ಮೇ॥ ಶ್ರೀ. ಚಕ್ರ ಮೊಬೈಲ್ಸ್ ಮತ್ತು ಹೊಮ್ ಅಪ್‌ಲೈನ್ಸ್, 12, ವಾರ್ಡ್ ನಂ.04, ವಿಷ್ಣುತೀರ್ಥ ನಗರ ಕುಷ್ಟಗಿ, ಕೊಪ್ಪಳ–583277. 3. ಶ್ರೀಮತಿ ಈರಮ್ಮ ಕೋಂ ಬಸನಗೌಡ ಪಟ್ಟದಕಲ್ಲು, ವಾರ್ಡ್ ನಂ.04, ವಿಷ್ಣುತೀರ್ಥ ನಗರ, ಕುಷ್ಟಗಿ, ಕೊಪ್ಪಳ–583277. | ಶ್ರೀಮತಿ ಈರಮ್ಮ ಕೋಂ ಬಸನಗೌಡ ಪಟ್ಟದಕಲ್ಲು ರವರಿಗೆ ಸೇರಿದ ಸ್ಥಿರಾಸ್ತಿಗಳ ವಿವರ ಮನೆ ನಂ. 35–507–138, ಆಸ್ತಿಯ ಹಳೆ ನಂ. 12–6320, ಪ್ಲಾಟ್ ನಂ. 12, ಅಸೆಸ್‌ಮೆಂಟ್ ನಂ. 12–6320, ಎನ್.ಎ. (ಜಿಲ್ಲಾಧಿಕಾರಿ, ಕೊಪ್ಪಳ ಆದೇಶ ALN/35/1998-99/5276 ದಿನಾಂಕ 19.09.1998), ಮತ್ತು ಪಟ್ಟಣ ಯೋಜನಾ ಪ್ರಾಧಿಕಾರ, ಧಾರವಾಡ, ಅನುಮೋದಿತ ಸರ್ವೆ ನಂ. 112/ಬಿ, ವಿಸ್ತೀರ್ಣ 05.31 ಎಕರೆ, ಜೊತೆಗೆ ಕುಷ್ಟಗಿ ಸಿಟಿ ಮುನಿಸಿಪಲ್ ಕೌನ್ಸಿಲ್ ವ್ಯಾಪ್ತಿಯಲ್ಲಿದ್ದು, ಆಸ್ತಿಯು ನಂ. 4, ವಿಷ್ಣು ತೀರ್ಥ ನಗರ, ಕುಷ್ಟಗಿಯಲ್ಲಿದೆ. ಜೊತೆಗೆ ಕೊಪ್ಪಳ ಜಿಲ್ಲೆಯ ಕುಷ್ಟಗಿ ಉಪ–ನೋಂದಣಿ ಕಛೇರಿಯಲ್ಲಿ ನೋಂದಣಿಯಾಗಿರುತ್ತದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 53 ಅಡಿ, ಉತ್ತರದಿಂದ ದಕ್ಷಿಣಕ್ಕೆ: 30 ಅಡಿ, ಒಟ್ಟು 1590 ಚದರ ಅಡಿ. ಪರಿವರ್ತಿತ ಪ್ರದೇಶದ ನೆಲಮಹಡಿ 73.579176 ಚದರ ಮೀಟರ್‌ಗಳು, ಮೊದಲನೇ ಮಹಡಿ 73.579176 ಚದರ ಮೀಟರ್‌ಗಳು, ಪ್ಲಾಟ್ ನಂ. ಖಾತಾ ನಂ. ಕಾಲೋನಿ/ನಗರ/ಸೆಕ್ಟರ್ ಪ್ರದೇಶ/ಹೆಗ್ಗುರುತು ಗ್ರಾಮ/ಪಟ್ಟಣ/ ನಗರ ಜಿಲ್ಲೆ ರಾಜ್ಯ, ಪ್ಲಾಟ್ ನಂ. 12, ಡಬ್ಲ್ಯೂ ನಂ. 4, ವಿಷ್ಣು ನಗರ ತೀರ್ಥ ನಗರ, ಕುಷ್ಟಗಿ, – ಡಬ್ಲ್ಯೂ ನಂ. ತೀರ್ಥ ಕುಷ್ಟಗಿ 4, ವಿಷ್ಣು ನಗರ– ಡಬ್ಲ್ಯೂ ನಂ. 4, ವಿಷ್ಣು ತೀರ್ಥ ನಗರ, ಕುಷ್ಟಗಿ, ಕೊಪ್ಪಳ– ಕರ್ನಾಟಕ. ಚಕ್ಕುಬಂದಿ : ಪೂರ್ವಕ್ಕೆ: 9 ಮೀಟರ್ ರಸ್ತೆ, ಪಶ್ಚಿಮಕ್ಕೆ: ಶೇತ್ಕಿ ಭೂಮಿ, ಉತ್ತರಕ್ಕೆ: ಪ್ಲಾಟ್ ನಂ. 13, ದಕ್ಷಿಣಕ್ಕೆ : 9 ಮೀಟರ್ ರಸ್ತೆ. ಯಾವುದೇ ಮಾಹಿತಿಗಾಗಿ ಶ್ರೀ ಸಂಗಯ್ಯ ಹಿರೇಮಠ ಏರಿಯಾ ಕಲೆಕ್ಷನ್ ಮ್ಯಾನೇಜರ್ 91 9739349666 ರವರನ್ನು ಸಂಪರ್ಕಿಸಿ. | 22.07.2024 ಎನ್‌ಪಿಎ ದಿನಾಂಕ 17.04.2024 | Loan No. 922030044353793 OVER DRAFT WORKING CAPITAL ಒಟ್ಟು ಮೊತ್ತ ರೂ. 34,82,883/– ದಿನಾಂಕ: 02.04.2024 ರಂದು ಇದ್ದಂತೆ |
| 06 | 1. ಶ್ರೀ.ಸಂತೋಷ್ ಬಿನ್ ಶ್ರೀ ಸಿದ್ದಪ್ಪ, 21/3343 ಬುತ್ತಿ ಬಸವೇಶ್ವರ ನಗರ (ವಾರ್ಡ್ ಕುಷ್ಟಗಿ), ಕೊಪ್ಪಳ, ಬಸ್ ಡಿಪೋ ಹಿಂದೆ, ಕರ್ನಾಟಕ–583277. 2. ಶ್ರೀ ಸಿದ್ದಪ್ಪ ಬಿನ್ ಶ್ರೀ.ಪವಾಡೆಪ್ಪ, 21/3343 ಬುತ್ತಿ ಬಸವೇಶ್ವರ ನಗರ(ವಾರ್ಡ್ ಕುಷ್ಟಗಿ), ಕೊಪ್ಪಳ, ಬಸ್ ಡಿಪೋ ಹಿಂದೆ, ಕರ್ನಾಟಕ–583277. | ಅಡಮಾನ ಆಸ್ತಿಯ ವಿವರಣೆ ಮತ್ತು ಶೀರ್ಷಿಕೆ ಪತ್ರದ ವಿಸ್ತೀರ್ಣ, ಚಕ್ಕುಬಂದಿಗಳ ವಿವರ ನೋಂದಾಯಿತ ಸಮಾನ ಅಡಮಾನದ ಮೂಲಕ ವಿಶೇಷ ಶುಲ್ಕಗಳು ಕೆಳಗೆ ನಮೂದಿಸಿರುವ ವಸತಿ ಮನೆ ಆಸ್ತಿಗಳು ಶ್ರೀ ಸಿದ್ದಪ್ಪ ಬಿನ್ ಪವಾಡೆಪ್ಪ ಮ್ಯಾಗೇರಿ ರವರ ಹೆಸರಿನಲ್ಲಿದೆ. ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳ ಗೊಂಡಿರುವ ಸ್ಥಿರಾಸ್ತಿಯ ಸ್ವಯಂ ಆಕ್ರಮಿತ ವಾಸಯೋಗ್ಯ ಮನೆ ಪ್ಲಾಟ್ /ಮನೆ ಸಂಖ್ಯೆ.31, ಅಸೆಸ್‌ಮೆಂಟ್ ಸಂಖ್ಯೆ. 4131, ಎನ್ ಎ ಭೂಮಿ ಸರ್ವೆ ಸಂಖ್ಯೆ.53/1, ವಿಸ್ತೀರ್ಣ 30X 40 ಅಂದರೆ 1200 ಚದರ. ಅಡಿ. ಪ್ರಸ್ತುತ ಆಸ್ತಿಯು ಪುರಸಭೆ ಕುಷ್ಟಗಿ ಮುನಿಸಿಪಲ್ ವ್ಯಾಪ್ತಿಯಲ್ಲಿದ್ದು, ಬುತ್ತಿ ಬಸವೇಶ್ವರ ನಗರ, ವಾರ್ಡ್ ನಂ.3, ಕುಷ್ಟಗಿ ಟೌನ್, ಕುಷ್ಟಗಿ ತಾಲ್ಲೂಕು ಮತ್ತು ಕೊಪ್ಪಳ ಜಿಲ್ಲೆ 583277 ನೋಂದಣಿ ಜಿಲ್ಲೆ ಕೊಪ್ಪಳ ಮತ್ತು ಉಪನೋಂದಣಿ ಜಿಲ್ಲೆ ಕುಷ್ಟಗಿ ವ್ಯಾಪ್ತಿಯಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: 09 ಮೀ ರಸ್ತೆ, ಪಶ್ಚಿಮಕ್ಕೆ: ಪ್ಲಾಟ್ ಸಂಖ್ಯೆ.30, ಉತ್ತರಕ್ಕೆ: 09 ಮೀ ರಸ್ತೆ, ದಕ್ಷಿಣಕ್ಕೆ: ಪ್ಲಾಟ್ ಸಂಖ್ಯೆ. 32. ಯಾವುದೇ ಮಾಹಿತಿಗಾಗಿ ಶ್ರೀ ಸಂಗಯ್ಯ ಹಿರೇಮಠ ಏರಿಯಾ ಕಲೆಕ್ಷನ್ ಮ್ಯಾನೇಜರ್ 91 9739349666 ರವರನ್ನು ಸಂಪರ್ಕಿಸಿ. | 22.07.2024 ಎನ್‌ಪಿಎ ದಿನಾಂಕ 16.12.2023 | Loan No. 918030058714376 OVER DRAFT WORKING CAPITAL ಒಟ್ಟು ಮೊತ್ತ ರೂ. 21,35,093/– ದಿನಾಂಕ: 15.07.2024 ರಂದು ಇದ್ದಂತೆ |

ಸ್ಥಳ : ಬೆಂಗಳೂರು
ದಿನಾಂಕ : 06.08.2024

ಸಹಿ/– ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್


# ಬಾಂಗ್ಲಾದಲ್ಲೀಗ ಹಿಂದೂಗಳಿಗೆ ಜೀವಭಯ

## ಮನೆಗಳಿಗೆ ನುಗ್ಗಿ ದಾಂಧಲೆ–ಬೆಂಕಿ | ಕಣ್ಣೀರಿಡುತ್ತಿರುವ ಮಹಿಳೆಯರು

**ಢಾಕಾ:** ಬಾಂಗ್ಲಾದಲ್ಲಿನ ಅರಾಜಕ ಪರಿಸ್ಥಿತಿ ಅಲ್ಲಿನ ಅಲ್ಪಸಂಖ್ಯಾತ ಹಿಂದೂಗಳಿಗೆ ಜೀವಭಯ ತಂದೊಡ್ಡಿದೆ. ಸೋಮವಾರ ಹಿಂದೂ ಮಹಿಳೆ ಸುರಕ್ಷತೆಗಾಗಿ ಅಂಗಲಾಚುವ ವಿಡಿಯೊ ವೈರಲ್ ಆಗಿದೆ. 'ದುಷ್ಕರ್ಮಿಗಳು ನಮ್ಮ ಮನೆಗೆ ನುಗ್ಗಿ ಎಲ್ಲಾ ಪರಿಕರ ಧ್ವಂಸಗೊಳಿಸಿದ್ದಾರೆ. ಕುಟುಂಬ ಸಮೇತ ಭಾರತಕ್ಕೆ ಹೋಗುವಂತೆ ಒತ್ತಾಯಿಸಿದ್ದಾರೆ. ಕೊಲೆ ಬೆದರಿಕೆ ಹಾಕಿದ್ದಾರೆ' ಎಂದು ಮಹಿಳೆ ಕಣ್ಣೀರಿಟ್ಟಿದ್ದಾರೆ.



'ನಾನು ಬಾಂಗ್ಲಾ ಪ್ರಜೆಯಲ್ಲವೇ? ಇಲ್ಲಿ ವಾಸಿಸಲು ನನಗೆ ಹಕ್ಕಿಲ್ಲವೇ? ನನ್ನ ಕುಟುಂಬವೇಕೇ ಭಾರತಕ್ಕೆ ಆಶ್ರಯ ಅರಸಿ ಹೋಗಬೇಕು? ನಾವು ಹಿಂದೂ ಎಂಬ ಕಾರಣಕ್ಕೇ? ಎಂದು ಮಹಿಳೆ ಜೋರಾಗಿ ಅಳುತ್ತಾ ಪ್ರಶ್ನಿಸಿದ್ದಾರೆ.

ಪ್ರಧಾನಿ ಶೇಖ್ ಹಸೀನಾ ಪದಚ್ಯುತಿ ನಂತರ ಬಾಂಗ್ಲಾದೇಶದಲ್ಲಿ ಉಂಟಾಗಿರುವ ರಾಜಕೀಯ ಅಸ್ಥಿರತೆಯನ್ನು ಇಸ್ಲಾಮಿಕ್ ಉಗ್ರರು ತಮ್ಮಿಷ್ಟದಂತೆ ಬಳಸಿಕೊಳ್ಳುತ್ತಿದ್ದಾರೆ. ಬಾಂಗ್ಲಾದೇಶ ಪ್ರಕ್ಷುಬ್ಧಗೊಂಡಿದೆ. ಅರಾಜಕತೆಯಲ್ಲಿ ಮುಳುಗಿದೆ. ಉಗ್ರಗಾಮಿ ಗುಂಪುಗಳು ಹಿಂದೂಗಳ ಮನೆಗಳು, ದೇಗುಲಗಳ ಮೇಲೆ ಭಾನುವಾರದಿಂದಲೇ ದಾಳಿ ನಡೆಸಲಾರಂಭಿಸಿವೆ. ಹಿಂದೂಗಳ ಮನೆಗೆ ನುಗ್ಗಿ ಜೀವ ಬೆದರಿಕೆ ಹಾಕಲಾಗುತ್ತಿದೆ, ಅಲ್ಲಿರುವ ವಸ್ತುಗಳನ್ನು ಸುಡಲಾಗಿದೆ, ದೇಗುಲಗಳನ್ನು ನೆಲಸಮಗೊಳಿಸಲಾಗಿದೆ. ವ್ಯಾಪಕ ಹಿಂಸಾಚಾರ ನಡೆದಿದೆ. ಮಹಿಳೆಯರನ್ನು ಅಪಹರಿಸಿ ಅಜ್ಞಾತ ಸ್ಥಳಗಳಿಗೆ ಕರೆದೊಯ್ಯಲಾಗುತ್ತಿದೆ ಎಂಬ ಆರೋಪಗಳೂ ಕೇಳಿಬರುತ್ತಿವೆ.

ದಾಳಿಕೋರರು ಕಾನೂನನ್ನು ಲೆಕ್ಕಕ್ಕೇ ಇಡುತ್ತಿಲ್ಲ, ಪೊಲೀಸ್, ಸೇನೆಯ ಭಯವೂ ಇಲ್ಲವಾಗಿದೆ. ಅನ್ಯಧರ್ಮೀಯರ ಜೀವಕ್ಕೆ ಬೆಲೆ ನೀಡುತ್ತಿಲ್ಲ. ಅಲ್ಪಸಂಖ್ಯಾತ ಸಮುದಾಯವು ಭಯದಲ್ಲಿ ಬದುಕುತ್ತಿದೆ.

# ಇಸ್ರೊದಿಂದ ಮತ್ತೊಂದು ಭೂ ವೀಕ್ಷಣೆ ಉಪಗ್ರಹ

**ದೆಹಲಿ:** ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಮತ್ತೊಂದು ಭೂ ವೀಕ್ಷಣಾ ಉಪಗ್ರಹ ಉಡಾವಣೆಗೆ ಸಿದ್ಧತೆ ನಡೆಸಿದೆ. ಎಸ್‌ಎಸ್‌ಎಲ್‌ವಿ ಮೂಲಕ 'ಇಒಎಸ್–08' ಉಪಗ್ರಹದ ಉಡಾವಣೆ ನಡೆಯಲಿದೆ ಎಂದು ಇಸ್ರೋ ಮಂಗಳವಾರ ಮಾಹಿತಿ ಹಂಚಿಕೊಂಡಿದೆ. 175.5 ಕೆಜಿ ತೂಕದ ಈ ಉಪಗ್ರಹ, ಪರಿಸರ ಮೇಲ್ವಿಚಾರಣೆ, ಜ್ವಾಲಾಮುಖಿ, ಬೆಂಕಿ ಅವಘಡ, ಪ್ರವಾಹ, ನೈಸರ್ಗಿಕ ವಿಪತ್ತು ನಿರ್ವಹಣೆ ಸೇರಿದಂತೆ ವಿವಿಧ ಮೌಲ್ಯಯುತ ಮಾಹಿತಿ–ದತ್ತಾಂಶಗಳನ್ನು ಸಂಗ್ರಹಿಸಿ ಭೂಕೇಂದ್ರಕ್ಕೆ ರವಾನಿಸಲಿದೆ. ಉಪಗ್ರಹಕ್ಕೆ ಅಳವಡಿಸಿದ ಎಲೆಕ್ಟ್ರೋ ಆಪ್ಟಿಕಲ್ ಇನ್ಫ್ರಾ ರೆಡ್ ಪೇಲೋಡ್(ಜೋಡಣೆಗಳು) ಹಗಲು–ರಾತ್ರಿ ಎರಡೂ ವೇಳೆ ಛಾಯಾಚಿತ್ರಗಳನ್ನು ಸೆರೆಹಿಡಿಯುವ ಸಾಮರ್ಥ್ಯ ಹೊಂದಿವೆ. ಒಟ್ಟೂ 3 ಪ್ರಮುಖ ಪೇಲೋಡ್‌ಗಳನ್ನು ಉಪಗ್ರಹಕ್ಕೆ ಅಳವಡಿಸಲಾಗುವುದು. ಉಪಗ್ರಹವನ್ನು 475 ಕಿ.ಮೀ ಎತ್ತರದಲ್ಲಿ ವೃತ್ತಾಕಾರದ ಕೆಳಸ್ಥರದ ಭೂಕಕ್ಷೆಯಲ್ಲಿ ಸ್ಥಿರಗೊಂಡು ಕಾರ್ಯನಿರ್ವಹಿಸುವಂತೆ ವಿನ್ಯಾಸಗೊಳಿಸಲಾಗಿದೆ. ಇದು 1 ವರ್ಷ ಕಾರ್ಯಾಚರಣೆ ಸಾಮರ್ಥ್ಯ ಹೊಂದಿದೆ ಎಂದು ಇಸ್ರೊ ತಿಳಿಸಿದೆ. ಉಡಾವಣೆ ದಿನ–ಸಮಯ ಇನ್ನಷ್ಟೇ ತಿಳಿಯಬೇಕಿದೆ.



# ಬಾಂಗ್ಲಾ ಮಧ್ಯಂತರ ಸರಕಾರಕ್ಕೆ ಸ್ವಾಗತ

## ಶೇಖ್ ಹಸೀನಾ ವೀಸಾ ರದ್ದುಪಡಿಸಿದ ಅಮೆರಿಕ

**ವಾಷಿಂಗ್ಟನ್:** ಹಸೀನಾ ಪದಚ್ಯುತಿ ಬಳಿಕ ಬಾಂಗ್ಲಾದೇಶದಲ್ಲಿ ಸೇನೆ ಹಂಗಾಮಿ ಸರಕಾರ ರಚಿಸಲಿರುವುದನ್ನು ಅಮೆರಿಕ ಸ್ವಾಗತಿಸಿದೆ. ಹೊಸ ಸರಕಾರ ಪ್ರಜಾಸತ್ತಾತ್ಮಕವಾಗಿರಲಿ ಎಂದೂ ಆಶಿಸಿದೆ. ಜತೆಗೆ ನಾಟಕೀಯ ಬೆಳವಣಿಗೆಯಂತೆ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ವೀಸಾವನ್ನು ಜೋ ಬೈಡನ್ ಆಡಳಿತ ಮಂಗಳವಾರ ರದ್ದುಗೊಳಿಸಿದೆ.

ಬಾಂಗ್ಲಾ ರಾಜಕೀಯ ಬೆಳವಣಿಗೆ ಬಗ್ಗೆ ಸುದ್ದಿಗೋಷ್ಠಿ ನಡೆಸಿದ ಅಮೆರಿಕ ವಕ್ತಾರ ಮ್ಯಾಥ್ಯೂ ಮಿಲ್ಲರ್, 'ಅಮೆರಿಕ ಬಾಂಗ್ಲಾದೇಶದ ಜನರ ಜತೆಗಿದೆ. ಎಲ್ಲಾ ಸಂಘಟನೆಗಳು ತಕ್ಷಣ ಘರ್ಷಣೆ ನಿಲ್ಲಿಸುವಂತೆ ಆಗ್ರಹಿಸುತ್ತೇವೆ. ಮಧ್ಯಂತರ ಸರಕಾರ ರಚನೆ ನಿರ್ಧಾರ ಸ್ವಾಗತಾರ್ಹ. ಪ್ರಜಾಸತ್ತಾತ್ಮಕ ಸರಕಾರದ ನಿರೀಕ್ಷೆ ಇದೆ' ಎಂದು ಹೇಳಿದ್ದಾರೆ.

ಮೊದಲಿಂದಲೂ ಕೆಲವು ವಿಚಾರಗಳಲ್ಲಿ ಹಸೀನಾ ಮತ್ತು ಅಮೆರಿಕ ನಡುವಿನ ಸಂಬಂಧ ಹಳಸಿತ್ತು. ಜನವರಿಯಲ್ಲಿ ನಡೆದ ಬಾಂಗ್ಲಾದೇಶ ಚುನಾವಣೆ ಮುಕ್ತವಾಗಿರಲಿಲ್ಲ, ನ್ಯಾಯೋಚಿತವಾಗಿ ನಡೆದಿಲ್ಲ ಎಂದು ಅಮೆರಿಕ ದೂರಿತ್ತು. ಅಲ್ಲದೇ ಶಾಂತಿಯುತ ಪ್ರತಿಭಟನೆಗೆ ಅವಕಾಶ ಮಾಡಿಕೊಡಬೇಕು ಎಂದು ಹಸೀನಾ ಸರಕಾರವನ್ನು ಇತ್ತೀಚೆಗೆ ಅಮೆರಿಕ ಒತ್ತಾಯಿಸಿತ್ತು. ಶೇಖ್ ಹಸೀನಾ ವಿರುದ್ಧದ ವಿದ್ಯಾರ್ಥಿಗಳ ಹೋರಾಟದಲ್ಲಿ ಅಮೆರಿಕ ಕೈವಾಡವೂ ಇದೆ ಎಂಬ ಮಾತು ಕೇಳಿ ಬಂದಿವೆ. ಬಾಂಗ್ಲಾದಿಂದ ಸೇನಾ ಹೆಲಿಕಾಪ್ಟರ್‌ನಲ್ಲಿ ಅಗರ್ತಲಾ, ಅಲ್ಲಿಂದ ವಾಯುಪಡೆ ವಿಮಾನದಲ್ಲಿ ದೆಹಲಿಗೆ ಬಂದಿಳಿದ ಹಸೀನಾ ಅವರು, ಬಳಿಕ ಲಂಡನ್‌ಗೆ ತೆರಳುತ್ತಾರೆಂದು ಹೇಳಲಾಗಿತ್ತು. ಆದರೆ ಬಾಂಗ್ಲಾದೇಶದಲ್ಲಿ ತನಿಖೆ–ವಿಚಾರಣೆ ಎದುರಿಸಬೇಕಿರುವ ಹಸೀನಾ ಅವರಿಗೆ ಯಾವುದೇ ಕಾನೂನಾತ್ಮಕ ರಕ್ಷಣೆ ನಿಡಲು ಸಾಧ್ಯವಿಲ್ಲ ಎಂದು ಬ್ರಿಟನ್ ಸರಕಾರ ಹೇಳಿದೆ. ರಾಜಕೀಯ ಆಶ್ರಯಕ್ಕೆ ಹಿಂದೆಗೆದಿದೆ.


**ಮಂಗಳೂರು ಮಹಾನಗರಪಾಲಿಕೆ**

DMA/2024-25/WORK INDENT NO.24399, 16817, 23903, 16830, 23835 ದಿನಾಂಕ: 02-08-2024

**ಟೆಂಡರ್ ಪ್ರಕಟಣೆ E-PROCUREMENT OF KARNATAKA**

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ **2023–24ನೇ** ಸಾಲಿನ **ಮಹಾನಗರಪಾಲಿಕೆ ಅನುದಾನದಲ್ಲಿ** DMA/2024-25/WORK INDENT NO.24399, 16817, 23903, 16830, 23835 ಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. 5 ಕಾಮಗಾರಿಗಳ ಒಟ್ಟು ಮೊತ್ತ **ರೂಪಾಯಿ 54.60 ಲಕ್ಷ** ಗಳಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 22–08–2024, ಅಪರಾಹ್ನ 4.00 ಗಂಟೆ.** ಹೆಚ್ಚಿನ ವಿವರವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **kppp.karnataka.gov.in** ಮುಖಾಂತರ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಮಹಾನಗರಪಾಲಿಕೆ ಮಂಗಳೂರು.

DIPR/MNG/KSMCA/374/24-25 dt: 06.08.2024



ಕರ್ನಾಟಕ ಸರ್ಕಾರ
**ನಗರಸಭೆ ಕಾರ್ಯಾಲಯ, ಶಹಾಪುರ**
ಜಿ: ಯಾದಗಿರಿ. ಕರ್ನಾಟಕ ರಾಜ್ಯ.

Website: www.shahapurcity.gov.in E-mail: itstaff_ulb_shahapur@yahoo.com

ಕ್ರ.ಸಂ/ನಸಶ/ ಎಸ್.ಎಫ್.ಸಿ./ಟೆಂಡರ್/2023–24/132 ದಿನಾಂಕ: 01–08–2024.

**–: ಟೆಂಡರ್ ಪ್ರಕಟಣೆ :–**

ಶಹಪುರ ನಗರಸಭೆ ವ್ಯಾಪ್ತಿಯ SBM 2.0 2023-24 ನೇ ಸಾಲಿನ ಅನುದಾನದಲ್ಲಿ ತೆಗೆದುಕೊಂಡ ಈ ಕೆಳಕಂಡ ಕಾಮಗಾರಿಯ ಟೆಂಡರ್ ಪ್ರಕಟಣೆ ಕರೆಯಲಾಗಿದೆ.

1) **ಕಾಮಗಾರಿಯ ಹೆಸರು :** Construction of proposed 8TPD MRF Centre (Material Recovery Facility) of PEB Structure (Primary Shed) at shahapur city. 2) **ಇಂಡೆಂಟ್ ನಂಬರ್:** DMA/2023-24/OW/WORK_INDENT20924/CALL2 3) **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) :** 87.50 4) ಇ.ಎಂ.ಡಿ. **(ರೂ.ಗಳಲ್ಲಿ):** As per E-Portal 5) **ಕಾಮಗಾರಿಯ ಅವದಿ :** 06 ತಿಂಗಳು 6) **ಗುತ್ತಿಗೆದಾರರ ದರ್ಜೆ:** 3ನೇ ದರ್ಜೆ ಮೇಲ್ಪಟ್ಟು.

1. ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 09.08.2024, ಸಾಯಂಕಾಲ 5.30ಘಂಟೆಗೆ
2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 12.08.2024 ಬೆಳಿಗ್ಗೆ 10–30 ಘಂಟೆಗೆ
3. ಆರ್ಥಿಕ ಬಿಡ್ ತೆರೆಯುವ ದಿನಾಂಕ: 16.08.2024 ಬೆಳಿಗ್ಗೆ 10–30 ಘಂಟೆಗೆ
4. ವಿಳಾಸ: www://kppp.karnataka.gov.in

ಸಹಿ/– ಪೌರಾಯುಕ್ತರು
ನಗರಸಭೆ ಶಹಾಪೂರ

ವಾ.ಸಾ.ಸಂ.ಇ/ಯಾದಗಿರಿ/129/ಕೆ.ಎಸ್.ಎಂ.ಸಿ&ಎ/2024–25


### ಮೈತ್ರಿ ಎಕ್ಸ್‌ಪ್ರೆಸ್ ಸಂಚಾರ ಸ್ಥಗಿತ

ದೆಹಲಿ: ಭಾರತ-ಬಾಂಗ್ಲಾದೇಶ ನಡುವೆ ಸಂಚರಿಸುತ್ತಿದ್ದ 'ಮೈತ್ರಿ ಎಕ್ಸ್‌ಪ್ರೆಸ್' ರೈಲನ್ನು ಮಂಗಳವಾರ ಸ್ಥಗಿತಗೊಳಿಸಲಾಗಿದೆ. ಪಶ್ಚಿಮ ಬಂಗಾಳದ ಕೋಲ್ಕತ್ತ-ಬಾಂಗ್ಲಾದೇಶದ ಡಾಕಾ ನಗರಗಳ ನಡುವೆ ಸಂಚರಿಸುತಿದ್ದ ಈ ವೇಗಗತಿ ರೈಲನ್ನು ಬಾಂಗ್ಲಾದಲ್ಲಿನ ಸದ್ಯದ ರಾಜಕೀಯ ಅನಿಶ್ಚಿತ ಪರಿಸ್ಥಿತಿ, ಪ್ರತಿಭಟನೆ, ಹಿಂಸಾಚಾರ ಹಿನ್ನೆಲೆ ಸದ್ಯಕ್ಕೆ ಸ್ಥಗಿತಗೊಳಿಸಲಾಗಿದೆ ಎಂದು ಪೂರ್ವ ರೈಲ್ವೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

## ಸಮಾಚಾರ ಸಣ್ಣದಲ್ಲ

### ಬರಹಗಾರರಿಂದ ಕಥೆ, ಕವನ ಆಹ್ವಾನ

**ಚಿಕ್ಕಮಗಳೂರು:** ತಾಲೂಕು ಐದನೇ ಕನ್ನಡ ಸಾಹಿತ್ಯ ಸಮ್ಮೇಳನದ ಸವಿ ನೆನಪಿಗಾಗಿ ಸ್ಮರಣ ಸಂಚಿಕೆ ಹೊರತರಲಾಗಿದ್ದು ಆಸಕ್ತ ಬರಹಗಾರರಿಂದ ಕಥೆ, ಕವನ ಹಾಗೂ ಲೇಖನಗಳನ್ನು ಆಹ್ವಾನಿಸಲಾಗಿದೆ ಎಂದು ತಾಲೂಕು ಕಸಾಪ ಅಧ್ಯಕ್ಷ ಬಿಸಲೇಹಳ್ಳಿ ಸೋಮಶೇಖರ್ ತಿಳಿಸಿದ್ದಾರೆ. ಈ ಕುರಿತು ಮಂಗಳವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು ಲೇಖನ, ಕಥೆ, ಕವನ, ಚಿಂತನ, ಯಶೋಗಾಥೆ ಇತ್ಯಾದಿ ಬರಹಗಳನ್ನು ಆಹ್ವಾನಿಸಲಾಗಿದೆ. ಬರಹಗಳನ್ನು ನುಡಿ ತಂತ್ರಾಂಶದಲ್ಲಿ ಇಮೇಲ್ kasapackm@gmail.comಮೂಲಕ ಆ.18 ರೊಳಗೆ ವಿಳಾಸ ಮತ್ತು ಭಾವಚಿತ್ರದೊಂದಿಗೆ ಎರಡು ಪುಟಗಳಿಗೆ ಮೀರದಂತೆ ಕಳುಹಿಸಬೇಕು.ಐದನೇ ಸಾಹಿತ್ಯ ಸಮ್ಮೇಳನವು ಆ.31 ಮತ್ತು ಸೆ.01 ರಂದು ಎರಡು ದಿನಗಳ ಕಾಲ ಕುವೆಂಪು ಕಲಾ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗಾಗಿ 94805 87919, 8277045842, 9482162001, 82775 89859, 83101 91358 ಸಂಖ್ಯೆಯನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

### ಸುಪ್ರೀಂ ಕೋರ್ಟ್ ತೀರ್ಪು: ದಸಂಸ ಸ್ವಾಗತಾರ್ಹ

**ಚಿಕ್ಕಮಗಳೂರು:** ಸುಪ್ರೀಂಕೋರ್ಟ್ ಒಳಮೀಸಲಾತಿ ಆದೇಶ ಹೊರಡಿಸಿದ್ದು ದಲಿತ ಸಂಘರ್ಷ ಸಮಿತಿ ಸಂಘಟನೆಯಿಂದ ಪ್ರವಾಸಿ ಮಂದಿರದಲ್ಲಿ ಭಾನುವಾರ ಸಭೆ ನಡೆಸಿ ಸುಪ್ರೀಂಕೋರ್ಟ್ ತೀರ್ಪನ್ನು ಸ್ವಾಗತಿಸಿದರು. ಈ ಸಭೆಯಲ್ಲಿ ಜಿಲ್ಲಾ ಸಂಚಾಲಕ ಕಬ್ಬಿಗೆರೆ ಮೋಹನ್ ಕುಮಾರ್, ಸಂಘಟನಾ ಸಂಚಾಲಕರಾದ ದೇವರಾಜ್, ಎಚ್ ಕೆ ಮಹಿಳಾ, ಸಂಚಾಲಕಿ ರೇಣುಕಾ, ತಾಲೂಕು ಸಂಚಾಲಕರಾದ ಗೌನಳ್ಳಿ ಗೀತಾ, ಟಿಎಲ್ ಗಣೇಶ್, ಶಿಲ್ಪ, ಸೋನಿಕ, ಪ್ರಕಾಶ್ ಇತರರು ಇದ್ದರು.

### ಕೆರೆಗೆ ಹಾರಿ ರಿಕ್ಷಾ ಚಾಲಕ ಆತ್ಮಹತ್ಯೆ

**ಪುತ್ತೂರು:** ಇಲ್ಲಿನ ಸಂಪ್ಯದ ಬಾಡಿಗೆ ಮನೆಯೊಂದರಲ್ಲಿ ವಾಸವಾಗಿದ್ದ ರಿಕ್ಷಾ ಚಾಲಕರೋರ್ವರು ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಸಂಪ್ಯ ಕೊಲ್ಯ ಎಂಬಲ್ಲಿ ನಡೆದಿದೆ. ಆತ್ಮಹತ್ಯೆ ಮಾಡಿಕೊಂಡವರನ್ನು ಪುರುಷರಕಟ್ಟೆಯ ಪಾಪೆತ್ತಡ್ಕ ನಿವಾಸಿ ಮಹಮ್ಮದ್ ಎಂದು ಗುರುತಿಸಲಾಗಿದೆ. ಸಂಪ್ಯದ ಕೊಲ್ಯ ಎಂಬಲ್ಲಿರುವ ಗಣಪತಿ ವಿಗ್ರಹ ವಿಸರ್ಜನೆಯ ಕೆರೆಗೆ ಮಹಮ್ಮದ್ ಅವರು ಹಾರಲು ಯತ್ನಿಸಿದ ವೇಳೆ ಸುತ್ತಮುತ್ತಲಿನವರು ಬೊಬ್ಬೆ ಹಾಕಿ ಹಾರದಂತೆ ಹೇಳಿದ್ದಾರೆ. ಆದರೂ ಸಾಯುತ್ತೇನೆ ಎಂದು ಹೇಳಿ ಮಹಮ್ಮದ್ ಕೆರೆಗೆ ಹಾರಿದ್ದಾರೆ ಎನ್ನಲಾಗಿದೆ. ಪುತ್ತೂರಿನ ಸಂಪ್ಯ ಗ್ರಾಮಾಂತರ ಪೊಲೀಸರು ದೂರು ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ

### ಹಿರಿಯ ಪತ್ರಕರ್ತ ಜಯಕರ ನಿಧನ

**ಉಡುಪಿ:** ಹಿರಿಯ ಪತ್ರಕರ್ತ, ದೂರದರ್ಶನ ಉಡುಪಿ ಜಿಲ್ಲಾ ವರದಿಗಾರ ಹಾಗೂ ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಮಾಜಿ



ಅಧ್ಯಕ್ಷ ಜಯಕರ ಸುವರ್ಣ ಸೋಮವಾರ ರಾತ್ರಿ ಹೃದಯಾಘಾತದಿಂದ ಕಲ್ಮಾಡಿಯಲ್ಲಿರುವ ಸ್ವ ಗೃಹದಲ್ಲಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರನನ್ನು ಅಗಲಿದ್ದಾರೆ. ಮಂಗಳವಾರ ಕಲ್ಮಾಡಿಯಲ್ಲಿರುವ ಅವರ ಮನೆಯಲ್ಲಿ ನೂರಾರು ಮಂದಿ ಅಂತಿಮ ದರ್ಶನ ಪಡೆದಿದ್ದು, ಮಲ್ಪೆಯ ರುದ್ರ ಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು. ಸಂತಾಪ: ಜಯಕರ ಸುವರ್ಣ ಅವರ ನಿಧನಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್, ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ, ಉಡುಪಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಶೋಕ್ ಕುಮಾರ್ ಕೊಡವೂರು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ರಾಜೇಶ್ ಶೆಟ್ಟಿ ಅಲೆವೂರು, ಸಂಘದ ರಜತ ಮಹೋತ್ಸವ ಸಮಿತಿಯ ಸಂಚಾಲಕ ಮುಹಮ್ಮದ್ ಶರೀಫ್ ಕಾರ್ಕಳ, ಉಡುಪಿ ಪತ್ರಿಕಾ ಭವನ ಸಮಿತಿಯ ಸಂಚಾಲಕ ಅಜಿತ್ ಆರಾಡಿ, ಎಸ್‌ಕೆಪಿಎ ದ.ಕ. ಮತ್ತು ಉಡುಪಿ ಜಿಲ್ಲಾ ಅಧ್ಯಕ್ಷ ಪದ್ಮಪ್ರಸಾದ್ ಜೈನ್, ಉಡುಪಿ ವಲಯ ಅಧ್ಯಕ್ಷ ಸುಧೀರ್ ಎಂ.ಶೆಟ್ಟಿ ಸಂತಾಪ ವ್ಯಕ್ತಪಡಿಸಿದ್ದಾರೆ.

ವಿ+ ಸೋಮವಾರ

{ಲಕ್ಷ್ಮೀ ಹೆಬ್ಬಾಳ್ಕರ್ } ಸಚಿವೆ

**ಬರಗಾಲದಲ್ಲಿ ಪರಿಹಾರ ಕೊಡಲು ಕೇಂದ್ರ ಬಿಜೆಪಿ ಸರಕಾರಕ್ಕೆ ಮನಸ್ಸಿಲ್ಲ. ಆದರೆ ಬಿಜೆಪಿ ಭ್ರಷ್ಟ ಸರಕಾರ ಬಂಡವಾಳಶಾಹಿಗಳ 16 ಲಕ್ಷ ಕೋಟಿ ಸಾಲ ಮನ್ನಾಮಾಡಿದೆ.**

‘ಮನೋಹರ ಪ್ರಸಾದ್ ನೆನಪು’ ಕಾರ್ಯಕ್ರಮ | ಪತ್ರಕರ್ತರ ನಡು ವಿನ ಸೂಪರ್ ಸ್ಟಾರ್ ಆಗಿದ್ದರು: ಮೋಹನ ಆಳ್ವರಿಂದ ಸ್ಮರಣೆ

# ಜನಮಾನಸದಲ್ಲಿ ಉಳಿದ ಪತ್ರಕರ್ತ ಮನೋಹರ

**ವಿದ್ಯಾಗಿರಿ(ಮೂಡುಬಿದಿರೆ):** ‘ಪತ್ರಕರ್ತರ ನಡುವಿನ ಸೂಪರ್ ಸ್ಟಾರ್ ಮನೋಹರ ಪ್ರಸಾದ್’ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ.ಮೋಹನ ಆಳ್ವ ಬಣ್ಣಿಸಿದರು.

ಇಲ್ಲಿನ ಆಳ್ವಾಸ್ ಕಾಲೇಜಿನ ಕುವೆಂಪು ಸಭಾಂಗಣದಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ, ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ, ಮೂಡುಬಿದಿರೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಮೂಡುಬಿದಿರೆ ತಾಲೂಕು ಘಟಕದ ಸಹಯೋಗದಲ್ಲಿ ಮಂಗಳವಾರ ನಡೆದ ‘ಮನೋಹರ ಪ್ರಸಾದ್ ನೆನಪು’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪತ್ರಕರ್ತರಿಗಿಂತ ಹೆಚ್ಚಾಗಿ ಸಾರ್ವಜನಿಕ ಸಂಪರ್ಕ ಅಧಿಕಾರಿಯಂತೆ ಜನಮಾನಸದಲ್ಲಿ ಬೆರೆತು ಹೋಗಿದ್ದರು. ಅವರದ್ದು ಬಹುಮುಖಿ ವ್ಯಕ್ತಿತ್ವ. ಅವರ ಹೆಸರನ್ನು ವಿರಾಸತ್‌ನಲ್ಲಿ ನಾವು ಈ ಬಾರಿ ಸ್ಮರಿಸಿಕೊಳ್ಳುತ್ತೇವೆ ಎಂದರು.

ಅಪೂರ್ವ ಜ್ಞಾಪಕ ಶಕ್ತಿ. ಸಮಯಕ್ಕೆ ತಕ್ಕಂತೆ ಸ್ಪಂದಿಸುತ್ತಿದ್ದ ಅವರೊಂದು ವಿಶ್ವಕೋಶ. ಖ್ಯಾತ ನಟ ಮಮ್ಮುಟ್ಟಿ ಮಂಗಳೂರಿಗೆ ಬಂದಿದ್ದಾಗ ಅವರು ಸಂದರ್ಶನ ಮಾಡಿದ್ದರು. ಅದನ್ನು ನೋಡಿದ ಮಮ್ಮುಟ್ಟಿ ಶ್ಲಾಘಿಸಿದ್ದರು ಎಂದು ಆಳ್ವ ಅವರು ನೆನಪಿಸಿಕೊಂಡರು.

ಮೂಡುಬಿದಿರೆ ತಾಲೂಕು ಘಟಕದ ಸಹಯೋಗದಲ್ಲಿ ಮಂಗಳವಾರ ನಡೆದ ‘ಮನೋಹರ ಪ್ರಸಾದ್ ನೆನಪು’ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಕುಗ್ರಾಮ ಗುರುತಿಸುವ ಬರಹವು ಶ್ರೇಷ್ಠವಾಗಿದೆ. ಕೌಟುಂಬಿಕವಾಗಿ ಒಡಹುಟ್ಟಿದವರನ್ನು ಕಳೆದುಕೊಂಡು ನೋವುಂಡರೂ, ಒಂಟಿಯಾಗಿ ಜೀವಿಸಿದರು. ಜನರಿಗೆ ಸ್ಪಂದಿಸಿದರು ಎಂದು ನೆನಪಿಸಿಕೊಂಡರು. ಅವರು ತಮ್ಮ ಕೊನೆದಿನಗಳಲ್ಲಿ ನವ ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳಲ್ಲೂ ಸಕ್ರಿಯರಾಗಿದ್ದರು ಎಂದರು.

ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ. ಹರೀಶ್.ರೈ ಮಾತನಾಡಿ, ಮನೋಹರ ಪ್ರಸಾದ್ ಅವರ ನಿಧನದಿಂದ ಕರಾವಳಿ ಪತ್ರಿಕೋದ್ಯಮದಲ್ಲಿ ಒಂದು ಶ್ರೇಷ್ಠ ಅಧ್ಯಾಯ ಯುಗಾಂತ್ಯ ಕಂಡಿದೆ ಎಂದರು. ಮನೋಹರ ಅವರು ಬರಹ ಮಾತ್ರವಲ್ಲದೇ ವ್ಯಕ್ತಿತ್ವದ ಮೂಲಕ ಪತ್ರಿಕೋದ್ಯಮಕ್ಕೆ ಹಲವರನ್ನು ಸೆಳೆದವರು ಎಂದರು.

ಮೂರು ತಲೆಮಾರಿನ ಸಾಧಕರನ್ನು ಕಂಡವರು. ಅವರ ಸ್ಮರಣಶಕ್ತಿ ಅದ್ಭುತ. ಅವರಿಗೆ ತಿಳಿಯುವ ಕುತೂಹಲ ಹಾಗೂ ವಿದ್ಯಾರ್ಥಿ ಮನಸ್ಸು ಹೊಂದಿದ್ದರು ಎಂದರು. ವೈವಿಧ್ಯಮಯ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡ ಕಾರಣ ತುಳುನಾಡಿನ ರಾಯಭಾರಿಯೇ ಆಗಿದ್ದರು ಎಂದರು.

ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶ್ರೀನಿವಾಸ ನಾಯಕ್ ಇಂದಾಜೆ ಮಾತನಾಡಿ, ಮನೋಹರ ಪ್ರಸಾದ್ ಅವರ ನೆನಪನ್ನು ಚಿರಸ್ಥಾಯಿಗೊಳಿಸುವ ಕಾರ್ಯಕ್ರಮಗಳನ್ನು ನಮ್ಮ ಸಂಘ ಹಮ್ಮಿಕೊಳ್ಳಲಿದೆ ಎಂದರು.

ಪತ್ರಕರ್ತರಿಗೆ ರಾಜ್ಯ ಮಟ್ಟದ ಕಾರ್ಯಾಗಾರ, ದತ್ತಿ ಪ್ರಶಸ್ತಿ, ಕ್ರಿಕೆಟ್ ಪಂದ್ಯಾಟ ನಡೆಸುವ ಯೋಜನೆ ಇದೆ ಎಂದರು.

ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಇಬ್ರಾಹಿಂ ಅಡ್ಕಸ್ಥಳ, ಜಗನ್ನಾಥ ಶೆಟ್ಟಿ ಬಾಳ, ಇಬ್ರಾಹಿಂ ಅಡ್ಕಸ್ಥಳ, ಅನ್ನು ಮಂಗಳೂರು, ಭಾಸಕರ್ ರೈ, ಪತ್ರಿಕಾ ಭವನಟ್ರಸ್ಟ್ ಅಧ್ಯಕ್ಷ ರಾಮಕೃಷ್ಣ, ಮೂಡುಬಿದಿರೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸೀತಾರಾಮ ಆಚಾರ್ಯ ಇದ್ದರು.

ಕನ್ನಡ ಸಾಹಿತ್ಯ ಪರಿಷತ್ತಿನ ಮೂಡುಬಿದಿರೆ ತಾಲ್ಲೂಕು ಘಟಕದ ಅಧ್ಯಕ್ಷ ವೇಣುಗೋಪಾಲ ಶೆಟ್ಟಿ. ಕೆ ಕಾರ್ಯಕ್ರಮ ನಿರೂಪಿಸಿದರು.ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರದಾನ ಕಾರ್ಯದರ್ಶಿ ಜಿತೇಂದ್ರ ಕುಂದೇಶ್ವರ ವಂದಿಸಿದರು.

> **ನಿರೂಪಕನಾಗಿ ಭಾಷೆ ಮೇಲಿನ ಹಿಡಿತ ಹಾಗೂ ಸ್ವರ ಮಾಧುರ್ಯ ಗಮನ ಸೆಳೆಯುತ್ತಿತ್ತು. ನುಡಿಸಿರಿಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಅದನ್ನು ಕೇಳುವುದೇ ಸೊಗಸಾಗಿತ್ತು. ಸುಮಾರು 5 ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, 22 ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ, 9 ಮಸ್ತಕಾಭಿಷೇಕ ನಿರೂಪಣೆ ಹಾಗೂ ಆಕಾಶವಾಣಿಯಲ್ಲಿ ಸುಮಾರು 91 ಕಾರ್ಯಕ್ರಮ ನೀಡಿದ್ದರು ಎಂದು ಸ್ಮರಿಸಿದರು.**
> **-ಡಾ.ಎಂ.ಮೋಹನ ಆಳ್ವ,** ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ

## ಒತ್ತುವರಿ ಭೂಮಿ ತೆರವುಗೊಳಿಸಲು ಸಚಿವರಿಗೆ ಒತ್ತಾಯ

**ಚಿಕ್ಕಮಗಳೂರು:** ಒತ್ತುವರಿಗೊಂಡಿರುವ ಸರಕಾರದ ಕಂದಾಯ ಭೂಮಿಗಳನ್ನು ತೆರವುಗೊಳಿಸಬೇಕು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಅವರಿಗೆ ಸೋಮವಾರ ಕಾಂಗ್ರೆಸ್ ಮುಖಂಡ ಕೆ.ಭರತ್ ಮನವಿ ಸಲ್ಲಿಸಿ ಒತ್ತಾಯಿಸಿದರು.

ಕೆ.ಭರತ್ ಮಾತನಾಡಿ, ಜಿಲ್ಲೆಯಲ್ಲಿ ಸುಮಾರು 1 ಲಕ್ಷ ಎಕರೆಗೂ ಮೇಲ್ಪಟ್ಟು ಸರಕಾರಿ ಭೂಮಿ ಒತ್ತುವರಿಯಾಗಿದೆ. ಸರಕಾರದ ಇಚ್ಛಾಶಕ್ತಿ ಕೊರತೆ ಹಾಗೂ ಅಧಿಕಾರಿಗಳ ವೈಫಲ್ಯದ ಫಲವೇ ಈ ಒತ್ತುವರಿಗೆ ಮೂಲ ಕಾರಣವಾಗಿದೆ ಎಂದರು.

ಕಳೆದ ಎರಡ್ಮೂರು ದಶಕದಲ್ಲಿ ಅತಿಹೆಚ್ಚು ಭೂಮಿ ಒತ್ತುವರಿಯಾದ ಕಾರಣ ಸರಕಾರ ದೃಢ ನಿರ್ಧಾರ ಕೈಗೊಂಡು ಉತ್ತಮ ಅಧಿಕಾರಿಗಳನ್ನು ನೇಮಿಸಿ ಯಾವುದೇ ರೀತಿಯಾದ ಒತ್ತಡಕ್ಕೆ ಮಣಿಯದೇ ತೆರವು ಕಾರ್ಯಕ್ರಮ ರೂಪಿಸಿದ್ದಲ್ಲಿ ಒತ್ತುವರಿ ತೆರವಿಗೊಳಿಸಬಹುದು ಎಂದು ತಿಳಿಸಿದರು.

ಮಲೆನಾಡು, ಅರೆಮಲೆನಾಡು ಹಾಗೂ ಬಯಲುಸೀಮೆ ಒಳಗೊಂಡಿರುವ ಜಿಲ್ಲೆ ಕಾಫಿ ಮುಖ್ಯ ಬೆಳೆಯಾಗಿದೆ. ಅನೇಕ ಕಂಪನಿಗಳು ಕಾಫಿ ತೋಟಗಳನ್ನು ಹೊಂದಿದೆ. ಅಲ್ಲದೇ ದೇಶದ ನಾನಾ ರಾಜ್ಯಗಳಿಂದ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಸಾವಿರಾರು ಎಕರೆ ಕಾಫಿ ತೋಟಗಳನ್ನು ಕಂಪನಿಗಳು ಕೊಂಡುಕೊಂಡಿವೆ ಎಂದು ಹೇಳಿದರು.

ಸೊಪ್ಪಿನಗುಡ್ಡ, ಗೋಮಾಳಗಳು ಹುಲ್ಲುಹಾವಲು, ಭೂ ಬ್ಯಾಂಕ್ ಇವೆಲ್ಲದರಲ್ಲೂ ಸರಕಾರ ನೂರಾರು ಎಕರೆ ಜಮೀನನ್ನು ಬಿಟ್ಟಿದ್ದರೂ ಕೂಡಾ ದಾಖಲೆಗೆ ಸೀಮಿತವಾಗಿದೆ ಅಷ್ಟೇ. ಬಲಾಢ್ಯರು ಕೆಲವು ಅಧಿಕಾರಿಗಳ ಸಹಾಯದೊಂದಿಗೆ ಭೂಮಿಗಳನ್ನು ಒತ್ತುವರಿ ಮಾಡಿಕೊಂಡು ಪಟ್ಟಾ ಭೂಮಿಯಾಗಿ ಪರಿವರ್ತನೆ ಮಾಡಿಕೊಂಡಿದ್ದಾರೆ ಎಂದರು.

ಒತ್ತುವರಿಗೊಂಡಿರುವ ಸರಕಾರದ ಕಂದಾಯ ಭೂಮಿಗಳನ್ನು ತೆರವುಗೊಳಿಸಲು ಕಂದಾಯ ಸಚಿವ ಕೃಷ್ಣಬೈರೇಗೌಡ ಅವರಿಗೆ ಸೋಮವಾರ ಕಾಂಗ್ರೆಸ್ ಮುಖಂಡ ಕೆ.ಭರತ್ ಮನವಿ ಸಲ್ಲಿಸಿದರು

> **ಅಧಿಕಾರಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು. ನಗರ ವ್ಯಾಪ್ತಿಯಲ್ಲಿ ಉದ್ಯಾನವನಗಳು ಸರಕಾರಿ ಜಾಗಗಳು ಹಾಗೂ ಅನಾಥವಾಗಿರುವ ಜಾಗಗಳನ್ನು ರಿಯಲ್ ಎಸ್ಟೇಟ್ ಮಾಫಿಯಾ ಕುಳಗಳು ಅಧಿಕಾರಿಗಳನ್ನು ಶಾಮೀಲಾಗಿ ಭೂ ಪರಿವರ್ತನೆಗೊಳಿಸಿ ನಿವೇಶನಗಳನ್ನಾಗಿ ಮಾರ್ಪಡಿಸಿ ಕೋಟ್ಯಾಂತರ ರು.ಗೆ ಮಾರಾಟ ಮಾಡಲಾಗಿದೆ ಎಂದು ತಿಳಿಸಿದರು.**
> **-ಕೆ.ಭರತ್,** ಕಾಂಗ್ರೆಸ್ ಮುಖಂಡ



ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ,
ಕೆ ಭರತ್
ಮೊ.ನಂ : 8073371926
9844063046
ಕಾಂಗ್ರೆಸ್ ಮುಖಂಡರು,
ಎಸ್.ಕೆ ಕಾಂಪ್ಲೆಕ್ಸ್, ಹೆಚ್.ಕೆ ರೋಡ್, ಉಪ್ಪಳ್ಳಿ, ಚಿಕ್ಕಮಗಳೂರು.
//2//
ಹಾಗೂ ಐ.ಡಿ ಪೀಠ ವ್ಯಾಪ್ತಿಗೆ ಒಳಪಡುವ ಗ್ರಾಮಗಳಾದ ಅತ್ತಿಗುಂಡಿ, ಹುಲುವತ್ತಿ, ಮೇಲುಹುಲುವತ್ತಿ, ಸಂಪಿಗೆ ಕಟ್ಟೆ ಇನ್ನು ಹಲವು ಗ್ರಾಮಗಳಲ್ಲಿ ಸಾವಿರಾರು ಎಕರೆ ಕೃಷಿ ಚಟುವಟಿಕೆಯ ನಾನಾ ರಾತಿಯ ಬೆಳೆಗಳನ್ನು ಬೆಳೆಯುತ್ತಿರುವ ಭೂಮಿಗಳಿದ್ದು, 2009ರ ಇಸವಿಯಲ್ಲಿ ಮಾಜಿ ಶಾಸಕ ಸಿ.ಟಿ ರವಿ ಹಾಗೂ ಅಂದಿನ ಬಿ.ಜೆ.ಪಿ ಸರ್ಕಾರ ಐ.ಡಿ ಪೀಠದ ವ್ಯಾಪ್ತಿಯಲ್ಲಿ ಇನಾಂ ಭೂಮಿ ಇರುವುದರಿಂದ ಇಲ್ಲಿ ಯಾವುದೇ ರೀತಿಯಾದ ನೊಂದಾವಣೆ ಪ್ರಕ್ರಿಯೆಗಳು ನಡೆಯಬಾರದೆಂದು ತಡೆ ಹಿಡಿದಿರುತ್ತಾರೆ.
ಆದರೆ ಇಲ್ಲಿಯವರೆಗೆ 2ಬಾರಿ ಅವರದೇ ಸರ್ಕಾರ ಇದ್ದರೂ ಕೂಡಾ ಅಲ್ಲಿ ಇನಾಂ ಭೂಮಿ ಇದೆಯೋ ಇಲ್ಲವೋ? ಎಂಬುದನ್ನು ಅವರಲ್ಲಿ ದೃಢೀಕರಿಸಲು ಆಗಿರುವುದಿಲ್ಲ. ಹಾಗೂ ಬಲಾಢ್ಯರು ಈ ವ್ಯಾಪ್ತಿಯಲ್ಲಿ ನೂರಾರು ಎಕರೆ ಕಾಫಿ ತೋಟಗಳನ್ನು ತಮ್ಮ ಹಣಬಲ ಹಾಗೂ ಅಧಿಕಾರಿಗಳ ಬಲ ಮತ್ತು ರಾಜಕಾರಣಿಗಳ ಕೃಪಾ ಕಟಾಕ್ಷದಿಂದ ತಮ್ಮ ಹೆಸರಿಗೆ ನೊಂದಾವಣೆ ಮಾಡಿಕೊಂಡಿರುತ್ತಾರೆ. ಆದರೆ ಸಣ್ಣ-ಪುಟ್ಟ ತೋಟದ ಹಾಗೂ ಕೃಷಿಕರ ಜಮೀನುಗಳನ್ನು ನೊಂದಾವಣೆ ಮಾಡಲು ಆಗುತ್ತಿಲ್ಲ. ಆದ ಕಾರಣ ಈ ಕೂಡಲೇ ಈ ಸರ್ಕಾರ ಈ ಅಸಂಬದ್ಧ ತಡೆಯನ್ನು ತೆರವುಗೊಳಿಸಿ, ಸ್ಥಳೀಯ ಕೃಷಿಕರಿಗೆ ತೋಟ ಮಾಲೀಕರಿಗೆ ತಮ್ಮ ಭೂಮಿಗಳನ್ನು ವ್ಯಾಪಾರ ವಹಿವಾಟುಗಳನ್ನು ಮಾಡಲು ಅವಕಾಶ ಮಾಡಿಕೊಡಬೇಕಾಗಿರುತ್ತದೆ.
ಧನ್ಯವಾದಗಳೊಂದಿಗೆ,
ತಮ್ಮ ವಿಶ್ವಾಸಿ,
(ಕೆ ಭರತ್)
ಕಾಂಗ್ರೆಸ್ ಮುಖಂಡರು

ಬಲಾಢ್ಯರು ಈ ಭಾಗದಲ್ಲಿ ನೂರಾರು ಎಕರೆ ಕಾಫಿ ತೋಟಗಳನ್ನು ಹಣಬಲ, ಅಧಿಕಾರಿಗಳ ಬಲ ಹಾಗೂ ರಾಜಕಾರಣಿಗಳ ಶಕ್ತಿಯಿಂದ ತಮ್ಮಗಳ ಹೆಸರಿಗೆ ನೊಂದಾವಣೆ ಮಾಡಿಕೊಂಡಿವೆ. ಹಾಗಾಗಿ ಸರಕಾರ ಕೂಡಲೇ ಈ ಅಸಂಬದ್ಧ ತಡೆಯನ್ನು ತೆರವುಗೊಳಿಸಿ ಸ್ಥಳೀಯ ಕೃಷಿಕರಿಗೆ ತೋಟ, ಮಾಲೀಕರಿಗೆ ಭೂಮಿಗಳನ್ನು ವಾಪಾರ ವಹಿವಾಟುಗಳನ್ನು ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

## ಮುಖ್ಯಮಂತ್ರಿ ವಿರುದ್ಧ ಸುಳ್ಳು ಆರೋಪ: ಅಹಿಂದಾ ಪ್ರತಿಭಟನೆ

**ಚಿಕ್ಕಮಗಳೂರು:** ರಾಜ್ಯಸರಕಾರ ಅಸ್ಥಿರಗೊಳಿಸುವ ಸಲುವಾಗಿ ಮುಖ್ಯಮಂತ್ರಿಗಳ ವಿರುದ್ಧ ಸುಳ್ಳು ಅಪಾದನೆ ಹೊರಿಸಿ ಎರಡು ಪಕ್ಷ ತೇಜೋವಧೆಗೆ ಮುಂದಾಗಿರುವುದು ಖಂಡಿಸಿ ಆ.07 ರಂದು ನಗರದ ಆಜಾದ್ ಪಾರ್ಕ್ ವೃತ್ತದಲ್ಲಿ ಅಹಿಂದಾ ಮುಖಂಡರ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಂಡಿದೆ ಎಂದು ಮಾಜಿ ಸಚಿವ ಬಿ.ಬಿ.ನಿಂಗಯ್ಯ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಸಿಲುಕಿಸುವ ಸಲುವಾಗಿ ಬಿಜೆಪಿ-ಜೆಡಿಎಸ್ ಪಕ್ಷಗಳು ಷಡ್ಯಂತ್ರ ರೂಪಿಸಿ ಮಾನಹಾನಿಗೆ ಮುಂದಾಗಿರುವುದೇ. ಇದನ್ನು ಖಂಡಿಸಿ ಅಲ್ಪಸಂಖ್ಯಾತರ ಹಾಗೂ ಹಿಂದುಳಿದ ವರ್ಗದ ನೇತೃತ್ವದಲ್ಲಿ ಧರಣಿ ಹಮ್ಮಿಕೊಂಡಿದ್ದಾರೆ ಎಂದರು.

ಪ್ರತಿಭಟನೆ ಜಾಥಾವು ನಗರದ ತಾಲೂಕು ಕಚೇರಿಯಿಂದ ಸಾಗಿ ಆಜಾದ್ ಪಾರ್ಕ್ ವೃತ್ತದಲ್ಲಿ ಸಮಾವೇಶಗೊಳ್ಳಲಿದ್ದು, ಬಿಜೆಪಿ ಹಾಗೂ ಜೆಡಿಎಸ್ ಸುಳ್ಳಿನ ಆರೋಪದ ವಿರುದ್ಧ ಧಿಕ್ಕಾರ ಕೂಗುವ ಜತೆಗೆ ಮುಖಂಡರುಗಳ ದುವರ್ತನೆ ಖಂಡಿಸಿ ಚಳುವಳಿ ಹಮ್ಮಿಕೊಳ್ಳಲಿದೆ ಎಂದು ತಿಳಿಸಿದರು.

ಜಿ.ಪಂ. ಮಾಜಿ ಅಧ್ಯಕ್ಷೆ ರೇಖಾ ಹುಲಿಯಪ್ಪಗೌಡ ಮಾತನಾಡಿ, ರಾಜ್ಯಸರಕಾರ ಬಡವರು, ಮಧ್ಯಮ ವರ್ಗ ಹಾಗೂ ಕೂಲಿಕಾರ್ಮಿಕರ ಪರವಾಗಿ ಯೋಜನೆಗಳನ್ನು ರೂಪಿಸಿ ಸಹಾಯಹಸ್ತ ಕಲ್ಪಿಸುತ್ತಿದ್ದರೂ ಬಿಜೆಪಿ-ಜೆಡಿಎಸ್ ಮುಡಾ ಪ್ರಕರಣ ಸುಳ್ಳಿನ ಸರಮಾಲೆಯನ್ನು ಮುಖ್ಯಮಂತ್ರಿಗಳ ತಲೆಗೆ ಹಾಕಲು ಯತ್ನಿಸುತ್ತಿದೆ ಎಂದು ದೂರಿದರು.

ಈ ಸಂದರ್ಭದಲ್ಲಿ ಮುಖಂಡರುಗಳಾದ ಮರ್ಲೆಅಣ್ಣಯ್ಯ, ನಾರಾಯಣ್, ಜೇಮ್ಸ್, ಹೆಚ್.ಪಿ.ಮಂಜೇಗೌಡ, ಮುನೀರ್ ಮತ್ತಿತರರು ಉಪಸ್ಥಿತರಿದ್ದರು.

> **ಮುಖ್ಯಮಂತ್ರಿಗಳ ನಾಲ್ಕು ದಶಕಗಳ ರಾಜಕೀಯ ಜೀವನದಲ್ಲಿ ಎಂದಿಗೂ ಕಪ್ಪುಚುಕ್ಕೆ ಪಡೆಯದ ವ್ಯಕ್ತಿತ್ವ ಹೊಂದಿದವರನ್ನು ಸಹಿಸಿಕೊಳ್ಳದೇ ಹಾಗೂ ಅಧಿಕಾರ ಕಳೆದುಕೊಂಡು ಹತಾಶೆಯಲ್ಲಿ ಬಿಜೆಪಿ-ಜೆಡಿಎಸ್ ಪಕ್ಷಗಳು ಮುಡಾ ಪ್ರಕರಣದ ಸುಳ್ಳು ಅಪಾದನೆ ಹೊರಿಸಿ ಸಮಾವೇಶ ಕೈಗೊಂಡು ರಾಜ್ಯ ಸರಕಾರ ಅಸ್ಥಿರಗೊಳಿಸಲು ಮುಂದಾಗುತ್ತಿದೆ ಎಂದು ದೂರಿದರು.**
> **-ಬಿ.ಬಿ.ನಿಂಗಯ್ಯ,** ಮಾಜಿ ಸಚಿವ

## ಸಮಾಜಮುಖಿ ಕಾರ್ಯಗಳಿಗೆ ಸನ್ಮಾನ ಹುಡುಕಿ ಬರುತ್ತೆ: ಡಿಸಿಪಿ

**ಮಂಗಳೂರು:** ಬಸ್ ಸಿಬ್ಬಂದಿ ಮಾನವೀಯ ಕಾರ್ಯಗಳು ಇತರರಿಗೂ ಮಾದರಿ ಆಗಿದ್ದು, ಸಮಾಜಮುಖಿ ಕಾರ್ಯಗಳನ್ನು ಮಾಡಿದಾಗ ಗೌರವ, ಸಮ್ಮಾನಗಳು ನಮ್ಮನ್ನು ಹುಡುಕಿಕೊಂಡು ಬರುತ್ತವೆ. ಇಂಹತ ಕಾರ್ಯಗಳಿಗೆ ಬಸ್ ಸಿಬ್ಬಂದಿ ಸಾಕ್ಷಿ ಆಗಿದ್ದಾರೆ ಎಂದು ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಬಿ.ಪಿ.ದಿನೇಶ್ ಕುಮಾರ್ ಹೇಳಿದರು.

ಮಂಗಳವಾರ ನಡೆದ ಬಸ್ ಸಿಬ್ಬಂದಿಗೆ ಸನ್ಮಾನ ಹಾಗೂ ಬಸ್ ಪಾಸ್‌ಗಳ ವಿತರಣಾ ಕಾರ್ಯಕ್ರಮದಲ್ಲಿ ಅವರು ಪಾಲ್ಗೊಂಡು ಮಾತನಾಡಿದರು. ಮಂಗಳೂರು ನಗರದಲ್ಲಿ ಅನೇಕ ಸಮಸ್ಯೆಗಳಿವೆ. ರಸ್ತೆ ಅಗೆಯುವುದು, ಅಲ್ಲಲ್ಲಿ ಹೊಂಡ ಗುಂಡಿಗಳು, ವಾಹನ ದಟ್ಟಣೆ ಇತ್ಯಾದಿ ಸಮಸ್ಯೆ ನಡುವೆಯೂ ಸಂಚಾರ ನಿಭಾಯಿಸಲು ಸಾರ್ವಜನಿಕರು ಸಹಕಾರ ನೀಡುತ್ತಿರುವುದು ಶ್ಲಾಘನೀಯ ಎಂದರು.

ಸಂಚಾರ ವಿಭಾಗದ ಎಸಿಪಿ ನಜ್ಮಾ ಫಾರೂಕ್ ಮಾತನಾಡಿ, ಮಂಗಳೂರಿನ ಖಾಸಗಿ ಬಸ್‌ನವರು ಡಿಜಿಟಲ್ ಇಂಡಿಯಾಕ್ಕೆ ಚಾಲನೆ ನೀಡುವ ಮೂಲಕ ರಾಜ್ಯದಲ್ಲೇ ಮೊದಲು ಪ್ರಯತ್ನ ಮಾಡಿದ್ದಾರೆ. ಜತೆಗೆ ಮಾಧ್ಯಮದವರ ಅಗತ್ಯತೆಗೆ ಬಸ್ ಮಾಲೀಕರು ನೆರವಾಗಿರುವುದು ಉತ್ತಮ ಕಾರ್ಯ ಎಂದರು.

ಸಮಾರಂಭದಲ್ಲಿ ಸಾಂಕೇತಿಕವಾಗಿ ಖಾಸಗಿ ಬಸ್ ಮಾಲೀಕರ ಸಂಘದ ವತಿಯಿಂದ ಪಾಸ್ ವಿತರಿಸಲಾಯಿತು. ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ. ಹರೀಶ್ ರೈ, ಪತ್ರಿಕಾ ಭವನ ಟ್ರಸ್ಟ್ ಅಧ್ಯಕ್ಷ ರಾಮಕೃಷ್ಣ ಇದ್ದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತ ಸಂಘದ ಅಧ್ಯಕ್ಷ ಶ್ರೀನಿವಾಸ್ ಇಂದಾಜೆ ಸ್ವಾಗತಿಸಿ, ಪ್ರಧಾನ ಕಾರ್ಯದರ್ಶಿ ಜಿತೇಂದ್ರ ಕುಂದೇಶ್ವರ ವಂದಿಸಿದರು. ಉಪಾಧ್ಯಕ್ಷ ಭಾಸ್ಕರ್ ರೈ ಕಟ್ಟ ನಿರೂಪಿಸಿದರು.

> **ಬಸ್ ಮಾಲೀಕರು ಸಾರಿಗೆ ಇಲಾಖೆಗೆ ಪ್ರತೀ ತಿಂಗಳು ಎರಡೂವರೆ ಕೋಟಿ ರು. ತೆರಿಗೆ ಪಾವತಿ ಮಾಡುತ್ತಿದ್ದು, ನಗರದಲ್ಲಿ ಎರಡನೇ ಅತ್ಯಧಿಕ ತೆರಿಗೆ ಪಾವತಿದಾರರಾಗಿದ್ದಾರೆ. ಬಸ್ ಸಿಬ್ಬಂದಿ ಮಾನವೀಯ ಕಾರ್ಯಗಳು ಸಮಾಜಕ್ಕೆ ಆದರ್ಶ ಎಂದರು.**
> **-ಶ್ರೀಧರ್ ಮಲ್ನಾಡ್,** ಆರ್‌ಟಿಒ

## ಕೃಷ್ಣ ನಾಯಕ್ ದೇವಸ್ಥಾನಕ್ಕೆ ಬಂದು ಪ್ರಮಾಣ ಮಾಡಲಿ: ಉದಯ ಶೆಟ್ಟಿ

**ಉಡುಪಿ:** ಪರಶುರಾಮ ಥೀಮ್ ಪಾರ್ಕ್‌ನಿಂದ ತೆಗೆದುಕೊಂಡು ಹೋದ ಸೊಂಟದ ಮೇಲ್ಭಾಗ ಕಂಚಿನದ್ದೇ, ಅದೇ ಮೂರ್ತಿಯನ್ನು ಕರಗಿಸಿ ಮತ್ತೆ ಮೂರ್ತಿ ಮಾಡುತ್ತಿದ್ದೇವೆ ಎಂದು ಶಿಲ್ಪಿ ಕೃಷ್ಣ ನಾಯಕ್ ಹೇಳುತ್ತಿದ್ದಾರೆ. ಅದೇ ಸತ್ಯವಾದರೆ ಅದನ್ನು ದೇವಸ್ಥಾನಕ್ಕೆ ಬಂದು ಪ್ರಮಾಣ ಮಾಡಿ ಹೇಳಲಿ. ಅದೇ ಕ್ಷಣ ಈ ವಿಷಯವನ್ನು ನಾವು ಬಿಟ್ಟು ಬಿಡುತ್ತೇವೆ ಎಂದು ಕಾರ್ಕಳ ಕಾಂಗ್ರೆಸ್ ಮುಖಂಡ ಉದಯ್ ಕುಮಾರ್ ಶೆಟ್ಟಿ ಹೇಳಿದರು.

ಕಾರ್ಕಳ ಕಾಂಗ್ರೆಸ್ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಕಳದ ಚರಿತ್ರೆಯಲ್ಲಿ ಈ ಪರಿಸ್ಥಿತಿ ಬರುತ್ತದೆ ಎಂದು ಅಂದುಕೊಂಡಿರಲಿಲ್ಲ. ಧರ್ಮ ಮತ್ತು ದೇವರ ಹೆಸರಿನಲ್ಲಿ ಕಾರ್ಕಳ ಮಾತ್ರವಲ್ಲದೆ ರಾಜ್ಯಕ್ಕೆ ಕಳಂಕ ತರುವ ಕೆಲಸವಾಗಿದೆ. ಈ ಬಗ್ಗೆ ಬಾಯಿ ಚಪಲಕ್ಕೆ ಮಾತನಾಡುವವರಿಗೆ ನಾವು ಉತ್ತರ ನೀಡುವುದು ಪ್ರಜಾಪ್ರಭುತ್ವದ ವ್ಯವಸ್ಥೆ. ನವೀನ್ ನಾಯಕ್ ಹಾಗೂ ಮಹಾವೀರ ಹೆಗ್ಡೆ ಸುನಿಲ್ ಕುಮಾರ್ ಹಿಂದೆ ಬಕೆಟ್ ಹಿಡಿದು ಸುತ್ತುವ ವ್ಯಕ್ತಿಗಳು ಎಂದರು.

**ರಾಜಿನಾಮೆ ನೀಡಲಿ - ಶುಭದ ರಾವ್:**
ಬೆಂಗಳೂರಿನಿಂದ ಪರಶುರಾಮನ ಮೂರ್ತಿಯ ಕಾಲು ಸೇರಿದಂತೆ ಸೊಂಟದ ಕೆಳಗಿನ ಎಲ್ಲಾ ಭಾಗಗಳನ್ನು ಪೊಲೀಸರು ವಶಕ್ಕೆ ಪಡೆದಿರುವುದರಿಂದ ಬೆಟ್ಟದ ಮೇಲೆ ಈಗ ಇರುವ ಭಾಗವೂ ನಕಲಿ ಎಂದು ಸಾಬೀತಾಗಿದೆ. ಈ ಮೂಲಕ ಕಾರ್ಕಳ ಶಾಸಕರು ಕಳೆದ ಒಂದೂವರೆ ವರ್ಷದಿಂದ ನಿರಂತರವಾಗಿ ಹೇಳಿದ್ದ ಸುಳ್ಳು ಜಗಜ್ಜಾಹೀರವಾಗಿದೆ. ಸುನಿಲ್ ಕುಮಾರ್ ಕ್ಷಮಾಪಣೆ ಕೇಳಿ ಪ್ರಾಯಶ್ಚಿತ್ತದ ಸಲುವಾಗಿ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದರು. ಮಾನ ಉಳಿಸಿಕೊಳ್ಳಲು ಮತ್ತು ಜನರ ದಿಕ್ಕು ತಪ್ಪಿಸುವ ಸಲುವಾಗಿ ನಿನ್ನೆ ಬಿಜೆಪಿ ಮುಖಂಡರು ಜಿಲ್ಲಾಧಿಕಾರಿಯವರಿಗೆ ಮನವಿ ನೀಡಿದ್ದಾರೆ ಎಂದು ಕಾರ್ಕಳ ಬ್ಲಾಕ್ ಕಾಂಗ್ರೆಸ್ ವಕ್ತಾರ ಶುಭದ ರಾವ್ ಹೇಳಿದರು.

ಕಾರ್ಕಳ ಕಾಂಗ್ರೆಸ್ ಮುಖಂಡ ಉದಯ್ ಕುಮಾರ್ ಶೆಟ್ಟಿ ಕಾಂಗ್ರೆಸ್ ಕಚೇರಿಯ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದರು

**ನವೀನ್ ನಾಯಕ್‌ಗೆ ಸವಾಲು:**
ಬಿಜೆಪಿ ಕ್ಷೇತ್ರಾಧ್ಯಕ್ಷರಾಗಿರುವ ನವೀನ್ ನಾಯಕ್ ಅವರಿಗೆ ಬಹಿರಂಗ ಸವಾಲು ಹಾಕಿರುವ ಶುಭದ ರಾವ್ ಕಂಚಿನ ಪ್ರತಿಮೆ ಎಂದು ಕ್ರೇನ್‌ನಲ್ಲಿ ಇಡುವ ವೀಡಿಯೋ ನೀಡಿದವರು ಬಿಜೆಪಿಯವರೇ. ತಾಕತ್ತಿದ್ದರೆ ಆ ವೀಡಿಯೋ ಯಾರು ಕೊಟ್ಟದ್ದು ಎಂದು ಪತ್ತೆ ಹಚ್ಚಿ ಕ್ರಮ ಕೈಗೊಳ್ಳಬೇಕು. ಯಾರು ದಾಖಲೆ ನೀಡಿದ್ದೆಂದು ಬಹಿರಂಗಪಡಿಸಬೇಕು. ಇಲ್ಲವಾದಲ್ಲಿ ಪಕ್ಷದ ಅಧ್ಯಕ್ಷರಾಗಲು ಅಸಮರ್ಥರು ಎನ್ನುವುದನ್ನು ಒಪ್ಪಿಕೊಳ್ಳಿ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ವಕ್ತಾರ ಬಿಪಿನ್ ಚಂದ್ರಪಾಲ್, ಕಾರ್ಕಳ ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ಅಜಿತ್ ಕುಮಾರ್ ಹೆಗ್ಡೆ, ಭೂ ನ್ಯಾಯ ಮಂಡಳಿ ಸದಸ್ಯ ತಾರಾನಾಥ ಕೋಟ್ಯಾನ್, ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ವಿವೇಕಾನಂದ ಶೆಣೈ, ಯುವ ಕಾಂಗ್ರೆಸ್ ನಾಯಕ ದಿನೇಶ್ ಶೆಟ್ಟಿ, ಸುಧಾಕರ ಶೆಟ್ಟಿ ಮುಡಾರು ಮೊದಲಾದವರು ಉಪಸ್ಥಿತರಿದ್ದರು.

## ವೆನ್ಜ್ ಮಾಡೆಲಿಂಗ್ ಅಕಾಡೆಮಿ ಉದ್ಘಾಟನೆ

**ಮಂಗಳೂರು:** ಒಂದು ಮಹತ್ವದ ಸಮಾರಂಭದಲ್ಲಿ ಮಂಗಳೂರಿನ ಮೊಟ್ಟ ಮೊದಲ ಮಾಡೆಲಿಂಗ್ ಅಕಾಡೆಮಿ ವೆನ್ಜ್ ಮಾಡೆಲಿಂಗ್ ಅಕಾಡೆಮಿಯ ಉದ್ಘಾಟನೆ ನಗರದ ಬಳ್ಳಾಲ್ ಬಾಗ್‌ನಲ್ಲಿ ಅದ್ದೂರಿಯಾಗಿ ನಡೆಯಿತು. ಖ್ಯಾತ ನಟಿ ಮತ್ತು ರೂಪದರ್ಶಿ ವೆನ್ಸಿಟಾ ಡಯಾಸ್ ಸ್ಥಾಪಿಸಿರುವ

ನಗರದ ಫ್ಯಾಷನ್ ಮತ್ತು ಮಾಡೆಲಿಂಗ್ ಉದ್ಯಮಕ್ಕೆ ಮಹತ್ವದ ಮೈಲಿಗಲ್ಲು ಇದಾಗಿದ್ದು, ಸಮಾರಂಭದಲ್ಲಿ ಗೌರವಾನ್ವಿತ ಮುಖ್ಯ ಅತಿಥಿಗಳಾದ ಸೈಂಟ್ ಅಲೋಶಿಯಸ್ ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕರಾದ ಮನೋಜ್ ಫೆರ್ನಾಂಡಿಸ್ ಮತ್ತು ಖ್ಯಾತ ವಾಗ್ಮಿ ಮತ್ತು ರಾವ್ ಅಸೋಸಿಯೇಟ್ಸ್‌ನ ಹಿಂದಿನ ಶಕ್ತಿ ಮತ್ತು ಉದ್ಯಮಿ ಸುಮಿತಾ ರಾವ್ ಉಪಸ್ಥಿತರಿದ್ದರು.

ಹೊಸ ಪಯಣಕ್ಕೆ ನಾಂದಿ ಹಾಡುವ ಮೂಲಕ ಸಾಂಪ್ರದಾಯಿಕವಾಗಿ ದೀಪ ಬೆಳಗಿಸುವ ಮೂಲಕ ಉದ್ಘಾಟನೆ ನಡೆಯಿತು. ಸಮಾರಂಭದ ದೀಪಾಲಂಕಾರದ ನಂತರ, ಮನೋಜ್ ಫೆರ್ನಾಂಡಿಸ್ ಅವರು ಮಾತನಾಡಿ, ಸ್ಥಳೀಯ ಪ್ರತಿಭೆಗಳನ್ನು ಪೋಷಿಸುವಲ್ಲಿ ಮತ್ತು ಅವರಿಗೆ ಮಾಡೆಲಿಂಗ್ ಉದ್ಯಮದಲ್ಲಿ ಉತ್ತಮ ಸಾಧನೆ ಮಾಡಲು ಅಗತ್ಯವಾದ ಕೌಶಲಗಳನ್ನು ಒದಗಿಸುವಲ್ಲಿ ಇಂತಹ ಅಕಾಡೆಮಿಯ ಮಹತ್ವದ ಕುರಿತು ಅಭಿಪ್ರಾಯವನ್ನು ಹಂಚಿಕೊಂಡರು.

## ಹೋಂ ಸ್ಟೇ ದಾಳಿ: ಆರೋಪಿಗಳು ಖುಲಾಸೆ

**ಮಂಗಳೂರು:** ನಾಡಿನಲ್ಲಿ ಭಾರಿ ಸಂಚಲನ ಸೃಷ್ಟಿಸಿದ್ದ ಮಂಗಳೂರು ಹೋಂ ಸ್ಟೇ ದಾಳಿ ಪ್ರಕರಣದ ಎಲ್ಲ ಆರೋಪಿಗಳು ಖುಲಾಸೆಗೊಂಡಿದ್ದಾರೆ. ಮಂಗಳೂರಿನ ಆರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಪ್ರಕರಣ ನಡೆದು 12 ವರ್ಷಗಳ ಬಳಿಕ ಈ ಮಹತ್ವದ ತೀರ್ಪು ನೀಡಿದೆ. ಪ್ರಕರಣದ ಬಗ್ಗೆ ಸಾಕ್ಷ್ಯಾಧಾರಗಳ ಕೊರತೆಯಿಂದ ಆರೋಪಿಗಳು ದೋಷ ಮುಕ್ತರಾಗಿದ್ದಾರೆ ಎಂದು. ಮಂಗಳೂರಿನ ಆರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಕಾಂತರಾಜು ತೀರ್ಪು ನೀಡಿದ್ದಾರೆ. 2012ರ ಜುಲೈ 28ರಂದು ಮಂಗಳೂರಿನ ಪಡೀಲ್ ಬಳಿಯ ಮಾರ್ನಿಂಗ್ ಮಿಸ್ಟ್ ಹೋಂಸ್ಟೇ ಮೇಲೆ ದಾಳಿ ನಡೆದಿತ್ತು. ಹಿಂದೂ ಜಾಗರಣಾ ವೇದಿಕೆ ಕಾರ್ಯಕರ್ತರು ಈ ದಾಳಿ ನಡೆಸಿದ್ದರು ಎಂದು ಅಪಾದಿಸಲಾಗಿತ್ತು. ಬರ್ತ್‌ಡೇ ಪಾರ್ಟಿಯಲ್ಲಿ ನಿರತರಾಗಿದ್ದ ಯುವಕ-ಯುವತಿಯರ ಮೇಲೂ ತಂಡ ದಾಳಿ ಮಾಡಿತ್ತು ಎಂದು ಮಂಗಳೂರು ಗ್ರಾಮಾಂತರ ಪೊಲೀಸರು 44 ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿತ್ತು. ಒಟ್ಟು 44 ಆರೋಪಿಗಳ ಪೈಕಿ ಮೂವರು ಸಾವನ್ನಪ್ಪಿದ್ದರು. ಪ್ರಕರಣದಲ್ಲಿ ಆರೋಪಿ ಸ್ಥಾನದಲ್ಲಿ ಸೇರ್ಪಡೆಗೊಂಡಿದ್ದ ಪತ್ರಕರ್ತ ನವೀನ್ ಸೂರಿಂಜೆ ನ್ಯಾಯಾಲಯ ಪ್ರಕರಣದಿಂದ ಕೈಬಿಟ್ಟಿತ್ತು. ಮಂಗಳವಾರ ಉಳಿದ 40 ಆರೋಪಿಗಳನ್ನು ದೋಷ ಮುಕ್ತಗೊಳಿಸಿ ಕೋರ್ಟ್ ತೀರ್ಪು ನೀಡಿದೆ. ವಕೀಲರಾದ ಶಂಭುಶರ್ಮಾ, ಕಿಶೋರ್ ಕುಮಾರ್ ಅವರ ತಂಡ ಆರೋಪಿಗಳ ಪರವಾದ ಮಂಡಿಸಿತ್ತು.

## ವಕೀಲರ ಸಂಘದಿಂದ ಬೀಳ್ಕೊಡುಗೆ

**ಚಿಕ್ಕಮಗಳೂರು:** ಜಿಲ್ಲಾ ನ್ಯಾಯಾಲಯದಲ್ಲಿ ಸಿವಿಲ್ ನ್ಯಾಯಾಧೀಶರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಆರ್. ಮಂಜುನಾಥ್ ಅವರು ಕೊಪ್ಪಳ ಜಿಲ್ಲೆಯ ಕುಷ್ಠಗಿ ತಾಲ್ಲೂಕಿನ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾಗಿ ಮುಂಬಡ್ತಿ ಹೊಂದಿದ ಹಿನ್ನೆಲೆ ಮಂಗಳವಾರ ಚಿಕ್ಕಮಗಳೂರು ವಕೀಲರ ಸಂಘದಿಂದ ಆತ್ಮೀಯವಾಗಿ ಬೀಳ್ಕೊಡಲಾಯಿತು. ವಕೀಲರ ಸಂಘದ ಅಧ್ಯಕ್ಷ ಡಿ.ಬಿ.ಸುಜೇಂದ್ರ ಮಾತನಾಡಿ, ನಾಗರೀಕ ಸೇವೆಯಲ್ಲಿ ವರ್ಗಾವಣೆ ಎಂಬುದು ಅನಿವಾರ್ಯ. ಇರುವಷ್ಟು ದಿವಸಗಳಲ್ಲಿ ಉತ್ತಮ ಸೇವೆ ಹಾಗೂ ವಕೀಲರ ನಡುವಿನ ಪರಸ್ಪರ ವಿಶ್ವಾಸವೇ ಮರೆಯಲಾಗದ ನೆನಪುಗಳು ಎಂದು ತಿಳಿಸಿದರು. ಜಿಲ್ಲಾ ಸತ್ರ ಮತ್ತು ಪ್ರದಾನ ಸಿವಿಲ್ ನ್ಯಾಯಾಧೀಶೆ ಶುಭಗೌಂಡರ್ ಮಾತನಾಡಿ, ಕೆಲವೇ ದಿನಗಳಲ್ಲಿ ಜಿಲ್ಲಾ ನ್ಯಾಯಾಲಯದಲ್ಲಿ ಕಾರ್ಯನಿರ್ವಹಿಸಿ ಬಡ್ತಿ ಹೊಂದಿರುವುದು ಹೆಮ್ಮೆಯ ವಿಷಯ. ಇಲ್ಲಿಂದ ತೆರಳುವ ನ್ಯಾಯಾಧೀಶರು ಅಲ್ಲಿಯೂ ಉತ್ತಮ ಕರ್ತವ್ಯ ನಿರ್ವಹಿಸಿ ಹೆಸರು ಸಂಪಾದಿಸಲಿ ಎಂದು ಶುಭ ಕೋರಿದರು. ಈ ಸಂದರ್ಭದಲ್ಲಿ ವಕೀಲರ ಸಂಘದ ಉಪಾಧ್ಯಕ್ಷ ಕೆ.ಎಸ್.ಶರತ್‌ಚಂದ್ರ, ಕಾರ್ಯದರ್ಶಿ ಆರ್. ಅನಿಲ್‌ಕುಮಾರ್, ಖಜಾಂಚಿ ಡಿ.ಬಿ.ದೀಪಕ್, ಸಹಕಾರ್ಯದರ್ಶಿ ಎನ್.ಎ.ಪ್ರಿಯದರ್ಶಿನಿ, ಸಮಿತಿ ಸದಸ್ಯ ಪಿ.ಪರಮೇಶ್ ,ಎಸ್.ಹೆಚ್.ಮಹೇಶ್‌ಕುಮಾರ್,ಡಿ.ಸಿ.ಪುಟ್ಟೇಗೌಡ, ಕೌಟುಂಬಿಕ, ಪೋಕ್ಸೋ, ಹಿರಿಯ ನ್ಯಾಯಾಧೀಶರು ಉಪಸ್ಥಿತರಿದ್ದರು.

## ಹೆರಿಗೆ ಆಸ್ಪತ್ರೆಯಲ್ಲಿ ವಿಶ್ವ ಸ್ತನ್ಯ ಪಾನ ಸಪ್ತಾಹ

**ಚಿಕ್ಕಮಗಳೂರು:** ವಿಶ್ವ ಸ್ತನ್ಯಪಾನ ಸಪ್ತಾಹ ದಿನದ ಅಂಗವಾಗಿ ನಗರದ ಸರಕಾರಿ ಹೆರಿಗೆ ಆಸ್ಪತ್ರೆಯಲ್ಲಿ ರೋಟರಿ ಕ್ಲಬ್ ವತಿಯಿಂದ 2 ರಿಂದ 6 ವರ್ಷದ ವರೆಗಿನ ಮಕ್ಕಳಿಗೆ ಸ್ವಾಟರ್‌ಗಳು, ರಸ್ಕ್, ಬ್ರೆಡ್ ಹಾಗೂ ಹಣ್ಣುಗಳನ್ನು ಮಂಗಳವಾರ ವಿತರಿಸಲಾಯಿತು. ಜಿಲ್ಲಾ ಸರ್ಜನ್ ಡಾ. ಮೋಹನ್ ಕುಮಾರ್ ಮಾತನಾಡಿ, ಸ್ತನ್ಯಪಾನ ಮಹತ್ವದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಶ್ರಮಿಸುತ್ತೇವೆ ಎಂದು ಹೇಳಿದರು. ರೋಟರಿ ಕ್ಲಬ್ ಅಧ್ಯಕ್ಷ ಸುಜಿತ್ ಮಾತನಾಡಿ, ಗರ್ಭಿಣಿ ಬಾಣಂತಿಯರಿಗೆ ಪೌಷ್ಟಿಕ ಆಹಾರ ವಿತರಿಸುತ್ತಿರುವುದು ತುಂಬಾ ಸಂತೋಷವಾಗಿದೆ ಈ ಕಾರ್ಯಕ್ರಮಕ್ಕೆ ಅನುವು ಮಾಡಿಕೊಟ್ಟ ಜಿಲ್ಲಾ ಆಸ್ಪತ್ರೆಗೆ ಕ್ಲಬ್‌ನಿಂದ ಧನ್ಯವಾದ ತಿಳಿಸಿದರು. ದಾನಿ, ರೋಟರಿ ಕ್ಲಬ್ ಸದಸ್ಯ ರಮೇಶ್ ಮಾತನಾಡಿ, ದಾನ ಮಾಡುವುದರಿಂದ ಸಂಪೂರ್ಣವಾಗಿ ಅಲ್ಲದಿದ್ದರೂ ತಕ್ಕಮಟ್ಟಿಗಾದರೂ ಕಷ್ಟದಲ್ಲಿರುವ ಜನರಿಗೆ ನೆರವಾಗಬಹುದು. ಇದೊಂದು ಅತ್ಯುತ್ತಮವಾದ ಸೇವೆ ಇದಕ್ಕೆ ಅವಕಾಶ ಮಾಡಿಕೊಟ್ಟ ಪ್ರತಿಯೊಬ್ಬರಿಗೆ ಕೃತಜ್ಞತೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಕ್ಲಬ್ ನ ಕಾರ್ಯದರ್ಶಿ ಎನ್ .ಪಿ.ಲಿಖಿತ್, ಸದಸ್ಯರಾದ ಕೆ.ಎಸ್.ರಮೇಶ್, ಕಾಂತಿ ಲಾಲ್ ಜೈನ್, ಎ.ಸಿ.ಸಂತೋಷ್, ಕೆ.ಎಲ್.ಗಿರೀಶ್, ಟಿ.ಡಿ.ತಿಮ್ಮಯ್ಯ, ಮನೋಜ್, ಸಮೃದ್ಧ ಪೈ, ಡಾ. ಕಲ್ಪ ನಾ, ಡಾ.ಪಾಂಡುರಂಗಯ್ಯ, ಡಾ.ರವೀಂದ್ರ ಶ್ರೀನಿವಾಸ, ವಿದ್ಯಾ, ಜ್ಯೋತಿ ಹಾಗೂ ಸಿಬ್ಬಂದಿ ಹಾಜರಿದ್ದರು.

## ಶ್ರೀ ಲಕ್ಷ್ಮೀಗೆ ನವರತ್ನದ ಕಂಠಮಾಲ ಸಮರ್ಪಣೆ

**ಉಡುಪಿ:** ಸಗ್ರಿಯ ದಿವಂಗತ ಗೋವಿಂದ ನಾಯಕ್ ಕುಟುಂಬಸ್ಥರು 124ನೇ ಭಜನಾ ಸಪ್ತಾಹದ ಅಂಗವಾಗಿ ಉಡುಪಿಯ ಶ್ರೀಲಕ್ಷ್ಮೀ ವೆಂಕಟೇಶ ದೇವರಿಗೆ ಚಿನ್ನದ ನವರತ್ನದ ಕಂಠಮಾಲೆ, ಶ್ರೀಲಕ್ಷ್ಮೀ ದೇವರಿಗೆ ಬೆಳ್ಳಿಯ ತೂಗುದೀಪ ಹಾಗೂ ಶ್ರೀಗಣಪತಿ ದೇವರಿಗೆ ವಜ್ರದ ನಾಮ ಬೆಳ್ಳಿಯ ತೂಗುದೀಪವನ್ನು ಗುರುವಾರ ಸಮರ್ಪಿಸಿದರು. ದಿ. ಗೋವಿಂದ ನಾಯಕ ಅವರು ಹಲವು ವರ್ಷದಿಂದ ವಿಜಯವಾಣಿ ಹಾಗೂ ಇತರೆ ಪತ್ರಿಕೆಯ ವಿತರಕರಾಗಿ ಪೇಪರ್ ಗೋವಿಂದ ಮಾಮ ಎಂದೇ ಪ್ರಸಿದ್ಧರಾಗಿದ್ದರು. ಅವರು ಭಜನಾ ಸಪ್ತಾಹದಲ್ಲಿ ಹಾಗೂ ಊರ, ಪರ ಊರಿನಲ್ಲಿ ಭಜನೆ ಮಾಡಿ ಭಜನೆ ಗೋವಿಂದ ಮಾಮ ಎಂದು ಎಲ್ಲರಿಗೂ ಚಿರಪರಿಚಿತರಾಗಿದ್ದರು. ಈಗ ಅವರ ಕುಟುಂಬದ ಸದಸ್ಯರು ಉಡುಪಿ ರಥಬೀದಿಯಲ್ಲಿ ಎಸ್.ಎನ್.ನ್ಯೂಸ್ ಏಜೆನ್ಸಿ ಅಡಿಯಲ್ಲಿ ಪತ್ರಿಕಾ ವಿತರಕರಾಗಿ ಸಂಸ್ಥೆ ನಡೆಸಿಕೊಂಡು ಹೋಗುತ್ತಿದ್ದಾರೆ. ಸಗ್ರಿ, ನಾಯಕ್ ಕುಟುಂಬದ ಸದಸ್ಯರಾದ ಸಗ್ರಿ, ಗೋಕುಲ್ ದಾಸ್ ನಾಯಕ್, ಸಗ್ರಿ, ನರಸಿಂಹ ನಾಯಕ್ ಹಾಗೂ ಈ ಚಿನ್ನ-ಬೆಳ್ಳಿಯ ಆಭರಣದ ಕೆಲಸ ಉಸ್ತುವಾರಿ ಐ.ದಿನೇಶ್ ನಾಯಕ್ ಕನ್ನರ್ಪಾಡಿ ಹಾಗೂ ದೇವಸ್ಥಾನದ ಆಡಳಿತ ಮುಖ್ಯಸ್ಥರಾದ ಪಿ.ವಿ.ಶೆಣೈಯವರು ಸಮರ್ಪಣೆಯ ಸಂದರ್ಭದಲ್ಲಿ ಉಪಸ್ಥಿತರಿದ್ದರು.ಸಪ್ತಾಹದ ಮೊದಲ ದಿನಶ್ರೀದೇವರಿಗೆ ಈ ಆಭರಣದ ಅಲಂಕಾರ ನಡೆಯಲಿದೆ.

## ಸಮಾಚಾರ ಸಣ್ಣದಲ್ಲ

### ಪಿಂಚಣಿ ಅದಾಲತ್ ಆ.13 ರಂದು

**ಬಳ್ಳಾರಿ:** ಕಾರ್ಮಿಕರ ಭವಿಷ್ಯ ನಿಧಿ ಸಂಸ್ಥೆಯ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಪಿಂಚಣಿದಾರರ ಕುಂದು ಕೊರತೆ ಆಲಿಸಿ, ಪರಿಹರಿಸಲು ಆ.13 ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ನಗರದ ಪ್ರಾದೇಶಿಕ ಕಚೇರಿಯಲ್ಲಿ ಪಿಂಚಣಿ ಅದಾಲತ್ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಪ್ರಾದೇಶಿಕ ಕಚೇರಿಯ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತ ಕೆ.ವೆಂಕಟ ಸುಬ್ಬಯ್ಯ ಅವರು ತಿಳಿಸಿದ್ದಾರೆ. ಬಳ್ಳಾರಿ, ವಿಜಯನಗರ, ಕೊಪ್ಪಳ, ಚಿತ್ರದುರ್ಗ ಜಿಲ್ಲೆಗಳ ಪಿಂಚಣಿದಾರರು ತಮ್ಮ ಕುಂದುಕೊರತೆಗಳಿದ್ದಲ್ಲಿ ಬಳ್ಳಾರಿ ಪ್ರಾದೇಶಿಕ ಕಚೇರಿಯ ಸಾರ್ವಜನಿಕ ಸಂಪರ್ಕ ಅಧಿಕಾರಿಗೆ ಪತ್ರ ಅಥವಾ ಇ-ಮೇಲ್ ಮೂಲಕ ಪಿ.ಪಿ.ಒ ಸಂಖ್ಯೆ, ವಿಳಾಸ, ದೂರವಾಣಿ, ಮೊಬೈಲ್ ಸಂಖ್ಯೆ ಮತ್ತು ಕುಂದು ಕೊರತೆಯ ಸ್ವರೂಪವ ಹಾಗೂ ಇತ್ಯಾದಿಗಳನ್ನು ಆ.12 ರೊಳಗಾಗಿ ತಿಳಿಸಬಹುದು. ಪತ್ರ ಲಕೋಟೆ ಮೇಲೆ ಪಿಂಚಣಿ ಅದಾಲತ್ ಎಂದು ಬರೆಯಬೇಕು. ಹೆಚ್ಚಿನ ಮಾಹಿತಿಗಾಗಿ ದೂ.08392-268943 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಆರೋಗ್ಯ ಇಲಾಖೆ: ಹುದ್ದೆಗಳಿಗೆ ಆಹ್ವಾನ

**ಹೊಸಪೇಟೆ:** ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದಿಂದ ಜುಲೈ 20ರಂದು ರಾಷ್ಟ್ರೀಯ ಆರೋಗ್ಯ ಅಭಿಯಾನದ ಯೋಜನೆ ಅಡಿಯಲ್ಲಿ ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿತ್ತು. ಲೆಕ್ಕಪತ್ರ ವ್ಯವಸ್ಥಾಪಕರು (ಎಫ್.ಎಂ.ಜಿ), ಪಿ.ಎಚ್.ಸಿ.ಒ (ಎ.ಎನ್.ಎಂ) ಹುದ್ದೆಗಳ ನೇಮಕಾತಿಯ ತಾತ್ಕಾಲಿಕ ಆಯ್ಕೆ ಪಟ್ಟಿ, ಕಾಯ್ದಿರಿಸಿದ ಆಯ್ಕೆಪಟ್ಟಿ ಹಾಗೂ ತಿರಸ್ಕೃತ ಪಟ್ಟಿಗಳನ್ನು ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ಯಾವುದಾದರು ಆಕ್ಷೇಪಣೆಗಳಿದ್ದಲ್ಲಿ ಆಗಸ್ಟ್ 13 ಸಂಜೆ 5.30ರೊಳಗಾಗಿ ಲಿಖಿತ ರೂಪದಲ್ಲಿ ಅರ್ಜಿ ಸಲ್ಲಿಸಬಹುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಸಂಘದ ಉಪಾಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಲೋಕಾಯುಕ್ತ ಜನ ಸಂಪರ್ಕ ಸಭೆ ಇಂದು

**ಹೊಸಪೇಟೆ:** ಕರ್ನಾಟಕ ಲೋಕಾಯುಕ್ತ ಹೊಸಪೇಟೆ ಘಟಕದಿಂದ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ಹಾಗೂ ಪೊಲೀಸ್ ನಿರೀಕ್ಷಕರ ನೇತೃತ್ವದಲ್ಲಿ ಇಂದು ಜಿಲ್ಲೆಯ ವಿವಿಧೆಡೆ ಲೋಕಾಯುಕ್ತ ಜನ ಸಂಪರ್ಕ ಸಭೆಗಳು ನಡೆಯಲಿವೆ. ಆಗಸ್ಟ್ 7 ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಕೊಟ್ಟೂರು ತಾಲೂಕು ಕಚೇರಿ ಸಭಾಂಗಣದಲ್ಲಿ ಆ.13ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಕೂಡ್ಲಿಗಿ ತಾಲೂಕು ಕಚೇರಿ ಸಭಾಂಗಣದಲ್ಲಿ, ಆ. 21ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಹರಪನಹಳ್ಳಿ ತಾಲೂಕು ಕಚೇರಿ ಸಭಾಂಗಣದಲ್ಲಿ ಸಭೆಗಳು ನಡೆಯಲಿದ್ದು, ಸಾರ್ವಜನಿಕರು ತಮ್ಮ ಕುಂದುಕೊರತೆಗಳು, ಅಹವಾಲುಗಳು ಹಾಗೂ ತಮ್ಮ ಸರಕಾರಿ ಕೆಲಸಗಳಿಗೆ ಸಂಬಂಧಿಸಿತೆ ಸರಕಾರಿ ಕಚೇರಿಗಳಲ್ಲಿ ಅನಗತ್ಯ ವಿಳಂಬತೆ, ಕಿರುಕುಳ, ತೊಂದರೆ ಮತ್ತು ಅಧಿಕಾರಿ ಸಿಬ್ಬಂದಿಯ ದುರಾಡಳಿತಕ್ಕೆ ಸಂಬಂಧಿಸಿದ ದೂರುಗಳನ್ನು ಸಂಬಂಧಿಸಿದ ತಾಲೂಕುಗಳಲ್ಲಿ ಆಯಾ ದಿನಾಂಕದಂದು ದ್ವಿಪ್ರತಿಯಲ್ಲಿ ದೂರ ಅರ್ಜಿಯನ್ನು ಸಲ್ಲಿಸಬಹುದಾಗಿದೆ ಎಂದು ಕರ್ನಾಟಕ ಲೋಕಾಯುಕ್ತ ಹೊಸಪೇಟೆ ಘಟಕದ ಪೊಲೀಸ್ ಉಪಾಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಹಲವೆಡೆ ವಿದ್ಯುತ್ ವ್ಯತ್ಯಯ ಇಂದು

**ಬಳ್ಳಾರಿ:** ನಗರ ಜೆಸ್ಕಾಂ ಉಪವಿಭಾಗ-1 ರ ವ್ಯಾಪ್ತಿಗೆ ಬರುವ 220/11ಕೆವಿ ಅಲ್ಲೀಪುರ ವಿದ್ಯುತ್ ವಿತರಣ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಎಫ್-72 ಫೀಡರ್‌ನ ತುರ್ತು ನಿರ್ವಹಣಾ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವುದರಿಂದ ಆ.7 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ನಗರದ ಕಂಟೋನ್‌ಮೆಂಟ್, ಸೂರ್ಯ ಕಾಲೋನಿ, ತಿಲಕ್ ನಗರ, ಸುಧಾ ಕ್ರಾಸ್, ನಂದಿ ಕಾಲೋನಿ, ಹೆಚ್‌ಆರ್‌ಜಿ ಕಾಲೋನಿ, ಜಯನಗರ, ರಹಿಮಾಬಾದ್ ಕಾಲೋನಿ, ನಲಂದ ಕಾಲೇಜ್, ವಿಜಯನಗರ ಕಾಲೋನಿ, ಕೆಹೆಚ್‌ಬಿ ಕಾಲೋನಿ, ಜಗನ್ನಾಥ ಮಂದಿರ, ಭಾಸ್ಕರ ನಾಯ್ಡು, ಸೆಂಟ್ ಜೋಸೆಫ್ ಶಾಲೆ ಸೇರಿದಂತೆ ಇನ್ನೂ ಮುಂತಾದ ಏರಿಯಾಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ-1 ರ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಇ.ಟಿ.ಲಕ್ಷ್ಮೀ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆನಂದದ ಆಲ್ಬಂ
ವಿವಾಹ್
ಪ್ರತಿ ಬುಧವಾರ

{ಪ್ರಿಯಾಂಕ್ ಖರ್ಗೆ} ಜಿಲ್ಲಾ ಉಸ್ತುವಾರಿ ಸಚಿವ
ನಿರಂತರ ಮಳೆಯಿಂದ ಅಪಾಯವಿರುವ ಮನೆ ಗೋಡೆ, ಶಾಲೆ ಹಾಗೂ ಇತರೆ ಕಟ್ಟಡಗಳ ಕುಸಿದು ಸಾವು ನೋವುಗಳು ಸಂಭವಿಸುವ ಸಾಧ್ಯತೆ ಇದೆ. ಈ ನಿಟ್ಟಿನಲ್ಲಿ ಜಿಲ್ಲೆಯ ಸಾರ್ವಜನಿಕರು ಹುಷಾರಾಗಿರಬೇಕು ಮತ್ತು ಸುರಕ್ಷಿತ ಸ್ಥಳದಲ್ಲಿ ವಾಸ ಮಾಡಬೇಕು.

ಕಾನೂನು ಅರಿವು ನೆರವು ಕಾರ್ಯಕ್ರಮ | ಬಾಲ್ಯ ವಿವಾಹದ ಬಗ್ಗೆ ಜಾಗೃತಿ ಮೂಡಿಸಬೇಕು: ನ್ಯಾ ಹೇಮಲತಾ ಹುಲ್ಲೂರು

# ಮಕ್ಕಳಿಗೆ ಕಾನೂನಿನ ಬಗ್ಗೆ ಅರಿವಿರಲಿ

**ಹೊಸಪೇಟೆ:** ಮಕ್ಕಳಿಗೆ ಕಾನೂನಿನ ಬಗ್ಗೆ ಅರಿವಿದ್ದಲ್ಲಿ ಮುಂಬರುವ ದಿನಗಳಲ್ಲಿ ಅವರು ಉತ್ತಮ ಸಮಾಜ ರೂಪಿಸುವಲ್ಲಿ ಮುಖ್ಯ ಪಾತ್ರ ವಹಿಸುತ್ತಾರೆ ಎಂದು ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷ ಹೇಮಲತಾ ಬಿ. ಹುಲ್ಲೂರ ಹೇಳಿದರು.

> ಹೆಣ್ಣು ಮಕ್ಕಳು ಲೈಂಗಿಕ ದೌರ್ಜನ್ಯಕ್ಕೆ ಒಳಗಾದರೆ ತಂದೆ, ತಾಯಿ, ಪೋಷಕರಿಗೆ ಅಥವಾ ಶಿಕ್ಷಕರಿಗೆ ತಿಳಿಸಬೇಕು. ಬಾಲ್ಯ ವಿವಾಹದ ಬಗ್ಗೆ ಮಕ್ಕಳಿಗೆ ತಿಳಿದು ಬಂದರೆ ಅದನ್ನು ತಿಳಿಸುವ ಕೆಲಸ ಆಗಬೇಕು. ಬೇರೆಯವರಿಂದ ತೊಂದರೆಯಾದರೆ ಕಾನೂನಿನ ಸಹಾಯ ಪಡೆದುಕೊಳ್ಳಬೇಕು. ಯಾವುದೇ ಕಾರಣಕ್ಕೂ ಕಾನೂನನ್ನು ಕೈಗೆತ್ತಿಕೊಳ್ಳಬಾರದು.
> -ಹೇಮಲತಾ ಬಿ. ಹುಲ್ಲೂರ, ಸಿವಿಲ್ ನ್ಯಾಯಾಧೀಶರು

ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹೊಸಪೇಟೆ, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದಲ್ಲಿ ಶ್ರೀಗುರು ಪದವಿಪೂರ್ವ ಕಾಲೇಜಿನಲ್ಲಿ ಬಾಲ್ಯ ವಿವಾಹ ನಿಷೇಧ ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳನ್ನು ರಕ್ಷಿಸುವ ಕಾಯ್ದೆ-2012ರ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪದವಿಪೂರ್ವ ಕಾಲೇಜಿನಲ್ಲಿ ಬಾಲ್ಯ ವಿವಾಹ ನಿಷೇಧ ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳನ್ನು ರಕ್ಷಿಸುವ ಕಾಯ್ದೆ-2012ರ ಕಾನೂನು ಅರಿವು ಕಾರ್ಯಕ್ರಮದಲ್ಲಿ ಹೇಮಲತಾ ಬಿ. ಹುಲ್ಲೂರ ಮಾತನಾಡಿದರು.

ವಿದ್ಯಾರ್ಥಿಗಳು ಕಾನೂನಿನ ಬಗ್ಗೆ ಅಧ್ಯಯನ ನಡೆಸಿ ಅರಿವು ಮೂಡಿಸಿಕೊಂಡು ಸಾರ್ವಜನಿಕರಿಗು ಸಹ ಕಾನೂನಿನ ಬಗ್ಗೆ ತಿಳಿ ಹೇಳಬೇಕು. ಗ್ರಾಮೀಣ ಭಾಗದಲ್ಲಿ ಅಕ್ಷರಸ್ಥರು ಕಡಿಮೆ ಇರುವುದರಿಂದ ಬಾಲ್ಯ ವಿವಾಹದ ಪ್ರಕರಣಗಳು ಹೆಚ್ಚಾಗಿ ಕಂಡುಬರುತ್ತವೆ. ಹಾಗಾಗಿ ವಿದ್ಯಾರ್ಥಿಗಳು ಈ ಕಾಯ್ದೆಯ ಬಗ್ಗೆ ಅರಿತು ಸುತ್ತಲಿನ ಜನರಿಗೆ ಜಾಗೃತಿ ಮೂಡಿಸಬೇಕು ಎಂದರು.

ಅಧ್ಯಕ್ಷತೆವಹಿಸಿದ್ದ ಶ್ರೀಗುರು ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಮಂಜುನಾಥ ಆರ್ ಮಾತನಾಡಿ, ಇಂದಿನ ದಿನಗಳಲ್ಲಿ ಶಾಲಾ-ಕಾಲೇಜುಗಳಲ್ಲಿ ದಾಖಲಾಗುವರ ಪೈಕಿ ಶೇ. 50 ರಷ್ಟು ಹೆಣ್ಣು ಮಕ್ಕಳಿರುವುದು ಖುಷಿಯ ಸಂಗತಿ ಎಂದರು. ಮಕ್ಕಳು ಅಪರಿಚಿತರೊಂದಿಗೆ ಸಲಿಗೆಯಿಂದಿರಬಾರದು. ನಿಮ್ಮೊಂದಿಗೆ ಯಾರಾದರು ಅಸಭ್ಯವಾಗಿ ವರ್ತಿಸಿದರೆ ಮೊದಲು ಪೋಷಕರಿಗೆ ತಿಳಿಸಬೇಕು. ಮಕ್ಕಳು ಕಾನೂನಿನ ಬಗ್ಗೆ ತಿಳಿಯಲು ಇನ್ನಷ್ಟು ಪ್ರಯತ್ನ ಪಡಬೇಕು ಎಂದು ಹೇಳಿದರು.

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿ ಪ್ರಶಾಂತ್ ನಾಗಲಾಪುರ್, ನ್ಯಾಯಾಧೀಶರಾದ ಅಶೋಕ ಆರ್. ಎಚ್., ಸಂಜೀವ್ ಕುಮಾರ ಜಿ., ವಕೀಲ ಸಂಘದ ಪ್ರಧಾನ ಕಾರ್ಯದರ್ಶಿ ಪಿ. ಶ್ರೀನಿವಾಸಮೂರ್ತಿ, ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ನಾಗರಾಜ್ ಹವಲ್ದಾರ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಸಿಂಧು ಅಂಗಡಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಯೋಜನಾಧಿಕಾರಿ ಸುಭದ್ರಾ ದೇವಿ, ಡಿಸಿಪಿಐನ ಕಾನೂನು ಪರಿವೀಕ್ಷಣಾಧಿಕಾರಿ ಶ್ರೀಕಾಂತ್, ಸಬ್ ಇನ್ಸ್‌ಪೆಕ್ಟರ್ ಜಯಲಕ್ಷ್ಮೀ, ನಿವೃತ್ತ ಪ್ರಾಚಾರ್ಯ ಡಾ.ಕಡ್ಲೆಬಾಳು ಪನ್ನಂಗಧರ ಇತರರಿದ್ದರು.

### ನ್ಯಾಯಾಂಗ ಸಮಾಜದ ರಕ್ಷಾ ಕವಚ

ಪ್ರತಿಯೊಬ್ಬ ನಾಗರಿಕರಿಗೂ ಕಾನೂನಿನ ಬಗ್ಗೆ ಅರಿವು ಮೂಡಿಸಲು ತಾಲೂಕುವಾರು ಕಾನೂನು ಸೇವಾ ಸಮಿತಿಯನ್ನು ರಚಿಸಿ ಜನರಿಗೆ ಮತ್ತು ಮಕ್ಕಳಿಗೆ ಕಾನೂನಿನ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡಲಾಗುತ್ತಿದೆ. ನ್ಯಾಯಾಂಗವು ಅತ್ಯಂತ ಶ್ರೇಷ್ಠವಾದುದಾಗಿದೆ. ಇದು ಮನುಷ್ಯರ ಜೀವನದಲ್ಲಿ ರಕ್ಷಾ ಕವಚದಂತೆ ಕೆಲಸ ಮಾಡುತ್ತದೆ ಎಂದು ವಕೀಲರ ಸಂಘದ ಅಧ್ಯಕ್ಷ ಕೆ. ಪ್ರಹ್ಲಾದ್ ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ

## ಪೋಕ್ಸೋ ಕುರಿತು ಅರಿವು ಮೂಡಿಸಬೇಕು

**ಬಳ್ಳಾರಿ:** ಬಾಲ್ಯ ವಿವಾಹ ತಡೆ, ಕೌಟುಂಬಿಕ ದೌರ್ಜನ್ಯ, ವರದಕ್ಷಿಣೆ ನಿಷೇಧ ಹಾಗೂ ಮಹಿಳಾ ಅಭಿವೃದ್ಧಿ ಯೋಜನೆಗಳ ಬಗ್ಗೆ ಅರಿವು ಮೂಡಿಸುವ ಜತೆಗೆ ಬಾಲ್ಯ ವಿವಾಹ ಪ್ರಕರಣಗ ಹೆಚ್ಚಾಗಿ ಕಂಡು ಬರುವ ಸಮುದಾಯಗಳಿಗೆ ಹೆಚ್ಚಿನ ಅರಿವು ಮೂಡಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿದರು.

ನಗರದ ನೂತನ ಜಿಲ್ಲಾಡಳಿತ ಭವನದದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವಿವಿಧ ಯೋಜನೆಗಳ ಅನುಷ್ಠಾನದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆ ಮತ್ತು ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಬಾಲ್ಯ ವಿವಾಹ ಪ್ರಕರಣಗಳು ಕಂಡು ಬಂದಾಗ ಅಧಿಕಾರಿಗಳು ಪೊಲೀಸರ ಸಹಕಾರ ಪಡೆದು ಬಾಲ್ಯ ವಿವಾಹ ತಡೆಗಟ್ಟಬೇಕು. ಇದಕ್ಕೆ ವಿವಿಧ ಇಲಾಖೆಗಳ ಸಹಕಾರ ಅಗತ್ಯವಾಗಿದ್ದು, ಈ ಕುರಿತು ಅಧಿಕಾರಿಗಳು ಸಮನ್ವತೆ ಸಾಧಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೇಳಿದರು. ಶಾಲಾ ಕಾಲೇಜುಗಳಲ್ಲಿ ಪೋಕ್ಸೋ ಕಾಯ್ದೆ ಕುರಿತು ಅರಿವು ಮೂಡಿಸಬೇಕು. ''ತೆರೆದ ಮನೆ'' ಕಾರ್ಯಕ್ರಮದಡಿ ಪೊಲೀಸ್ ಠಾಣೆ, ನ್ಯಾಯಾಲಯ ಸೇರಿದಂತೆ ವಿವಿಧ ಇಲಾಖೆಗಳಿಗೆ ವಾರಕ್ಕೊಮ್ಮೆ ವಿದ್ಯಾರ್ಥಿಗಳನ್ನು ಕರೆದೊಯ್ದು, ಕಾನೂನು ಸುವ್ಯವಸ್ಥೆ ಪ್ರಾತ್ಯಕ್ಷಿಕೆ ತೋರಿಸಿ ಅಧಿಕಾರಿಗಳೊಂದಿಗೆ ನಿರ್ಭೀತಿಯಿಂದ ಸ್ನೇಹ ಬೆಸೆದುಕೊಳ್ಳಲು ಅನುವು ಮಾಡಿ ಎಂದು ಶಿಕ್ಷಣ ಇಲಾಖೆಗೆ ನಿರ್ದೇಶನ ನೀಡಿದರು.

ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆ ಮತ್ತು ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆವಹಿಸಿ ಪ್ರಶಾಂತ್ ಕುಮಾರ್ ಮಿಶ್ರಾ ಮಾತನಾಡಿದರು.

ಜಿಲ್ಲೆಯಲ್ಲಿ ಪೋಕ್ಸೊ ಕಾಯ್ದೆಯಡಿ ಏಪ್ರಿಲ್ 2024ರಿಂದ ಜೂ. 2024ರ ಅಂತ್ಯಕ್ಕೆ13 ಪ್ರಕರಣಗಳು ದಾಖಲಾಗಿದ್ದು, 13 ಪ್ರಕರಣಗಳು ವಿಚಾರಣೆ ಮತ್ತು ಟ್ರಯಲ್ ಹಂತದಲ್ಲಿವೆ. ಅದೇರೀತಿಯಾಗಿ ಜಿಲ್ಲೆಯಲ್ಲಿ ಇದೇ ಅವಧಿಯಲ್ಲಿ 55 ಬಾಲ್ಯ ವಿವಾಹ ಪ್ರಕರಣಗಳ ಪೈಕಿ 53 ಬಾಲ್ಯವಿವಾಹವನ್ನು ತಡೆಯಲಾಗಿದ್ದು, 2 ಬಾಲ್ಯವಿವಾಹ ನಡೆದಿವೆ. ಈ ಎರಡು ಪ್ರಕರಣಗಳಿಗೆ ಈಗಾಗಲೇ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿಉರ್ದೇಶಕ ವಿಜಯ್‌ಕುಮಾರ್ ಸಭೆಗೆ ತಿಳಿಸಿದರು.

> ಗ್ರಾಮೀಣ ಭಾಗಗಳಲ್ಲಿ ಪ್ರತಿ ಶಾಲೆಗಳಿಗೆ ವೇಳಾಪಟ್ಟಿಯಂತೆ ಪೊಲೀಸ್ ಸಿಬ್ಬಂದಿಗಳು ಬೀಟ್ ನಡೆಸಬೇಕು. ಇದರಿಂದ ಶಾಲೆಗಳ ಆವರಣದಲ್ಲಿ ಮದ್ಯಪಾನ, ಇತರೆ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಸಾಧ್ಯವಾಗುತ್ತದೆ.
> -ರಾಹುಲ್ ಶರಣಪ್ಪ ಸಂಕನೂರ, ಜಿಪಂ ಸಿಇಒ

ಸಭೆಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ರಾಜೇಶ್ ಎನ್.ಹೊಸಮನೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎ.ಕೆ.ಜಲಾಲಪ್ಪ ಇತರರಿದ್ದರು.

ಹೊಸಪೇಟೆ ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ ಅಧ್ಯಕ್ಷತೆಯಲ್ಲಿ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸಲಾಯಿತು.

ಬಳ್ಳಾರಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆಯುಷ್ ಇಲಾಖೆ, ರಾಷ್ಟ್ರೀಯ ಆಯುಷ್ ಅಭಿಯಾನ, ಆಯುಷ್ಮಾನ್ ಭಾರತ್ ಯೋಜನೆಯಡಿ ಕೋಳೂರು ಆಯುಷ್ಮಾನ್ ಆರೋಗ್ಯ ಮಂದಿರ ವತಿಯಿಂದ ಔಷಧಿಗಳನ್ನು ವಿತರಿಸಲಾಯಿತು.

ಶಾಲಾ ಮಕ್ಕಳಿಗೆ ಆರೋಗ್ಯದ ಬಗ್ಗೆ ಜಾಗೃತಿ ಇರಲಿ : ಸಿಇಒ
ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ 'ಆರೋಗ್ಯ ಸಿಂಚನ'

## ಜಿಲ್ಲೆಯ 713 ಶಾಲೆಗಳಲ್ಲಿ ಚಾಲನೆ

ತಾಲೂಕಿನ ಕೊಳಗಲ್ಲು ಗ್ರಾಮದ ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ ಏರ್ಪಡಿಸಿದ್ದ ''ಆರೋಗ್ಯ ಸಿಂಚನ'' ಕಾರ್ಯಕ್ರಮದಲ್ಲಿ ರಾಹುಲ್ ಶರಣಪ್ಪ ಸಂಕನೂರ ಮಾತನಾಡಿದರು.

**ಬಳ್ಳಾರಿ:** ಮಕ್ಕಳು ಶಾಲೆಯಲ್ಲಿ ಶಿಕ್ಷಣ ಪಡೆಯುವುದಲ್ಲದೇ ಆರೋಗ್ಯ ಕಾರ್ಯಕ್ರಮಗಳ ಶಿಕ್ಷಣದ ಅರಿವು ಹೊಂದಬೇಕು. ಈ ಮೂಲಕ ವಿದ್ಯಾರ್ಥಿಗಳು ಎಲ್ಲಾ ವಿಷಯವನ್ನು ತಿಳಿದುಕೊಳ್ಳಬೇಕು ಎಂದು ಜಿಪಂ ಸಿಇಒ ರಾಹುಲ್ ಶರಣಪ್ಪ ಸಂಕನೂರ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮತ್ತು ಗ್ರಾಮ ಪಂಚಾಯಿತಿಗಳ ಸಹಯೋಗದೊಂದಿಗೆ ಬಳ್ಳಾರಿ ತಾಲೂಕಿನ ಕೊಳಗಲ್ಲು ಗ್ರಾಮದ ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ ಏರ್ಪಡಿಸಿದ್ದ ''ಆರೋಗ್ಯ ಸಿಂಚನ'' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ರಾಜ್ಯದಲ್ಲಿಯೇ ಬಳ್ಳಾರಿ ಜಿಲ್ಲೆಯಲ್ಲಿ ''ಆರೋಗ್ಯ ಸಿಂಚನ'' ಕಾರ್ಯಕ್ರಮದಡಿ ಜಿಲ್ಲೆಯ ಎಲ್ಲಾ ತಾಲೂಕುಗಳ 713 ಶಾಲೆಗಳಲ್ಲಿ 7 ರಿಂದ 10 ನೇ ತರಗತಿ ಓದುತ್ತಿರುವ ಎಲ್ಲಾ ಸರಕಾರಿ ಅನುದಾನಿತ, ಅನುದಾನ ರಹಿತ ಶಾಲಾ ಮಕ್ಕಳಿಗೆ ಆರೋಗ್ಯ ಜಾಗೃತಿ ಮೂಡಿಸುವ ಆರೋಗ್ಯ ಸಿಂಚನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್‌ಬಾಬು ಮಾತನಾಡಿ, ಮಕ್ಕಳಲ್ಲಿ ಆರೋಗ್ಯ ಜಾಗೃತಿ ನೀಡುವುದರ ಜತೆಗೆ ಡೆಂಘೀ, ಕ್ಷಯರೋಗ, ಕುಷ್ಠರೋಗ, ಬಾಲ್ಯವಿವಾಹ, ಋತುಚಕ್ರ ನಿರ್ವಹಣೆ, ಕೈತೊಳೆಯುವ ವಿಧಾನಗಳು, ತ್ಯಾಜ್ಯ ನಿರ್ವಹಣೆಗಳ ಮಾಹಿತಿ ಪ್ರತಿಯೊಬ್ಬರೂ ಪಡೆಯಬೇಕು. ಡೆಂಘೀ, ಚಿಕನ್ ಗುನ್ಯಾ ಮುಂತಾದ ಸೊಳ್ಳೆಗಳಿಂದ ಹರಡುವ ಕಾಯಿಲೆಗಳ ಕುರಿತು ಜನಜಾಗೃತಿ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಲು 17 ವಿಡಿಯೋ ತುಣುಕುಗಳನ್ನು ಸಿದ್ದಪಡಿಸಲಾಗಿದ್ದು, ಶಾಲಾ ಮಕ್ಕಳಿಗೆ ಪ್ರದರ್ಶಿಸುವ ಕಾರ್ಯಕ್ರಮ ಇದಾಗಿದೆ ಎಂದರು.

> ಬಾಲ್ಯ ವಿವಾಹ ನಿಷೇಧ ಹಾಗೂ ಬಾಲ್ಯ ವಿವಾಹದಿಂದ ಉಂಟಾಗುವ ಮಾರಕ ಸಮಸ್ಯೆಗಳ ಬಗ್ಗೆ ವಿದ್ಯಾರ್ಥಿಗಳು ಅರಿವು ಹೊಂದಬೇಕು. ನಿಮ್ಮ ಸುತ್ತಮುತ್ತಲಿನಲ್ಲಿ ಬಾಲ್ಯ ವಿವಾಹಗಳು ನಡೆಯುವುದು ಕಂಡುಬಂದಲ್ಲಿ 1098 ಗೆ ಕರೆ ಮಾಡಿ.
> -ವಿಜಯ್‌ಕುಮಾರ್, ಉಪನಿರ್ದೇಶಕ

ಈ ವೇಳೆ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎಳೆನಾಗಪ್ಪ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮೋಹನಕುಮಾರಿ, ಕೊಳಗಲ್ಲು ಏಕಲವ್ಯ ಮಾದರಿ ವಸತಿ ಶಾಲೆಯ ಪ್ರಾಚಾರ್ಯೆ ಅಮೃತ, ಕುರುಗೋಡು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಮಂಜುನಾಥ ಜವಳಿ, ಸಿದ್ದಮ್ಮನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ದಿವ್ಯಾ, ಬಳ್ಳಾರಿ ತಾಲ್ಲೂಕು ಅಂಗನವಾಡಿ ಮೇಲ್ವಿಚಾರಕಿ ಕಲ್ಯಾಣಮ್ಮ, ಕುರುಗೋಡು ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ರಾಜುಶೆಟ್ಟಿ, ಕೊಳಗಲ್ಲು ಗ್ರಾಪಂ ಅಭಿವೃದ್ಧಿ ಅಧಿಕಾರಿ ಶೇಕ್ಷಾವಲಿ ಸೇರಿದಂತೆ ಆಶಾಕಾರ್ಯಕರ್ತೆಯರು, ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಇನ್ನೀತರರು ಉಪಸ್ಥಿತರಿದ್ದರು.

## ಸುಜ್ಞಾನ ನಿಧಿ ಶಿಷ್ಯ ವೇತನ ಪತ್ರ ವಿತರಣೆ

**ಹೂವಿನಹಡಗಲಿ:** ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿಯಲ್ಲಿ ಅನೇಕ ಜನಪರ ಕಾರ್ಯಕ್ರಮಗಳನ್ನು ಮಾಡುತ್ತಾ ನಡೆದಿದೆ ಎಂದು ಕಲ್ಯಾಣ ಕರ್ನಾಟಕ ಪ್ರಾದೇಶಿಕ ಕಚೇರಿಯ ನಿರ್ದೇಶರ ಜೆ.ಚಂದ್ರಶೇಖರ್ ಹೇಳಿದರು.

ಪಟ್ಟಣದ ಗವಿಮಠದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯವತಿಯಿಂದ ಹಮ್ಮಿಕೊಂಡಿದ್ದ ಸುಜ್ಞಾನ ನಿಧಿ ಶಿಷ್ಯ ವೇತನ ಮಂಜೂರಾತಿ ಪತ್ರ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಸಂಘದಲ್ಲಿರುವ ಮಹಿಳೆಯರ ಶಾಲಾ ಮಕ್ಕಳಿಗೆ ಸುಜ್ಞಾನ ನಿಧಿ ಯೋಜನೆಯಡಿಯಲ್ಲಿ ರಾಜ್ಯದಲ್ಲಿ 96 ಸಾವಿರ ಮಕ್ಕಳಿಗೆ ಶಿಷ್ಯ ವೇತನ ನೀಡಲಾಗುತ್ತಿದೆ. ಹೂವಿನಹಡಗಲಿ ತಾಲೂಕಿನಲ್ಲಿ 181 ಮಕ್ಕಳಿಗೆ ಮಂಜೂರಾತಿ ಪತ್ರ ವಿತರಿಸಲಾಗಿದೆ ಎಂದರು.

ಎಲ್ಲ ಕಡೆಗೂ ಭ್ರಷ್ಟಾಚಾರ ತುಂಬಿಕೊಂಡಿದೆ. ಆದರೆ ಮಹಿಳೆಯರ ಸಂಘಗಳ ವ್ಯವಹಾರ ಎಲ್ಲವೂ ಪಾರದರ್ಶಕವಾಗಿದೆ. ಸಂಘದ ಮಹಿಳೆಯರಿಗೆ ಕೇವಲ ಸಾಲ ನೀಡಿ, ಬಿಜಿನೆಸ್ ಮಾಡುತ್ತಿಲ್ಲ. ಬದಲಾಗಿ ದುರ್ಬಲ ವರ್ಗದ ಕಲ್ಯಾಣಕ್ಕಾಗಿ ನೆರವು, ಸಲಹೆ ಹಾಗೂ ಮಾರ್ಗದರ್ಶನ ನೀಡಲಾಗುತ್ತಿದೆ ಎಂದರು. ಶಿಷ್ಯ ವೇತನ ಪಡೆಯುತ್ತಿರುವ ವಿದ್ಯಾರ್ಥಿಗಳು ಈ ಹಣವನ್ನು ದುರ್ಬಳಕೆ ಮಾಡಿಕೊಳ್ಳದೇ, ತಮ್ಮ ವಿದ್ಯಾಭ್ಯಾಸಕ್ಕಾಗಿ ಬಳಕೆ ಮಾಡಿಕೊಳ್ಳಬೇಕಿದೆ ಸರ್ಕಾರಕ್ಕೆ ಪರ್ಯಾಯವಾಗಿ ಧರ್ಮಸ್ಥಳ ಸಂಘ ಹತ್ತಾರು ಯೋಜನೆಗಳ ಮೂಲಕ ಕೆಲಸ ಮಾಡುತ್ತಿದೆ. ಇದರಲ್ಲಿ 55 ಕೋಟಿ ವೆಚ್ಚದಲ್ಲಿ 700ಕ್ಕೂ ಹೆಚ್ಚು ಕೆರೆಗಳ ಹೂಳೆತ್ತಿ ಅವುಗಳ ಅಭಿವೃದ್ಧಿ ಮಾಡಲಾಗಿದೆ. ನಿರ್ಗತಿಕರಿಗೆ ಮನೆಗಳ ನಿರ್ಮಾಣ ಮಾಡಲಾಗುತ್ತಿದೆ ಎಂದರು. ಮಲ್ಲನಕೆರೆ ಮಠದ ಅಭಿನವ ಚೆನ್ನಬಸವ ಸ್ವಾಮೀಜಿ ಸಾನಿಧ್ಯ ವಹಿಸಿ ಮಾತನಾಡಿದರು. ತಾಲೂರ ಕಾರ್ಯ ನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಚಂದ್ರು ಕೊಂಚಿಗೇರಿ ಅಧ್ಯಕ್ಷತೆ ವಹಿಸಿದ್ದರು.

ಬಿಸಿಯೂಟ ಯೋಜನೆಯ ಸಹಾಯಕ ನಿರ್ದೇಶಕ ಹನುಮಂತಪ್ಪ, ಸಂತೋಷ ಜೈನ್, ಸತೀಶ ಶೆಟ್ಟಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ಪಿ.ಎಂ.ಅಶೋಕ್, ಕೋಡಿಹಳ್ಳಿ ಕೊಟ್ರೇಶ ಉಪಸ್ಥಿತರಿದ್ದರು.

ಹೂವಿನಹಡಗಲಿ ಪಟ್ಟಣದ ಗವಿಮಠದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯವತಿಯಿಂದ ಹಮ್ಮಿಕೊಂಡಿದ್ದ ಸುಜ್ಞಾನ ನಿಧಿ ಶಿಷ್ಯ ವೇತನ ಮಂಜೂರಾತಿ ಪತ್ರ ವಿತರಣೆ ಮಾಡಲಾಯಿತು.

## ಸಾರಿಗೆ ವ್ಯವಸ್ಥೆಗೆ ಸಂಘಟನೆ ಪ್ರತಿಭಟನೆ

**ಹರಪನಹಳ್ಳಿ:** ತಾಲೂಕಿನ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಸಾರಿಗೆ ವ್ಯವಸ್ಥೆ ಮತ್ತು ಇತರೆ ಮೂಲ ಸೌಕರ್ಯಗಳನ್ನು ಒದಗಿಸುವಂತೆ ತಾಲೂಕು ಅಖಿಲ ಭಾರತ ವಿದ್ಯಾರ್ಥಿ ಸಂಘದ ಮುಖಂಡರು ಪ್ರತಿಭಟನೆ ನಡೆಸಿದರು.

ತಾಲೂಕು ಪ್ರವಾಸಿ ಮಂದಿರದ ವೃತ್ತದಿಂದ ಹೊರಟ ಪ್ರತಿಭಟನೆಕಾರರು ತಾಲೂಕು ಮಿನಿ ವಿಧಾನ ಸೌದಕ್ಕೆ ತೆರಳಿ ಸರಕಾರದ ವಿರುದ್ಧ ಪ್ರತಿಭಟಿಸಿ ನಂತರ ತಾಲೂಕು ದಂಡಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ತಾಲೂಕಿನ ಬಡ ವಿದ್ಯಾರ್ಥಿಗಳಿಗೆ ಕಳೆದ ಎರಡು ವರ್ಷಗಳಿಂದ ಸ್ಕಾಲರ್ಶಿಪ್, ಪ್ರೋತ್ಸಾಹ ಧನ, ಮತ್ತು ಇತರೆ ಮೂಲಸೌಕರ್ಯಗಳನ್ನು ನೀಡುತ್ತಿಲ್ಲ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ವಿದ್ಯಾರ್ಥಿಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಒತ್ತಾಯಿಸಿದರು. ತಾಲೂಕಿನ ವಿದ್ಯಾರ್ಥಿಗಳ ಇನ್ನೂ ಕೆಲವು ಸಮಸ್ಯೆಗಳಲ್ಲಿ ಒಂದಾದ ಎಸ್‌ಎಸ್‌ಪಿ ಪೋರ್ಟಲ್ ಬಂದ್ ಆಗಿರುವ ಸಂಬಂಧ ಹಾಗೂ ಹರಪನಹಳ್ಳಿ ಟೌನಲ್ಲಿ ವಿದ್ಯಾರ್ಥಿಗಳಿಗೆ ಬಸ್ ವ್ಯವಸ್ಥೆ ಇಲ್ಲದ ಕಾರಣ ವಿದ್ಯಾರ್ಥಿಗಳಿಗೆ ಅನಾನೂನು ಕೂಲ ಹೆಚ್ಚಾಗಿದೆ ಎಂದರು.

ಈ ಒಂದು ಹೋರಾಟದಲ್ಲಿ ವಿದ್ಯಾರ್ಥಿ ಸಂಘದ ರಾಜ್ಯ ಸಂಚಾಲಕ ಸಮಿತಿ ಸದಸ್ಯರು ಜಿಲ್ಲಾ ಎಐಎಸ್‌ಎ ಸಂಚಾಲಕ ಶಿಕಾರಿ ಶ್ರೇಯಸ್, ಆಕಾಶ್ ಜೆ, ದೊಡ್ಡ ಬಸಪ್ಪ ಹಾಗೂ ಸಂತೋಷ್ ಗುಳೇದಹಟ್ಟಿ, ಸಂದೇರ್ ಪರಶುರಾಮ್, ಬಿ ಬಾಲಗಂಗಾಧರ್, ಟಿ ಅಜ್ಜಪ್ಪ, ರೇವಣಸಿದ್ದಪ್ಪ, ದಾದಾಪುರ ಬರ್ಮಣ್ಣ, ಅರಸೀಕೆರೆ ಬಸವರಾಜ್, ಹಾಗೂ ವಿದ್ಯಾರ್ಥಿ ಮುಖಂಡರುಗಳು ಭಾಗವಹಿಸಿದ್ದರು.

## ಸ್ವಾತಂತ್ರ್ಯೋತ್ಸವಕ್ಕಾಗಿ ಸಸಿ ನೆಡುವ ಸಂಕಲ್ಪ

**ಕೊಟ್ಟೂರು:** 78ನೇ ಸ್ವಾತಂತ್ರ್ಯೋತ್ಸವದ ಸವಿನೆನಪಿಗಾಗಿ ಲಕ್ಷ ಸಸಿ ನೆಟ್ಟು ದೀಪ ಬೆಳಗಿಸಿ ಹಸಿರು ಬೆಳಕು ಉಳಿವಿನ ಸಂಕಲ್ಪ ಮಾಡೋಣ ಎಂದು ಶಾಸಕ ನೇಮಿರಾಜ್ ನಾಯ್ಕ ತಿಳಿಸಿದರು. ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ತಾಲೂಕು ಆಡಳಿತದಿಂದ ಹಮ್ಮಿಕೊಂಡಿದ್ದ ಸ್ವಾತಂತ್ರ್ಯ ದಿನೋತ್ಸವದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು. ಆ.14 ರಂದು ಬೆಳಗ್ಗೆ ಪ್ರತಿಯೊಬ್ಬರು ಸಸಿನೆಟ್ಟು ಅದನ್ನು ಉಳಿಸಿ ಬೆಳೆಸುವ ಪ್ರತಿಜ್ಞೆ ಮಾಡುವುದರ ಜತೆಗೆ ಸಂಜೆ ದೀಪ ಬೆಳಗಿಸಿ ಆರೋಗ್ಯ ಸಮಾಜ ನಿರ್ಮಾಣದ ಸಂಕಲ್ಪ ಕೈಗೊಳ್ಳಬೇಕು ಎಂದು ತಿಳಿಸಿದರು. ಈ ಬಾರಿಯ 78 ನೇ ಸ್ವಾತಂತ್ರ್ಯ ದಿನೋತ್ಸವವನ್ನು ತಾಲೂಕು ಆಡಳಿತದಿಂದ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ. ಆ.14ರಂದು ಹಸಿರೋತ್ಸವ ಮತ್ತು ದೀಪೋತ್ಸವ ಕಾರ್ಯಕ್ರಮ ಯಶಸ್ವಿಯಾಗಲು ಪ್ರತಿಯೊಬ್ಬರು ಕೈಜೋಡಿಸಬೇಕು. ಪ್ರತಿಯೊಬ್ಬರು ಸ್ವಯಂಪ್ರೇರಿತವಾಗಿ ಹಸಿರು ಉಸಿರಿನ ಬೆಳಕಿನ ಕಾರ್ಯಕ್ರಮದಲ್ಲಿ ಭಾಗಿಯಾಗುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸೋಣ ಎಂದರು. ಬಿಇಒ ಪದ್ಮನಾಭ ಕರಣಂ, ಸಿಡಿಪಿಒ ಸಿಂಧೂ ಅಂಗಡಿ, ಡಾ.ಪ್ರದೀಪ, ಕೃಷಿ ಅಧಿಕಾರಿ ಶಾಮಸುಂದರ್, ಜೆಸ್ಕಾಂ ಎಇ ಚೇತನ್, ವೀರಣ್ಣ, ಎಇಗಳಾದ ಕೆ. ನಾಗನಗೌಡ, ಮಲ್ಲಿಕಾರ್ಜುನ್, ಡಾ.ಗಂಗಾ, ಡಾ.ಜಿ. ಸೋಮಶೇಖರ್, ನಾಗೇಶ್, ಆನಂದ ಹಳ್ಳಿ ಇತರರಿದ್ದರು.

## ಇಡೀ ಗ್ರಾಮಸ್ಥರಿಗೆ ಸಿಹಿಯೂಟ ಹಾಕಿಸಿದ ಶಿಕ್ಷಕ

**ಹೂವಿನಹಡಗಲಿ:** ತಾಲೂಕಿನ ಕಾಂತೆಬೆನ್ನೂರು ಗ್ರಾಮದ ಕೊಟ್ರಮ್ಮ ವೀರಭದ್ರಪ್ಪ ಹಮ್ಮಿಗಿ ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸುಧೀರ್ಘ 41ವರ್ಷ ಸೇವೆಸಲ್ಲಿಸಿ ಸೇವಾ ನಿವೃತ್ತಿ ಹೊಂದಿದ ಶಿಕ್ಷಕ ಪಿ.ಎನ್.ನೆಗಳೂರು ಮಠ ಇವರು ತಾವು ಸೇವೆ ಸಲ್ಲಿಸಿದ ಗ್ರಾಮಕ್ಕೆ ಧನ್ಯತಾಭಾವ ಅರ್ಪಣೆ ಮಾಡುವ ಉದ್ದೇಶದಿಂದ ಮಂಗಳವಾರ ಇಡೀ ಗ್ರಾಮಕ್ಕೆ ಊಟದ ವ್ಯವಸ್ಥೆ ಮಾಡಿದ್ದರು.

ಇದಕ್ಕಾಗಿ ಕೊಪ್ಪರಿಗೆಯಲ್ಲಿ ಗೋದಿ ಹುಗ್ಗಿ ತಯಾರು ಮಾಡಲಾಗಿತ್ತು. ಬೆಳಿಗ್ಗೆ ವಿಶೇಷವಾಗಿ ಗ್ರಾಮದ ಎಲ್ಲಾ ದೇವಸ್ಥಾನಗಳಿಗೆ ಕಟುಂಬಸ್ಥರೊಂದಿಗೆ ತೆರಳಿ ಅಭಿಷೇಕ ಮಾಡಿಸಿದರು. ಮದ್ಯಾಹ್ನ ಸಿಹಿ ಊಟಮಾಡಿದ ಗ್ರಾಮಸ್ಥರು ನೆಚ್ಚಿನ ಶಿಕ್ಷಕರಿಗೆ ಶುಭಕೋರಿದರಲ್ಲದೆ ಸಂಜೆ ವಿಶೇಷವಾಗಿ ಶಿಕ್ಷಕರ ಮೆರವಣಿಗೆ ನಡೆಸಿದರು.

41ವರ್ಷ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಶಿಕ್ಷಕ ಪಿ.ಎನ್.ನೆಗಳೂರು ಮಠ ದಂಪತಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಶಾಲಾ ಆವರಣದಲ್ಲಿ ಶಿಕ್ಷಕರ ಬೀಳ್ಕೊಡುಗೆ ಮತ್ತು ಹಳೆಯ ವಿದ್ಯಾರ್ಥಿಗಳ ಸ್ನೇಹಸಮ್ಮಿಲನ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮವನ್ನು ಸಂಸ್ಥೆಯ ಕಾರ್ಯದರ್ಶಿ ಪಿ.ಕೆ.ಎಂ.ವಿಶ್ವಾನಂದ ಸ್ವಾಮಿ ಉದ್ಘಾಟಿಸಿದರು. ಸಂಸ್ಥೆಯ ಉಗಮದ ಪ್ರಥಮ ಮುಖ್ಯ ಶಿಕ್ಷಕರಾಗಿದ್ದ ಎಂ.ಪಿ.ಎಂ ಕೊಟ್ರಯ್ಯ ಪ್ರಾಸ್ತಾವಿಕ ಮಾತನಾಡಿ ಸಂಸ್ಥೆಯ ಉಗಮದ ವೇಳೆ ಗ್ರಾಮಸ್ಥರು ನೀಡಿದ ಸಹಕಾರ ಹಾಗೂ ಸಂಸ್ಥೆಯಲ್ಲಿ ಸೇವೆಮಾಡಿ ನಿವೃತ್ತಿ ಹೊಂದುತ್ತಿರುವ ಶಿಕ್ಷಕ ನೆಗಳೂರುಮಠ ಇವರ ಅವಿಸ್ಮರಣೀಯ ಸೇವೆಯನ್ನು ನೆನೆದರು.

ಹಳೆಯ ವಿದ್ಯಾರ್ಥಿ ವೀರಣ್ಣ ವಳ್ಳರ ಮಾತನಾಡಿ ಶಿಕ್ಷಕ ನೆಗಳೂರು ಮಠ ಅವರು ತಮ್ಮ ನಿಸ್ವಾರ್ಥ ಸೇವೆಯ ಜತೆಗೆ ಬಡ ವಿದ್ಯಾಥಿಗಳ ಶಾಲಾ ಶುಲ್ಕವನ್ನು ತಾವೆ ಕಟ್ಟಿ ಬೆಳೆಸಿದ ದಿನಗಳನ್ನು ಮೆಕಲುಹಾಕಿ ನೆಚ್ಚಿನ ಶಿಕ್ಷಕನನ್ನು ಸ್ಮರಿಸಿದರು.

ಕಾಂತೆಬೆನ್ನೂರು ಗ್ರಾಮದವತಿಯಿಂದ ಅರ್ಧ ಕೇಜಿ ಬೆಳ್ಳಿಯ ಗಣೇಶ ವಿಗ್ರಹ ನೀಡಿ ಗೌರವಿಸಲಾಯಿತು. ನಂತರ ಸುತ್ತ ಮುತ್ತ ಗ್ರಾಮಗಳ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು ಸೇರಿದಂತೆ 41 ಬ್ಯಾಚುಗಳ ವಿದ್ಯಾರ್ಥಿಗಳಿಂದ ಗೌರವ ಸನ್ಮಾನ ನಡೆಯಿತು.

ಇದೇ ಸಂದರ್ಭದಲ್ಲಿ ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಉಚಿತ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು ಒಟ್ಟು 35 ಜನರು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿದರು.

ಗ್ರಾ.ಪಂ ಅಧ್ಯಕ್ಷೆ ಟಿ.ಈರಮ್ಮ ಸೇರಿದಂತೆ ಸಂಸ್ಥೆಯ ಎಲ್ಲಾ ನಿರ್ದೇಶಕರು ಹಾಗೂ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

## ಅಹವಾಲು ಸ್ವೀಕಾರ ಆಗಸ್ಟ್ 12 ರಂದು

**ಬಳ್ಳಾರಿ:** ಬಳ್ಳಾರಿ ವಿಭಾಗದ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳಿಂದ ಜಿಲ್ಲೆಯ ವಿವಿಧ ತಾಲ್ಲೂಕು ಕೇಂದ್ರಗಳಲ್ಲಿ ವಿವಿಧ ಇಲಾಖೆಗಳಿಗೆ ಸಾರ್ವಜನಿಕರು ಸಲ್ಲಿಸಿದ ಅರ್ಜಿಗಳನ್ನು ವಿಲೇ ಮಾಡದಿರುವ ಕುರಿತು ಕುಂದುಕೊರತೆಗಳ ಅಹವಾಲುಗಳ ಸ್ವೀಕಾರ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಬಳ್ಳಾರಿ ವಿಭಾಗದ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಸಿದ್ಧರಾಜು ತಿಳಿಸಿದ್ದಾರೆ. ಪೊಲೀಸ್ ಅಧೀಕ್ಷಕ ಸಿದ್ಧರಾಜು.ಸಿ ಮಾರ್ಗದರ್ಶನದಲ್ಲಿ ಡಿಎಸ್‌ಪಿ ಆರ್.ವಸಂತ್‌ಕುಮಾರ್ ಮತ್ತು ಪೊಲೀಸ್ ನಿರೀಕ್ಷಕರಾದ ಮಹಮ್ಮದ್ ರಫಿ, ಸಂಗಮೇಶ್ ನೇತೃತ್ವದಲ್ಲಿ ಕಂಪ್ಲಿ, ಸಿರುಗುಪ್ಪ ಮತ್ತು ಬಳ್ಳಾರಿ ತಾಲ್ಲೂಕು ಕೇಂದ್ರಗಳಲ್ಲಿ ಕಾರ್ಯಕ್ರಮ ನಡೆಯಲಿದೆ. ಅಹವಾಲು ಸ್ವೀಕರಿಸುವ ದಿನ ಮತ್ತು ಸ್ಥಳ: ಆ.12 ರಂದು ಬೆಳಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಕಂಪ್ಲಿಯ ತಹಶೀಲ್ದಾರರ ಕಚೇರಿ ಸಭಾಂಗಣ, ಆ.14 ರಂದು ಬೆಳಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಸಿರುಗುಪ್ಪದ ಸಿಡಿಪಿಓ ಕಚೇರಿ ಸಭಾಂಗಣ ಮತ್ತು ಆ.21 ರಂದು ಬೆಳಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಬಳ್ಳಾರಿ ನಗರದ ಹೊಸ ತಹಸೀಲ್ದಾರರ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಕುಂದು ಕೊರತೆಗಳಿರುವ ಸಾರ್ವಜನಿಕರು ನಿಗದಿಪಡಿಸಿದ ದಿನದಂದು ದೂರುಗಳಿದ್ದಲ್ಲಿ ಅರ್ಜಿ ನಮೂನೆಯಲ್ಲಿ ಅಹವಾಲು ನೀಡಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಶ್ವವಾಣಿ
@vishwavaninews
ಬೆಂಗಳೂರು ಬುಧವಾರ 07 | 08 | 2024

# ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

# ಗ್ಯಾಸ್ ಚೇಂಬರ್

**ವಾಯುಮಾಲಿನ್ಯದಿಂದ ದೆಹಲಿ ನಗರ ವೊಂದರಲ್ಲೇ 2020ರಲ್ಲಿ 54,000 ಜನ ಸತ್ತಿದ್ದಾರೆ! ಇಂದು ಮನುಷ್ಯನ ದೊಡ್ಡ ಪಿಡುಗುಗಳಲ್ಲಿ ವಾಯುಮಾಲಿನ್ಯಕ್ಕೆ ಅಗ್ರಸ್ಥಾನ! ಕೆಲವು ನಗರಗಳ ಸ್ಥಿತಿ ಗ್ಯಾಸ್ ಚೇಂಬರ್‌ಗಿಂತ ಭಿನ್ನವೇನಿಲ್ಲ !**

● **ಪ್ರಕಾಶ ತದಡಿಕರ, ನವಿ ಮುಂಬಯಿ**

ಇತ್ತೀಚಿನ ದಿನಗಳಲ್ಲಿ ಅತಿಯಾದ ವಾಯು ಮಾಲಿನ್ಯದಿಂದಾಗಿ ಉಸಿರಾಡಲು ಶುದ್ಧ ಗಾಳಿ ದೊರೆಯುವುದೇ ಕಷ್ಟವಾಗಿದೆ. ವರ್ಷದಿಂದ ವರ್ಷಕ್ಕೆ ವಾಯು ಮಾಲಿನ್ಯದಿಂದಾಗಿ ಸ್ಟ್ರೋಕ್, ಮಧುಮೇಹ, ಹೃದಯಾಘಾತ ಶ್ವಾಸಕೋಶ ಕ್ಯಾನ್ಸರ್ ಇತ್ಯಾದಿ ರೋಗಗಳಿಂದ ಮೃತಪಟ್ಟವರ ಸಂಖ್ಯೆ ಹೆಚ್ಚುತ್ತಿದೆ. 2019 ರಲ್ಲಿ ವಾಯು ಮಾಲಿನ್ಯದಿಂದ ಭಾರತದಲ್ಲಿ 16.7 ಲಕ್ಷ ಜನ ಮರಣ ಹೊಂದಿದ್ದಾರೆ. ದೇಶದಲ್ಲಾದ ಒಟ್ಟು ಸಾವುಗಳಲ್ಲಿ 17.8 ಪ್ರತಿಶತ ಜನರು ಏರುತ್ತಿರುವ ವಾಯು ಮಾಲಿನ್ಯದಿಂದಲೆ ಸಾವಿಗೀಡಾಗಿದ್ದಾರೆ. ಅಷ್ಟೇ ಅಲ್ಲದೆ ಈ ಸಾವುಗಳಿಂದ ದೇಶದ ಜಿಡಿಪಿಗೆ 1.36 ಪ್ರತಿಶತ ನಷ್ಟವಾಗಿದೆ

ಎಂದು ಗ್ಲೋಬಲ್ ಬರ್ಡನ್ ಆಫ್ ಡಿಸೀಸ್ ಸ್ಟಡಿ 2019 ಅಧ್ಯಯನ ತಿಳಿಸುತ್ತದೆ.

ಲೈವ್ ಕಾಸ್ಟ್ ಡೇಟಾ ವಿಶ್ಲೇಷಣೆ ಮತ್ತು ಐಕ್ಯೂಏರ್ ಸಂಗ್ರಹಿಸಿದ ಲೈವ್ ಏರ್ ಕ್ವಾಲಿಟಿ ಡೇಟಾವನ್ನು ವಿಶ್ಲೇಷಣೆ ನಡೆಸಿದ ಗ್ರೀನ್ಪಿಸ್ ಸೌತ್‌ಈಸ್ಟ್ ಏಷ್ಯಾ, 2020 ರಲ್ಲಿ ದೆಹಲಿಯಲ್ಲಿ ಪಿ.ಎಂ 2.5 ವಾಯು ಮಾಲಿನ್ಯವು ಅಂದಾಜು 54,000 ಜನರ ಸಾವಿಗೆ ಕಾರಣವಾಗಿದೆ ಎಂದು ತಿಳಿಸಿದೆ.



## ಹಲವು ನಗರಗಳಲ್ಲಿ ಅಪಾಯ

2023ರಲ್ಲಿ, ಭಾರತವು ಜಾಗತಿಕವಾಗಿ ಮೂರನೇ ಅತ್ಯಂತ ಕಲುಷಿತ ರಾಷ್ಟ್ರವಾಗಿದೆ. ವಾಯು ಮಾಲಿನ್ಯದ ಆರ್ಥಿಕ ಪರಿಣಾಮ ದಿಗ್ಭ್ರಮೆಗೊಳಿಸುವಂತಿದೆ. ಇದಲ್ಲದೆ, ವಾಯು ಮಾಲಿನ್ಯವು ಪ್ರತಿ ವರ್ಷ 50% ನಿಧಾನವಾಗಿ ಬೆಳೆದಿದ್ದರೆ ಭಾರತದ ಪಿಎಂ 4.5% ಹೆಚ್ಚಾಗಬಹುದೆಂದು ಇತ್ತೀಚಿನ ಸಮೀಕ್ಷೆಯು ತಿಳಿಸಿದೆ. ಅಪಾಯಕಾರಿ ನಗರಗಳು 43. ನಗರಗಳು ಗ್ಯಾಸ್ ಚೇಂಬರ್‌ಗಳಾಗುತ್ತಿವೆ. ಇತ್ತೀಚಿಗೆ ಬಿಡುಗಡೆಗೊಂಡ, ಅಧ್ಯಯನ ವರದಿಯ ಪ್ರಕಾರ ದೇಶದಲ್ಲಿ ಈಗ ಸಂಭವಿಸುತ್ತಿರುವ 8 ಮರಣಗಳ ಪೈಕಿ ಒಂದಕ್ಕೆ ವಾಯು ಮಾಲಿನ್ಯ ಕಾರಣವಾಗಿದೆ. ಇದು ದೇಶದ ನಾಗರಿಕರ ಜೀವಿತಾವಧಿಯನ್ನು ಐದು ವರ್ಷ ಗಳಷ್ಟು ಕುಗ್ಗಿಸುತ್ತದೆ. ಇತ್ತೀಚಿಗೆ ದೇಶದ 99 ನಗರಗಳಲ್ಲಿನ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ನಡೆಸಿದ ಮಾಲಿನ್ಯ ಅಧ್ಯಯನ ಪ್ರಕಾರ 43 ನಗರಗಳಲ್ಲಿ ವಾಯುಮಾಲಿನ್ಯ ಆತಂಕಕಾರಿ ಪರಿಸ್ಥಿತಿಗೆ ತಲುಪಿದೆ. ಗುರುಗ್ರಾಮ್, ಲಕ್ನೋ, ಜೈಪುರ, ಆಗ್ರಾ, ನವೀ ಮುಂಬೈ, ಜೋಧ್‌ಪುರ, ಕೋಲ್ಕತಾ, ವಿಶಾಖಪಟ್ಟಣಂ ಮತ್ತು ಇತರ ನಗರಗಳು ಈ ಪಟ್ಟಿಯಲ್ಲಿವೆ.

## ವಾಹನವೇ ಪ್ರಮುಖ ಅಪರಾಧಿ

ವಾಹನಗಳಿಂದ ಹೊರಸೂಸುವ ಕಾರ್ಬನ್ ಡೈ ಓಕ್ಸೈಡ್ ಅತಿ ಮಾರಕ ಮಾಲಿನ್ಯ. ಸಲ್ಫರ್ ಡೈ ಆಕ್ಸೈಡ್ ಮತ್ತು ಕಾರ್ಬನ್ ಮಾನಾಕ್ಸೈಡ್ ಗಳಂತಹ ಅನಿಲಗಳು ವಾಯುವಿನಲ್ಲಿ ಸೇರಿಕೊಂಡು ಅದರ ಸೇವನೆಯಿಂದ ಉಸಿರಾಟದ ತೊಂದರೆ, ಚರ್ಮದ ಕ್ಯಾನ್ಸರ್, ಶ್ವಾಸ ಕೋಶದ ತೊಂದರೆ ಗಂಟಲು ರೋಗ, ನ್ಯೂಮೋನಿಯ ಇತ್ಯಾದಿ ಅನೇಕ ರೀತಿಯ ಕಾಯಿಲೆಗಳಿಗೆ ಮತ್ತು ದೃಷ್ಟಿ ಮಾಂದ್ಯತೆಗೆ ಕಾರಣವಾಗುತ್ತದೆ.

ಅಭಿವೃದ್ಧಿ ಹೆಸರಿನಲ್ಲಿ ಮರಗಳ ಮಾರಣಹೋಮ, ದೇಶದಲ್ಲಿ ಗಣಿಗಾರಿಕೆ, ಖನಿಜ ಸಾಗಣೆ, ರಾಸಾಯನಿಕ ಗೊಬ್ಬರಗಳ ಅತಿಯಾದ ಬಳಕೆ, ತ್ಯಾಜ್ಯಗಳ ಅವೈಜ್ಞಾನಿಕ ವಿಲೇವಾರಿ, ಭಾರಿ ಪ್ರಮಾಣದಲ್ಲಿ ಕಟ್ಟಡಗಳ ನಿರ್ಮಾಣ, ವಾಹನಗಳ ಸಂಖ್ಯೆಯಲ್ಲಿ ತೀವ್ರ ಏರಿಕೆ,ಅತಿಯಾದ ಪ್ಲಾಸ್ಟಿಕ್ ಬಳಕೆ, ಖನಿಜ ಸಂಸ್ಕರಣೆ, ಕ್ರಷರ್ ಘಟಕ ಸೇರಿ ಗಣಿಗಾರಿಕೆಗೆ ಸಂಬಂಧಿಸಿದ ಚಟುವಟಿಕೆಗಳು ಹೀಗೆ ಪರಿಸರ ಮಾಲಿನ್ಯದ ದುಷ್ಪರಿಣಾಮದ ಸರಪಳಿ ಬೆಳೆ ಯುತ್ತಾ ಹೋಗುತ್ತದೆ. ವಾಯುಮಾಲಿನ್ಯದಿಂದಾಗಿ ಐದು ವರ್ಷದೊಳಗಿನ ಸುಮಾರು 700,000 ಮಕ್ಕಳು ಪ್ರತಿ ವರ್ಷ ಸಾವನ್ನಪ್ಪುತ್ತಿದ್ದಾರಲ್ಲದೆ ಲಕ್ಷಾಂತರ ಕಂದಮ್ಮಗಳು ಅನಾರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದಾರೆ.

ವಾಹನಗಳು ಉಗುಳುವ ಹೊಗೆ ಮತ್ತು ಕಟ್ಟಿಗೆ ಒಲೆಯಿಂದ ಬರುವಂತಹ ಹೊಗೆ ಶ್ವಾಸಕೋಶದ ದೀರ್ಘಕಾಲಿನ ಕಾಯಿಲೆಗಳನ್ನು ತರುತ್ತವೆ. ಅತಿ ಗಂಭೀರ ಕಾಯಿಲೆಗಳಾದ ಕ್ಯಾನ್ಸರ್, ಮೆದುಳು ಹಾಗೂ ನರ ಸಂಬಂಧಿ ಕಾಯಿಲೆಗಳು ಉಂಟಾಗುತ್ತಿವೆ. ಕ್ಲೋರೋ ಫ್ಲೋರೋ ಕಾರ್ಬನ್ ಇವುಗಳ ವಾಯುಮಂಡಲದಲ್ಲಿ ಸಂಗ್ರಹದಿಂದ ಓಜೋನ್ ವಲಯಗಳು ದುರ್ಬಲ ಗೊಳ್ಳುತ್ತಿದೆ. ಅತಿನೇರಳೆ ಕಿರಣಗಳಿಗೆ ನಿಯಂತ್ರಣವಿಲ್ಲದೇ ಅವು ಭೂಮಿಯನ್ನು ನೇರವಾಗಿ. ತಲುಪುವುದರಿಂದ ಭೂಮಿಯ ಉಷ್ಣತೆಯಲ್ಲಿ ವೃದ್ಧಿ ಉಂಟಾಗುತ್ತಿದೆ. ಪ್ರತಿವರ್ಷ ವಾಯುಮಾಲಿನ್ಯದ ಕಾರಣದಿಂದಾಗಿ ವಿಶ್ವದಲ್ಲಿ 70 ಲಕ್ಷ ಜನ ಸಾವಿಗೀಡಾಗುತ್ತಿದ್ದಾರೆ. ಇದರಲ್ಲಿ ಭಾರತದ ಪಾಲು 15 ಲಕ್ಷ. ನಮ್ಮ ದೇಶ ಗಾಳಿಯ ಗುಣಮಟ್ಟ ರಕ್ಷಿಸಲು ಮಾರ್ಗಸೂಚಿಗಳನ್ನು ರಚಿಸಿದೆ. ಆದರೆ ಅದಾವುದೂ ಕಟ್ಟುನಿಟ್ಟಾಗಿ ಜಾರಿಗೊಳ್ಳುತ್ತಿಲ್ಲ. ಕೈಗಾರಿಕಾ ತ್ಯಾಜ್ಯ ಗಳಲ್ಲಿನ ಆರ್ಗನೋಕ್ಲೋರಿನ್ ಮತ್ತು ಇತರ ನಿರಂತರ ಸಾವಯವ ಮಾಲಿನ್ಯಕಾರಕಗಳು ಕ್ಯಾನ್ಸರ್ ಜನಕಗಳಾಗಿವೆ. ನಾಗರಿಕ ಸಮಾಜದಲ್ಲಿನ ಪರಿಸರ ಪ್ರಜ್ಞೆಯ ಕೊರತೆ ನೀಗಿಸಬೇಕಿದೆ.

ನಮ್ಮ ಜನರಿಗೆ ಶುದ್ಧ ಗಾಳಿಯನ್ನು ನೀಡಬೇಕಾದರೆ ಹೆಚ್ಚಿನ ಗಿಡ- ಮರಗಳನ್ನು ಬೆಳೆಸಿ ಪರಿಸರ ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಹೊಣೆಯಾಗಿದೆ. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಗಂಭೀರ ಸಮಸ್ಯೆಗಳನ್ನು ಎದುರಿಸಬೇಕಾಗಬಹುದು.

---

ಚಿತ್ತ **ವಿಹಾರ**

# ಇರಲಿ ಒಂದಷ್ಟು ಭಯ

ನಾವು ಸಾಮಾನ್ಯವಾಗಿ ಭಯವೆಂಬುದು ಮನುಷ್ಯನ ದೌರ್ಬಲ್ಯ ವೆಂದು ಭಾವಿಸು ತ್ತೇವೆ. ಧೈರ್ಯವನ್ನು ಸದ್ಗುಣ ವೆಂತಲೂ, ಧೈರ್ಯವೇ ಎಲ್ಲ ಯಶಸ್ಸಿಗೂ ಮೂಲ ಕಾರಣವೆಂತಲೂ ನಂಬು ತ್ತೇವೆ. ಎಲ್ಲವನ್ನೂ ಧೈರ್ಯ ದಿಂದ ಎದುರಿಸಬೇಕು. ಸದಾ ಭಯದ ನೆರಳಿನಲ್ಲಿ ಉದ್ವೇಗದ ಬದುಕನ್ನು ಕಟ್ಟಿಕೊಂಡರೆ ನೆಮ್ಮದಿ, ಯಶಸ್ಸು ನಮ್ಮಿಂದ ನಾವು ದೂರ ದೂರಕ್ಕೆ ಸರಿಯುತ್ತದೆ. ಬದುಕಿನಲ್ಲಿ ಹೆದರಬೇಕಾದದ್ದು ಏನೂ ಇಲ್ಲ. ಎಲ್ಲ ರೀತಿಯ ಅಪಾಯ ಗಳಿಂದಲೂ ನಮ್ಮನ್ನು ಪಾರು ಮಾಡು ವುದು ಯಾವುದು? ಎಂಬ ಯಕ್ಷನ ಪ್ರಶ್ನೆಗೆ ಯುಧಿಷ್ಠರ ಕೊಟ್ಟ ಒಂದು ಶಬ್ದದ ಉತ್ತರವೇ ಧೈರ್ಯ ಎನ್ನವುದು.

ಇದು ಮೇಲ್ನೋಟಕ್ಕೆ ಸರಿ ಎನಿಸಿದರೂ, ಗೀತೋಪನಿಷತ್ತಿನ ಭಗವದ್ವಾಕ್ಯ ಭಯಂಚಾಭಯಮೇವ ಚ ಎಂಬ ಮಾತನ್ನು ಕೂಡ ಅಲ್ಲಗಳೆಯುಂತಿಲ್ಲ. ಭಯವೆಂದರೆ ಭವ, ಅಭಯವೆಂದರೆ ವೈರಾಗ್ಯ. ಜಗದ ಬದುಕಿನಲ್ಲಿ ವಿರಕ್ತರಿ ಗಿಂತ ಗ್ರಹಸ್ಥರ ಸಂಖ್ಯೆಯೇ ಮಿಗಿಲು ಅಲ್ಲವೇ. ಇನ್ನೊಂದು ಅರ್ಥದಲ್ಲಿ ಜಗತ್ತು ನಡೆಯುತ್ತಿರುವುದೇ ಒಂದಷ್ಟು ಭಯಭೀತರಿಂದಲೇ ಅಲ್ಲವೇ? ಪ್ರಾಣಕ್ಕಿಂತ ನಮಗೆ ಪ್ರಿಯವಾದ ವಸ್ತು ಜಗತ್ತಿನಲ್ಲಿ ಯಾವುದು ಇಲ್ಲ. ಅಂತಹ ಪ್ರಾಣವನ್ನು ಸಂರಕ್ಷಿಸುವ ದಳಪತಿ ಭಯ. ಶಿಕ್ಷೆಯ ಭಯ ಅನ್ಯಾಯ ಅಕ್ರಮಗಳಿಗೆ ಕಡಿವಾಣ ಹಾಕುತ್ತದೆ. ಸಂಸ್ಕೃತಿ, ಶಿಸ್ತು, ಶಾಂತತೆ, ನಯ, ವಿನಯ ಗುಣಗಳು ಭಯದ ತಳಹದಿಯ ಮೇಲೆ ರೂಪಗೊಂಡು ಮುಗಿಲೆತ್ತರಕ್ಕೆ ಬೆಳೆಯಲು ಸಾಧ್ಯ ವಾಗಿರುವುದು. ಸಭ್ಯ ಬದುಕಿಗೆ ಒಂದಷ್ಟು ಭಯದ ಆಸರೆ ಬೇಕು. ಸ್ವಸ್ಥ ಸಮಾಜದ ನಿರ್ಮಾಣಕ್ಕೆ ಭಯವೇ ಮೂಲ ತಳಹದಿ. ನಮ್ಮ ಮನಸ್ಸಿನಲ್ಲಿ ನಮ್ಮ ಬದುಕನ್ನು ಮುನ್ನಡೆಸುವ ಅಗತ್ಯಕ್ಕೆ ಬೇಕಾದ ಭಯವನ್ನು ಕಾಪಿಟ್ಟು ಕೊಳ್ಳಲೇ ಬೇಕು. ಭಯವನ್ನು ನಾವು ಊಟದಲ್ಲಿನ ಉಪ್ಪಿನಕಾಯಿಂತೆ ಒಂದಷ್ಟು ಬಳಸುತ್ತಲೇ ಇರಬೇಕು.

● **ಮಹಾದೇವ ಬಸರಕೋಡ**

---

ಇತಿಹಾಸಕ್ಕೊಂದು **ಕಿಂಡಿ**

ದೇಶದ ಪ್ರಧಾನಿಯೇ ಭಯದಿಂದ ಓಡಿಹೋಗುವಂತಹ ಪರಿಸ್ಥಿತಿ ಯನ್ನುಂಟು ಮಾಡಿದ ಬಾಂಗ್ಲಾ ದೇಶದ ಇತಿಹಾಸದಲ್ಲಿ ಹಲವು ಸ್ವಾರಸ್ಯಕರ ಅಂಶ ಗಳಿವೆ. 1947ರಿಂದ 1971ರ ತನಕ ಪಾಕಿಸ್ತಾನದ ಭಾಗವಾಗಿದ್ದ ಬಾಂಗ್ಲಾದೇಶವು, 1971ರಲ್ಲಿ ಹೊಸ ದೇಶವಾಗಿ ಉದಿಸಿತು. ಇದಕ್ಕೆ ಮುಖ್ಯ ಕಾರಣ ವೆಂದರೆ, ನಮ್ಮ ದೇಶದ ಸೈನ್ಯವು ಬಾಂಗ್ಲಾದೊಳಗೆ ಆಕ್ರಮಣ ಮಾಡಿ, ಪಾಕಿಸ್ತಾನದ ಸೈನ್ಯವನ್ನು ಸೋಲಿಸಿತು. ಬಾಂಗ್ಲಾದ ಮುಕ್ತಿವಾಹಿನಿಗೆ ಎಲ್ಲಾ ರೀತಿಯ ಶಸ್ತ್ರ ಸರಬರಾಜು ಮಾಡಿದ್ದೇ ನಮ್ಮ ದೇಶ! ತೊಂಬತ್ತು ಸಾವಿರಕ್ಕೂ ಹೆಚ್ಚಿನ ಪಾಕ್ ಸೈನಿಕರು ಆಗ ಶರಣಾದರು. 1972ರಲ್ಲಿ ಅದು ಒಂದು ಸೆಕ್ಯುಲರ್ ದೇಶ ಎಂದು ಗುರುತಿಸಿಕೊಂಡಿತು. ಆದರೆ, 1988ರಲ್ಲಿ ಇಸ್ಲಾಂನ್ನು ರಾಷ್ಟ್ರ ಧರ್ಮ ಎಂದು ಘೋಷಿಸ ಲಾಯಿತು. 2010ರಲ್ಲಿ ಅಲ್ಲಿನ ಸುಪ್ರೀಂಕೋರ್ಟ್ ಒಂದು ಆದೇಶ ನ ನೀಡಿ, ಸಂವಿಧಾನದ ಸೆಕ್ಯುಲರ್ ನೀತಿಗಳನ್ನು ಕಾಪಾಡಿತು. ಜಗತ್ತಿನಲ್ಲಿ ಅತಿ ಹೆಚ್ಚು ಜನಸಾಂದ್ರತೆ ಹೊಂದಿರುವ ರಾಷ್ಟ್ರಗಳಲ್ಲಿ ಬಾಂಗ್ಲಾ ದೇಶ ಪ್ರಮುಖ. ಈಗ ಅಲ್ಲಿನ ಜನಸಂಖ್ಯೆ ಸುಮಾರು 17 ಕೋಟಿ.

---

ಯುವ **ಕಾವ್ಯ**

## ದಂತದ ಗೊಂಬೆ

ಸೊಗದ ಕಾಂತಿ ಕಣ್ಣ ಕೊಳದಿ
ತುಂಬಿ ತಣಿವ ನೈದಿಲೆ
ಹಾಲ ಹೊಳೆಯನೆಲ್ಲ ತಂದು
ಸುರಿದು ಬಿಡು ಎದೆಯಲೆ

**ಅದೇನು ನೋಟ ಮೈಯ ಮಾಟ**
**ತುಂಬಿ ನಿಂತೆ ತನುವಲಿ**
**ಮೊಗವ ತೋರಿ ನಗುವ ಬೀರಿ**
**ಬಿಡದೆ ಉಲಿದೆ ಮನದಲಿ**

ಕರಿಯ ಹುಬ್ಬು ಕೆಂಪು ತುಟಿಯು
ಸರಸ ತೋರಿ ಮೆರೆದಿವೆ
ಕಣ್ಣಕೊಳದಿ ಈಜಿ ನಲಿವ
ಹಂಸ ತಾನೆ ಕರೆದಿವೆ

**ಮೊಲ್ಲೆಗಿಂತ ಗಲ್ಲ ಚೆನ್ನ**
**ಮೆಲ್ಲನುಲಿವ ಕೋಗಿಲೆ**
**ಬೇಗ ಬಾರೆ ಮಧುವ ತಾರೆ**
**ತೀಡುತಲೇ ಬೈತಲೆ**
ಹರೆಯ ಉಕ್ಕಿ ನಲಿವ ಹಕ್ಕಿ
ಹಾರುತಿರು ಹರುಷದಿ
ನಮ್ಮ ಒಲವು ತುಂಬಿ ಚೆಲುವು
ಕುಸುಮಿಸಲಿ ವರುಷದಿ



● **ನೀ.ಶ್ರೀಶೈಲ ಹುಲ್ಲೂರು**

---

## ನೀವೂ ಬರೆಯಬಹುದು

**ನಮ್ಮ ವಿಳಾಸ:**

ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine@gmail.com

---

**ನಮ್ಮ ನಾಡಿನಲ್ಲಿ ಕಾಣಸಿಗುವ ಹಾವಕ್ಕಿ, ತನ್ನ ದೇಹದ ಆಕಾರದಿಂದ ಆ ಹೆಸರನ್ನು ಗಳಿಸಿದೆ.**



# ಹಾವಕ್ಕಿ

● **ಜಿ. ಆರ್. ಪಂಡಿತ್, ಸಾಗರ**

ಉದ್ದ ಕುತ್ತಿಗೆ ಹಾವಕ್ಕಿಯು ನಮ್ಮ ನಾಡಿನಲ್ಲಿ ತುಸು ಸಾಮಾನ್ಯ ಎನಿಸುವ ಹಕ್ಕಿ. ಅದರ ಕುತ್ತಿಗೆಯು ಹಾವಿನ ರೀತಿ ಬಳುಕುವುದರಿಂದ, ಸ್ನೇಕ್ ಬರ್ಡ್ ಅಥವಾ ಹಾವಕ್ಕಿ ಎಂದು ಕರೆದರು. ಹಾವಕ್ಕಿ ''ಅನಿಂಗಾ'' ಕುಲಕ್ಕೆ ಸೇರಿದ ವಿಶೇಷ ಭೌತಿಕ ಗುಣಲಕ್ಷಣಗಳುಳ್ಳ, ವಿಶಿಷ್ಟ ಜೀವನ ಶೈಲಿಗೆ ಹೆಸರುವಾಸಿಯಾದ ಆಕರ್ಷಕ ಪಕ್ಷಿ ಪ್ರಭೇದ. ಅನಿಂಗಾ ಅಂದರೆ ದೆವ್ವದ ಹಕ್ಕಿ ಎಂದರ್ಥ.

ಇವು ತುಲನಾತ್ಮಕವಾಗಿ ಹದ್ದಿನಷ್ಟು ದೊಡ್ಡದಾದ ಜಲಪಕ್ಷಿ. ಬಣ್ಣ ಆಕಾರ, ಗಾತ್ರದಲ್ಲಿ ನೋಡಲು ಕಪ್ಪು ಬಣ್ಣದ ನೀರು ಕಾಗೆಗಳಂತೆ ಕಾಣುತ್ತವೆಯಾದರೂ, ವಿಶಿಷ್ಟ ಕತ್ತು ಮತ್ತು ಕೊಕ್ಕಿನಿಂದ, ನಡವಳಿಕೆಯಿಂದ ಹಾವಕ್ಕಿಯಾಗಿ ಗಮನ ಸೆಳೆಯುತ್ತವೆ. ಕಪ್ಪನೆಯ ಬೆನ್ನಿನ ಮೇಲೆ ಬೆಳ್ಳಿ ಗೆರೆಯಂತಹ ರಚನೆ, ತಲೆ ಮತ್ತು ಕುತ್ತಿಗೆ ಕಂದು ವೆಲ್ವೆಟ್ ಬಣ್ಣ ಹೊಂದಿದ್ದರೆ ಗಲ್ಲ ಮತ್ತು ಕಂಠ ಬಿಳಿ ಹಳದಿ ಬಣ್ಣಗಳ ಸಮ್ಮಿಶ್ರಣ. ತೆಳುವಾದ ಮತ್ತು ಆಕರ್ಷಕವಾದ ಹಾವಿನಂತ ಕತ್ತು, ಕಿರಿದಾದ ತಲೆ, ಚೂಪಾದ ಕಠಾರಿಯಂತಹ ಕೊಕ್ಕು ಈ ಹಕ್ಕಿಯಲ್ಲಿ ಎದ್ದು ಕಾಣುವ ಲಕ್ಷಣಗಳು. ಹಾವಕ್ಕಿಗಳು ಅತ್ಯುತ್ತಮ ಈಜುಗಾರ ಪಕ್ಷಿಗಳು. ನೀರಿ ನಲ್ಲಿ ಮುಳುಗಿ ಮುಂದೆ ಹೋಗಲು ತಮ್ಮ ಅಗಲವಾದ ಪಾದಗಳನ್ನು ಬಳಸಿ ಕೊಳ್ಳುತ್ತವೆ. ನೀರಿನ ಅಡಿಯಲ್ಲಿ ಸಾಗಿ, ಕತ್ತನ್ನು ಅತ್ತಿಂದಿತ್ತ ಹೊಯ್ದಾಡಿಸುತ್ತ ಈಜುತ್ತಲೇ ನಿಖರವಾದ ಚಲನೆಯೊಂದಿಗೆ ಮೀನುಗಳನ್ನು ತಮ್ಮ ಚೂಪಾದ ಕೊಕ್ಕಿನಿಂದ ಚುಚ್ಚಿ, ನೀರಿನ ಮೇಲೆ ತಲೆಯೆತ್ತಿ ಹಾರಿಸಿ ಹಿಡಿದು ನುಂಗುತ್ತವೆ. ಆದರೆ ಇತರ ಜಲ-ಪಕ್ಷಿಗಳಂತೆ ಅವು ಜಲ ನಿರೋಧಕ ಗರಿಗಳನ್ನು ಹೊಂದಿಲ್ಲ. ಇದರಿಂದಾಗಿ ಒಮ್ಮೆ ನೀರಿನಲ್ಲಿ ಮುಳುಗಿ ಹೊರ ಬಂದರೆ ಗಿಡದ ಟೊಂಗೆಗಳ ಮೇಲೆ ಕುಳಿತು ಅವು ತಮ್ಮ ರೆಕ್ಕೆಗಳನ್ನು ಅಗಲವಾಗಿ ತೆರೆದು ಹರಡಿಕೊಂಡು ಒಣಗಿಸಿಕೊಳ್ಳುತ್ತವೆ. ಇದರ ಮುಖ್ಯ ಆಹಾರ ಮೀನುಗಳು. ಕಪ್ಪೆ, ಕೀಟಗಳನ್ನೂ ತಿನ್ನುತ್ತವೆ. ಹಗಲಿನಲ್ಲಿ ಹೆಚ್ಚಾಗಿ ಒಂಟಿಯಾಗಿಯೇ ಕಾಣಸಿಗುತ್ತವೆ. ರಾತ್ರಿ ಹೊತ್ತಿನಲ್ಲಿ ಮತ್ತು ಗೂಡು ಕಟ್ಟುವ ಸಂದರ್ಭಗಳಲ್ಲಿ ಗುಂಪಾಗಿ ಕಾರ್ಯ ನಿರ್ವಹಿಸುತ್ತವೆ.

---

# ವಿಶಾಲ ವೃಕ್ಷ ಆಲ

● **ರಶ್ಮಿ ಗೋಖಲೆ**

ವಿಶಾಲ ಭಾವನೆಯನ್ನು ಉದ್ದೀಪನ ಮಾಡುವಂತಹ ವೃಕ್ಷಗಳಲ್ಲಿ ಆಲ ಹಾಗೂ ಅರಳಿ ಮರಗಳು ಅಗ್ರಪಂಕ್ತಿಯವು. ಆಲದ ಮರವನ್ನು ಪೂಜಿಸು ತ್ತೇವೆ. ಹಾಗೆಯೇ ಅದಕ್ಕೆ ರಾಷ್ಟ್ರೀಯ ವೃಕ್ಷವೆಂಬ ಹೆಗ್ಗಳಿಕೆಯೂ ಇದೆ.

ಪ್ರಕೃತಿಯಲ್ಲಿ ಸಮತೋಲನ ಕಾಯ್ದುಕೊಳ್ಳಲು ಸಸ್ಯಸಂಪತ್ತು, ಗಿಡ ಮೂಲಿಕಾ ವನಸ್ಪತಿಗಳು ಇರಲೇ ಬೇಕು. ಮಣ್ಣಿನ ಸವಕಳಿಯನ್ನು ತಡೆಗಟ್ಟಲು, ಪಶು ಪಕ್ಷಿ ಮೊದಲಾದ ಸಕಲ ಜೀವ ಜಂತುಗಳಿಗೆ ಆಹಾರವಾಗಿ, ಧಾರಾಳ ವಾಗಿ ಉಸಿರಾಡಲು ಆಮ್ಲಜನಕ ಒದಗಿಸುವ ಜೀವತಂತು ಗಳೇ ಈ ವೃಕ್ಷಗಳು. ಮಳೆಯನ್ನು ಕರೆದು ಇಳೆಯನ್ನು ತಂಪಾಗಿಟ್ಟು ಹಲವು ಜೀವರಾಶಿಗಳಿಗೆ ಆಹಾರವನ್ನು ಒದಗಿಸಿ ನೆರಳು ಕೊಡು ವಂತಹ ಕೆಲಸ ವನ್ನು ಒಬ್ಬ ತಾಯಿ ಮಾಡುವಂತೆಯೇ ಮರವೂ ಮಾಡುತ್ತದೆ.

**ತಲೆಯ ಮೇಗಡೆ ಬೇರು**
**ಕೆಳಗೆ ಕೊಂಬೆಲೆ ಚಿಗುರು**
**ಬಿಳಲೂರೆಗಳ ಲೆಕ್ಕಕ್ಕಿಲ್ಲ ಕೊನೆ ಮೊದಲು**
**ಬೆಳೆವುದೀ ಪರಿಯರಳಿಮರದಂತೆ**
**ನರಕೋಟಿ**
**ನಲಿವನದರಲಿ ಬೊಮ್ಮ- ಮಂಕುತಿಮ್ಮ**

ಇಂತಹ ಹಿನ್ನೆಲೆಯುಳ್ಳ ಆಲದ ಮರ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯಲ್ಲೂ ವಿಶೇಷ ಸ್ಥಾನವನ್ನು ಪಡೆದಿದೆ.

ಆಲದ ಮರಗಳು ಕೆಲವೆಡೆ ಬಹಳ ವಿಶಾಲವಾ,ಗಿ ಎಕ್ರೆಗಟ್ಟಲೆ ವಿಸ್ತಾರವಾಗಿ ಬೆಳೆದಿರುವುದರಲ್ಲಿ ಮುಖ್ಯ ವಾಗಿ ಬೆಂಗಳೂರಿನ ಸಮೀಪದ ದೊಡ್ಡಾಲದ ಮರ, ಬಸವೇಶ್ವರ ನಗರದ ಮಂಕಿ ಪಾರ್ಕಿನಲ್ಲಿರುವ ಆಲದ ಮರ ಹೀಗೆ ಕೆಲವು ಪ್ರಸಿದ್ಧವಾಗಿವೆ. ಕೊಲ್ಕೊತ್ತಾದ ಬೃಹತ್ ಆಲದ ಮರ ವಿಶ್ವದಾಖಲೆ ಯನ್ನೇ ಬರೆದಿದೆ. ಮೈಸೂರು- ಟಿ.ನರಸೀಪುರ ರಸ್ತೆಯಲ್ಲಿರುವ ಚಿಕ್ಕಹಳ್ಳಿ ಯಲ್ಲಿನ ದೇವರ ಆಲದಮರ ವಿಶೇಷವಾದ ಗಮನ ಸೆಳೆಯುತ್ತದೆ. ಆಲದ ಮರವು ಹಲವು ಹಕ್ಕಿಗಳಿಗೆ, ಕೀಟಗಳಿಗೆ, ಅಳಿಲು ಮೊದಲಾದ ಪ್ರಾಣಿಗಳಿಗೆ ಆಶ್ರಯ ನೀಡುವ ವಿಚಾರವಂತೂ ಗಮನ ಸೆಳೆಯುವಂತಹದ್ದು.

---

**ಶ್ರಾವಣ ಬಂದಿದೆ; ಮಹಿಳೆಯರಿಗೆ ಮೈತುಂಬ, ಕೈತುಂಬ ಕೆಲಸ. ಆದರೆ ಗಂಡಸರಿಗೆ?**

# ಗಂಡು ಮಕ್ಕಳದ್ದು ಕೆಲಸ ಇಲ್ರಿ!

● **ವಾಣಿ ಹುಗ್ಗಿ**

ಹಬ್ಬಗಳನ್ನು ಹೊತ್ತುಕೊಂಡು ಬರ್ತೇತಿ ಈ ಶ್ರಾವಣ ಮಾಸ. ನಾಗರ ಪಂಚಮಿ ನಾಡಿಗೆಲ್ಲ ದೊಡ್ಡ ಹಬ್ಬ. ನಾಗಪ್ಪಗ ತನಿ ಎರಿಯೋದ್ರಿ, ನಾವೆಲ್ಲ ನಾನಾ ತರ ಉಂಡಿ ತಿನ್ನೋದ್ರಿ. ಎಳ್ಳುಂಡಿ, ಶೇಂಗಾ, ಬೇಸನ,ರವಾ, ಸೇವ್, ಚುನುಮರಿ, ರಾಜಗಿರಿ ಉಂಡಿ, ಅಳಿಟ್ಟ ಹಿಂಗ ಉಂಡಿ ಲಿಸ್ಟ ದೊಡ್ಡದಾಗತೇತ್ರಿ. ಬೀಗ್ರಿಗೆ, ಆಜುಬಾಜುದಾವ್ರಿಗೆ ಉಂಡಿ ಹಂಚುದ್ರಿ. ದಿನಾಉಂಡಿ ತಿಂದು, ತಿಂಗಳತನ ಮುಗ್ಯಾಂಗಿಲ್ರಿ. ಈ ಶ್ರಾವಣ ದೇವ್ರಿಗೆ ಭಾಳ ಇಷ್ಟ ಆಗತೇತಿ, ಪೂಜಾ ಮಾಡಿದ್ರ, ಬೇಡಿದ್ದ ಕೊಡತಾನಂತ! ಅದ್ಕ ಪೂಜಾಪುನಸ್ಕಾರ, ಭಜನಿ, ಉಪವಾಸ, ಉಡಿ ತುಂಬಿಸ್ಕೊಳ್ಳೊದು(ಅರಸಿನ ಕುಂಕುಮಕ್ಕ ಹೋಗೋದು) ಜೋರ ನಡಿತಾವ್ರಿ.

ಸತ್ಯನಾರಾಯಣ ಪೂಜಾ, ನಾಕ ಸೋಮವಾರ, ನಾಕ ಮಂಗಳಗೌರಿ ಪೂಜಾ, ನಾಕ ಸಂಪತ್ತ ಶುಕ್ರ್ರಾರ, ನಾಕ ಶನಿವಾರ ಅಗಧಿ ಚಲೋ ಆಗತಾವ್ರಿ. ಸಂಪತ್ತ ಶುಕ್ರಾರ ಅಂದ್ರ ನಾಕು ಶ್ರಾವಣ ಶುಕ್ರಾರ ಲಕ್ಷ್ಮಿದೇವಿನ ಪೂಜಾ ಮಾಡುದ್ರಿ. ಸಂಪತ್ತಿನ ಅಧಿದೇವತೆ ಮಹಾಲಕ್ಷ್ಮಿ ಪೂಜಾ ಮಾಡಿ ಗಂಟಿ ಬಾರ್ಸುದ. ಒಂದನೇ ವಾರ ಬರಲಿಲ್ಲಂದ್ರ, ನಾಕನೇ ವಾರಕ್ಕ ಬಂದ ಬರ್ತಾಳ! ನಮ್ಮವ್ವ ಲಕ್ಷ್ಮವ್ವ ಮನಿಗಿ ಬರುತನ್ಕ ಪೂಜಾ ಮಾಡುದ ವರಮಹಾಲಕ್ಷ್ಮಿ ಹಬ್ಬ ಅಂತ ಯಾಡ್ನೆ ಶುಕ್ರಾರ ಅಷ್ಟ ಮಾಡುದಿಲ್ರಿ.

ನಾಕುವಾರ ಮಾಡಿ, ನೈವೇದ್ಯಕ್ಕ ಬ್ಯಾಳಿ

ಹೋಳಿಗೆ ಇಲ್ಲಂದ್ರ, ಕರಿಗಡುಬು ಮಾಡ್ಬೇಕ್ರಿ. ಹೆಂಗ ಮಾಡಿದ್ರೂ, ಸಂಜಿಕುಡಿ ತುಂಬಸ್ಕೊಳ್ಳಾಕ ಹೋಗ್ಬೇಕ್ರಿ. ವೀಳ್ಯದೆಲೆ, ಅಡಿಕಿ, ಅರಸಿನ ಬೇರ, ಕಾರಿಕ್, ಕೊಬ್ರಿ, ನೆಲಗಡ್ಲಿ, ಬ್ಲೌಸ್ ಪೀಸ್, ಸೀರಿ,ಬಳಿ, ನಾಷ್ಟಾ ತಾಟ,ಸಣ್ಣ ಬಟ್ಲ ಹಿಂಗ ಯಾರಿಗೆ ಏನ್ ಅನುಕೂಲ ಆಗತೇತಿ ಅದ್ನ ಐದ ತರ ಮಾಡಿ ಉಡಿ ತುಂಬ್ತಾರ್ರಿ.

ಇದ್ರಾಗ ಗಂಡಮಕ್ಕಳದ್ದ ಏನೂ ಕೆಲ್ಸ ಇಲ್ರಿ. ಅವ್ರದ್ದ ಬರೀ ನೋಡುದ. ಅವತ್ತಿನ ದಿನಾ ಮನಿ ಗಂಡಮಕ್ಕಿಗೆ ಫೋನ್ ಮಾಡುತನ್ಕ ಮನಿಗಿ ಬರಬ್ಯಾಡ್ರಿ, ರಾತ್ರಿ ಒಂಭತ್ತಕ್ಕ ಮನಿಗಿ ಬರ್ರಿ ಅಂತ ಹೇಳಿರ್ತಾರ್ರಿ. ಈ ವರ್ಕ್ ಫ್ರಂ ಹೋಮ್, ಮನಿ ಬಿಟ್ರ ಬ್ಯಾರೆ ಏನೂ ಗೊತ್ತಿಲ್ಲಾದ್ವ್ರ. ಈ ಅರಸಿನ ಕುಂಕುಮದ ಸಂಭ್ರಮ ನೋಡಿ ಸಂತೋಷ ಪಡು ದೊಡ್ಮನಸ್ಸು ಒಂದಿಷ್ಟ ಗಂಡಸರಿಗೆ ಇರ್ತೇತ್ರಿ. ಅವ್ರ ನೀವ ನಮ್ಮನಿ ಮಹಾಲಕ್ಷ್ಮಿ ,ದಿನಾ ಹಿಂಗ ಸೀರಿ ಉಟ್ಕೊ. ಚಂದಂಗ ಇರು ಮತ್ತೇನರ ಬೇಕೇನ ತಂದಕೊಡ್ತೀನಿ ಅಂತ ಹೇಳ್ತಾರ್ರಿ.

ಬರೀ ಶ್ರಾವಣಕ್ಕ ಮುಗ್ಯಾಂಗಿಲ್ರಿ. ಭಾದ್ರಪದದ ಗೌರಿ ಹಬ್ಬಕ್ಕ ಬಾಗೀನ ಕೊಡುವಾಗು ಹಿಂಗ ನಡೀತೇತ್ರಿ. ಅಶ್ವೀಜದ ದಸರಾದಾಗೂ ಹಿಂಗರೀ. ಹತ್ತ ದಿನಾ ಬನ್ನಿ ಗಿಡಕ್ಕ ಹೋಗಿ ಹೆಣ್ಮಕ್ಳಿಗಿ ಉಡಿ ತುಂಬಿ ಮುಗಿಸೋದ್ರಿ. ಮುಂದ ಕಾರ್ತಿಕದ ದೀಪಾವಳಿ ಲಕ್ಷ್ಮಿ ಪೂಜೆದಾಗೂ ಉಡಿ ತುಂಬುದ ಪದ್ಧತಿರಿ. ಎಲ್ಲಾ ಹಬ್ಬದಾಗೂ ಉಡಿ ತುಂಬೊ ಸಂಭ್ರಮ ಇದ್ದ ಇರ್ತೇತ್ರಿ. ಇದ್ನೆಲ್ಲ ನೋಡಿ ಒಂದಿಷ್ಟ ಗಂಡಸರು ನಾವ್ ರೊಕ್ಕ ಕೊಡೊದು, ನೀವ್ ಮಜಾ ಮಾಡುದು ಎಲ್ಲಾ ನಿಮ್ದ, ನಮ್ದ ಏನೈತ್ರಿ? ಅಂತ ಹೊಟ್ಟಿ ಉರ್ಕೊಳ್ತಾರ್ರಿ. ಅವ್ರಿಗೂ ಹಿಂಗ ಏನರ ಹಬ್ಬಗೋಳ್ ಇರ್ಬೇಕಿತ್ರಿ ಚಲೋ ಆಗ್ತಿತ್ರಿ.

ಒಂದು ಸಮಯದಲ್ಲಿ ದೇಶದ ಬೀದಿಯಲ್ಲಿ ವಿನೇಶ್ ಫೋಗಟ್ ಅವರನ್ನು ಎಳೆದಾಡಲಾಗಿತ್ತು. ಆ ಹುಡುಗಿ ಜಗತ್ತನ್ನೇ ಗೆಲ್ಲಲು ಹೊರಟಿದ್ದಾಳೆ. ಆದರೆ ಅವರು ತನ್ನದೇ ದೇಶದಲ್ಲಿ ಸೋಲು ಎದುರಿಸಿದ್ದಳು.

– ಬಜರಂಗ್ ಪೂನಿಯಾ, ಕುಸ್ತಿಪಟು

## ಪದಕ ಪಟ್ಟಿ

| | ಚಿನ್ನ | ಬೆಳ್ಳಿ | ಕಂಚು | ಒಟ್ಟು |
|---|---|---|---|---|
| ಭಾರತ | 0 | 0 | 3 | 3 |
| ಚೀನಾ | 22 | 19 | 14 | 55 |
| ಅಮೆರಿಕ | 21 | 30 | 28 | 79 |
| ಆಸ್ಟ್ರೇಲಿಯಾ | 14 | 12 | 8 | 34 |
| ಫ್ರಾನ್ಸ್ | 13 | 16 | 19 | 48 |
| ಗ್ರೇಟ್ ಬ್ರಿಟನ್ | 12 | 13 | 18 | 43 |
| ದಕ್ಷಿಣ ಕೊರಿಯಾ | 11 | 8 | 7 | 26 |
| ಜಪಾನ್ | 10 | 6 | 11 | 27 |
| ಇಟಲಿ | 9 | 10 | 6 | 25 |
| ಜರ್ಮನಿ | 8 | 5 | 4 | 17 |

## ಮೈಕ್ರೋ ಮಾಹಿತಿ

### ಜಾವೆಲಿನ್ ಥ್ರೋ ಎಂದರೇನು?

- ಜಾವೆಲಿನ್ ಥ್ರೋ ಒಂದು ಟ್ರ್ಯಾಕ್ ಮತ್ತು ಫೀಲ್ಡ್ ಕ್ರೀಡೆಯಾಗಿದೆ.
- ಜಾವೆಲಿನ್ ಎಂಬ ಸಾಧನವನ್ನು ಸಾಧ್ಯವಾದಷ್ಟು ದೂರ ಎಸೆಯುವುದು.

- ಹೆಚ್ಚು ದೂರ ಎಸೆದ ಆಟಗಾರ ಗೆಲ್ಲುತ್ತಾನೆ.
- ಜಾವೆಲಿನ್ ಎಂಬ ಸಾಧನವು 8 ಅಡಿ 2 ಇಂಚು ಇರುತ್ತದೆ.

- ಸ್ವಿಡನ್‌ನ ಇರಿಕ್ ಲೆಮ್ಮಿಂಗ್ ಅವರು ಮೊದಲ ಗೋಲ್ಡ್ ಮೆಡಲಿಸ್ಟ್ ಆಗಿದ್ದಾರೆ.



- ಜಾವೆಲಿನ್ ಥ್ರೋ ಒಂದು ಗ್ರೀಸ್‌ನ ಕ್ರೀಡೆಯಾಗಿದೆ.
- ಈ ಕ್ರೀಡೆ ಕ್ರಿಸ್ತ ಶತಕ ಪೂರ್ವ 708ರ ಪೆಂಟಾಥ್ಲಾನ್‌ನ ಭಾಗವಾಗಿತ್ತು.
- ಜಾವೆಲಿನ್ ಥ್ರೋ ಆಗಿನ ಒಲಿಂಪಿಕ್ಸ್‌ನ ಭಾಗವಾಗಿತ್ತು.
- 1908ರ ಒಲಿಂಪಿಕ್ಸ್‌ನಲ್ಲಿ ಜಾವೆಲಿನ್ ಥ್ರೋ ಕ್ರೀಡೆಯನ್ನು ಮೊದಲ ಬಾರಿಗೆ ಆಡಿಸಲಾಗಿತ್ತು.

## ಸಮಾಚಾರ ಸಣ್ಣದಲ್ಲ

### ಉದ್ದೀಪನ ಸೇವನೆ: ನಿಷೇಧ

**ಪ್ಯಾರಿಸ್:** ನಿಷೇಧಿತ ಉದ್ದೀಪನ ಮದ್ದು ಸೇವನೆ ಪರೀಕ್ಷೆಯಲ್ಲಿ ಗ್ರೀಕ್ ಅಥ್ಲೀಟ್ ಸಿಕ್ಕಿಬಿದ್ದಿದ್ದು, ಪ್ಯಾರಿಸ್ ಒಲಿಂಪಿಕ್ಸ್‌ನಿಂದ ಹೊರ ಹಾಕಲಾಗಿದೆ. ಕ್ರೀಡಾಕೂಟದಿಂದ ಹೊರ ಹೋಗುವಂತೆ ಸೂಚಿಸಲಾಗಿದೆ ಎಂದು ಗ್ರೀಸ್‌ನ ಒಲಿಂಪಿಕ್ ಸಮಿತಿ ತಿಳಿಸಿದೆ. ಅಥ್ಲೀಟ್ ನಿಷೇಧಿತ ಉದ್ದೀಪನ ಮದ್ದು ಸೇವನೆ ಮಾಡಿ ರುವುದು ಪರೀಕ್ಷೆಯಲ್ಲಿ ದೃಢಪಟ್ಟಿದೆ. ಆದರೆ, ಅಥ್ಲೀಟ್ ಹೆಸರು ಮತ್ತು ಪಾಲ್ಗೊಳ್ಳಲು ಆಗಮಿಸಿದ್ದ ಕ್ರೀಡೆ ಯಾವುದು ಎಂಬ ಬಗ್ಗೆ ಸಮಿತಿ ಹೆಚ್ಚಿನ ಮಾಹಿತಿ ಹಂಚಿಕೊಂಡಿಲ್ಲ.

## ಇಂದು ಕಣದಲ್ಲಿ

- ಅಥ್ಲೆಟಿಕ್ಸ್: ಮ್ಯಾರಥಾನ್ ರೇಸ್ ವಾಕ್ ರಿಲೇ ಮಿಶ್ರ ತಂಡ: ಬೆಳಗ್ಗೆ 11 ಗಂಟೆ, ಪುರುಷರ ಹೈ ಜಂಪ್ ಅರ್ಹತಾ ಸುತ್ತು:ಮಧ್ಯಾಹ ಮಹಿಳೆಯರ 100 ಮೀ ಹರ್ಡಲ್ಸ್: 1.45, ಪುರುಷರ ಟ್ರಿಪಲ್ ಜಂಪ್: ರಾತ್ರಿ 10.45
- ಗಾಲ್ಫ್: ಮಹಿಳೆಯರ ವೈಯಕ್ತಿಕ ಸ್ಟ್ರೋಕ್ ಪ್ಲೇ ರೌಂಡ್ 1:12.30
- ಟೇಬಲ್ ಟೆನಿಸ್: ಮಹಿಳಾ ತಂಡ ಕ್ವಾರ್ಟರ್‌ಫೈನಲ್: ಮಧ್ಯಾಹ್ನ 1.30
- ಕುಸ್ತಿ: ಮಹಿಳೆಯರ ಫ್ರಿಸ್ಟೈಲ್ 53ಕೆಜಿ: ಮಧ್ಯಾಹ್ನ 2.30
- ವೇಟ್ ಲಿಫ್ಟಿಂಗ್: ಮಹಿಳೆಯರ 49 ಕೆಜಿ ವಿಭಾಗ: ರಾತ್ರಿ 1

3000 ಮೀ. ಸ್ಟೀಪಲ್ ಚೇಸ್‌ನಲ್ಲಿ ಮಿಂಚಿದ ಅವಿನಾಶ್

# ಫೈನಲ್‌ಗೇರಿದ ಸಾಬ್ಲೆ

**ಪ್ಯಾರಿಸ್:** ಪುರುಷರ 3000 ಮೀಟರ್ ಸ್ಟೀಪಲ್ ಚೇಸ್ ಸ್ಪರ್ಧೆಯಲ್ಲಿ ಭಾರತದ ಅವಿನಾಶ್ ಸಾಬ್ಲೆ ಫೈನಲ್‌ಗೆ ಅರ್ಹತೆ ಪಡೆದಿದ್ದಾರೆ. ಹೀಟ್ಸ್‌ನಲ್ಲಿ 8: 15.43 ಸಮಯದೊಂದಿಗೆ ಸಾಬ್ಲೆ 5ನೇ ಸ್ಥಾನ ಪಡೆದಿದ್ದು, ಅಂತಿಮ ಸ್ಪರ್ಧೆಗೆ ತೇರ್ಗಡೆ ಹೊಂದಿದ್ದಾರೆ.

ಸ್ಪರ್ಧೆಯ ಆರಂಭದಿಂದಲೂ ಸಾಬ್ಲೆ ವೇಗವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸಿದರು. ಮೈದಾನದ ಉಳಿದ ಭಾಗಗಳಿಗಿಂತ ಮುಂದೆ ಸಾಗಿದರು 1000 ಮೀಟರ್ ಗಡಿಯವರೆಗೆ ಮುನ್ನಡೆಯಲ್ಲಿದ್ದರು. ರೇಸ್‌ನ ಮೊದಲ ವಿಭಾಗದ ಬಹುಪಾಲು ಭಾಗವನ್ನು ಸಾಬ್ಲೆ ಕೀನ್ಯಾದ ಅಬ್ರಹಾಂ ಕಿಬಿವೊಟ್ ಅವರಿಗೆ ಪೈಪೋಟಿ ನೀಡಿದ್ದರು. ನಂತರ ಕಿಬಿವೊಟ್ ಮತ್ತು ಇಥಿಯೋಪಿಯಾದ ಸ್ಯಾಮ್ಯುಯೆಲ್ ಫೈರುರ್ ಮುಂದೆ ಸಾಗಿದ ಕಾರಣ ಸಾಬ್ಲೆ ಮೂರನೇ ಸ್ಥಾನಕ್ಕೆ ಕುಸಿದರು. ಬಳಿಕ ಸ್ವಲ್ಪ ಹಿಂದೆ ಬಿದ್ದರು. ಆದರೆ 2000 ಮೀಟರ್ ಗುರಿಯಲ್ಲಿ ನಾಲ್ಕು ಮುಂಚೂಣಿ ಸ್ಪರ್ಧಿಗಳ ಗುಂಪಿನಲ್ಲಿ ಉಳಿದರು. ಸಾಬ್ಲೆ, ಕಿಬಿವೊಟ್, ಫೈರಿರ್, ರ್ಯೂಜಿ ಮಿಯುರಾ ಅಗ್ರ ಐದು ಸ್ಥಾನಗಳಿಗಾಗಿ ಪೈಪೋಟಿಯಲ್ಲಿ ಉಳಿದರು. ಅವರೆಲ್ಲರೂ ಫೈನಲ್‌ಗೆ ಅರ್ಹತೆ ಪಡೆದರು. ಓಟದ ಅಂತಿಮ ಕೆಲವು ನೂರು ಮೀಟರ್‌ಗಳಲ್ಲಿ ಸಾಬ್ಲೆ ಅವರನ್ನು ನಾಲ್ಕು ಕ್ರೀಡಾಪಟುಗಳು ಹಿಂದಿಕ್ಕಿದರು. ಆದರೆ ಓಟದ ಉಳಿದ ಭಾಗಗಳಲ್ಲಿ ಆರಾಮದಾಯಕ ಅಂತರ ಸೃಷ್ಟಿಸಲು ಸಾಧ್ಯವಾದ ಕಾರಣ 5 ನೇ ಸ್ಥಾನದಲ್ಲಿ ಕೊನೆಗೊಂಡರು. ರೇಸ್‌ನಲ್ಲಿ ಯಾರಾದರೂ ತನ್ನ ಹಿಂಬಾಲಿಸುತ್ತಿದ್ದಾರೆಯೇ ಎಂದು ಪರೀಕ್ಷಿಸಲು ಸಾಬ್ಲೆ ಅನೇಕ ಬಾರಿ ತಿರುಗದಿದ್ದರೆ ಉತ್ತಮ ಮನ್ನಡೆ ಗಳಿಸಬಹುದಾಗಿತ್ತು. ಒಲಿಂಪಿಕ್ಸ್‌ಗೆ ಬರುವ ಮೊದಲು ಅವಿನಾಶ್ ಸಾಬ್ಲೆ 10ನೇ ಬಾರಿಗೆ ರಾಷ್ಟ್ರೀಯ ದಾಖಲೆ ಮುರಿದಿದ್ದರು.

### ಡೈಮಂಡ್ ಲೀಗ್‌ನಲ್ಲಿ ಅತ್ಯುತ್ತಮ ಓಟ

ಪ್ಯಾರಿಸ್ ಒಲಿಂಪಿಕ್ಸ್‌ಗೆ ಮುಂಚಿತವಾಗಿ, ಸಾಬ್ಲೆ ಭಾನುವಾರ ಪ್ಯಾರಿಸ್ ಡೈಮಂಡ್ ಲೀಗ್‌ನಲ್ಲಿ 8: 09.91 ನಲ್ಲಿ ತಮ್ಮ ವೃತ್ತಿಜೀವನದ ಅತ್ಯುತ್ತಮ ಓಟ ಓಡಿದ್ದರು. ಆ ದಿನ ನಾಲ್ಕರಿಂದ ಆರನೇ ಸ್ಥಾನದ ನಡುವಿನ ಓಟಗಾರರು ನಿಜವಾಗಿಯೂ ನಿಕಟ ಅಂತ್ಯವನ್ನು ಹೊಂದಿದ್ದರು. 4ನೇ ಅಮೀನ್ ಮೊಹಮ್ಮದ್, 5ನೇ ಗೊಡಿರ್ ಬೀಮಿಂಗ್ ಮತ್ತು 6ನೇ ಸೇಬಲ್ 8:09.41 - 8:09.91 ಸೆಕೆಂಡುಗಳಲ್ಲಿ ಗುರಿ ತಲುಪಿದ್ದರು.

### ನಿರಾಸೆ ಮೂಡಿಸಿದ ಕಿರಣ್ ಪಹಲ

**ಪ್ಯಾರಿಸ್:** ಮಂಗಳವಾರ ನಡೆದ ಮಹಿಳೆಯರ 400 ಮೀಟರ್ ರಿಪಿಚೇಜ್ ಸುತ್ತಿನ ಹೀಟ್ 1ರಲ್ಲಿ ಭಾರತೀಯ ಓಟಗಾರ್ತಿ ಕಿರಣ್ ಪಹಲ್ ಆರನೇ ಸ್ಥಾನ ಪಡೆದಿದ್ದು, ಸ್ಪರ್ಧೆಯಿಂದ ಹೊರಬಿದ್ದಿದ್ದಾರೆ. 24 ವರ್ಷದ ಕಿರಣ್, ಈ ಹಿಂದೆ ಸೋಮವಾರ ನಡೆದಿದ್ದ ಸ್ಪರ್ಧೆಯಲ್ಲಿ ಅವರು ಉತ್ತಮ ಸ್ಥಾನ ಗಳಿಸುವ ಮೂಲಕ ರಿಪಿಚೇಜ್ ಸುತ್ತಿಗೆ ಪ್ರವೇಶಿಸಿದರು. ಆದರೆ ಮಂಗಳವಾರ ನಡೆದ ರಿಪಿಚೇಜ್ ಸುತ್ತಿನಲ್ಲಿ ಅವರು ಆರನೇ ಸ್ಥಾನ ಪಡೆದಿದ್ದಾರೆ. ಆ ಮೂಲಕ ಸೆಮಿಫೈನಲ್ ಪ್ರವೇಶ ತಪ್ಪಿಸಿಕೊಂಡಿದ್ದಾರೆ. ಪ್ರತಿ ಹೀಟ್ಸ್‌ನಲ್ಲಿ ಕೇವಲ ಅಗ್ರ ಅಥ್ಲೀಟ್‌ಗಳು ಮತ್ತು ರಿಪಿಚೇಜ್‌ನಲ್ಲಿ ಇಬ್ಬರು ಅತ್ಯುತ್ತಮ ಆಟಗಾರರು ಸೆಮಿಸ್‌ಗೆ ತಲುಪಿದ್ದಾರೆ.

ಅರ್ಹತಾ ಸುತ್ತಿನಲ್ಲಿ ಗೆದ್ದ ನೀರಜ್ ಚೋಪ್ರಾ | ಮೊದಲ ಫೈನಲಿಸ್ಟ್ ಆದ ಜಾವೆಲಿನ್ ಮಾಂತ್ರಿಕ

# ಪದಕ ಸುತ್ತಿಗೆ ಚಿನ್ನದ ಹುಡುಗ

**ಪ್ಯಾರಿಸ್:** ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ನೀರಜ್ ಚೋಪ್ರಾ ಅವರು ಈ ಬಾರಿಯ ಒಲಿಂಪಿಕ್ಸ್ ಟೂರ್ನಿಯಲ್ಲೂ ಭರ್ಜರಿ ಪ್ರದರ್ಶನ ಮುಂದುವರಿಸಿದ್ದು, ಪದಕ ಗೆಲ್ಲುವ ಭರವಸೆ ಮೂಡಿಸಿದ್ದಾರೆ.

ಕಳೆದ ಒಲಿಂಪಿಕ್ಸ್ ಅಲ್ಲದೆ, ಏಷಿಯನ್ ಗೇಮ್ ವಿಶ್ವಚಾಂಪಿಯನ್‌ನಂತಹ ಕ್ರೀಡಾಕೂಟಗಳಲ್ಲಿ ಪದಕಗಳನ್ನು ಗೆಲ್ಲುವ ಮೂಲಕ ವಿಶ್ವಾದ್ಯಂತ ಸಂಚಲನ ಮೂಡಿಸಿರುವ ನೀರಜ್ ಈ ಬಾರಿ ಚಿನ್ನ ಗೆಲ್ಲುವ ಪ್ರಭಾವಿ ಆಟಗಾರರಾಗಿದ್ದಾರೆ.

ಮಂಗಳವಾರ ನಡೆದ ಜಾವೆಲಿನ್ ಅರ್ಹತಾ ಸುತ್ತಿನ ಪಂದ್ಯದಲ್ಲಿ 89.34 ಮೀ. ದೂರ ಜಾವೆಲಿನ್ ಎಸೆದು ನೀರಜ್ ಫೈನಲ್ ಪ್ರವೇಶಿಸಿದ್ದಾರೆ. ಆದರೆ ಭಾರತದ ಮತ್ತೋರ್ವ ಜಾವೆಲಿನ್ ಎಸೆತಗಾರ ಕಿಶೋರ್ ಜೇನಾ 9ನೇ ಸ್ಥಾನಿಯಾಗಿ ನಿರಾಸೆ ಮೂಡಿಸಿದರು. ಜಾವೆಲಿಯನ್‌ನ ಬಿ' ವಿಭಾಗದ ಅರ್ಹತಾ ಸುತ್ತಿನಲ್ಲಿ ಕಣಕ್ಕಿಳಿದ ನೀರಜ್ ತಮ್ಮ ಮೊದಲ ಎಸೆತವನ್ನೇ 89.34 ಮೀ. ದೂರ ಎಸೆದು ನೇರವಾಗಿ ಫೈನಲ್ ಪ್ರವೇಶಿಸಿದರು. ಇವರ ಜತೆ ಪಾಕಿಸ್ತಾನದ ಅರ್ಷದ್ ನದೀಮ್ 86.59 ಮೀ. ಸಾಧನೆಯೊಂದಿಗೆ ಫೈನಲ್ ಟಿಕೆಟ್ ಪಡೆದರು. 89.34 ಮೀ. ದೂರ ಜಾವೆಲಿನ್ ಎಸೆದದ್ದು ನೀರಜ್ ಅವರ 2ನೇ ಶ್ರೇಷ್ಠ ಸಾಧನೆಯಾಗಿದೆ. ಅವರ ಶ್ರೇಷ್ಠ ನಿರ್ವಹಣೆ 89.94 ಮೀ. ದೂರ ಎಸೆದಿರುವುದು. ಈ ಎಸೆತವನ್ನು 2022ರ ಸ್ಟಾಕ್ ಹೋಮ್ ಡೈಮಂಡ್ ಲೀಗ್‌ನಲ್ಲಿ ಎಸೆದಿದ್ದರು. ಟೋಕಿಯೊದಲ್ಲಿ 87.58 ಮೀ. ಸಾಧನೆಯೊಂದಿಗೆ ಚಿನ್ನ ಗೆದ್ದಿದ್ದರು. ಗುರುವಾರ ನಡೆಯುವ ಫೈನಲ್‌ನದಲ್ಲಿ ನೀರಜ್ ಚೋಪ್ರಾ ಚಿನ್ನದ ಪದಕ ಇರಾದೆಯೊಂದಿಗೆ ಕಣಕ್ಕಿಳಿಯಲಿದ್ದಾರೆ. ಎ ವಿಭಾಗದಲ್ಲಿ ಜರ್ಮನಿಯ ಜೂಲಿಯನ್ ವೆಬರ್ 87.76 ಮೀ. ದೂರ ಎಸೆದು ಮೊದಲ ಸ್ಥಾನ ದೊಂದಿಗೆ ಫೈನಲ್ ಪ್ರವೇಶಿಸಿದ್ದರು.

### ಫೈನಲ್‌ಗೇರಿದ ಆಟಗಾರರು

| | | |
|---|---|---|
| ನೀರಜ್ ಚೋಪ್ರಾ | ಭಾರತ | 89.34 ಮೀ |
| ಆಂಡರ್ಸನ್ ಪೀಟರ್ಸ್ | ಗ್ರೆನಡಾ | 88.63 |
| ಜೂಲಿಯನ್ ವೆಬರ್ | ಜರ್ಮನಿ | 87.76 ಮೀ |
| ಅರ್ಷದ್ ನದೀಮ್ | ಪಾಕಿಸ್ತಾನ | 86.59 ಮೀ |
| ಜೂಲಿಯಸ್ ಯೆಗೊ | ಕೀನ್ಯಾ | 85.97 ಮೀ |
| ಲೂಯಿಜ್ ಮಾರಿಸಿಯೊ ಡಾ ಸಿಲ್ವಾ | ಬ್ರೆಜಿಲ್ | 85.91 |
| ಜಾಕುಬ್ ವಡ್ಲೆಜ್ | ಚೆಕ್ | 85.63 ಮೀ |
| ಟೋನಿ ಕೆರಾನೆನ್ | ಫಿನಲ್ಯಾಂಡ್ | 85.27 |
| ಆಂಡ್ರಿಯನ್ ಮರ್ಡೇರೆ | ಮೊಲ್ಡೋವಾ | 84.13 |
| ಆಲಿವರ್ ಹೆಲ್ಯಾಂಡರ್ | ಫಿನಲ್ಯಾಂಡ್ | 83.81 ಮೀ |
| ಕೆಶೋರ್ನ್ ವಾಲ್ಕಾಟ್ | ಟ್ರಿನಿಡಾಡ್ | 83.02 ಮೀ |
| ಲಸ್ಸಿ ಎಟೆಲಟಾಲೊ | ಫಿನ್‌ಲ್ಯಾಂಡ್ | 82.91ಮೀ |

ನೀರಜ್ ಪ್ಯಾರಿಸ್‌ನಲ್ಲಿ ನಡೆಯುವ ಒಲಿಂಪಿಕ್ಸ್‌ನಲ್ಲಿಯೂ ಚಿನ್ನದ ಪದಕ ಗೆಲ್ಲಲಿದ್ದಾರೆ. ನಾನು 2015 ರಿಂದ ನೀರಜ್ ಜತೆ ಆಡಿದ್ದೇನೆ. ಅವರ ಛಲವನ್ನು ಮೆಚ್ಚಲೇ ಬೇಕು. ಸಾಧಿಸುವ ಛಲವೇ ಅವರನ್ನು ಈ ಮಟ್ಟಕ್ಕೆ ತಂದು ನಿಲ್ಲಿಸಿದೆ. ಅತ್ಯಂತ ಶಿಸ್ತಿನ ಕ್ರೀಡಾಪಟು ಕೂಡ ಆಗಿದ್ದಾರೆ. 90 ಮೀ. ದೂರ ಜಾವೆಲಿನ್ ಎಸೆಯುವದು ಪ್ರಮುಖ ಗುರಿ ಎಂದು ನೀರಜ್ ಈಗಾಗಲೇ ಹೇಳಿದ್ದಾರೆ. ಹೇಳಿದಂತೆ ಅವರು ಈ ದೂರವನ್ನು ಕ್ರಮಿಸುವ ವಿಶ್ವಾಸ ನನ್ನಲ್ಲಿದೆ.

–ಕಾಶಿನಾಥ್ ನಾಯ್ಕ್, ಮಾಜಿ ಜಾವೆಲಿನ್ ಎಸೆತಗಾರ

### ಭಾರತದ ಭರವಸೆ ಚೋಪ್ರಾ

ಕಳೆದ ಬಾರಿ ಚಿನ್ನ ಗೆದ್ದ ನೀರಜ್ ಚೋಪ್ರಾ ಅವರು ಭಾರತದ ಚಿನ್ನ ಗೆಲ್ಲುವ ಭರವಸೆಯಾಗಿದ್ದಾರೆ. ಈ ಹಿಂದೆ 2020ರಲ್ಲಿ ನಡೆದಿದ್ದ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅವರು ಭರ್ಜರಿ ಪ್ರದರ್ಶನದೊಂದಿಗೆ ಚಿನ್ನದ ಪದಕ ಗೆದ್ದಿದ್ದರು. ಅದಾದ ಬಳಿಕವೂ ಅವರು ಏಷ್ಯನ್ ಗೇಮ್ಸ್ ಹಾಗೂ ಇತರ ಕ್ರೀಡಾಕೂಟಗಳಲ್ಲಿ ಸಾಧನೆ ಮಾಡುವುದಲ್ಲದೆ, ಪದಕಗಳನ್ನು ಗೆದ್ದಿದ್ದರು.

ಹೀಗಾಗಿ ಒಲಿಂಪಿಕ್ಸ್‌ಗೂ ಮುನ್ನವೇ ಅವರ ಮೇಲೆ ನಿರೀಕ್ಷೆ ಇಡಲಾಗಿತ್ತು. ಒಂದೆಡೆ ಅವರ ಮೇಲೆ ನಿರೀಕ್ಷೆ ಇದ್ದರೆ, ಸಿಂಗಲ್ಸ್ ವಿಭಾಗದಲ್ಲಿ ಫೇವರಿಟ್ ಆಗಿದ್ದ ಪಿ.ವಿ ಸಿಂಧು ಹಾಗೂ ಲಕ್ಷ್ಯ ಸೇನ್ ಅವರು ನಿರಾಸೆ ಮೂಡಿಸಿದ್ದಾರೆ. ಪ್ರಮುಖವಾಗಿ ಪದಕದ ಹತ್ತಿರ ಬಂದು ನಾಲ್ಕೈದು ಆಟಗಾರರು ನಿರಾಸೆ ಮೂಡಿಸಿದ್ದಾರೆ. ಹಾಗಾಗಿ ವೈಯಕ್ತಿಕ ಆಟಗಳಲ್ಲಿ ಚಿನ್ನ ಗೆಲ್ಲುವ ಬಲವಾದ ನಿರೀಕ್ಷೆಯನ್ನು ನೀರಜ್ ಮೇಲೆ ಇಡಲಾಗಿದೆ.

### ಆರಂಭದಲ್ಲೇ ಮಿಂಚಿದ ಚೋಪ್ರಾ

ಮೊದಲ ಪ್ರಯತ್ನದಲ್ಲೇ ಯಶಸ್ಸು ಬಿ ಗುಂಪಿನಲ್ಲಿ ನೀರಜ್ ಚೋಪ್ರಾ ಮೊದಲ ಜಾವೆಲಿನ್ ಅಥ್ಲೀಟ್ ಆಗಿ ಕಾಣಿಸಿಕೊಂಡರು. ಇವರು ತಮ್ಮ ಮೊದಲ ಪ್ರಯತ್ನದಲ್ಲೇ ಕ್ವಾಲಿಫೈ ಮಾರ್ಕ್ ಪಾರು ಮಾಡಿದರು. ಇವರ ಭರ್ಜರಿ ಪ್ರಯತ್ನದ ಫಲವಾಗಿ ನೀರಜ್ ಗುರುವಾರ ನಡೆಯಲಿರುವ ಫೈನಲ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ. ನೀರಜ್ ಎಸೆದ ಜಾವೆಲಿನ್ ಈ ಆವೃತ್ತಿಯ ಉತ್ತಮ ಪ್ರದರ್ಶನವಾಗಿದೆ. ಇನ್ನು ಇದೇ ಗುಂಪಿನಲ್ಲಿ ಆಂಡರ್ಸನ್ ಪಿಟರ್ಸ್ 88.63 ಮೀಟರ್ ದೂರ ಎಸೆದು ಫೈನಲ್‌ಗೆ ಅರ್ಹತೆ ಪಡೆದರು.

ಫೈನಲ್‌ಗೆ ವಿನೇಶ್ | ಸೆಮಿಫೈನಲ್‌ನಲ್ಲಿ ಭರ್ಜರಿ ಗೆಲುವು

# ಫೋಗಟ್‌ಗೆ ಪದಕ ಖಚಿತ

**ಪ್ಯಾರಿಸ್:** 50 ಕೆಜಿ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಭಾರತದ ವಿನೇಶ್ ಫೋಗಟ್ ಅವರು ಕ್ಯೂಬಾ ದೇಶದ ಯುಸ್ನಲೀಸ್ ಗುಜ್ಮನ್ ಲೋಪೆಜ್ ವಿರುದ್ಧ ಭರ್ಜರಿ ಗೆಲುವು ಸಾಧಿಸಿ, ಫೈನಲ್ ಪ್ರವೇಶಿಸಿ, ಆ ಮೂಲಕ ಅವರು ಪದಕ ಖಚಿತಪಡಿಸಿ ಕೊಂಡಿದ್ದಾರೆ. ಮಂಗಳವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಯುಸ್ನಲೀಸ್ ವಿರುದ್ಧ (5–0) ಗೆಲುವು ಸಾಧಿಸಿದ್ದಾರೆ.



ಈ ಹಿಂದೆ ಅವರು ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮೂರು ಬಾರಿಯ ಕಾಮನ್‌ವೆಲ್ತ್ ಚಿನ್ನದ ಪದಕ ವಿಜೇತೆ ಉಕ್ರೇನ್‌ನ ಒಕ್ಸಾನಾ ಲಿವಾಚ್ ವಿರುದ್ಧ 7–5 ಅಂತರದ ರೋಚಕ ಗೆಲುವು ಸಾಧಿಸಿ ಸೆಮಿ ಫೈನಲ್ ಪ್ರವೇಶಿಸಿದರು. ಇದಕ್ಕೂ ಮುನ್ನ ನಡೆದಿದ್ದ ಪ್ರಿಕ್ವಾರ್ಟರ್ ಫೈನಲ್ ಪಂದ್ಯ ದಲ್ಲಿ ವಿನೇಶ್ ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಜಪಾನ್‌ನ ಯುಯಿ ಸುಸಾಕಿ ಅವರನ್ನು 3–2 ಅಂತರದಿಂದ ಮಣಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರು. ಈ ಗೆಲುವು ಕಂಡಾಗಲೇ ವಿನೇಶ್ ಈ ಬಾರಿ ಪದಕ ಗೆಲ್ಲುವುದು ಖಚಿತ ಎಂದು ನಿರ್ಧರಿಸಲಾಗಿತ್ತು. ಇದೀಗ ಸೆಮಿ ಹಂತಕ್ಕೇರಿರುವ ಅವರು ಪದಕವೊಂದನ್ನು ಖಾತ್ರಿ ಪಡಿಸಿದ್ದಾರೆ. ಒಲಿಂಪಿಕ್ ಆರಂಭಕ್ಕೆ ಕೆಲವೇ ದಿನ ಬಾಕಿ ಇರುವಾಗ ಮ್ಯಾಡ್ರಿಡ್‌ನಲ್ಲಿ ನಡೆದಿದ್ದ ಸ್ಪ್ಯಾನಿಷ್ ಗ್ರ್ಯಾಂಡ್ ಪ್ರಿಕ್ಸ್ ಕುಸ್ತಿ ಟೂರ್ನಿಯಲ್ಲಿ ವಿನೇಶ್ ಚಿನ್ನದ ಪದಕ ಗೆದ್ದು ಬೀಗಿದ್ದರು. 50 ಕೆಜಿ ವಿಭಾಗದಲ್ಲಿ ವಿನೇಶ್ ಒಲಿಂಪಿಕ್ಸ್ ಆಡುತ್ತಿರುವುದು ಇದೇ ಮೊದಲ ಬಾರಿ. ಇದಕ್ಕೂ ಮುನ್ನ ಅವರು 55 ಕೆಜಿ ವಿಭಾಗದಲ್ಲಿ ಸ್ಪರ್ಧಿಸುತ್ತಿದ್ದರು.

### ಬೀದಿಗಿಳಿದಿದ್ದ ಫೋಗಟ್

ಆರು ಬಾರಿ ಬಿಜೆಪಿ ಸಂಸದರಾಗಿದ್ದ ಬ್ರಿಜ್ ಭೂಷಣ್ ಅವರು ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಸಾಕ್ಷಿ ಮಲಿಕ್ ಸೇರಿದಂತೆ ದೇಶದ ಉನ್ನತ ಕುಸ್ತಿಪಟುಗಳು ಆರೋಪಿಸಿದ ನಂತರ ಅವರು ರಾಜೀನಾಮೆ ನೀಡಬೇಕಾಯಿತು. ಒಲಿಂಪಿಕ್ ಕಂಚಿನ ಪದಕ ವಿಜೇತ ಬಜರಂಗ್ ಪೂನಿಯಾ ಮತ್ತು ಕಾಮನ್ವೆಲ್ತ್ ಕ್ರೀಡಾಕೂಟದ ಚಿನ್ನದ ಪದಕ ವಿಜೇತೆ ವಿನೇಶ್ ಫೋಗಟ್ ಸೇರಿದಂತೆ ಅಗ್ರ ಕುಸ್ತಿಪಟುಗಳು ಕಳೆದ ವರ್ಷ ಜನವರಿಯಲ್ಲಿ ಬಿಜೆಪಿ ಸಂಸದರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಬೀದಿಗಿಳಿದಿದ್ದರು. ಈ ಪ್ರತಿಭಟನೆಯ ಪ್ರಮುಖ ರುವಾರಿ ಕೂಡ ವಿನೇಶ್ ಅವರೇ ಆಗಿದ್ದರು.

### ದಾಖಲೆಯ ಗೆಲುವು

ವಿನೇಶ್ ಫೋಗಟ್ ಅವರ ಈ ಗೆಲುವು ವಿಶ್ವಾದ್ಯಂತ ಗಮನ ಸೆಳೆದಿದೆ. ಕ್ವಾ.ಫೈನಲ್ ಎದುರಾಳಿ ಸುಸಾಕಿ ಅವರ ಅಂತಾರಾಷ್ಟ್ರೀಯ ವೃತ್ತಿಜೀವನದಲ್ಲಿ ಕಂಡ ಮೊದಲ ಸೋಲು ಇದಾಗಿದೆ. 82 ಅಂತಾರಾಷ್ಟ್ರೀಯ ಪಂದ್ಯಗಳನ್ನಾಡಿದ ಸುಸಾಕಿ ಎಲ್ಲ ಪಂದ್ಯವನ್ನು ಗೆದ್ದು ಬೀಗಿದ್ದರು. ಇದೀಗ ಇವರ ಗೆಲುವಿನ ನಾಗಾಲೋಟಕ್ಕೆ ಭಾರತೀಯ ಕುಸ್ತಿಪಟು ಬ್ರೇಕ್ ಹಾಕುವಲ್ಲಿ ಯಶಸ್ಸು ಕಂಡಿದ್ದು, ವಿಶ್ವಾದ್ಯಂತ ಗಮನ ಸೆಳೆದಿದ್ದಾರೆ.

# ಟಿಟಿ: ಪುರುಷರ ತಂಡಕ್ಕೆ ಹೀನಾಯ ಸೋಲು

**ಪ್ಯಾರಿಸ್:** ಪುರುಷರ ಟಿಟಿ ತಂಡ ವಿಭಾಗದ ಸ್ಪರ್ಧೆಯಲ್ಲಿ ಭಾರತ ತಂಡವು ಚೀನಾ ವಿರುದ್ಧ 0–3 ರಿಂದ ಸೋಲನುಭವಿಸಿದೆ. ಆ ಮೂಲಕ ಕ್ವಾರ್ಟರ್‌ಫೈನಲ್‌ಗೆ ಅರ್ಹತೆ ಪಡೆಯಲು ಭಾರತ ವಿಫಲವಾಗಿದೆ.

ಅಚಂತಾ ಶರತ್ ಕಮಲ್, ಮಾನವ್ ಠಕ್ಕರ್ ಮತ್ತು ಹರ್ಮೀತ್ ದೇಸಾಯಿ ತಮ್ಮ ಅತ್ಯುತ್ತಮ ಪ್ರಯತ್ನ ಮಾಡಿದರು, ಆದರೆ ಚೀನಾದ ಎದುರಾಳಿಗಳು ಭಾರತಕ್ಕಿಂತ ಭಾರೀ ಪ್ರದರ್ಶನ ನಿಡುವ ಮೂಲಕ ಗೆಲುವು ಸಾಧಿಸಿದ್ದಾರೆ. ಚೀನಾ 16ನೇ ಸುತ್ತಿನ ಪಂದ್ಯದಲ್ಲಿ ದಕ್ಷಿಣ ಕೊರಿಯಾವನ್ನು ಎದುರಿಸಲಿದೆ. ಪಂದ್ಯದ ಮೊದಲಿಗೆ ಮಾನವ್ ಠಕ್ಕರ್, ಹರ್ಮೀತ್ ದೇಸಾಯಿ ಅವರು ಮಾ ಲಾಂಗ್ ಮತ್ತು ವಾಂಗ್ ಚುಕಿನ್ ವಿರುದ್ಧ ಯಾವುದೇ ಹೋರಾಟವನ್ನು ನೀಡಲು ಸಾಧ್ಯವಾಗಲಿಲ್ಲ. ಪರಿಣಾಮ ಚೀನಾ, ಭಾರತವನ್ನು 0–1 ಅಂತರದಿಂದ ಸೋಲಿಸಿತು. ತದನಂತರದ ಪಂದ್ಯಗಳಲ್ಲೂ ಚೀನಾ ಭರ್ಜರಿ ಪ್ರದರ್ಶನ ತೋರುವುದರೊಂದಿಗೆ ಮುನ್ನಡೆ ಸಾಧಿಸಿತು. ಕೊನೆಯಲ್ಲಿ ಭಾರತ ಸೋಲನುಭವಿಸಿತು.

ಆದರೆ ಮತ್ತೊಂದಡೆ ಅಚಂತಾ ಶರತ್ ಕಮಲ್ ಅವರು ಫ್ಯಾನ್ ಝುಂಡಾಂಗ್ ವಿರುದ್ಧ ಪ್ರಬಲ ಹೋರಾಟ ನಡೆಸಿದರು. ಮೂರನೇ ಪಂದ್ಯದ ಮೊದಲ ಸೆಟ್‌ನಲ್ಲಿ ಭರ್ಜರಿ ಮುನ್ನಡೆ ಸಾಧಿಸಿ ಗೆಲುವು ಸಾಧಿಸಿದರು. ಆದರೆ ಅವರು ಕ್ರಮೇಣ ಸೋಲಿಗೆ ತುತ್ತಾದರು. ಶರತ್ ಕಮಲ್ ಅವರ ಸೋಲಿನೊಂದಿಗೆ, ಚೀನಾ ವಿರುದ್ಧ ಭಾರತವು 0–2 ರಿಂದ ಹಿನ್ನಡೆ ಸಾಧಿಸಿತು. ಮುಂದಿನ ಪಂದ್ಯದಲ್ಲೂ ಸೋತ ನಂತರ ಭಾರತ ಪಂದ್ಯವನ್ನು ಸೋತು ಹೊರ ನಡೆಯಿತು.

ಭಾರತದ ಸೋಲಿಗೆ ಬ್ಯಾಡ್ಮಿಂಟನ್ ತರಬೇತುದಾರ ಪ್ರಕಾಶ್ ಪಡುಕೋಣೆ ಆಕ್ರೋಶ

# ವ್ಯವಸ್ಥೆಯಲ್ಲಿ ದೋಷವಿಲ್ಲ, ಗೆಲ್ಲುವ ಮನಸ್ಸಿರಬೇಕು

**ಪ್ಯಾರಿಸ್:** ಕಂಚಿನ ಪದಕಕ್ಕಾಗಿ ನಡೆದ ಪಂದ್ಯದಲ್ಲಿ ಮಲೇಷ್ಯಾದ ಲೀ ಜಿ ಜಿಯಾ ವಿರುದ್ಧ ಭಾರತದ ಲಕ್ಷ್ಯ ಸೇನ್ ಅವರ ಸೋಲಿಗೆ ಬ್ಯಾಡ್ಮಿಂಟನ್ ಕೋಚ್ ಪ್ರಕಾಶ್ ಪಡುಕೋಣೆ ಕೋಪಗೊಂಡಿದ್ದಾರೆ. ಸೋಲಿನ ನಂತರ ಭಾರತದ ಬ್ಯಾಡ್ಮಿಂಟನ್ ದಂತಕಥೆ, ತಂಡದ ತರಬೇತುದಾರ ಮತ್ತು ಮಾರ್ಗದರ್ಶಕ ಪ್ರಕಾಶ್ ಪಡುಕೋಣೆ ಪದಕಗಳನ್ನು ತಪ್ಪಿಸಿಕೊಂಡಿರುವ ಆಟಗಾರರಿಗೆ ಪಾಠ ಹೇಳಿದ್ದಾರೆ. ಪದಕ ಗೆಲ್ಲುವುದಕ್ಕೆ ಆಟಗಾರರೇ ಮನಸ್ಸು ಮಾಡಬೇಕು. ವ್ಯವಸ್ಥೆಯಲ್ಲಿ ಯಾವುದೇ ದೋಷವಿಲ್ಲ ಎಂಬುದಾಗಿ ಹೇಳಿದ್ದಾರೆ.

ಆಟಗಾರರು ತಾವೇ ಮುಂದೆ ಬಂದು ಗೆಲ್ಲಲು ಇದು ಸರಿಯಾದ ಸಮಯ. ಉನ್ನತ ಮಟ್ಟದಲ್ಲಿ ಪ್ರದರ್ಶನ ನೀಡಲು ಅಗತ್ಯವಿರುವ ಎಲ್ಲಾ ಬೆಂಬಲ ಮತ್ತು ಹಣಕಾಸು ಭಾರತೀಯ ಆಟಗಾರರಿಗೆ ನೀಡಲಾಗುತ್ತಿದೆ. ನಮ್ಮ ಆಟಗಾರರಿಗೆ ಸೌಲಭ್ಯಗಳು ಮತ್ತು ಹಣದ ಕೊರತೆಯಿದ್ದ ಹಿಂದಿನ ದಿನಗಳಂತೆ ಈಗ ಪರಿಸ್ಥಿತಿ ಇಲ್ಲ. ಆದ್ದರಿಂದ, ನಮ್ಮ ಆಟಗಾರರು ನಿರೀಕ್ಷೆಯಂತೆ ಮುನ್ನಡೆಯಲು ಮತ್ತು ಗೆಲ್ಲಲು ಇದು ಸರಿಯಾದ ಸಮಯ ಎಂದು ಪಡುಕೋಣೆ ಸುದ್ದಿಗಾರರಿಗೆ ತಿಳಿಸಿದರು. ಬ್ಯಾಡ್ಮಿಂಟನ್ ನಿಂದ ಒಂದೇ ಒಂದು ಪದಕವನ್ನು ಪಡೆಯಲು ಸಾಧ್ಯವಾಗಲಿಲ್ಲ ಎಂಬುದು ನನ್ನ ನಿರಾಶೆಯಾಗಿದೆ. ನಾನು ಮೊದಲೇ ಹೇಳಿದಂತೆ, ನಾವು ಮೂರು ಪದಕಗಳನ್ನು ಗೆಲ್ಲಬಹುದಾಗಿತ್ತು. ಆದಾಗ್ಯೂ, ಕನಿಷ್ಠ ಒಂದು ಪದಕವು ನನಗೆ ಸಂತೋಷವನ್ನುಂಟುಮಾಡುತ್ತಿತ್ತು. ಆದರೆ ಈ ಬಾರಿ ಸರಕಾರ, ಭಾರತೀಯ ಕ್ರೀಡಾ ಪ್ರಾಧಿಕಾರ ಮತ್ತು ಕ್ರೀಡಾ ಸಚಿವಾಲಯ ಎಲ್ಲರೂ ತಮ್ಮ ಅತ್ಯುತ್ತಮ ಪ್ರಯತ್ನ ಮಾಡಿದೆ. ಪ್ರಸ್ತುತ ಸರಕಾರ ಮಾಡಿದ್ದಕ್ಕಿಂತ ಹೆಚ್ಚಿನದನ್ನು ಯಾರೂ ಮಾಡಬಹುದೆಂದು ನಾನು ನಿರೀಕ್ಷಿಸುವುದಿಲ್ಲ. ಆದ್ದರಿಂದ ಆಟಗಾರರು ಸಹ ಜವಾಬ್ದಾರಿ ತೆಗೆದುಕೊಳ್ಳಬೇಕಾಗಿದೆ ಎಂದು ಪಡುಕೋಣೆ ಹೇಳಿದರು.

### ಬ್ಯಾಡ್ಮಿಂಟನ್‌ನಲ್ಲಿ ನಿರಾಸೆ

ಸೇನ್ ಅವರ ಪ್ರಭಾವಶಾಲಿ ಪ್ರದರ್ಶನದ ಬಳಿಕ ಪುರುಷರ ಸಿಂಗಲ್ಸ್ ಸ್ಪರ್ಧೆಯ ಸೆಮಿಫೈನಲ್ ತಲುಪಿದ ಮೊದಲ ಭಾರತೀಯ ಶಟ್ಲರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಆದಾಗ್ಯೂ ಅವರಿಗೆ ಒಂದು ಪದಕ ಗೆಲ್ಲುವುದಕ್ಕೆ ಸಾಧ್ಯವಾಗಿಲ್ಲ. ಮಹಿಳಾ ಸಿಂಗಲ್ಸ್‌ನ 16ನೇ ಸುತ್ತಿನಲ್ಲಿ ಪಿ.ವಿ. ಸಿಂಧು ಚೀನಾದ ಹಿ ಬಿಂಗ್ ಜಿಯಾವೊ ವಿರುದ್ಧ, ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಪುರುಷರ ಡಬಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ ಮಲೇಷ್ಯಾದ ಆರನ್ ಚಿಯಾ ಮತ್ತು ಸೋಹ್ ವೂಯಿ ಯಿಕ್ ವಿರುದ್ಧ ಸೋತರು. 16ನೇ ಸುತ್ತಿನಲ್ಲಿ ಎಚ್.ಎಸ್.ಪ್ರಣಯ್ ಲಕ್ಷ್ಯ ಸೇನ್ ವಿರುದ್ಧ ಸೋತರೆ, ಮಹಿಳಾ ಡಬಲ್ಸ್‌ನಲ್ಲಿ ಅಶ್ವಿನಿ ಪೊನ್ನಪ್ಪ ಮತ್ತು ತನಿಶಾ ಕ್ರಾಸ್ಟೊ ಗ್ರೂಪ್ ಹಂತದಿಂದ ಹೊರಗುಳಿದರು.